ಶುಕ್ರವಾರ, ಜುಲೈ 11, 2025 | ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮರಿ ಹುಲಿ ಗರ್ಜನೆ...

ಜೈಪುರದ ನಹರ್‌ಗಢ ಜೀವವೈವಿಧ್ಯ ಉದ್ಯಾನದಲ್ಲಿ ರಾಣಿ ಹೆಸರಿನ ರಾಯಲ್ ಬೆಂಗಾಲ್ ಹುಲಿ ಜನ್ಮ ನೀಡಿದ ಬಿಳಿ ಬಣ್ಣದ ಮರಿಯ ಗರ್ಜನೆ

ಪ್ರವಾಹದಿಂದ ರಕ್ಷಣೆ

ನಾಗಾಲ್ಯಾಂಡ್‌ನ ದಿಮಾಪುರ್‌ನಲ್ಲಿ ಪ್ರವಾಹದಲ್ಲಿ ಸಿಲುಕಿದ್ದ ಜನರನ್ನು ಸೇನಾ ಸಿಬ್ಬಂದಿ ಗುರುವಾರ ರಕ್ಷಿಸಿದರು



ಚಿಟಿಕೆ ಸುದ್ದಿ

ಸಮಾಲೋಚನಾ ಸಭೆ ನಾಳೆ

ಬೆಂಗಳೂರು: ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟವು ಎರಡನೇ ಕನ್ನಡ ಸಮ್ಮೇಳನವನ್ನು ಆಯೋಜಿಸುವ ಕುರಿತು ಜುಲೈ 12ರಂದು ಕಾಚರಕನಹಳ್ಳಿ ದಕ್ಷಿಣ ಅಯೋಧ್ಯೆಯ ಎಂಆರ್‌ಕೆ ಸಭಾಂಗಣದಲ್ಲಿ ಸಮಾಲೋಚನಾ ಸಭೆಯನ್ನು ಆಯೋಜಿಸಿದೆ.

ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟವು ಈ ವರ್ಷದ ನವೆಂಬರ್‌ಗೆ 20 ವರ್ಷಗಳನ್ನು ಪೂರೈಸಲಿದೆ. ಈ ನಿಟ್ಟಿನಲ್ಲಿ ಕನ್ನಡ ಸಮ್ಮೇಳನ ಆಯೋಜಿಸಲಾಗುತ್ತಿದ್ದು, ಈ ಭಾಗದ ಎಲ್ಲ ಕನ್ನಡಪರ ಸಂಘಟನೆಗಳ ಮುಖಂಡರು, ರಾಜಕೀಯ ನಾಯಕರು, ಸಂಘ–ಸಂಸ್ಥೆಗಳ ಮುಖಂಡರು ಈ ಸಭೆಯಲ್ಲಿ ಪಾಲ್ಗೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 94494 55582

ಜಲಮಂಡಳಿ: ಫೋನ್–ಇನ್ ಇಂದು

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ವಿ.ರಾಮ್‌ಪ್ರಸಾತ್ ಮನೋಹರ್ ಅವರು ಇದೇ 11ರಂದು (ಶುಕ್ರವಾರ) ಬೆಳಿಗ್ಗೆ 9.30ರಿಂದ 10.30ರವರೆಗೆ ಫೋನ್–ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಸಾರ್ವಜನಿಕರು ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ, ಇಳಿಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್‌ಗೆ ಸಂಬಂಧಿಸಿದ ಸಮಸ್ಯೆಯ ಬಗ್ಗೆ ಮಾತನಾಡಿ ಪರಿಹಾರ ಪಡೆದುಕೊಳ್ಳಬಹುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದು ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ದೂರವಾಣಿ ಸಂಖ್ಯೆ: 080-22945119, 080-22229639.

ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು: ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಖಾಲಿ ಇರುವ 50 ಸಹಾಯಕ ಎಂಜಿನಿಯರ್ ಹಾಗೂ 14 ಪ್ರಥಮ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಅಂತಿಮ ಆಯ್ಕೆ ಪಟ್ಟಿಗಳನ್ನು ಮಂಡಳಿಯ https://kuwsbb.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಮಂಡಳಿಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಸ್ಯ ಸಂತೆ ಇಂದಿನಿಂದ

ಬೆಂಗಳೂರು: ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ವಿದ್ಯಾರಣ್ಯಪುರದಲ್ಲಿರುವ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಜುಲೈ 11ರಿಂದ 13ರವರೆಗೆ ಸಸ್ಯ ಸಂತೆಯನ್ನು ಆಯೋಜಿಸಿದೆ.

ಈ ಸಸ್ಯ ಸಂತೆಯಲ್ಲಿ ಹಣ್ಣಿನ ಕಸಿ ಸಸಿಗಳು, ತರಕಾರಿ ಬೀಜ, ಔಷಧೀಯ ಮತ್ತು ಸುಗಂಧ ಸಸಿಗಳು ಮತ್ತು ಅಲಂಕಾರಿಕ ಸಸಿಗಳು, ಎರೆಹುಳು ಗೊಬ್ಬರ, ಜೈವಿಕ ಗೊಬ್ಬರ, ಇತರೆ ಸಾವಯವ ಪರಿಕರಗಳು, ಕೀಟನಾಶಕ, ಕೃಷಿ ಉಪಕರಣಗಳು, ಉದ್ಯಾನ ಪರಿಕರಗಳು ಮತ್ತು ಹೂವಿನ ಕುಂಡಗಳು ಹಾಗೂ ಸಾವಯವ ಆಹಾರ ಪದಾರ್ಥಗಳ ಮಾರಾಟಕ್ಕೆ ಮಳಿಗೆಗಳನ್ನು ತೆರೆಯಲು ಬಯಸುವವರು 77950 72699, 78920 57925 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬೀದಿ ನಾಯಿಗಳಿಗೆ ಪೌಷ್ಟಿಕ ಆಹಾರ

ಪ್ರತಿ ಬೀದಿ ನಾಯಿಗೆ ಅಂದಾಜು 600 ಗ್ರಾಂ ಬೇಯಿಸಿದ ಆಹಾರ

ಪ್ರಜಾವಾಣಿ ವಾರ್ತೆ



ಮುಖ್ಯಾಂಶಗಳು

- ಅನ್ನ, ಕೋಳಿ ಮಾಂಸದ ಆಹಾರ ಪೂರೈಕೆ
- ಬಿಬಿಎಂಪಿ ನಿಗದಿಪಡಿಸಿರುವ ಸ್ಥಳದಲ್ಲಿ ಆಹಾರ
- ಮರುಬಳಕೆಯ ಪ್ಲೇಟ್ ಅಥವಾ ಬೌಲ್‌ಗಳನ್ನು ಬಳಸಬೇಕು

ಬೀದಿ ನಾಯಿಗೆ ನೀಡುವ ಆಹಾರದಲ್ಲಿ ಏನಿರುತ್ತೆ?

ಪೋಷಕಾಂಶ	ಪದಾರ್ಥ	ಪ್ರಮಾಣ	ಕ್ಯಾಲೊರಿ
ಕಾರ್ಬೋಹೈಡ್ರೇಟ್ (50%-60%)	ಅಕ್ಕಿ	150 ಗ್ರಾಂ	360
ಪ್ರೊಟೀನ್ (15%-20%)	ಕೋಳಿ ಮಾಂಸ	100 ಗ್ರಾಂ	240
ಕೊಬ್ಬು (10%-15%)	ಅಡುಗೆ ಎಣ್ಣೆ	10 ಗ್ರಾಂ	90
ವಿಟಮಿನ್– ಮಿನರಲ್ಸ್	ತರಕಾರಿ	100 ಗ್ರಾಂ	60
ಉಪ್ಪು (1%)	–	5 ಗ್ರಾಂ	–
ಅರಿಶಿನ (0.5%)	ಬ್ಯಾಕ್ಟೀರಿಯ ನಿಯಂತ್ರಕ	2.5 ಗ್ರಾಂ	
ಒಟ್ಟು		367.5 ಗ್ರಾಂ	750

ಬೀದಿ ನಾಯಿಗಳಿಗೆ ಆಹಾರ ವಿವರ

- ₹2.88 ಕೋಟಿ — ಎಂಟೂ ವಲಯಗಳಲ್ಲಿ ಪ್ರತಿ ವರ್ಷ ಒಟ್ಟಾರೆ ವೆಚ್ಚ
- ₹36 ಲಕ್ಷ — ಪ್ರತಿ ವಲಯಕ್ಕೆ ಒಂದು ವರ್ಷಕ್ಕಾಗುವ ವೆಚ್ಚ
- 12.84 ಲಕ್ಷ — ಬೀದಿ ನಾಯಿಗಳಿಗೆ ಒಂದು ವರ್ಷಕ್ಕೆ ಆಹಾರ
- 440 ಬೀದಿ ನಾಯಿ — ಪ್ರತಿ ವಲಯದಲ್ಲಿ ನಿತ್ಯ ಆಹಾರ
- ₹22.42 — ಪ್ರತಿ ಬೀದಿ ನಾಯಿಗೆ ಒಂದು ಬಾರಿ ಆಹಾರದ ವೆಚ್ಚ
- 11 ಗಂಟೆ — ಪ್ರತಿ ದಿನ ಬೆಳಿಗ್ಗೆ ಬೀದಿ ನಾಯಿಗೆ ಆಹಾರ ನೀಡುವ ಸಮಯ

ಬೆಂಗಳೂರು: ನಗರದಲ್ಲಿರುವ ಬೀದಿ ನಾಯಿಗಳಿಗೆ ಆಹಾರ ನೀಡಲು ಸಮುದಾಯದ ಜನರು ಹೆಚ್ಚಿನ ಆಸಕ್ತಿ ತೋರದ್ದರಿಂದ ಬಿಬಿಎಂಪಿ ವತಿಯಿಂದಲೇ ಪೋಷಕಾಂಶಯುಕ್ತ ಆಹಾರ ನೀಡಲು ತೀರ್ಮಾನಿಸಲಾಗಿದೆ.

ಬೀದಿ ನಾಯಿಗಳಿಗೆ ಯಾವ ರೀತಿಯ ಆಹಾರವನ್ನು ಯಾವ ಸಮಯದಲ್ಲಿ ನೀಡಬೇಕೆಂದು ನಿಗದಿಪಡಿಸಿರುವ ಬಿಬಿಎಂಪಿ ಪಶುಸಂಗೋಪನೆ ವಿಭಾಗ, ಪ್ರತಿ ವರ್ಷ ಅಂದಾಜು ₹2.88 ಕೋಟಿ ವೆಚ್ಚದಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡಲು ಟೆಂಡರ್ ಆಹ್ವಾನಿಸಿದೆ.

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದಲ್ಲಿ (ಎಫ್‌ಎಸ್‌ಎಸ್‌ಎಐ) ನೋಂದಣಿಯಾಗಿರುವ ಸಂಸ್ಥೆ ಅಥವಾ ಏಜೆನ್ಸಿಗಳು ಟೆಂಡರ್‌ನಲ್ಲಿ ಭಾಗವಹಿಸಬಹುದು. ಯಾವುದೇ ರೀತಿಯ ಕೃತಕ ಬಣ್ಣ ಬಳಸಬಾರದು. ತಾಜಾ ಹಾಗೂ ಸ್ವಚ್ಛವಾಗಿ ಆಹಾರವನ್ನು ತಯಾರಿಸಬೇಕು. ಬಿಬಿಎಂಪಿ ಒದಗಿಸಿರುವ ಆಹಾರ ಯೋಜನೆಯಂತೆಯೇ ಆಹಾರ ತಯಾರಿಸಬೇಕು. ತಯಾರಿಸಿದ ಆಹಾರವನ್ನು ಸತತ ಎರಡು ದಿನ ಬೀದಿ ನಾಯಿಗಳು ತಿನ್ನದಿದ್ದರೆ ಆಹಾರವನ್ನು ಬದಲಿಸಬೇಕು. ಅಡುಗೆ ಮನೆಯಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು ಎಂಬ ಷರತ್ತುಗಳನ್ನು ವಿಧಿಸಲಾಗಿದೆ.

ಒಂದೇ ಅಡುಗೆ ಮನೆಯಲ್ಲಿ ಆಹಾರ ತಯಾರಿಸಿ, ವಿತರಿಸಬೇಕು. ನಿತ್ಯ 11 ಗಂಟೆಗೆ ಬೀದಿ ನಾಯಿಗಳಿಗೆ ಆಹಾರ ನೀಡಬೇಕು. ಆಹಾರ ಕೊಂಡೊಯ್ಯುವ ವಾಹನಕ್ಕೆ ಜಿಪಿಎಸ್ ಅಳವಡಿಸಿರಬೇಕು ಮತ್ತು ವಾಹನದ ಮೇಲೆ ಬಿಬಿಎಂಪಿ ಹಾಗೂ ಸಂಬಂಧಪಟ್ಟ ಎನ್‌ಜಿಒಗಳ ಮಾಹಿತಿ ಪ್ರಕಟಿಸಬೇಕು ಎಂದು ಜುಲೈ 17ರಂದು ತೆರೆಯಲಾಗುವ ಟೆಂಡರ್ ದಾಖಲೆಗಳಲ್ಲಿ ತಿಳಿಸಲಾಗಿದೆ.

ಬೀದಿ ನಾಯಿಗಳೊಂದಿಗಿನ ಪ್ರೀತಿ ಮತ್ತು ಬಾಂಧವ್ಯದ ಕಥೆಗಳನ್ನು ಹಂಚಿಕೊಳ್ಳುತ್ತಾ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಪ್ರಾಣಿಗಳ ಪಾಲಕರನ್ನು ಒಟ್ಟುಗೂಡಿಸಲು ಬಿಬಿಎಂಪಿ 'ನಾಯಿಗಳಿಗಾಗಿ ಉತ್ಸವ'ವನ್ನು (ಕುಕುರ್ ತಿಹಾರ್) 2024ರ ಅಕ್ಟೋಬರ್ 17ರಂದು ಆಯೋಜಿಸಲಾಗಿತ್ತು. ಬೀದಿ ನಾಯಿಗಳಿಗೆ ಸಾರ್ವಜನಿಕರು, ಸಂಘ–ಸಂಸ್ಥೆಗಳು, ಸ್ವಯಂಸೇವಕರಿಂದ ಆಹಾರ ನೀಡುವ ಪ್ರಕ್ರಿಯೆಗೂ ಚಾಲನೆ ನೀಡಲಾಗಿತ್ತು. ಆಹಾರ ನೀಡುವ ಸ್ಥಳಗಳನ್ನು ವಲಯವಾರು ಗುರುತಿಸಲಾಗಿತ್ತು.

'ಬೀದಿ ನಾಯಿಗಳಿಗೆ ನಿಗದಿತ ಪ್ರದೇಶದಲ್ಲಿ ಆಹಾರ ಹಾಕುವುದನ್ನು ನಿಷೇಧಿಸುವಂತಿಲ್ಲ, ವಿರೋಧಿಸುವಂತಿಲ್ಲ. ಅಪಾರ್ಟ್‌ಮೆಂಟ್‌ಗಳಲ್ಲಿ ಸಾಕು ಪ್ರಾಣಿಗಳಿಗೆ ಸೌಲಭ್ಯ ಕಲ್ಪಿಸಬೇಕು. ಬೀದಿಯಲ್ಲಿರುವ ಪ್ರಾಣಿಗಳನ್ನು ಹೊಡೆದರೆ ಅಥವಾ ಹಿಂಸಿಸಿದರೆ ದಂಡ ಅಥವಾ ಜೈಲು ಶಿಕ್ಷೆಯಾಗುವ 'ಸಮುದಾಯ ಪ್ರಾಣಿಗಳ' ಕಾಯ್ದೆಯನ್ನು 2025ರ ಜನವರಿಯಿಂದ ನಗರದಲ್ಲಿ ಜಾರಿಗೆ ತರಲಾಗಿತ್ತು.

'ಬೀದಿ ನಾಯಿಗಳಿಗೆ ಆಹಾರ ನೀಡುವ ಕಾರ್ಯಕ್ರಮಕ್ಕೆ ಸ್ವಯಂಪ್ರೇರಿತರಾಗಿ ಹೆಚ್ಚು ಸಂಖ್ಯೆಯಲ್ಲಿ ಜನರು ಬರಲಿಲ್ಲ. ಹೀಗಾಗಿ ನಾವೇ ಯೋಜನೆ ತಯಾರಿಸಿದ್ದು ಆಹಾರ ನೀಡಲಿದ್ದೇವೆ. ತಜ್ಞರ ಸಲಹೆ ಮಾರ್ಗದರ್ಶನ ಮೇಲೆ ರೂಪುರೇಷೆ ಮಾಡಲಾಗಿದ್ದು, ಬೀದಿ ನಾಯಿ ಕಡಿತ ಪ್ರಕರಣಗಳು ಹೆಚ್ಚಾಗಿ ದಾಖಲಾಗಿರುವ ಪ್ರದೇಶಗಳಲ್ಲಿ ಆಹಾರ ನೀಡುವ ಕಾರ್ಯಕ್ರಮ ಅನುಷ್ಠಾನವಾಗಲಿದೆ' ಎಂದು ಬಿಬಿಎಂಪಿ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

'ಹಸ್ತಕ್ಷೇಪದಿಂದ ಉನ್ನತ ಶಿಕ್ಷಣದಲ್ಲಿ ಬಿಕ್ಕಟ್ಟು'

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಕೀಯ ಹಸ್ತಕ್ಷೇಪ, ಸ್ವಾಯತ್ತತೆಯ ಕೊರತೆಯಿಂದ ಭಾರತದ ಉನ್ನತ ಶಿಕ್ಷಣ ಕ್ಷೇತ್ರವು ಬಿಕ್ಕಟ್ಟಿನಲ್ಲಿದೆ ಎಂದು ದೆಹಲಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಾಗೂ ಅರ್ಥಶಾಸ್ತ್ರಜ್ಞ ದೀಪಕ್ ನಯ್ಯರ್ ಅಭಿಪ್ರಾಯಪಟ್ಟರು.

ಬುಧವಾರ ಸಂಜೆ ಇಲ್ಲಿ ನಡೆದ ಬಿ.ಜಿ. ದೇಶಮುಖ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ವಿಶ್ವವಿದ್ಯಾಲಯ ಅನುದಾನ ಆಯೋಗವನ್ನು (ಯುಜಿಸಿ) ಕಟುವಾಗಿ ಟೀಕಿಸಿದರು. 'ಯುಜಿಸಿಯು ಉನ್ನತ ಶಿಕ್ಷಣ ಸಂಸ್ಥೆಗಳ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ. ಉತ್ಕೃಷ್ಟತೆ ಮತ್ತು ವೈವಿಧ್ಯತೆಯನ್ನು ಹತ್ತಿಕ್ಕುವ 'ಎಲ್ಲರಿಗೂ ಒಂದೇ' ನಿಯಮಗಳನ್ನು ಹೇರಿದೆ' ಎಂದರು.

'ಉನ್ನತ ಶಿಕ್ಷಣ ಕ್ಷೇತ್ರದ ಬಿಕ್ಕಟ್ಟಿಗೆ ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರವೇ ಕಾರಣ' ಎಂದು ದೂಷಿಸಿದ ಪ್ರೊ. ನಯ್ಯರ್, '2014ರ ನಂತರ ವಿಶ್ವವಿದ್ಯಾಲಯಗಳಲ್ಲಿ ರಾಜಕೀಯ ಹಸ್ತಕ್ಷೇಪ ಮತ್ತು ಸರ್ಕಾರಿ ಹಸ್ತಕ್ಷೇಪ ಹೆಚ್ಚಾಗಿದೆ. ಇದು 2019ರಿಂದ ಮತ್ತಷ್ಟು ವೇಗ ಪಡೆದುಕೊಂಡಿದೆ' ಎಂದು ಹೇಳಿದರು.

ದೀಪಕ್ ನಯ್ಯರ್

'ಉಪನ್ಯಾಸಕರ ನೇಮಕಾತಿಗಳಲ್ಲಿ ಆರ್‌ಎಸ್‌ಎಸ್ ಸಿದ್ಧಾಂತ ಮತ್ತು ಬಿಜೆಪಿಯ ರಾಜಕೀಯ ಆದ್ಯತೆಗಳ ಪ್ರಭಾವ ದಟ್ಟವಾಗಿದೆ ಎಂದು ಹೇಳುವುದು ಅತಿಶಯೋಕ್ತಿಯಲ್ಲ' ಎಂದರು.

'ಕೆಲವು ಅದೃಷ್ಟವಂತರು ಮಾತ್ರ 12ನೇ ತರಗತಿಯ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉತ್ತಮ ವಿಶ್ವವಿದ್ಯಾಲಯದಲ್ಲಿ ಸೀಟು ಪಡೆಯುತ್ತಾರೆ. ಬಹುತೇಕರು ದುಬಾರಿ ಹಾಗೂ ಕಡಿಮೆ ಗುಣಮಟ್ಟದ ವಿಶ್ವವಿದ್ಯಾಲಯಗಳಿಗೆ ಹೋಗುತ್ತಾರೆ. ಇತ್ತೀಚೆಗೆ ವಿದೇಶಗಳಿಗೆ ಹೋಗುವವರ ಸಂಖ್ಯೆ ಕೂಡ ಹೆಚ್ಚುತ್ತಿದೆ' ಎಂದ ಅವರು, '2023ರಲ್ಲೇ ಭಾರತೀಯ ವಿದ್ಯಾರ್ಥಿಗಳು ಸಾಗರದಾಚೆ ವ್ಯಯಿಸುವ ಮೊತ್ತ 27 ಬಿಲಿಯನ್ ಡಾಲರ್‌ನಷ್ಟಿದೆ. ಇದು ಪ್ರವಾಸೋದ್ಯಮದಲ್ಲಿ ಭಾರತದ ವಿದೇಶಿ ವಿನಿಮಯದ ಗಳಿಕೆಗೆ ಬಹುತೇಕ ಸಮನಾಗಿದೆ' ಎಂದರು.

'ನಮ್ಮ ವಿಶ್ವವಿದ್ಯಾಲಯಗಳು ಯಾವುದೇ ನೊಬೆಲ್ ಪ್ರಶಸ್ತಿ ವಿಜೇತರನ್ನು ಸೃಷ್ಟಿಸಿಲ್ಲ ಎಂಬುದು ಅಚ್ಚರಿಯ ವಿಷಯವಲ್ಲ. ನಾವು ಈಗ ಸಾಗುತ್ತಿರುವ ರೀತಿ ನೋಡಿದರೆ ಮುಂದಿನ 25 ವರ್ಷಗಳಲ್ಲಿ ಕೂಡ ಇದು ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ' ಎಂದು ಹೇಳಿದರು.

'ಮಧ್ಯಮ ಆದಾಯದ ಸುಳಿಯಲ್ಲಿ'

'ಉತ್ತಮ ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆಯಿಲ್ಲದೆ ಭಾರತವು ಲ್ಯಾಟಿನ್ ಅಮೆರಿಕ ಮತ್ತು ಏಷ್ಯಾದ ಆರ್ಥಿಕತೆಯ ಮಾದರಿಯಲ್ಲಿಯೇ 'ಮಧ್ಯಮ ಆದಾಯದ ಸುಳಿ'ಗೆ ಸಿಲುಕುವ ಸಾಧ್ಯತೆಯಿದೆ. ಭಾರತಕ್ಕೆ 2035ರ ವೇಳೆಗೆ ಮೇಲ್ವರ್ಗದ ಆದಾಯ ತಲುಪುವ ಕ್ಷಮತೆಯಿದೆ. ಆದರೆ, ಉನ್ನತ ಶಿಕ್ಷಣ ಪರಿವರ್ತನೆಗೊಳ್ಳದ ಹೊರತು 2047ರ ವೇಳೆಗೆ ಹೆಚ್ಚಿನ ಆದಾಯದ ಸ್ಥಿತಿಗೆ ತಲುಪುವುದು ಕಷ್ಟಸಾಧ್ಯ' ಎಂದು ದೀಪಕ್ ನಯ್ಯರ್ ಅಭಿಪ್ರಾಯಪಟ್ಟರು.

ಶುಭಾಂಶು ಶುಕ್ಲಾ 14ರಂದು ವಾಪಸ್

ನವದೆಹಲಿ (ಪಿಟಿಐ): ಭಾರತದ ಶುಭಾಂಶು ಶುಕ್ಲಾ ಮತ್ತು ಇತರ ಮೂವರು ಗಗನಯಾನಿಗಳು 'ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಿಂದ (ಐಎಸ್‌ಎಸ್) ಜುಲೈ 14ರಂದು ಭೂಮಿಗೆ ಮರಳಲಿದ್ದಾರೆ.

'ಆಕ್ಸಿಯಂ–4' ಯೋಜನೆಯ ಪ್ರಗತಿಯನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದೇವೆ. ಡ್ರ್ಯಾಗನ್ ಬಾಹ್ಯಾಕಾಶ ಕೋಶವನ್ನು ಐಎಸ್‌ಎಸ್‌ನಿಂದ ಅನ್‌ಡಾಕ್ (ಬೇರ್ಪಡಿಸುವುದು) ಮಾಡಬೇಕಿದೆ. ಆ ಪ್ರಕ್ರಿಯೆಗೆ ಜುಲೈ 14ರ ದಿನಾಂಕ ನಿಗದಿಪಡಿಸಿದ್ದೇವೆ' ಎಂದು ನಾಸಾ ಅಧಿಕಾರಿ ಸ್ಟೀವ್ ಸ್ಟಿಚ್ ಗುರುವಾರ ತಿಳಿಸಿದ್ದಾರೆ.

'ಆಕ್ಸಿಯಂ–4' ಅಂತರಿಕ್ಷ ಕಾರ್ಯಕ್ರಮದ ಭಾಗವಾಗಿ 'ಡ್ರ್ಯಾಗನ್' ಬಾಹ್ಯಾಕಾಶ ಕೋಶವನ್ನು ಹೊತ್ತ ಸ್ಪೇಸ್‌ಎಕ್ಸ್‌ನ 'ಫಾಲ್ಕನ್–9' ರಾಕೆಟ್ ಫ್ಲಾರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಜೂನ್ 25ರಂದು ನಭಕ್ಕೆ ಚಿಮ್ಮಿತ್ತು.

ಸುದ್ದಿ 2 ನಿಮಿಷ

ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್ ಶುಲ್ಕ ಹೆಚ್ಚಳ ಇಲ್ಲ– ಸಚಿವ

ಬೆಂಗಳೂರು: ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳ ಶುಲ್ಕವನ್ನು 2025–26ನೇ ಸಾಲಿಗೆ ಹೆಚ್ಚಳ ಮಾಡುವುದಿಲ್ಲ. ನಿಗದಿಗಿಂತ ಅಧಿಕ ಶುಲ್ಕ ಪಡೆಯುವ ಕಾಲೇಜುಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ನರ್ಸಿಂಗ್ ಕಾಲೇಜುಗಳ ಸಂಘದ ಪದಾಧಿಕಾರಿಗಳ ಜತೆ ಗುರುವಾರ ನಡೆದ ಸಭೆಯ ಬಳಿಕ ಮಾತನಾಡಿದ ಅವರು, ಆರ್ಥಿಕವಾಗಿ ದುರ್ಬಲ ವರ್ಗ ಹಾಗೂ ಗ್ರಾಮೀಣ ವಿದ್ಯಾರ್ಥಿಗಳೇ ಅಧಿಕ ಸಂಖ್ಯೆಯಲ್ಲಿ ನರ್ಸಿಂಗ್ ಕೋರ್ಸ್‌ಗಳಿಗೆ ಸೇರುತ್ತಾರೆ. ಅಂತಹ ವಿದ್ಯಾರ್ಥಿಗಳ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಶುಲ್ಕ ಹೆಚ್ಚಳಕ್ಕೆ ಸಮ್ಮತಿ ನೀಡಿಲ್ಲ ಎಂದರು.

ಅನುಮೋದಿತ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕ ಪಡೆದ ಪ್ರಕರಣಗಳು ಕಂಡುಬಂದರೆ ಕಾನೂನು ಕ್ರಮ ಕೈಗೊಳ್ಳುವ ಜತೆಗೆ, ಅಂತಹ ಕಾಲೇಜುಗಳ ಮಾನ್ಯತೆಯನ್ನೂ ರದ್ದುಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಹಂಚಿಕೆಯಾಗದ ಉಳಿಕೆ ಸೀಟುಗಳನ್ನು ಭರ್ತಿ ಮಾಡುವ ಕುರಿತು ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆ. ಯಾವುದೇ ಅನಧಿಕೃತ ಬದಲಾವಣೆಗಳಿಗೆ ಅವಕಾಶವಿಲ್ಲ. ಈ ಬಗ್ಗೆ ಕಟ್ಟುನಿಟ್ಟಿನ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರಿಗೆ ಸೂಚಿಸಿದರು.

ಯುವಜನರ ಸಾವಿನ ಸಂಖ್ಯೆ ಏರಿಕೆ: ಆರೋಗ್ಯ ಸಚಿವ ದಿನೇಶ್

ಬೆಂಗಳೂರು: ಅಭಿವೃದ್ಧಿ ಹೊಂದುತ್ತಿರುವ ರಾಜ್ಯಗಳಲ್ಲಿ ಅಸಾಂಕ್ರಾಮಿಕ ರೋಗಗಳ ಸಂಖ್ಯೆ ಹೆಚ್ಚಾಗುತ್ತಿದೆ. ಯುವಜನರ ಸಾವಿನ ಪ್ರಮಾಣವೂ ಏರಿಕೆಯಾಗುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್‌ಗುಂಡೂರಾವ್ ಕಳವಳ ವ್ಯಕ್ತಪಡಿಸಿದರು.

ಜನಪ್ರಕಾಶನ ಗುರುವಾರ ಆಯೋಜಿಸಿದ್ದ ಲೇಖಕಿ ಡಾ.ವಸುಂಧರಾ ಭೂಪತಿ ಅವರ 'ಮಹಾತ್ಮಗಾಂಧಿ ಮತ್ತು ಪ್ರಕೃತಿ ಚಿಕಿತ್ಸೆ' ಹಾಗೂ 'ಹಣ್ಣುಗಳು ಮತ್ತು ಆರೋಗ್ಯ', ಜಿ.ಶರಣಪ್ಪ ಅವರ 'ಚಂದ್ರನ ಬೆಳಕಲ್ಲಿ' ಸಣ್ಣ ಕಥೆಗಳ ಸಂಕಲನ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಆರೋಗ್ಯ ಹದಗೆಟ್ಟ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ಆರೋಗ್ಯ ಕೆಡದಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ಅನುವಂಶೀಯವಾಗಿ ಅಥವಾ ಬದಲಾದ ಜೀವನ ಶೈಲಿಯಿಂದ ಬರುವ ಕಾಯಿಲೆಗಳಿಂದ ಇತ್ತೀಚೆಗೆ ಸಾಯುವವರ ಪ್ರಮಾಣ ಹೆಚ್ಚಾಗಿದೆ. ಹೃದಯಾಘಾತ, ಕ್ಯಾನ್ಸರ್, ಪಾರ್ಶ್ವವಾಯು ಪ್ರಕರಣಗಳು ಜಾಸ್ತಿಯಾಗುತ್ತಿವೆ ಎಂದು ಮಾಹಿತಿ ನೀಡಿದರು.

ಮಧುಮೇಹ, ರಕ್ತದ ಒತ್ತಡ ಯುವಜನರಲ್ಲಿ ಕಾಣಿಸಿಕೊಳ್ಳುತ್ತಿವೆ. ಯಾವ ರಾಜ್ಯಗಳು ಅಭಿವೃದ್ಧಿಯಾಗಿದೆಯೋ ಅಲ್ಲಿ ಆದಾಯ ಹೆಚ್ಚಿರುತ್ತದೆ. ಖರ್ಚು ಮಾಡುವ ಸಾಮರ್ಥ್ಯವೂ ಇರುತ್ತದೆ. ಆಗ ಓಡಾಟ ಕಡಿಮೆಯಾಗಿ ವಾಹನಗಳಲ್ಲಿಯೇ ಸಂಚರಿಸುವುದು ಹೆಚ್ಚಾಗುವುದರಿಂದ ದೇಹಕ್ಕೆ ವ್ಯಾಯಾಮ ಸಿಗುವುದಿಲ್ಲ. ಸಂಸ್ಕರಿಸಿದ ಆಹಾರ ಸೇವನೆ, ಮಾದಕ ವಸ್ತುಗಳ ಸೇವನೆ, ಮಾಲಿನ್ಯ ಪರಿಸರದಲ್ಲಿ ಬದುಕುವುದು ಮುಂತಾದವು ಕೂಡ ಮರಣ ಪ್ರಮಾಣ ಹೆಚ್ಚಳಕ್ಕೆ ಕಾರಣ ಎಂದು ಹೇಳಿದರು.

ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಮುಜರಾಯಿ ಸುಪರ್ದಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಸಿದ್ಧ ದೇವಾಲಯಗಳಲ್ಲಿ ಒಂದಾದ, ಕೆಲವು ವರ್ಷಗಳಿಂದ ವಿವಾದಕ್ಕೆ ಸಿಲುಕಿದ್ದ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನವನ್ನು ಮುಜರಾಯಿ ಇಲಾಖೆಯ ಸುಪರ್ದಿಗೆ ಪಡೆಯಲಾಗಿದೆ.

ಮೈಸೂರು ರಸ್ತೆಯ ಬ್ಯಾಟರಾಯನಪುರದಲ್ಲಿರುವ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹುಂಡಿ ಹಣ ಎಣಿಕೆಯ ಸಂದರ್ಭದಲ್ಲಿ ಸಿಬ್ಬಂದಿಯೇ ಕಳ್ಳತನ ಮಾಡಿರುವ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಇದು ದೇವಾಲಯದಲ್ಲಿ ಆಡಳಿತ ನಿರ್ವಹಣೆ ಸರಿ ಇಲ್ಲ ಎಂಬುದನ್ನು ತೋರಿಸಿತ್ತು. ಈ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 42 ಮತ್ತು 43ರ ಅನ್ವಯ ಸರ್ಕಾರದ ವಶಕ್ಕೆ ಪಡೆಯಲು ಸ್ಪಷ್ಟ ಅಭಿಪ್ರಾಯದ ವರದಿ ನೀಡುವಂತೆ ಧಾರ್ಮಿಕ ದತ್ತಿ ಆಯುಕ್ತರು ಜಿಲ್ಲಾಧಿಕಾರಿಗೆ 2024ರ ಅಕ್ಟೋಬರ್‌ನಲ್ಲಿ ಸೂಚಿಸಿದ್ದರು.

ಗಾಳಿ ಆಂಜನೇಯ ದೇವರ ವಿಗ್ರಹ

ದೇವಸ್ಥಾನವನ್ನು ಮುಜರಾಯಿ ಇಲಾಖೆಯ 'ಘೋಷಿತ ಸಂಸ್ಥೆ'ಯನ್ನಾಗಿ ಘೋಷಿಸಲು ಹೆಚ್ಚುವರಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿತ್ತು. ವಿಚಾರಣೆ ನಡೆಸಿದ ಬಳಿಕ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಿಗೆ ವರದಿ ಸಲ್ಲಿಸಲಾಗಿತ್ತು.

'ಲಕ್ಷಾಂತರ ರೂಪಾಯಿ ಆದಾಯ ಇರುವ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಟ್ರಸ್ಟ್‌ನ ಪದಾಧಿಕಾರಿಗಳ ನಡುವೆ ಹೊಂದಾಣಿಕೆ ಇಲ್ಲ. ಪ್ರತಿವರ್ಷವೂ ಉಳಿತಾಯವಿಲ್ಲದಂತೆ ವೆಚ್ಚ ಮಾಡಲಾಗುತ್ತಿದೆ. ಇದರಿಂದ ದೇವಸ್ಥಾನದ ಹಣವು ದುರುಪಯೋಗ ಆಗುತ್ತಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಅಲ್ಲದೇ ಆದಾಯ ಮತ್ತು ವೆಚ್ಚಕ್ಕೆ ಸಂಬಂಧಿಸಿದಂತೆ 25 ವರ್ಷಗಳಿಂದ ಯಾವುದೇ ದಾಖಲೆಗಳನ್ನು ಇಟ್ಟಿರಲಿಲ್ಲ. ಮುಜರಾಯಿ ಇಲಾಖೆ ನೋಟಿಸ್ ನೀಡಿದ ಬಳಿಕ ದಾಖಲೆಗಳನ್ನು ಸೃಷ್ಟಿಸಲಾಗಿದೆ. ದೇವಾಲಯದ ಸಿಬ್ಬಂದಿ ಹುಂಡಿ ಹಣ ಕದ್ದಿರುವ ಬಗೆಗಿನ ವಿಡಿಯೊ ತುಣುಕುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗಿ ಭಕ್ತರ ಧಾರ್ಮಿಕ ಭಾವನೆಗೆ ಕುಂದುಂಟಾಗಿದೆ' ಎಂದು ವರದಿಯಲ್ಲಿ ತಿಳಿಸಲಾಗಿತ್ತು.

ಈ ವರದಿಯಂತೆ ಸಾರ್ವಜನಿಕರು ಮತ್ತು ಭಕ್ತರ ಹಿತದೃಷ್ಟಿಯಿಂದ ಈ ದೇವಾಲಯವನ್ನು ಸರ್ಕಾರ ವಶಕ್ಕೆ ಪಡೆಯುವುದು ಸೂಕ್ತ ಎಂದು ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ಅದರಂತೆ ಈ ದೇವಸ್ಥಾನವನ್ನು 'ಘೋಷಿತ ಸಂಸ್ಥೆ' ಎಂದು ಘೋಷಿಸಿ ಮುಜರಾಯಿ ಇಲಾಖೆ ಜುಲೈ 8ರಂದು ಆದೇಶ ಹೊರಡಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅಭಿಮತ

'ಹಡಪದ ಅಪ್ಪಣ್ಣರ ವಚನ, ಚಿಂತನೆ ದಾರಿದೀಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿವಶರಣ ಹಡಪದ ಅಪ್ಪಣ್ಣ ಅವರ ವಚನಗಳು ಹಾಗೂ ಚಿಂತನೆಗಳು ಮನುಕುಲದ ಉದ್ಧಾರಕ್ಕೆ ದಾರಿದೀಪಗಳಾಗಿವೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಹಡಪದ ಅಪ್ಪಣ್ಣ ಜಯಂತಿ ಸಮಾರಂಭ ಉದ್ಘಾಟಿಸಿ, ಮಾತನಾಡಿದರು.

'ವಚನ ಸಾಹಿತ್ಯ ಚಳವಳಿಯು ಕರ್ನಾಟಕದ ಇತಿಹಾಸದಲ್ಲಿ ಮರೆಯಲಾರದ ಮತ್ತು ಮರೆಯಬಾರದ ಪ್ರಮುಖ ಚಳವಳಿಯಾಗಿದೆ. ಸಮಾಜದಲ್ಲಿನ ತಾರತಮ್ಯಗಳನ್ನು ನಿವಾರಿಸಲು ತಮ್ಮದೇ ಆದ ಕೊಡುಗೆಯನ್ನು ನೀಡಿದ ಬಸವಾದಿ ಶರಣರು, ಸಮಾಜದಲ್ಲಿ ಹರಡಿದ್ದ ಅಜ್ಞಾನ, ಮೂಢನಂಬಿಕೆಗಳನ್ನು ಕಿತ್ತೊಗೆಯಲು ಶ್ರಮಿಸಿದರು. ಬಸವಣ್ಣನವರ ಅನುಯಾಯಿಯಾಗಿದ್ದ ಹಡಪದ ಅಪ್ಪಣ್ಣ ಅವರು, ತಮ್ಮ ವಚನಗಳ ಮೂಲಕ ಸಮಾಜ ಸುಧಾರಣೆಗೆ ಶ್ರಮಿಸಿದ ಮಹಾನ್ ಶರಣರಾಗಿದ್ದಾರೆ' ಎಂದರು.

ಸಮಾರಂಭದಲ್ಲಿ ಕೆ.ಎಂ. ಗಾಯತ್ರಿ, ಶಿವರಾಜ ತಂಗಡಗಿ, ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಮಾನಸ, ಸಿದ್ದಪ್ಪ ಹಡಪದ ಹಾಗೂ ನಾಗರಾಜ್ ಹಡಪದ ಅವರು ಹಡಪದ ಅಪ್ಪಣ್ಣ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಇದೇ ವೇಳೆ ತಂಗಡಗಿ ಹಡಪದ ಅಪ್ಪಣ್ಣ ದೇವರ ಮಹಾಸಂಸ್ಥಾನ ಮಠದ ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ ಅವರು, 'ಹಡಪದ ಸಮುದಾಯವನ್ನು 2ಎ ಪಟ್ಟಿಗೆ ಸೇರಿಸಬೇಕು' ಎಂದು ಮನವಿ ಮಾಡಿದರು.

ಈ ಮನವಿಗೆ ಪ್ರತಿಕ್ರಿಯಿಸಿದ ಸಚಿವರು, 'ಯಾವುದೇ ಸಮುದಾಯವನ್ನು 2ಎ ಪಟ್ಟಿಗೆ ಸೇರಿಸಲು ಕೆಲವೊಂದು ನಿಯಮಗಳಿರುತ್ತವೆ. ಅದರಂತೆ ನಡೆಯಬೇಕಾಗುತ್ತದೆ' ಎಂದು ಅವರು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯತ್ರಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಅಖಿಲ ಕರ್ನಾಟಕ ಅಪ್ಪಣ್ಣ ಸಮಾಜ ಸೇವಾ ಸಂಘದ ರಾಜ್ಯಾಧ್ಯಕ್ಷ ಸಿದ್ದಪ್ಪ ಹಡಪದ, ಸಂಘದ ಜಿಲ್ಲಾಧ್ಯಕ್ಷ ನಾಗರಾಜ್ ಹಡಪದ ಉಪಸ್ಥಿತರಿದ್ದರು.

'ವಾಸ್ತವ ಅರಿಯದೆ ವಿರೋಧ'

'ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಬಗ್ಗೆ ವಾಸ್ತವ ಅರಿಯದೆ ವರದಿಗೆ ಕೆಲವರು ವಿರೋಧ ವ್ಯಕ್ತಪಡಿಸಿದ್ದರು. ಹಡಪದ ಸಮುದಾಯದಲ್ಲಿ 21 ಉಪ ಜಾತಿಗಳ ಹೆಸರುಗಳನ್ನು ಸಮೀಕ್ಷೆ ವೇಳೆ ಬರೆಸಲಾಗಿದೆ. ಇದನ್ನು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅಥವಾ ನಾನು ಹೇಳಿ ಬರೆಸಿಲ್ಲ. ಸಮೀಕ್ಷೆ ವೇಳೆ ನೀವೇ ಉಪ ಜಾತಿಗಳನ್ನು ಬರೆಸಿದ್ದೀರಿ. ನಾವು ಯಾವುದೇ ಸಮುದಾಯ 10 ಲಕ್ಷ, 20 ಲಕ್ಷ ಇದ್ದರೂ ಪರಿಗಣಿಸುತ್ತೇವೆ. ಎಂದಿಗೂ ಸಮುದಾಯದ ಜನಸಂಖ್ಯೆಯ ಬಗ್ಗೆ ಚಿಂತಿಸಿಲ್ಲ. ಕಷ್ಟದಲ್ಲಿರುವ ಸಮುದಾಯವನ್ನು ಮೇಲಕ್ಕೆತ್ತುವ ಸಲುವಾಗಿ ಸಮೀಕ್ಷೆ ಮಾಡಿಸಲಾಗಿತ್ತು' ಎಂದು ಶಿವರಾಜ ತಂಗಡಗಿ ಸ್ಪಷ್ಟಪಡಿಸಿದರು.

'ತಯಾರಿಕೆಗೆ ಒತ್ತು ನೀಡಬೇಕಾಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತವು ಸೇವಾವಲಯದಲ್ಲಿ ಉತ್ತಮ ಸ್ಥಾನ ಹೊಂದಿದೆ. ಆದರೆ ತಯಾರಿಕಾ ವಲಯದಲ್ಲಿ ಕ್ರಮಿಸಬೇಕಾದ ಹಾದಿ ಬಹಳ ದೂರವಿದೆ' ಎಂದು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂದಿಯಾ ಹೇಳಿದರು.

ವಿಟಿಯು, ವಿಶ್ವೇಶ್ವರಯ್ಯ ಸಂಶೋಧನೆ ಮತ್ತು ನಾವೀನ್ಯತಾ ಪ್ರತಿಷ್ಠಾನವು ನಾಗರಬಾವಿಯಲ್ಲಿ ಆರಂಭಿಸಿರುವ ದೂರಸಂಪರ್ಕ ಉತ್ಕೃಷ್ಟತಾ ಕೇಂದ್ರವನ್ನು ಗುರುವಾರ ಲೋಕಾರ್ಪಣೆಗೊಳಿಸಿ ಮಾತನಾಡಿದರು.

'ದೂರಸಂಪರ್ಕ ಕ್ಷೇತ್ರದಲ್ಲಿ ಭಾರತವು ಗಣನೀಯ ಪ್ರಗತಿ ಸಾಧಿಸಿದೆ. ಕಳೆದ ಹತ್ತು ವರ್ಷಗಳಲ್ಲಿ ಮೊಬೈಲ್–ಸ್ಮಾರ್ಟ್‌ಫೋನ್ ಬಳಸುವವರ ಸಂಖ್ಯೆ ಹತ್ತಾರು ಪಟ್ಟು ಹೆಚ್ಚಾಗಿದೆ. ಹತ್ತು ವರ್ಷಗಳ ಹಿಂದೆ ಭಾರತವು ಫೋನ್, ಸ್ಮಾರ್ಟ್‌ಫೋನ್‌ಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಈಗ ರಫ್ತು ಮಾಡುವಷ್ಟು ಈ ಕ್ಷೇತ್ರ ಬೆಳೆದಿದೆ' ಎಂದರು.

'ಸರ್ ಎಂ.ವಿಶ್ವೇಶ್ವರಯ್ಯ ದೇಶಕಂಡ ಶ್ರೇಷ್ಠ ಎಂಜಿನಿಯರ್‌ಗಳಲ್ಲಿ ಅಗ್ರರು. ಅವರಿಗೂ ನಮ್ಮ ಮನೆತನಕ್ಕೂ ಸಂಬಂಧವಿದೆ. 1903ರಲ್ಲಿ ವಿಶ್ವೇಶ್ವರಯ್ಯ ಅವರು ಪುಣೆಯಲ್ಲಿನ ಖಡಕವಾಸಲ ಅಣೆಕಟ್ಟು ನಿರ್ಮಾಣಕ್ಕೆ ತಾಂತ್ರಿಕ ನೆರವು ನೀಡಿದ್ದರು. ಅದನ್ನು ನೋಡಿ ನಮ್ಮ ಮನೆತನದವರು ಗ್ವಾಲಿಯರ್ ಅಣೆಕಟ್ಟು ನಿರ್ಮಾಣ ಮಾಡುವ ಸಂಬಂಧ ಅವರ ತಾಂತ್ರಿಕ ಸಲಹೆ ಮತ್ತು ನೆರವನ್ನು ಪಡೆದಿದ್ದರು' ಎಂದರು

ಕೌಶಲಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ, 'ಈ ಕೇಂದ್ರವು, ಹಲವು ರಾಷ್ಟ್ರೀಯ ಸಂಸ್ಥೆಗಳು ಮತ್ತು ಉದ್ಯಮ ವಲಯದ ಸಹಯೋಗದಲ್ಲಿ ಸಂಶೋಧನೆಗಳನ್ನು ನಡೆಸಲು ನೆರವಾಗಲಿದೆ. ರಾಜ್ಯದಲ್ಲಿನ ನಾವೀನ್ಯತೆ, ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆ ಉತ್ತೇಜಿಸಲು ನೆರವಾಗಲಿದೆ' ಎಂದರು.

ಕೇಂದ್ರದಲ್ಲಿನ ಸವಲತ್ತುಗಳು

- ಹಬ್ ಅಂಡ್ ಸ್ಪೋಕ್ ಮಾದರಿಯಲ್ಲಿ ಈ ಕೇಂದ್ರ ಕಾರ್ಯನಿರ್ವಹಿಸಲಿದ್ದು, ವಿಟಿಯು ವ್ಯಾಪ್ತಿಯ ವಿದ್ಯಾರ್ಥಿಗಳು ಸವಲತ್ತುಗಳನ್ನು ಬಳಸಿಕೊಳ್ಳಬಹುದು
- ದೂರಸಂಪರ್ಕ ಕ್ಷೇತ್ರದಲ್ಲಿ ಸಂಶೋಧನೆಗೆ ಒತ್ತು. 6ಜಿ ತಂತ್ರಜ್ಞಾನ ಅಭಿವೃದ್ಧಿಗೆ ಅಗತ್ಯವಾದ ಸೌಲಭ್ಯ ಮತ್ತು ವಾತಾವರಣ ಹೊಂದಿದೆ
- ಕೃತಕ ಬುದ್ಧಿಮತ್ತೆ (ಎಐ) ಮತ್ತು ಮಷೀನ್ ಲರ್ನಿಂಗ್ ಕ್ಷೇತ್ರದ ವಿದ್ಯಾರ್ಥಿಗಳು ಸಂಶೋಧನೆ ನಡೆಸಲು ಪ್ರತ್ಯೇಕ ಪ್ರಯೋಗಾಲಯ
- ವರ್ಚ್ಯುವಲ್ ರಿಯಾಲಿಟಿ (ವಿಆರ್) ಸಂಬಂಧಿತ ಸಂಶೋಧನೆ ಮತ್ತು ಅಭಿವೃದ್ಧಿಗೆ ಅತ್ಯಾಧುನಿಕ ಘಟಕ

ಸೈಕಲ್ ಪಥದ ಅವ್ಯವಸ್ಥೆ: ಸವಾರರು ಹೈರಾಣ

• ವೀರೇಶಕುಮಾರ್ ಸಾಲಿಮಠ

ಬೆಂಗಳೂರು: ಬಸವೇಶ್ವರ ವೃತ್ತದಲ್ಲಿರುವ ರಾಮನಾರಾಯಣ್ ಚೆಲ್ಲಾರಾಮ್ (ಆರ್.ಸಿ) ಕಾಲೇಜಿನಿಂದ ರೇಸ್‌ಕೋರ್ಸ್‌ವರೆಗಿನ ವಿಶೇಷ ಸೈಕಲ್ ಪಥವು ಗುಂಡಿಗಳಿಂದ ಕೂಡಿದ್ದು, ಅಲ್ಲಲ್ಲಿ ಈ ಪಥವನ್ನು ಅತಿಕ್ರಮಣ ಮಾಡಲಾಗಿದೆ. ಹೀಗಾಗಿ, ಸೈಕಲ್ ಸವಾರರು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ.

'ಟ್ರಿಣ್' ಹೆಸರಿನ ಈ ವಿಶೇಷ ಸೈಕಲ್ ಪಥ ಅವ್ಯವಸ್ಥೆಯ ಆಗರವಾಗಿದೆ. ಆರ್‌ಸಿ ಕಾಲೇಜಿನ ಬಳಿ ಈ ಪಥವನ್ನು ಅತಿಕ್ರಮಿಸಿ, ಬಿಎಂಟಿಸಿ ಬಸ್ ತಂಗುದಾಣ ನಿರ್ಮಿಸಲಾಗಿದೆ. ಭಾರತೀಯ ವಿದ್ಯಾ ಭವನ ಹಾಗೂ ಖನಿಜ ಭವನದ ಮಧ್ಯೆ ಸ್ಕೈವಾಕ್ ನಿರ್ಮಾಣ ಕಾಮಗಾರಿಗೆ ಬಳಸಿ, ಉಳಿದಿರುವ ಮರಳು ಮತ್ತು ಕಲ್ಲುಗಳು ಪಥದ ತುಂಬಾ ಹರಡಿಕೊಂಡಿವೆ. ಅಲ್ಲದೆ, ಕೆಲವೆಡೆ ಮರದ ಕೊಂಬೆಗಳು ಅಡ್ಡಲಾಗಿ ಬಿದ್ದಿವೆ.

ಸೈಕಲ್ ಪಥದಲ್ಲಿ ಎಲ್ಲೆಂದರಲ್ಲಿ ಕೇಬಲ್, ತಂತಿಗಳು ಹರಡಿಕೊಂಡಿವೆ. ಹಣ್ಣು ಮತ್ತು ತಿನಿಸುಗಳ ಮಾರಾಟಗಾರರು ಪಥದ ಮೇಲೆಯೇ ವ್ಯಾಪಾರ ಮಾಡುತ್ತಾರೆ. ಅಲ್ಲದೆ ಸೈಕಲ್ ಪಥದ ಅರಿವಿನ ಕೊರತೆಯಿಂದ ಪಾದಚಾರಿಗಳು ಸವಾರರಿಗೆ ಅಡ್ಡ ಬರುತ್ತಾರೆ.

'ನಗರದಲ್ಲಿ ಸೈಕಲ್ ಪಥಗಳು ಕಡಿಮೆ ಸಂಖ್ಯೆಯಲ್ಲಿವೆ. ಇರುವ ಪಥಗಳನ್ನೂ ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲ' ಎಂದು ದೂರುತ್ತಾರೆ ಸೈಕಲ್ ಸವಾರರು.

> ನಗರದಲ್ಲಿ ಸೈಕಲ್ ಪಥಗಳು ಅಲ್ಲಲ್ಲಿ ಬಿಡಿ ಬಿಡಿಯಾಗಿರುವುದರಿಂದ ದೀರ್ಘ ಸವಾರಿ ಸಾಧ್ಯವಾಗುತ್ತಿಲ್ಲ. ಇವುಗಳ ಜೋಡಣೆ ಮಾಡಿ, ಪಥದ ಉದ್ದ ಹೆಚ್ಚಿಸಬೇಕು
>
> **ದೇವಿದತ್,** ಐಟಿ ಉದ್ಯೋಗಿ

ವಿಶ್ವ ಮಟ್ಟದಲ್ಲಿ ತನ್ನದೇ ಆದ ಖ್ಯಾತಿಯನ್ನು ಬೆಂಗಳೂರು ಹೊಂದಿದೆ. ಆದರೆ, ಅದಕ್ಕೆ ಅಪವಾದವಾಗಿ ತೀವ್ರ ಸಂಚಾರ ಸಮಸ್ಯೆ ಎದುರಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ರಸ್ತೆಗಳಲ್ಲಿ ಸೈಕ್ಲಿಂಗ್ ಅಸಾಧ್ಯದ ಮಾತಾಗಿದೆ ಎನ್ನುತ್ತಾರೆ ಸೈಕ್ಲಿಸ್ಟ್‌ಗಳು.

ನಗರ ಭೂ ಸಾರಿಗೆ ನಿರ್ದೇಶನಾಲಯದ ವಿಶೇಷ ಅಧಿಕಾರಿ ಮೋನಿಕಾ ಅವರು ಸಮಸ್ಯೆ ಕುರಿತು ದೂರವಾಣಿ ಕರೆಗೆ ಪ್ರತಿಕ್ರಿಯಿಸಲು ನಿರಾಕರಿಸಿದರು.

ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆ ಅಡಿ ನಗರ ಭೂಸಾರಿಗೆ ನಿರ್ದೇಶನಾಲಯ 5 ಕಿ.ಮೀ ಉದ್ದದ ಈ ಪಥವನ್ನು 2021ರಲ್ಲಿ ನಿರ್ಮಿಸಿದೆ. ನಗರದಲ್ಲಿ ಸೈಕಲ್ ಸವಾರಿ ಉತ್ತೇಜಿಸುವುದು, ಸವಾರರಿಗೆ ಮೂಲಸೌಕರ್ಯ ಒದಗಿಸುವುದು ಈ ಯೋಜನೆಯ ಉದ್ದೇಶ.

ಆರ್‌.ಸಿ. ಕಾಲೇಜು ಬಳಿ ಸೈಕಲ್ ಪಥದಲ್ಲಿಯೇ ಬಸ್ ತಂಗುದಾಣ ನಿರ್ಮಾಣ ಮಾಡಲಾಗಿದೆ – ಚಿತ್ರ: ಪ್ರಶಾಂತ್ ಎಚ್‌.ಜಿ.

ಸವಾರರ ಬೇಡಿಕೆಗಳು

- ನಗರದ ಪ್ರಮುಖ ಕಾರಿಡಾರ್‌ಗಳು ಮತ್ತು ಹೊರವರ್ತುಲ ರಸ್ತೆ ಸೇರಿದಂತೆ 2,000 ಕಿ.ಮೀ ಉದ್ದದ ಸುರಕ್ಷಿತ ಸೈಕಲ್ ಪಥ ನಿರ್ಮಾಣ
- ಮೆಟ್ರೊ ನಿಲ್ದಾಣ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಉಚಿತ, ಸುರಕ್ಷಿತ ಮತ್ತು ಲಾಕ್ ಮಾಡಬಹುದಾದ ಸೈಕಲ್ ಪಾರ್ಕಿಂಗ್ ಸೌಲಭ್ಯ
- ಜನನಿಬಿಡ ಶಾಪಿಂಗ್ ಬೀದಿಗಳನ್ನು ಕಾರು ಮುಕ್ತ ವಲಯಗಳಾಗಿ ಗೊತ್ತುಪಡಿಸಿ ಪಾದಚಾರಿ ಮತ್ತು ಸೈಕ್ಲಿಸ್ಟ್‌ಗಳಿಗೆ ಅನುಕೂಲ ಕಲ್ಪಿಸುವುದು
- ಸೈಕಲ್ ಸವಾರಿ ಉತ್ತೇಜನಕ್ಕೆ ಬಜೆಟ್‌ನಲ್ಲಿ ಅನುದಾನ ನಿಗದಿ ಮಾಡಬೇಕು
- ರಸ್ತೆ ವಿಭಜಕಗಳ ಮೂಲಕ ಸೈಕಲ್ ಪಥ ಪ್ರತ್ಯೇಕಿಸುವುದು, ನಿಯಮ ಉಲ್ಲಂಘಿಸಿ ಈ ಪಥ ಪ್ರವೇಶಿಸುವ ವಾಹನಗಳಿಗೆ ಅಧಿಕ ದಂಡ ವಿಧಿಸಬೇಕು.
- 1,000 ಪಾರ್ಕಿಂಗ್ ಹಬ್‌ಗಳೊಂದಿಗೆ ಸಾರ್ವಜನಿಕ ಬೈಸಿಕಲ್ ಹಂಚಿಕೆ (ಪಿಬಿಎಸ್) ವ್ಯವಸ್ಥೆ ಪುನರುಜ್ಜೀವನ

> ಯೋಜನಾಬದ್ಧವಾಗಿ ಪಥ ನಿರ್ಮಾಣ ಮಾಡುತ್ತಿಲ್ಲ. ವಿಧಾನಸೌಧ ಬಳಿ ತೋರಿಕೆಗಾಗಿ ಪಥ ನಿರ್ಮಿಸಲಾಗಿದೆ. ಸೈಕಲ್ ಪಥಗಳನ್ನು ನಿರ್ಮಿಸುವಾಗ ಸರ್ಕಾರವು ಸೈಕ್ಲಿಸ್ಟ್‌ಗಳ ಜತೆ ಸಭೆ ನಡೆಸಿ, ಅವರ ಸಲಹೆಗಳನ್ನು ಪರಿಗಣಿಸಬೇಕು
>
> **ಸುನೀಲ್ ಕೆ.ಜಿ,** ಬೈಸಿಕಲ್ ಡೀಲರ್ ಅಸೋಸಿಯೇಷನ್, ಸ್ವಯಂಸೇವಕ

> ನಗರದಲ್ಲಿ ಸೈಕ್ಲಿಂಗ್‌ಗೆ ಸೂಕ್ತ ಸೌಲಭ್ಯಗಳಿಲ್ಲ. ಹಿಗಾಗಿ ಐಟಿ ಉದ್ಯೋಗಿಗಳು ಸೇರಿದಂತೆ ಬಹಳಷ್ಟು ಸೈಕ್ಲಿಸ್ಟ್‌ಗಳು ಕಾರಿನ ಹಿಂಬದಿಯಲ್ಲಿ ಸೈಕಲ್ ಇರಿಸಿ 50 ರಿಂದ 60 ಕಿ.ಮೀ ದೂರ ಕ್ರಮಿಸಿ ನಗರದ ಹೊರ ವಲಯಗಳಲ್ಲಿ ಸೈಕ್ಲಿಂಗ್ ಮಾಡುವ ಪರಿಸ್ಥಿತಿ ಬಂದಿರುವುದು ದುರಂತ
>
> **ಸಂದೇಶ್ ಬಿ.ಎನ್,** ಫ್ರೀಡಂ ಪೆಡಲ್ ಅಸೋಸಿಯೇಷನ್ ಸ್ಥಾಪಕ

ಸಂಕ್ಷಿಪ್ತ ಸುದ್ದಿ

ಒಎನ್‌ಡಿಸಿ ಆಧಾರಿತ ಕ್ಯೂಆರ್ ಟಿಕೆಟ್‌ಗೆ ಚಾಲನೆ

ಬೆಂಗಳೂರು: ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದ (ಬಿಎಂಆರ್‌ಸಿಎಲ್) ಕ್ಯೂಆರ್ ಟಿಕೆಟ್ ಸೇವೆಗಳನ್ನು ಡಿಜಿಟಲ್ ವಾಣಿಜ್ಯದ ಓಪನ್ ನೆಟ್‌ವರ್ಕ್ (ಒಎನ್‌ಡಿಸಿ) ಪ್ಲಾಟ್‌ಫಾರ್ಮ್‌ನಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಿದರು.

ರ್‍ಯಾಪಿಡೊ, ನಮ್ಮ ಯಾತ್ರಿ, ಟಮ್ಮೋಕ್, ರೆಡ್‌ಬಸ್ ಸೇರಿ ಪ್ರಮುಖ ಸಂಚಾರ ಆ್ಯಪ್‌ಗಳಲ್ಲಿ ನೇರವಾಗಿ ಮೆಟ್ರೊ ಕ್ಯೂಆರ್ ಟಿಕೆಟ್ ಪಡೆಯಬಹುದು. ಬಿಎಂಆರ್‌ಸಿಎಲ್ ಕಾರ್ಯನಿರ್ವಾಹಕ ನಿರ್ದೇಶಕ ಶಂಕರ್ ಎ.ಎಸ್. ಉಪಸ್ಥಿತರಿದ್ದರು.

ಸುಮನಹಳ್ಳಿ ಚಿತಾಗಾರ ಸ್ಥಗಿತ

ಬೆಂಗಳೂರು: ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ಸುಮನಹಳ್ಳಿ ವಿದ್ಯುತ್ ಚಿತಾಗಾರದಲ್ಲಿ ತುರ್ತು ನಿರ್ವಹಣೆ ಕೆಲಸ ನಡೆಯುವುದರಿಂದ ಜುಲೈ 16ರಿಂದ 27ರವರೆಗೆ ಸ್ಥಗಿತಗೊಳ್ಳಲಿದೆ ಎಂದು ಬಿಬಿಎಂಪಿ ವಿದ್ಯುತ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದರು.

ಶುಕ್ರವಾರ, ಜುಲೈ 11, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 191 | ಪುಟ 16
prajavani.net prajavani ● www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭಾರತ 'ಎ' ತಂಡಕ್ಕೆ ಶ್ರೇಯಾಂಕಾ
ಕರ್ನಾಟಕದ ಆಫ್‌ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಅವರನ್ನು ಆಸ್ಟ್ರೇಲಿಯಾ ಎದುರು ನಡೆಯಲಿರುವ ಟಿ20 ಸರಣಿಯಲ್ಲಿ ಆಡುವ ಭಾರತ ಎ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಟೀಸರ್ ಬಿಡುಗಡೆ
ಮುಂಬೈನಲ್ಲಿ ನಡೆದ ತಮ್ಮ ಅಭಿನಯದ, 'ಕೆಡಿ–ದಿ ಡೆವಿಲ್' ಚಿತ್ರದ ಟೀಸರ್ ಬಿಡುಗಡೆ ಸಮಾರಂಭದಲ್ಲಿ ಬಾಲಿವುಡ್ ನಟ ಶಿಲ್ಪಾ ಶೆಟ್ಟಿ ಕಾಣಿಸಿಕೊಂಡಿದ್ದು ಹೀಗೆ

ಸೆನ್ಸೆಕ್ಸ್ 83,190 | ನಿಫ್ಟಿ 25,355 | $/₹ 85.70 | ಚಿನ್ನ (Std. 10g) ₹1.01 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.13 ಲಕ್ಷ (ಬೆಂಗಳೂರು)

ಡಿಕೆಶಿಗೆ ಶಾಸಕರ ಬೆಂಬಲ ಇಲ್ಲ: ಸಿಎಂ

ಐದು ವರ್ಷ ನಾನೇ ಮುಖ್ಯಮಂತ್ರಿ
●2028ರ ಚುನಾವಣೆಯಲ್ಲೂ ನನ್ನದೇ ನಾಯಕತ್ವ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ನವೆಂಬರ್ ಹೊತ್ತಿಗೆ ಮುಖ್ಯಮಂತ್ರಿ ಬದಲಾವಣೆ ಆಗಲಿದೆ ಎಂದು ಕಾಂಗ್ರೆಸ್ ವಲಯದಲ್ಲಿ ನಡೆಯುತ್ತಿರುವ ಚರ್ಚೆಯನ್ನು ಸ್ಪಷ್ಟವಾಗಿ ಅಲ್ಲಗಳೆದ ಸಿದ್ದರಾಮಯ್ಯ, 'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕೆಂದು ಕೆಲವರು ಹೇಳುತ್ತಿದ್ದಾರೆ. ಅವರಿಗೆ ಹೆಚ್ಚಿನ ಸಂಖ್ಯೆಯ ಶಾಸಕರ ಬೆಂಬಲ ಇಲ್ಲ' ಎಂದು ಹೇಳಿದರು.

ಕೇಂದ್ರ ಸಚಿವರು ಹಾಗೂ ಹೈಕಮಾಂಡ್‌ನ ನಾಯಕರನ್ನು ಭೇಟಿಯಾಗಲು ರಾಷ್ಟ್ರ ರಾಜಧಾನಿಗೆ ಬಂದಿರುವ ಸಿದ್ದರಾಮಯ್ಯ ಅವರು ಗುರುವಾರ ಸುದ್ದಿಗೋಷ್ಠಿ ನಡೆಸಿ, 'ಐದು ವರ್ಷ ನಾನೇ ಮುಖ್ಯ-ಮಂತ್ರಿಯಾಗಿರುತ್ತೇನೆ' ಎಂದು ಪುನರುಚ್ಚರಿಸಿದರು. 2023ರ ರೀತಿಯಲ್ಲಿ 2028ರ ಚುನಾವಣೆಯಲ್ಲೂ ನನ್ನದೇ ನಾಯಕತ್ವ ಎಂದು ಪ್ರಕಟಿಸಿದರು.

ಪ್ರಶ್ನೆ: ನೀವು ಐದು ವರ್ಷ ಅಧಿಕಾರ ಅವಧಿ ಪೂರ್ಣಗೊಳಿಸುತ್ತೀರಾ ಅಥವಾ ವರ್ಷಾಂತ್ಯದ ಹೊತ್ತಿಗೆ ಬಹುಶಃ ಡಿ.ಕೆ. ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಮಾಡುತ್ತೀರಾ?

ನಾನು ಐದು ವರ್ಷ ಮುಖ್ಯಮಂತ್ರಿ ಆಗಿರುತ್ತೇನೆ. ಇದನ್ನು ಜುಲೈ 2ರಂದು ಸ್ಪಷ್ಟಪಡಿಸಿದ್ದೇನೆ. ಆಗ ಡಿ.ಕೆ. ಶಿವಕುಮಾರ್ ಅವರೂ ಇದ್ದರು. ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲವೆಂದು ಖುದ್ದು ಶಿವಕುಮಾರ್ ಅವರೇ ಹೇಳಿದ್ದಾರೆ.

● **ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಶಾಸಕರಿಂದ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರಲ್ಲ? ಸರ್ಕಾರದ ನಾಯಕತ್ವ ಬದಲಾಗಬೇಕು ಎಂದು ಕೆಲವು ಶಾಸಕರು ಧ್ವನಿ ಎತ್ತಿದ್ದಾರಲ್ಲ?**

ಈ ಮಾತು ಸತ್ಯವಲ್ಲ. ನಾಯಕತ್ವ ಬದಲಾವಣೆ ಸಂಬಂಧ ಸುರ್ಜೇವಾಲಾ ಅವರು ಶಾಸಕರಿಗೆ ಯಾವುದೇ ಪ್ರಶ್ನೆ ಕೇಳಿಲ್ಲ. ಮುಖ್ಯಮಂತ್ರಿ ಬದಲಾವಣೆ ಸಂಬಂಧ ಶಾಸಕರ ಅಭಿಪ್ರಾಯ ಸಂಗ್ರಹಿಸುತ್ತಿಲ್ಲ ಎಂದು ಸುರ್ಜೇವಾಲಾ ಅವರೇ ಸ್ಪಷ್ಟಪಡಿಸಿದ್ದಾರೆ. ಅವರೇ ಅಲ್ಲಗಳೆದ ಮೇಲೆ, ಈ ವಿಷಯದಲ್ಲಿ ಊಹಾಪೋಹಗಳಿಗೆ ಆಸ್ಪದ ಇಲ್ಲ. ಈ ಊಹಾಪೋಹಗಳನ್ನು ಸೃಷ್ಟಿಸಿರುವುದು ಮಾಧ್ಯಮದವರೇ ಹೊರತು, ಕಾಂಗ್ರೆಸ್ ವಲಯದಲ್ಲಿ ಮುಖ್ಯಮಂತ್ರಿಗಳ ಬದಲಾವಣೆಯ ವಿಷಯ ಚರ್ಚೆಯೇ ಆಗಿಲ್ಲ.

● **ಕೆಲವು ಶಾಸಕರು ಈ ಬಗ್ಗೆ ಬಹಿರಂಗ ಹೇಳಿಕೆಗಳನ್ನು ನೀಡಿದ್ದಾರಲ್ಲ?**

ಇದು ಯಾವಾಗಲೂ ಇರುತ್ತದೆ. ಡಿ.ಕೆ. ಶಿವಕುಮಾರ್ ಅವರಿಗೆ ಕೆಲವು ಶಾಸಕರ ಬೆಂಬಲ ಇದೆ. ಆಫ್‌ಕೋರ್ಸ್, ನಾಟ್ ಮಚ್.

● **ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆ ಸೂತ್ರವನ್ನು 2023ರಲ್ಲೇ ಹೆಣೆಯಲಾಗಿದೆ ಎಂಬ ಸುದ್ದಿ ಇದೆಯಲ್ಲ?**

ನಾವು ಯಾವುದೇ ನಿರ್ಧಾರ ಕೈಗೊಂಡರೂ ಅದನ್ನು ಉಭಯ ನಾಯಕರು ಪಾಲಿಸಬೇಕು ಎಂದು ಹೈಕಮಾಂಡ್‌ನ ನಾಯಕರು 2023ರಲ್ಲೇ ಸೂಚನೆ ನೀಡಿದ್ದರು. ಹೈಕಮಾಂಡ್ ತೀರ್ಮಾನಕ್ಕೆ ತಲೆಬಾಗುವುದಾಗಿ ನಾವಿಬ್ಬರೂ ಹಲವು ಬಾರಿ ತಿಳಿಸಿದ್ದೇವೆ. ಸರ್ಕಾರಕ್ಕೆ ಎರಡೂವರೆ ವರ್ಷವಾಗುತ್ತಿರುವ ಸಂದರ್ಭದಲ್ಲಿ ಅಧಿಕಾರ ಹಸ್ತಾಂತರದ ವಿಷಯ ಚರ್ಚೆಯಾಗುವುದು ಸಹಜ. ಆದರೆ, ಈ ಬಗ್ಗೆ ಯಾವುದೇ ಒಪ್ಪಂದವಾಗಿಲ್ಲ.

● **ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರಲ್ಲ?**

ನಮ್ಮದು ಹೈಕಮಾಂಡ್ ಪಾರ್ಟಿ. ಹೈಕಮಾಂಡ್ ಯಾವುದೇ ತೀರ್ಮಾನ ಕೈಗೊಂಡರೂ ನಾನು ಪಾಲಿಸುತ್ತೇನೆ. ಶಿವಕುಮಾರ್ ಅವರೂ ಪಾಲಿಸಬೇಕು.

● **ಅಧಿಕಾರ ಹಸ್ತಾಂತರ ಮಾಡಬೇಕು ಎಂದು ಹೈಕಮಾಂಡ್ ಸುಳಿವು ನೀಡಿದೆಯಾ? ಖರ್ಗೆ ನಿಮಗೆ ಏನಾದರೂ ಹೇಳಿದ್ದಾರೆಯೇ?**

ಇಲ್ಲ.

● **ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಎರಡು ಬಣಗಳ ಕಚ್ಚಾಟ ತೀವ್ರವಾಗಿದೆಯಲ್ಲ? ಇದರಿಂದ ಆಡಳಿತದ ಮೇಲೆ ಪರಿಣಾಮ ಬೀರುತ್ತಿದೆಯಲ್ಲ?**

ಗ್ಯಾರಂಟಿ ಯೋಜನೆಗಳು ನಿಮ್ಮ ಕ್ಷೇತ್ರದಲ್ಲಿ ಯಾವ ರೀತಿಯಲ್ಲಿ ಅನುಷ್ಠಾನ ಆಗುತ್ತಿದೆ ಎಂದು ಸುರ್ಜೇವಾಲಾ ಅವರು ಶಾಸಕರನ್ನು ಕೇಳಿದ್ದಾರೆ. ಇದು ಅವರು ಕೇಳಿರುವ ಮುಖ್ಯ ಪ್ರಶ್ನೆ. ಯಾವ ಅಭಿವೃದ್ಧಿ ಕೆಲಸಗಳು ನಿಮ್ಮ ಕ್ಷೇತ್ರದಲ್ಲಿ ಆಗುತ್ತಿವೆ ಎಂದು ಕೇಳಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಸಂಬಂಧ ನಿಮ್ಮ ನಿರೀಕ್ಷೆಗಳೇನು ಎಂದು ಪ್ರಶ್ನಿಸಿದ್ದಾರೆ. ಶಾಸಕರು ವಿಶೇಷ ಅನುದಾನ ಕೇಳುತ್ತಿದ್ದಾರೆ ಅಷ್ಟೇ.

● **ಕಾಂಗ್ರೆಸ್‌ನ ಕೆಲವು ಶಾಸಕರು ಅಧಿಕಾರ ಹಸ್ತಾಂತರ ಆಗಬೇಕೆಂದು ಹೇಳುತ್ತಿದ್ದಾರಲ್ಲ?**

ಕೆಲವು ಶಾಸಕರು ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ತಿಳಿಸುತ್ತಿದ್ದಾರೆಯೇ ಹೊರತು, ಇದು ಪಕ್ಷದ ತೀರ್ಮಾನವಲ್ಲ. ಅಧಿಕಾರ ಹಸ್ತಾಂತರದ ಊಹೆಗೆ ಯಾವುದೇ ಅರ್ಥವಿಲ್ಲ.

▶6

'ಸಿ.ಎಂ ಬದಲಾವಣೆ ಬಗ್ಗೆ ಚರ್ಚೆ ನಡೆದಿಲ್ಲ'

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಮುಂದು-ವರಿಯುತ್ತಾರೆ. ಎಐಸಿಸಿ ಹಿಂದುಳಿದ ವರ್ಗಗಳ ಸಲಹಾ ಸಮಿತಿಯಲ್ಲಿ ಹಲವು ಸದಸ್ಯರು ಇದ್ದಾರೆ. ಸಿದ್ದರಾಮಯ್ಯ ಹಾಲಿ ಮುಖ್ಯಮಂತ್ರಿ ಆಗಿರುವ ಕಾರಣ ಅವರನ್ನೂ ಸೇರಿಸಿಕೊಂಡು ಜವಾಬ್ದಾರಿ ಕೊಟ್ಟಿದ್ದಾರೆ. ಮುಖ್ಯಮಂತ್ರಿ ಆಗಬೇಕೆಂದು ಹಿತೈಶಿಗಳು ಹೇಳಬಹುದು. ಅದರಲ್ಲಿ ಯಾವುದೇ ತಪ್ಪು ಇಲ್ಲ. ಆದರೆ, ಈಗ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಸೆಪ್ಟೆಂಬರ್ ಕ್ರಾಂತಿ ಬಗ್ಗೆ ಸಚಿವ ಕೆ.ಎನ್.ರಾಜಣ್ಣ ಅವರನ್ನೇ ಕೇಳಿ.

ಕೆ.ಎಚ್.ಮುನಿಯಪ್ಪ, ಆಹಾರ ಸಚಿವ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಯ ಅವರ ನಿವಾಸದಲ್ಲಿ ಭೇಟಿಯಾಗಿ ಚರ್ಚಿಸಿದರು

ಸಿ.ಎಂ ಹೇಳಿದ್ದೇನು?

- ಕರ್ನಾಟಕದಲ್ಲಿ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಐದು ವರ್ಷ ನಾನೇ ಮುಖ್ಯಮಂತ್ರಿ
- ಶಾಸಕರ ಅಭಿಪ್ರಾಯ ಪಕ್ಷದ ಹೈಕಮಾಂಡ್‌ನ ತೀರ್ಮಾನವಲ್ಲ
- ನಾವಿಬ್ಬರೂ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ
- ಮುಖ್ಯಮಂತ್ರಿ ಬದಲಾವಣೆ ಮಾಧ್ಯಮಗಳ ಸೃಷ್ಟಿ, ಊಹಾಪೋಹಗಳಿಗೆ ಆಸ್ಪದವಿಲ್ಲ
- ಡಿ.ಕೆ.ಶಿವಕುಮಾರ್ ಆಗಲಿ ಅಥವಾ ಶಾಸಕರು ಯಾರೇ ಆಗಲಿ ಮುಖ್ಯಮಂತ್ರಿಯಾಗಬೇಕೆಂಬ ಆಸೆ ಇಟ್ಟುಕೊಂಡಿದ್ದರೆ ಅದರಲ್ಲಿ ತಪ್ಪೇನಿಲ್ಲ.
- ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಇಲ್ಲ. ರಾಜ್ಯದ ಜನರು ಸರ್ಕಾರದ ವಿರುದ್ಧ ಇಲ್ಲ. 2028ರಲ್ಲೂ ನಾವೇ ಅಧಿಕಾರಕ್ಕೆ ಬರುತ್ತೇವೆ.

ಸಿಎಂ, ಡಿಸಿಎಂಗೆ ಸಿಗದ ರಾಹುಲ್ ದರ್ಶನ 'ಭಾಗ್ಯ'

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಲು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಬಯಸಿದ್ದರು. ಅದಕ್ಕಾಗಿ ಕಾಲಾವಕಾಶ ಕೇಳಿದ್ದರು. ಆದರೆ, ಗುರುವಾರ ಇಬ್ಬರಿಗೂ ರಾಹುಲ್ ದರ್ಶನ 'ಭಾಗ್ಯ' ಸಿಗಲಿಲ್ಲ.

ರಾಹುಲ್ ಅವರು ಬುಧವಾರ ಪಾಟ್ನಾಕ್ಕೆ ತೆರಳಿದ್ದರು. ಗುರುವಾರ ನವದೆಹಲಿಯಲ್ಲೇ ಇದ್ದರು. ಪಕ್ಷ ಸಂಘಟನೆ ಸಂಬಂಧ ಗುಜರಾತ್‌ನ ನಾಯಕರೊಂದಿಗೆ ಸಭೆ ನಡೆಸಿದರು. ರಾಹುಲ್ ಕಚೇರಿಯಿಂದ ಕರೆ ಬರಬಹುದು ಎಂದು ಉಭಯ ನಾಯಕರು ಸಂಜೆಯ ವರೆಗೆ ಕಾದರು. ಬಳಿಕ ಸುರ್ಜೇವಾಲಾ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಇಬ್ಬರು ನಾಯಕರು ಭಾಗಿಯಾದರು.

ಆಸ್ಟ್ರೇಲಿಯಾ, ಕೆನಡಾಕ್ಕೂ 'ನಂದಿನಿ' ತುಪ್ಪ

ಮೈಸೂರು: 'ದುಬೈ, ಸೌದಿ ಅರೇಬಿಯಾಕ್ಕೆ 'ನಂದಿನಿ' ತುಪ್ಪ ಈಗಾಗಲೇ ಮಾರಾಟ ಮಾಡುತ್ತಿದ್ದು, ಕೆಲವೇ ದಿನಗಳಲ್ಲಿ ಆಸ್ಟ್ರೇಲಿಯಾ, ಕೆನಡಾ ದೇಶಗಳಿಗೂ ಪೂರೈಸಲಾಗುವುದು. ಆಗಸ್ಟ್‌ನಲ್ಲಿ ಅಲ್ಲಿ ನಡೆಯುವ ಉತ್ಸವಕ್ಕೆ 3 ಸಾವಿರ ಟನ್‌ಗೆ ಬೇಡಿಕೆ ಬಂದಿದೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದರು.

KCET-E095
COMED K-E007
AMC INSTITUTIONS
NAAC A+ | NBA Accredited
WE ARE NOW AUTONOMOUS
AMC Engineering College
Autonomous under VTU, Belagavi
BE Programs: Computer Science & Engineering • CSE with Data Science • CSE with AIML • Artificial Intelligence & Machine Learning • Electronics & Communication Engineering • Electrical & Electronics Engineering • Aeronautical Engineering • Civil Engineering • Mechanical Engineering
PG Programs: MBA (HR, Marketing, Finance and Business Analytics) • MCA • M.Tech
Administrative Management College
Affiliated to Bangalore University
UG Programs: BHM - Hotel Management • BCA • BBA • BBA - Aviation • BBA - Business Analytics • B.Com • B.Com - ACCA • B.Sc.- Biotechnology
PG Programs: MBA (HR, Marketing and Finance) • MCA • M.Sc. - Biotechnology
The AMC Advantage
Sprawling 52 Acre Campus • State-of-the-art Infrastructure • Holistic Educational Approach • Nurturing Academic Ambience • Industrial Exposure On Campus • Innovative & Integrated Pedagogy • Skill Development Programs • Entrepreneurship Cell & Incubators • Nine Centres Of Excellence • Industry Internships & Placements • Sports & Cultural Facilities • Separate Hostels for Boys & Girls
Scan for more details
3rd Top Engineering Institute in Karnataka | 16th Top Private Engineering Institute in India | 24th Top Private Institute for Placement all over India
Source: Times All India Ranking 2025



YOU ASPIRE WE INSPIRE
Campus Address: AMC Campus, Bannerghatta Road, Bengaluru - 560 083
99020 44114
www.amcgroup.edu.in

'ಆಧಾರ್: ಕ್ರಮಬದ್ಧ ದಾಖಲೆಯಾಗಿ ಪರಿಗಣಿಸಿ'

ಚುನಾವಣಾ ಆಯೋಗಕ್ಕೆ ಸೂಚನೆ ● ಮತದಾರರ ಪಟ್ಟಿ ಪರಿಷ್ಕರಣೆಗೆ ಅನುಮತಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಬಿಹಾರದಲ್ಲಿ ಕೈಗೆತ್ತಿಕೊಂಡಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ವೇಳೆ, ಆಧಾರ್ ಕಾರ್ಡ್, ಮತದಾರರ ಗುರುತಿನ ಪತ್ರ (ಎಪಿಕ್) ಮತ್ತು ಪಡಿತರ ಚೀಟಿಗಳನ್ನು ಕ್ರಮಬದ್ಧ ದಾಖಲೆಗಳನ್ನಾಗಿ ಪರಿಗಣಿಸುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ.

ಅಲ್ಲದೇ, ಬಿಹಾರದಲ್ಲಿ ಕೈಗೆತ್ತಿಕೊಂಡಿರುವ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಮುಂದುವರಿಸಲೂ ಆಯೋಗಕ್ಕೆ ಅನುಮತಿ ನೀಡಿದೆ. ನವೆಂಬರ್‌ನಲ್ಲಿ ಬಿಹಾರ ವಿಧಾನಸಭೆಗೆ ಚುನಾವಣೆ ನಡೆಯಲಿದೆ.

ರಾಜ್ಯದ ನಿವಾಸಿಗಳ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡುವುದಕ್ಕೆ ಪರಿಗಣಿಸಲಾಗುವ 11 ದಾಖಲೆಗಳ ಪಟ್ಟಿಯನ್ನು ಚುನಾವಣಾ ಆಯೋಗ ಜೂನ್ 24ರಂದು ಪ್ರಕಟಿಸಿತ್ತು. ಈ ಪಟ್ಟಿಯು ಆಧಾರ್ ಕಾರ್ಡ್, ಎಪಿಕ್ ಮತ್ತು ಪಡಿತರ ಚೀಟಿ ಒಳಗೊಂಡಿರಲಿಲ್ಲ. ಹೀಗಾಗಿ, ಆಧಾರ್, ಎಪಿಕ್ ಹಾಗೂ ಪಡಿತರ ಚೀಟಿಗಳನ್ನು ಪರಿಗಣಿಸದೇ ಇರುವುದಕ್ಕೆ ಸೂಕ್ತ ಕಾರಣಗಳನ್ನು ನೀಡುವಂತೆ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

▶11

ಚಿನಕುರುಳಿ ಪ್ರಕಾಶ್ ಶೆಟ್ಟಿ

ಮರುಹೊಂದಾಣಿಕೆ ಅವೈಜ್ಞಾನಿಕ: ತಜ್ಞರ ಅಭಿಮತ

ಹೆಚ್ಚುವರಿ ಶಿಕ್ಷಕರ ಪತ್ತೆಗೆ ಪಿಟಿಆರ್ ಪರಿಷ್ಕರಣೆ

● ಸಂತೋಷಕುಮಾರ್ ಕೆ.ಎಂ.

ಮೈಸೂರು: ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳು– ಶಿಕ್ಷಕರ ಅನುಪಾತವನ್ನೇ (ಪಿಟಿಆರ್) ಪರಿಷ್ಕರಿಸಿರುವ ಶಿಕ್ಷಣ ಇಲಾಖೆಯು ಈಗ 'ಹೆಚ್ಚುವರಿ' ಶಿಕ್ಷಕರ ಪಟ್ಟಿ ಸಿದ್ಧಪಡಿಸಿದೆ. ಇದು ದಾಖಲಾತಿ ಮತ್ತು ಮಕ್ಕಳ ಸಂಖ್ಯೆ ಕಡಿಮೆ ಇರುವ ಶಾಲೆಗಳಲ್ಲಿ ಪ್ರತಿಕೂಲ ಪರಿಣಾಮ ಬೀರುವ ಆತಂಕ ಎದುರಾಗಿದೆ.

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ಪೂರಕವಾಗಿ ಅಗತ್ಯ ಸಂಖ್ಯೆಯ ಶಿಕ್ಷಕರನ್ನು ನೇಮಿಸಲು ಒತ್ತು ನೀಡಬೇಕು ಎಂಬ ಬೇಡಿಕೆ ಇರುವಾಗಲೇ, ಮರುಹೊಂದಾಣಿಕೆ ಕಸರತ್ತಿನ ಮೂಲಕ ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವ ಕೆಲಸವನ್ನು ಶಿಕ್ಷಣ ಇಲಾಖೆ ಸದ್ದಿಲ್ಲದೆ ಮಾಡಿದೆ.

▶10

> **ಹಳ್ಳಿಗಳ ಸರ್ಕಾರಿ ಶಾಲೆಗಳನ್ನು ಶಿಕ್ಷಕರ ಮರು ಹೊಂದಾಣಿಕೆ ಹೆಸರಿನಲ್ಲಿ ಮುಚ್ಚುವ ಹುನ್ನಾರ ನಡೆಸಬಾರದು. ಮೊದಲು ಖಾಲಿ ಹುದ್ದೆ ತುಂಬಲಿ**
> **ಶಶಿಧರ ಕೋಸಂಬೆ,** ಸದಸ್ಯ ಮಕ್ಕಳ ರಕ್ಷಣಾ ಹಕ್ಕುಗಳ ಆಯೋಗ

> **60 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇದೆ ಎಂದು ಸರ್ಕಾರವೇ ಹೇಳುತ್ತಿದೆ. 2024ರ ಡಿಸೆಂಬರ್ ಅಂಕಿ–ಅಂಶ ಆಧರಿಸಿ ಹೆಚ್ಚುವರಿ ಶಿಕ್ಷಕರ ಪಟ್ಟಿ ಸಿದ್ಧಪಡಿಸಿರುವುದು ಸರಿಯಲ್ಲ**
> **ನಿರಂಜನಾರಾಧ್ಯ ವಿ.ಪಿ.,** ಶಿಕ್ಷಣ ತಜ್ಞ

ಲಾಭದಾಯಕ ಸಂಸ್ಥೆಯನ್ನಾಗಿಸಲು ಹಲವು ಯೋಜನೆ: ಕೇಂದ್ರ ಸಚಿವ

'ಸಣ್ಣ ಮಾಲ್'ಗಳಾಗಿ ಅಂಚೆ ಕಚೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಚೆ ಕಚೇರಿಗಳ ವಿನ್ಯಾಸ ಬದಲಾಯಿಸಿ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ, ನಾಗರಿಕರ ಬೇಡಿಕೆಯನ್ನು ಪೂರೈಸುವ 'ಸಣ್ಣ ಮಾಲ್'ಗಳನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ಯೋಜಿಸಿದೆ.

ಉಡುಪು, ಆಹಾರ, ಔಷಧ, ಎಲೆಕ್ಟ್ರಾನಿಕ್ ವಸ್ತುಗಳು ಮುಂತಾದ ಗ್ರಾಹಕರು ಬಯಸುವ ಉತ್ಪನ್ನಗಳನ್ನು ಒದಗಿಸುವ ನಗರಗಳಲ್ಲಿರುವ ಬೃಹತ್ ಮಾಲ್‌ಗಳಂತೆ ಅಂಚೆ ಕಚೇರಿಗಳನ್ನು 'ಸಣ್ಣ ಮಾಲ್'ಗಳನ್ನಾಗಿ ಪರಿವರ್ತಿಸುವ ಯೋಜನೆ ಇದೆ. ಹಲವು ಹೊಸ ಯೋಜನೆಗಳೊಂದಿಗೆ ಭಾರತೀಯ ಅಂಚೆ ಇಲಾಖೆಯನ್ನು ಲಾಭದಾಯಕ ಸಂಸ್ಥೆಯನ್ನಾಗಿ ರೂಪಿಸಲಾಗುವುದು ಎಂದು ಕೇಂದ್ರದ ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಎಂ. ಸಿಂದಿಯಾ ಹೇಳಿದರು.

ಭಾರತೀಯ ಅಂಚೆ ಇಲಾಖೆ ಗುರುವಾರ ಹಮ್ಮಿಕೊಂಡಿದ್ದ 'ಕರ್ನಾಟಕ ಅಂಚೆ ವೃತ್ತದ ಗ್ರಾಮೀಣ ಡಾಕ್ ಸೇವಕರೊಂದಿಗೆ ಸಂವಾದ'ದಲ್ಲಿ ಅವರು ಮಾತನಾಡಿದರು.

'ಆಧುನಿಕ ಜಗತ್ತಿಗೆ ಅನುಸಾರವಾಗಿ ನಾವು ನಮ್ಮ ಕೆಲಸದ ಸ್ವರೂಪವನ್ನು ಬದಲಿಸಿಕೊಳ್ಳಬೇಕು. ನಮ್ಮ ಮೇಲೆ ನಾವೇ ನಿಗಾವಹಿಸಿಕೊಳ್ಳಬೇಕು. ಕಾರ್ಯಾಚರಣೆ, ಬದಲಾವಣೆ ಎಲ್ಲವೂ ಡಾಕ್ ಸೇವಕರಿಂದಲೇ ಆಗಬೇಕು. ವಿಶ್ವದಲ್ಲೇ ಅತಿದೊಡ್ಡ ಸಂಪರ್ಕಜಾಲವನ್ನು ಹೊಂದಿರುವ ಅಂಚೆ ಇಲಾಖೆ ಆವಿಷ್ಕಾರಯುತವಾಗಿ, ಜನರಿಗೆ ಜೀವಮಾನದುದ್ದಕ್ಕೂ ಸೇವೆ ನೀಡಬೇಕು. ಅದಕ್ಕಾಗಿ ಎಲ್ಲ ರೀತಿಯಲ್ಲೂ ಬದಲಾಗಬೇಕಿದೆ' ಎಂದರು.

▶10

ಮುಖ್ಯಾಂಶಗಳು
- ಆಧುನಿಕ ಜಗತ್ತಿನ ಬೇಡಿಕೆ ಪೂರೈಸಲು ಯೋಜನೆ
- ಜನರಿಗೆ ಜೀವಮಾನದ ಉದ್ದಕ್ಕೂ ಸಕಲ ಸೇವೆ ನೀಡಲು ಸಿದ್ಧತೆ
- ಕರ್ನಾಟಕ ಅಂಚೆ ವೃತ್ತದಿಂದ 200 ಕೋಟಿ ಪಾರ್ಸಲ್ ಸೇವೆ

ಅತ್ಯುತ್ತಮ ಕೆಲಸಕ್ಕಾಗಿ ಸನ್ಮಾನ ಸ್ವೀಕರಿಸಿದ ಕರ್ನಾಟಕ ಅಂಚೆ ವೃತ್ತದ 15 ಗ್ರಾಮೀಣ ಡಾಕ್ ಸೇವಕರು ಪ್ರಜಾವಾಣಿ ಚಿತ್ರ

ನೀಲ್‌ಕಂಠ್
ಗೋಲ್ಡ್ ಅಂಡ್ ಡೈಮಂಡ್ಸ್
ಬ್ಯಾಂಗಲ್‌ಊರು
ಬೆಂಗಳೂರಿನ ಅತ್ಯದ್ಭುತ ಬಳೆಗಳ ಸಂಗ್ರಹ

NGD2025/Peoplecom
ನೀಲ್‌ಕಂಠ್ ಗೋಲ್ಡ್ ಅಂಡ್ ಡೈಮಂಡ್ಸ್ ಪ್ರೈವೇಟ್ ಲಿಮಿಟೆಡ್
ರಿಚ್ಮಂಡ್ ರೋಡ್: 080 - 2227 8846, #5, ರಿಚ್ಮಂಡ್ ಫಲಾಜೋ, ರಿಚ್ಮಂಡ್ ರೋಡ್ ಬೆಂಗಳೂರು - 560025
HSR ಲೇಔಟ್: 080 - 4696 3800, #247, ವಿಜಯ್ ಟವರ್ಸ್, 17ನೇ ಕ್ರಾಸ್ 6ನೇ ಸೆಕ್ಟರ್, HSR ಲೇಔಟ್, ಬೆಂಗಳೂರು - 560102
HRBR ಲೇಔಟ್: 080 - 6907 8000, #508, LV ಪ್ಲಾಜಾ, 5ನೇ-A ಕ್ರಾಸ್, HRBR ಲೇಔಟ್, 2ನೇ ಬ್ಲಾಕ್, ಬಾಣಸವಾಡಿ, ಬೆಂಗಳೂರು - 560043
SCAN TO REACH US
www.myneelkanth.com
*ಷರತ್ತುಗಳು ಅನ್ವಯ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ.

ಬಿಡಿಎ ಫ್ಲ್ಯಾಟ್: ಕಾರು ಪಾರ್ಕಿಂಗ್ ಶುಲ್ಕ ಪರಿಷ್ಕರಣೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಫ್ಲ್ಯಾಟ್‌ಗಳಲ್ಲಿನ ಕಾರು ಪಾರ್ಕಿಂಗ್ ಶುಲ್ಕವನ್ನು ಪರಿಷ್ಕರಿಸಿದ್ದು, ₹2 ಲಕ್ಷ ದಿಂದ ₹ 2.50 ಲಕ್ಷಗಳಿಗೆ ಏರಿಕೆ ಮಾಡಿದೆ.

ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ 13 ವಸತಿ ಯೋಜನೆಗಳಲ್ಲಿ ಲಭ್ಯವಿರುವ ಫ್ಲ್ಯಾಟ್/ವಿಲ್ಲಾಗಳಿಗೆ ಪಾರ್ಕಿಂಗ್ ಶುಲ್ಕವನ್ನು ₹50 ಸಾವಿರ ಏರಿಕೆ ಮಾಡಿದೆ. 2 ಬಿಎಚ್‌ಕೆ ಮೇಲ್ಪಟ್ಟ ಎಲ್ಲಾ ಫ್ಲ್ಯಾಟ್‌ಗಳಿಗೆ ಮೂಲ ದರದ ಜತೆಗೆ ಪ್ರತ್ಯೇಕವಾಗಿ ₹2.50 ಲಕ್ಷ ಕಾರು ಪಾರ್ಕಿಂಗ್ ಶುಲ್ಕ ನಿಗದಿಪಡಿಸಲಾಗಿದೆ. ಕೇವಲ 1 ಬಿಎಚ್‌ಕೆ ಫ್ಲ್ಯಾಟ್ ಖರೀದಿಸುವವರಿಗೆ ಪಾರ್ಕಿಂಗ್ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.

ಕಣಿಮಿಣಿಕೆ 4ನೇ ಹಂತದಲ್ಲಿ 3 ಬಿಎಚ್‌ಕೆ ಮನೆಗಳಿಗೆ ₹40 ಲಕ್ಷ ದರವಿದ್ದು, ಜತೆಗೆ ₹2.50 ಲಕ್ಷ ಕಾರು ಪಾರ್ಕಿಂಗ್ ಮತ್ತು ₹1,29,250 ವಿದ್ಯುತ್ ಶುಲ್ಕ ನಿಗದಿಪಡಿಸಲಾಗಿದೆ. ಕಣಿಮಿಣಿಕೆ 2ನೇ ಹಂತದಲ್ಲಿ 2 ಬಿಎಚ್‌ಕೆ ಮನೆಗಳಿಗೆ ₹25 ಲಕ್ಷ ಬೆಲೆ ನಿಗದಿಪಡಿಸಿದ್ದು, ₹91,250 ವಿದ್ಯುತ್ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಕಣಿಮಿಣಿಕೆ 3ನೇ ಹಂತದಲ್ಲಿ 2 ಬಿಎಚ್‌ಕೆ ಫ್ಲ್ಯಾಟ್‌ಗೆ ₹30 ಲಕ್ಷವಿದ್ದು, ₹91,250 ವಿದ್ಯುತ್ ಶುಲ್ಕ ಪಾವತಿಸಬೇಕು. ಕೊಮ್ಮಘಟ್ಟ 1 ಮತ್ತು 2ನೇ ಹಂತ, ಕೊಮ್ಮಘಟ್ಟ ಎನ್‌ಪಿಕೆಎಲ್ 1, 2 ಮತ್ತು 3ನೇ ಹಂತ, ಕೋನದಾಸಪುರ 2ನೇ ಹಂತ, ಗುಂಜೂರು 2ನೇ ಹಂತ, ತಿಪ್ಪಸಂದ್ರ, ದೊಡ್ಡಬನಹಳ್ಳಿ 1 ಮತ್ತು 2ನೇ ಹಂತ, ನಾಗರಬಾವಿ, ಮಾಲಗಾಳ 2ನೇ ಹಂತ ಮತ್ತು ಕೊತ್ತನೂರಿನ 2 ಮತ್ತು 3 ಬಿಎಚ್‌ಕೆ ಫ್ಲ್ಯಾಟ್‌ಗಳಿಗೆ ಮೂಲ ದರದ ಜತೆಗೆ ಕಾರು ಪಾರ್ಕಿಂಗ್ ಶುಲ್ಕ ಮತ್ತು ವಿದ್ಯುತ್ ಶುಲ್ಕಗಳನ್ನು ಪ್ರತ್ಯೇಕವಾಗಿ ನಿಗದಿಪಡಿಸಲಾಗಿದೆ.

ತೆರಿಗೆ ಪಾವತಿಸಲು ನೋಟಿಸ್: ವ್ಯಾಪಾರಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬೇಕರಿ, ಜ್ಯೂಸ್ ಅಂಗಡಿ, ಕಾಂಡಿಮೆಂಟ್ಸ್ ಅಂಗಡಿ ನಡೆಸುತ್ತಿರುವ ವ್ಯಾಪಾರಿಗಳಿಗೆ ವಾಣಿಜ್ಯ ತೆರಿಗೆ ಪಾವತಿಸುವಂತೆ ಸೂಚಿಸಿ ವಾಣಿಜ್ಯ ತೆರಿಗೆ ಇಲಾಖೆ ನೋಟಿಸ್ ಜಾರಿ ಮಾಡಿದೆ.

ನೋಟಿಸ್ ಜಾರಿ ಮಾಡಿರುವುದಕ್ಕೆ ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಣ್ಣಪುಟ್ಟ ವ್ಯಾಪಾರಿಗಳ ಹೊಟ್ಟೆಯ ಮೇಲೆ ತೆರಿಗೆ ಇಲಾಖೆಯ ಅಧಿಕಾರಿಗಳು ಹೊಡೆದಿದ್ದಾರೆ ಎಂದು ವ್ಯಾಪಾರಿಗಳು ನೋವು ತೋಡಿಕೊಂಡಿದ್ದಾರೆ.

ಬ್ಯಾಂಕ್ ದಾಖಲೆ ಸಹಿತ ನೂರಾರು ಸಣ್ಣ ವ್ಯಾಪಾರಿಗಳು ವಾಣಿಜ್ಯ ತೆರಿಗೆ ಇಲಾಖೆ ಕಚೇರಿಗೆ ಗುರುವಾರ ಬಂದಿದ್ದರು.

‘ಗ್ರಾಹಕರಿಂದ ಗೂಗಲ್ ಪೇ, ಫೋನ್ ಪೇ, ಪೇಟಿಎಂ ಮೂಲಕ ಹಣ ಸ್ವೀಕರಿಸಿದ್ದೆವು. ವ್ಯಾಪಾರ ಆರಂಭಿಸಿದ್ದ ದಿನದಿಂದಲೂ ಯಾವುದೇ ತೊಂದರೆ ಆಗಿರಲಿಲ್ಲ. ಇದೀಗ ನೋಟಿಸ್ ನೀಡಲಾಗಿದೆ. ಆನ್‌ಲೈನ್ ಮೂಲಕ ಇದುವರೆಗೂ ವಹಿವಾಟು ನಡೆಸಿರುವುದಕ್ಕೆ ವಾಣಿಜ್ಯ ತೆರಿಗೆ ಕಟ್ಟಬೇಕು ಎಂದು ಇಲಾಖೆ ನೋಟಿಸ್‌ನಲ್ಲಿ ಸೂಚಿಸಿದೆ. ದುಬಾರಿ ತೆರಿಗೆ ವಿಧಿಸಲಾಗಿದೆ’ ಎಂದು ಆಕ್ರೋಶ ಹೊರಹಾಕಿದರು.

‘ದಿಢೀರ್ ನೋಟಿಸ್ ಕೊಟ್ಟಿದ್ದಾರೆ. ₹41 ಲಕ್ಷ ಪಾವತಿಸುವಂತೆ ಉಲ್ಲೇಖಿಸಿದ್ದಾರೆ. ಶೇಕಡ 99ರಷ್ಟು ಆನ್‌ಲೈನ್ ಮೂಲಕವೇ ವಹಿವಾಟು ನಡೆಯುತ್ತಿದೆ. ಈಗ ಅದಕ್ಕೆ ತೆರಿಗೆ ಪಾವತಿಸುವಂತೆ ಸೂಚಿಸಿದ್ದಾರೆ’ ಎಂದು ವ್ಯಾಪಾರಿಯೊಬ್ಬರು ಅಳಲು ತೋಡಿಕೊಂಡರು.

ಭಾರತ ಸರ್ಕಾರ
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ-ಪೇಸ್)
ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ-6, 7, 8, ಸೆಕ್ಟರ್-5, ಐಎಂಟಿ ಮಾನೇಸರ್, ಗುರುಗಾಂವ್, ಹರಿಯಾಣ-122050. Email: roc.cpace@mca.gov.in

ಫಾರಂ ನಂ. ಎಸ್‌ಟಿಕೆ-6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದುಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]

ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ/ಸಿ-ಪೇಸ್/ಎಸ್‌ಟಿಕೆ-2/248(2)/2025-26/790 ದಿ:01.07.2025

ಉಲ್ಲೇಖ:

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248 ಅಡಿಯಲ್ಲಿ, ಕರ್ನಾಟಕ ರಾಜ್ಯದಲ್ಲಿರುವ ಕೆಳಕಂಡ (62) ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

ಕ್ರ. ಸಂ.	ವರ್ಗ ಐಟಂ	ಸಿಐಎನ್	ಕಂಪನಿ ಹೆಸರು
1	AB4553893	U86909KA2024PTC195456	ಕ್ಯೂರ್‌ಕ್ಯೂರಿಯಾಸಿಟಿ ಎಐ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
2	AB4562663	U58200KA2024PTC195160	ಜಿಎಂಡಬ್ಲ್ಯುಎಕ್ಸ್ ಸಾಫ್ಟ್‌ವೇರ್ ಎಐ ಪ್ರೈವೇಟ್ ಲಿಮಿಟೆಡ್
3	AB4878474	U62013KA2024PTC190223	ಶರ್ಗ್ಲೋಬ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
4	AB4451552	U62099KA2024PTC185661	ಜೀರ್‌ಬಾಯ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
5	AB4492329	U26303KA2024PTC186641	ಕ್ವಾಡೌ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್
6	AB4808496	U74201KA2024OPC185842	ಬ್ರೌನ್‌ಬನ್ ಟ್ರಾವೆಲ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
7	AB4857431	U46309KA2024OPC187600	ಮಿಂಟ್‌ವ್ಯಾಕ್ಸಿಂಗ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
8	AB4724557	U96905KA2024PTC184103	ತ್ರಿಪುರಾ ವೆಲ್‌ನೆಸ್ ಗ್ಲೋಬಲ್ ಪ್ರೈವೇಟ್ ಲಿಮಿಟೆಡ್
9	AB4448222	U62099KA2024PTC185095	ವೆಚಿಟೊ ಗ್ಲೋಬಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
10	AB4232484	U62011KA2023PTC179972	ಇನ್ನೋವ್‌ಶಾಫ್ಟ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
11	AB4715841	U82990KA2023PTC171197	ಐಜಿಸ್ ಟೆಕ್ನೊ ಪ್ರೈವೇಟ್ ಲಿಮಿಟೆಡ್
12	AB4344342	U43900KA2023PTC177238	ಯೂಟೆಕ್‌ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
13	AB4999870	U66190KA2023PTC177902	ಝುಮಿ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
14	AB4997298	U64990KA2023PTC175143	ಬ್ಲ್ಯೂಲಿಂಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
15	AB4312901	U64990KA2023PTC173570	ವರ್ಗ ಇ ಟ್ರೇಡ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
16	AB3732991	U45500KA2023PTC170002	ಬಿಎಲ್‌ಸಿ ಇಂಡಸ್ಟ್ರಿಯಲ್ ಪಾರ್ಕ್ ಪ್ರೈವೇಟ್ ಲಿಮಿಟೆಡ್
17	AB4379858	U72900KA2022PTC161045	ಹೌಸ್ ಆಫ್ ಸ್ಟ್ರೀಟ್ ಪ್ರೈವೇಟ್ ಲಿಮಿಟೆಡ್
18	AB4311196	U70102KA1996PTC019854	ಸೈಡ್ ಗ್ರೀನ್ ಲ್ಯಾಂಡ್ ಡೆವಲಪ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್
19	AB4543856	U05190KA2002PTC031367	ಡಿಲಿಜೆಂಟ್ ಕಮ್ಯುನಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
20	AB4067099	U72900KA2022PTC159439	ವಿಷ್ಣುಸ್‌ಡಿ ಆಫ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
21	AB4369906	U63030KA2022PTC156485	ಟ್ರ್ಯಾ ಡ್ರೈವರ್ಸ್ ಪ್ರೈವೇಟ್ ಲಿಮಿಟೆಡ್
22	AB3900950	U28112KA2022PTC157161	ಮಾಲಾಕ್ಷಪ್ಪ ಪೈಪ್ಸ್ & ಟ್ಯೂಬ್ಸ್ ಪ್ರೈವೇಟ್ ಲಿಮಿಟೆಡ್
23	AB4417199	U28990KA2021PTC151832	ಅರ್ಥ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್
24	AB4684195	U72900KA2021OPC151826	ಇಂಟೆಲ್ಲಿಫ್ಲೋ ಟೆಕ್ನಾಲಜೀಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
25	AB4071148	U72900KA2021PTC148785	ಇನಿಷ ಟೆಕ್ ಪ್ರೈವೇಟ್ ಲಿಮಿಟೆಡ್
26	AB4525713	U65992KA2021PTC153001	ಆರ್‌ಜಿ ಟೆಕ್ಟ್ ಕ್ಯಾಪ್ ಪ್ರೈವೇಟ್ ಲಿಮಿಟೆಡ್
27	AB4808556	U36999KA2021PTC144662	ಇರ್ಫಾನ್ ಜ್ಯುವೆಲ್ ಪ್ರೈವೇಟ್ ಲಿಮಿಟೆಡ್
28	AB4716278	U51100KA2021PTC149717	ಜೈನಿಯೊ ಅವಿಸ್ಫ್ ಪ್ರೈವೇಟ್ ಲಿಮಿಟೆಡ್
29	AB4667513	U74999KA2021PTC150924	ಸ್ಟ್ರಾಟೆಜಿಯಾ ಮೀಡಿಯಾ & ಜಾಬ್ಸ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
30	AB4646000	U74999KA2020PTC135206	ಅರ್ಥ-ನೀತಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
31	AB4606937	U74999KA2019PTC130687	ಮ್ಯಾಗ್ನಿಯಂಟ್ ಪ್ರೈವೇಟ್ ಲಿಮಿಟೆಡ್
32	AB4767976	U74999KA2019PTC129357	ನೀಲಾದ್ರಿ ಟೆಕ್‌ವರ್ಕ್ ಪ್ರೈವೇಟ್ ಲಿಮಿಟೆಡ್
33	AB4411478	U70109KA2018PTC119386	ವಾಣಂ ಎಸ್ಟೇಟ್ ಪ್ರೈವೇಟ್ ಲಿಮಿಟೆಡ್
34	AB4549054	U22219KA2019PTC125520	ಐಟಿಐಪ್ಯ ಮೀಡಿಯಾ ಮಾರ್ಕೆಟ್‌ಪ್ಲೇಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
35	AB4629712	U18109KA2019PTC125642	ಐಡಿನೋವಾ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್
36	AB4500305	U18109KA2019PTC124460	ಬ್ರಾಡ್ಜೆಸ್ ಮರ್ಚಂಡೈಸ್ ಡಿಸೈನ್ ಪ್ರೈವೇಟ್ ಲಿಮಿಟೆಡ್
37	AB4459566	U72900KA2019PTC124503	ಪಕ್ಷಾವೈದ್ಯಸ್ ಸೈಕೊಮೆಟ್ರಿಕ್ಸ್ ಪ್ರೈವೇಟ್ ಲಿಮಿಟೆಡ್
38	AB3917446	U92490KA2018PTC118814	ಶಂಕರಮಹಾದೇವನ್ ವರ್ಲ್ಡ್ ಆಫ್ ಆರ್ಟ್ ಪ್ರೈವೇಟ್ ಲಿಮಿಟೆಡ್
39	AB4180513	U63090KA2018PTC112947	ಮೋನಿಕ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್
40	AB4553512	U72900KA2018PTC111214	ದುಕಾನ್ ನೆಟ್‌ವರ್ಕ್ ಪ್ರೈವೇಟ್ ಲಿಮಿಟೆಡ್
41	AB4742641	U72900KA2018PTC111145	ಮಾರ್ಸ್‌ವ್ಯೂ ಎಐ ಪ್ರೈವೇಟ್ ಲಿಮಿಟೆಡ್
42	AB4364284	U74999KA2017PTC106299	ಡಬ್ಲ್ಯುವಿಎಸ್ ಅಸೆಸ್‌ಮೆಂಟ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
43	AB4361544	U63030KA2017PTC107174	ಟಿಪ್ಸಿ ಟ್ರಾವೆಲರ್ ಪ್ರೈವೇಟ್ ಲಿಮಿಟೆಡ್
44	AB4748780	U72900KA2017PTC105889	ಕ್ವಾಡ್ರಾಟ್ ಮೀಡಿಯಾ ಟೆಕ್ ಪ್ರೈವೇಟ್ ಲಿಮಿಟೆಡ್
45	AB4213465	U93090KA2016PTC096499	ತತ್ವ ಲ್ಯಾಬ್ ಪ್ರೈವೇಟ್ ಲಿಮಿಟೆಡ್
46	AB4837068	U72200KA2016PTC093213	ಎಂಎಐಎನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
47	AB4806236	U72900KA2018PTC118969	ಮೇಘಮಿತ್ರ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್
48	AB4764970	U25205KA2016PTC094562	ಪೈಮ್ಯಾಟಿಕ್ ಸ್ಮಾಲ್ ಕಿಚನ್ ಅಪ್ಲಯನ್ಸಸ್ ಪ್ರೈವೇಟ್ ಲಿಮಿಟೆಡ್
49	AB4550930	U74999KA2016PTC094027	ಫ್ರೀಅಪ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
50	AB4920038	U74900KA2016PTC087246	ಫ್ಯೂರಿ ಕ್ಯಾಪಿಟಲ್ ಇಂಡಿಯಾ ಅಡ್ವಾಯಿಸರ್ಸ್ ಪ್ರೈವೇಟ್ ಲಿಮಿಟೆಡ್
51	AB4851850	U72200KA2013PTC071986	ನೋವಾಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
52	AB4547128	U37200KA2015PTC082384	ಪೂಂ ಪೂಂ ರಿಸೈಕ್ಲಿಂಗ್ ಪ್ರೈವೇಟ್ ಲಿಮಿಟೆಡ್
53	AB4466773	U29248KA2015PTC082579	ಬಾರೂನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
54	AB4544939	U72900KA2015PTC082356	ವಿಸಾನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
55	AB4533510	U72200KA2016PTC086255	ಟೆಕ್‌ವೀರ್ ಪ್ರೈವೇಟ್ ಲಿಮಿಟೆಡ್
56	AB4759660	U72200KA2016PTC085659	ಪಾರ್ಕ್‌ಸಿಸ್ ಮೊಬಿಲಿಟಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
57	AB4728094	U27320KA2014PTC074238	ಆಶಾಪುರ ರಿಫೈನರಿ ಪ್ರೈವೇಟ್ ಲಿಮಿಟೆಡ್
58	AB4575992	U72200KA2013PTC071682	ಐಐಐಟಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
59	AB4401871	U72200KA2012PTC062668	ಇಂಟೀಮೊ ಇನ್ನೊವೇಶನ್ಸ್ & ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್
60	AB4246816	U72200KA2012PTC064025	ಡಾಟಾಗ್ರೆಸ್ ಐಟಿ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
61	AB4247883	U51909KA2005PTC037936	ನೆಟ್‌ಕ್ಯಾಕರ್ ಆನ್‌ಲೈನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
62	AB4183110	U74300KA2008PTC047077	ಕಾರ್ಟ್ ಕಮ್ಯುನಿಕೇಶನ್ ಆರ್ಟ್ & ಡಿಸೈನ್ ಪ್ರೈವೇಟ್ ಲಿಮಿಟೆಡ್

(2) ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಗಳು ತಮ್ಮ ಸ್ಥಾಪನೆ ಆದಾಗಿನಿಂದ ಒಂದು ವರ್ಷದೊಳಗೆ ವ್ಯವಹಾರವನ್ನು ಆರಂಭಿಸಲು ವಿಫಲವಾಗಿರುವ ಹಿನ್ನಲೆಯಲ್ಲಿ ಅಥವಾ ಸದರಿ ಕಂಪನಿಗಳು ಹಿಂದಿನ ತಕ್ಷಣದ ಎರಡು ಹಣಕಾಸು ವರ್ಷಗಳ ಅವಧಿಯಲ್ಲಿ ಯಾವುದೇ ವ್ಯಾಪಾರ ಅಥವಾ ಚಟುವಟಿಕೆ ಮಾಡದಿರುವ ಹಿನ್ನಲೆಯಲ್ಲಿ ಮತ್ತು ಅಂತಹ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 455ರ ಅಡಿಯಲ್ಲಿ ಡೊರ್ಮೆಂಟ್ ಕಂಪನಿ ಸ್ಟೇಟಸ್ ಪಡೆಯಲು ಯಾವುದೇ ಅರ್ಜಿ ಸಲ್ಲಿಸದೆ ಇರುವ ಹಿನ್ನಲೆಯಲ್ಲಿ ಅಥವಾ ಕಂಪನಿಗಳು ಡೊರ್ಮೆಂಟ್ ಕಂಪನಿ ಸ್ಟೇಟಸ್ ಪಡೆದುಕೊಂಡಿದ್ದು / ಮೆಮೊರಾಂಡಮ್‌ನ ಚಂದಾದಾರರು ಕಂಪನಿಯ ಸ್ಥಾಪನಾ ಸಮಯದಲ್ಲಿಯೇ ಪಾವತಿಸಲು ಒಪ್ಪಿಕೊಂಡಿದ್ದ ಚಂದಾದಾರಿಕೆಯನ್ನು ಪಾವತಿಸದೆ ಇರುವ ಹಿನ್ನಲೆಯಲ್ಲಿ ಮತ್ತು ಸ್ಥಾಪನೆಯಾದಾಗಿನಿಂದ ಯಾವುದೇ ವ್ಯವಹಾರ ಮಾಡುತ್ತಿಲ್ಲ ಅಥವಾ ಚಟುವಟಿಕೆ ನಡೆಸುತ್ತಿಲ್ಲ ಎಂಬುದನ್ನು ನೂರಾ ಎಂಬತ್ತು ದಿನಗಳೊಳಗೆ ಸೆಕ್ಷನ್ 10ಎ ಸಬ್ ಸೆಕ್ಷನ್ (1)ರ ಅಡಿಯಲ್ಲಿ ಡಿಕ್ಲರೇಶನ್ ಸಲ್ಲಿಕೆ ಮಾಡಿರದೆ ಇರುವುದು, ಸೆಕ್ಷನ್ 12ರ ಸಬ್ ಸೆಕ್ಷನ್ (9) ಅಡಿಯಲ್ಲಿ ಭೌತಿಕ ಪರಿಶೀಲನೆ ಕೈಗೊಂಡ ನಂತರ ಇದು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಬಹುತೇಕರು ತಮ್ಮ ಕಂಪನಿಗಳ ನೋಂದಣಿಯನ್ನು ಮುಂದುವರಿಸಲು ಇಚ್ಛಿಸದಿರುವ ಹಿನ್ನಲೆಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248(2)ರ ಅಡಿಯಲ್ಲಿ, ತಮ್ಮ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಬೇಕು / ಅಳಿಸಿ ಹಾಕಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತವೆ.

(3) ಅಂತೆಯೇ, ಕಂಪನಿಗಳ ರಜಿಸ್ಟ್ರಾರ್ ಇವರು ಮೇಲ್ಕಂಡ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು / ಅಳಿಸಿ ಹಾಕಲು ಉದ್ದೇಶಿಸಿರುತ್ತಾರೆ.

(4) ಹೀಗೆ, ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು/ಅಳಿಸಿ ಹಾಕಲು ಉದ್ದೇಶಿಸಲಾಗಿರುವ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಮೇಲೆ ತಿಳಿಸಲಾಗಿರುವ ಕಚೇರಿ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ರೌನಕ್ ಅಗರ್‌ವಾಲ್
ಅಸಿಸ್ಟೆಂಟ್ ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್

CBC 07123/11/0285/2526

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
(ಹಿಂದಿನ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್)
ರೇರ್ ಅರ್ಥ್ಸ್ ಡಿವಿಜನ್, ಕೊಚ್ಚಿ, ಕೇರಳ, ಇ-ಮೇಲ್: purchanse-red@irel.co.in
ಸಿಐಎನ್: U15100MH1950GOI008187
ಐಎಸ್‌ಒ 9001:2015, ಐಎಸ್‌ಒ 14001:2015 & ಐಎಸ್‌ಒ 45001:2018 ಕಂಪನಿ

ಟೆಂಡರ್ ಪ್ರಕಟಣೆ

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ರೇರ್ ಅರ್ಥ್ಸ್ ಡಿವಿಜನ್ ಇವರು ಕೆಳಕಂಡ ಐಟಂ/ಜಾಬ್ ವಿವರಗಳಿಗಾಗಿ ಟೆಂಡರ್ ಆಹ್ವಾನಿಸಿದ್ದಾರೆ:

ಐಟಂ/ಜಾಬ್ ವಿವರ	ಜಿಇಎಂ ಪೋರ್ಟಲ್‌ನಲ್ಲಿ ಟೆಂಡರ್ ಲಭ್ಯತೆ
ಯುಆರ್‌ಪಿ + ವೈ & ಡಿವೈ ಸ್ಟ್ರೀಮ್‌ಗಾಗಿ ಇನ್‌ಸ್ಟ್ರುಮೆಂಟೇಶನ್ & ಆಟೊಮೇಶನ್ ಸಪ್ಲೈ, ಇರೆಕ್ಷನ್, ಕಮಿಷನಿಂಗ್ ಮತ್ತು ಪರ್ಫಾರ್ಮನ್ಸ್ ಟೆಸ್ಟಿಂಗ್ ಪ್ಯಾಕೇಜ್	10.07.2025 ರಂದು 14.00 ಗಂಟೆ

ವಿರಗಳಿಗಾಗಿ ದಯವಿಟ್ಟು ಕೆಳಕಂಡ ವೆಬ್‌ಸೈಟ್‌ಗಳಿಗೆ ಭೇಟಿ ಕೊಡಿ:
gem.gov.in, www.irel.co.in/tender-information, https://eprocure.gov.in/cppp
ಮೇಲ್ಕಂಡ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ವಿಸ್ತರಣೆ ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಸಹಿ/-
ದಿನಾಂಕ: 03.07.2025 CBC 48145/12/0004/2526 ಜಿಎಂ & ಮುಖ್ಯಸ್ಥರು, ಆರ್‌ಇಡಿ

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
(ಭಾರತ ಸರ್ಕಾರದ ಅಧೀನ ಸಂಸ್ಥೆ – ಅಣುಶಕ್ತಿ ಇಲಾಖೆ)
ಮನವಲಕುರಿಚಿ, ತಮಿಳನಾಡು, ಇ-ಮೇಲ್: purchase-mk@irel.co.in
ಐಎಸ್‌ಒ 9001, 14001 & 45001 ಯೂನಿಟ್, ಫೋನ್: 04651-200402
ಸಿಐಎನ್: U15100MH1950GOI008187
ಉಲ್ಲೇಖ: ಎಂಕೆ/ಪಿ.ಜಾಹೀ/2025-26/04 ದಿನಾಂಕ: 03.07.2025

ಟೆಂಡರ್ ಪ್ರಕಟಣೆ

ಐಆರ್‌ಇಎಲ್ ಮನವಲಕುರಿಚಿ ಘಟಕ ಇವರು ಕೆಳಗಿನವುಗಳಿಗಾಗಿ ಟೆಂಡರ್ ಆಹ್ವಾನಿಸಿದ್ದಾರೆ:

ಟೆಂಡರ್ ನಂ.	ವಿವರ
ಜಿಇಎಂ/2025/ಬಿ/6409946	ಗಣಿಗಾರಿಕೆ ಸ್ಥಳಗಳಿಂದ ಘಟಕಕ್ಕೆ ಮತ್ತು ಘಟಕದಿಂದ ವಿವಿಧ ಪ್ರದೇಶಗಳಿಗೆ ವೈಸ್ ವರ್ಸಾ ಮಾದರಿಯಲ್ಲಿ, ಬೀಚ್ ವಾಷಿಂಗ್ಸ್, ಟೈಲಿಂಗ್ಸ್ ಇತ್ಯಾದಿಗಳ ಮೆಕ್ಯಾನೈಸ್ಡ್ ಲೋಡಿಂಗ್ ಮತ್ತು ಸಾಗಾಣಿಕೆ

ಬಿಡ್‌ದಾರರು ಟೆಂಡರ್ ದಸ್ತಾವೇಜುಗಳನ್ನು https://gem.gov.in, https://www.irel.co.in ವೆಬ್‌ಸೈಟ್‌ಗಳಿಂದ ಮತ್ತು ಸಿಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
CBC 48147/12/0005/2526 ಸಿಜಿಎಂ & ಮುಖ್ಯಸ್ಥರು, ಎಂಕೆ

ಸಾರ್ವಜನಿಕ ನೋಟೀಸು – ಇ-ಹರಾಜು
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ (RCCPL) (ಸಮಾಪನ ಪ್ರಕ್ರಿಯೆಯಲ್ಲಿ–in Liquidation)
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಟ್ಸಿ ಸಂಹಿತೆ 2016 ರ ಅಡಿಯಲ್ಲಿ

ಇ-ಹರಾಜು
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಟ್ಸಿ ಸಂಹಿತೆ 2016 ರ ಅಡಿಯಲ್ಲಿ ಆಸ್ತಿಗಳ ಮಾರಾಟ
ಇ-ಹರಾಜಿನ ದಿನಗಳು: 31.07.2025 ಮತ್ತು 01.08.2025

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಲಯ, ಚೆನ್ನೈ (NCLT, Chennai) ಇದರ 09/08/2024 ರ ಆದೇಶದ ಅನುಸಾರ ಮತ್ತು ಕಲಂ 35 (f) ರ IBC, 2016 ಮತ್ತು ನಿಬಂಧನೆ 32(e) ಹಾಗು 32A ಸಮಾಪನ ಪ್ರಕ್ರಿಯೆ ನಿಬಂಧನೆಗಳು, 2016 ಅನುಸಾರವಾಗಿ ಕಂಪನಿಯ ಆಸ್ತಿಗಳನ್ನು ಸಕ್ರಿಯ ಸಂಸ್ಥೆಯಂತೆ ಇಡಿಯಾಗಿ ಅಥವಾ ಬಿಡಿ ಬಿಡಿಯಾಗಿ ಮಾರಾಟ ಮಾಡಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಈ ಮಾರಾಟವು ‘ಯಾವುದು ಹೇಗಿದೆಯೋ, ಎಲ್ಲಿದೆಯೋ ಮತ್ತು ಎಷ್ಟಿದೆಯೋ’ ಮತ್ತು ಮರು ಪಡೆಯುವಿಕೆ ಇಲ್ಲದೆ **("AS IS WHERE IS", "AS IS WHAT IS", "WHATEVER THERE IS BASIS" and "NO RECOURSE BASIS")** ಮಾರಾಟ ಮಾಡಲಾಗುವುದು.

ಸದರಿ ಮಾರಾಟವನ್ನು ಇ-ಹರಾಜು ವೇದಿಕೆಯ ಮೂಲಕ https://ibbi.baanknet.com/eauction-ibbi/home ನಲ್ಲಿ ಮಾಡಲಾಗುವುದು. ಮಾರಾಟದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ:

ಆಸ್ತಿಗಳ ಪಟ್ಟಿ	ಆಸ್ತಿಗಳು	ಮೀಸಲು ಬೆಲೆ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
‘ಎ’ ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ಇ-ಹರಾಜಿನ ದಿನ ಮತ್ತು ಸಮಯ: 31.07.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ			
ಆಸ್ತಿ ಪಟ್ಟಿ 1	ಪ್ರಧಾನವಲ್ಲದ (non-core) ಆಸ್ತಿಗಳು ಸೇರಿದಂತೆ, ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದು ಮತ್ತು ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	14.77 ಕೋಟಿ	1.477 ಕೋಟಿ
‘ಬಿ’ ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ (‘ಎ’ ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ-ಹರಾಜಿನ ದಿನ ಮತ್ತು ಸಮಯ: 31.07.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ			
ಆಸ್ತಿ ಪಟ್ಟಿ 2	ಪ್ರಧಾನವಲ್ಲದ (non-core) ಆಸ್ತಿಗಳನ್ನು ಹೊರತುಪಡಿಸಿ ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ ‘ಡಿ’ಯಲ್ಲಿ ಹೇಳಿರುವಂತೆ ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	7.43 ಕೋಟಿ	0.743 ಕೋಟಿ
‘ಸಿ’ ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ (‘ಎ ಮತ್ತು ಬಿ’ ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ-ಹರಾಜಿನ ದಿನ ಮತ್ತು ಸಮಯ: 31.07.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ			
ಆಸ್ತಿ ಪಟ್ಟಿ 3	ದೈನಂದಿನ ಕಾರ್ಯಾಚರಣೆಗಳಿಗೆ ಅತ್ಯವಶ್ಯವಲ್ಲದ ಮತ್ತು ತಮಿಳುನಾಡಿನಲ್ಲಿ ಗುತ್ತಿಗೆಗೆ ತೆಗೆದುಕೊಂಡಿರುವ ಸ್ಥಳಗಳಲ್ಲಿರುವ ಯಂತ್ರೋಪಕರಣಗಳನ್ನು ಹೊರತುಪಡಿಸಿ ದಿವಾಳಿ ಪ್ರಕ್ರಿಯೆ ನಿಯಮಗಳ (ನಿಯಮ 32ಎ ಜೊತೆಗೆ ನಿಯಮ 32(ಇ) ಅನ್ನು ಓದಿಕೊಂಡಂತೆ) ಅಡಿಯಲ್ಲಿ ಕಾರ್ಪೊರೇಟ್ ಸಾಲಗಾರ ಕಂಪನಿಯನ್ನು ಅದು ಕಾರ್ಯನಿರ್ವಹಿಸುತ್ತಿರುವಂತೆಯೇ ಮಾರಾಟಮಾಡುವುದು. ಇದಕ್ಕೆ ಕೆಲವು ನಿರ್ದಿಷ್ಟ ವಿನಾಯತಿಗಳಿವೆ: i. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ ‘ಡಿ’ಯಲ್ಲಿ ಹೇಳಿರುವಂತೆ ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	6.62 ಕೋಟಿ	0.662 ಕೋಟಿ
‘ಡಿ’ ವರ್ಗ: ದೈನಂದಿನ ಕಾರ್ಯಾಚರಣೆಗಳಿಗೆ ಅತ್ಯವಶ್ಯವಲ್ಲದ ಆಸ್ತಿಗಳ (ಭೂಭಾಗಗಳು ಮಾತ್ರ) ಮಾರಾಟ (ಒಂದೊಮ್ಮೆ ವರ್ಗ ಎ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ-ಹರಾಜಿನ ದಿನ ಮತ್ತು ಸಮಯ: 31.07.2025ರಂದು ಸಂಜೆ 05.00ರಿಂದ 06.00 ಗಂಟೆಯವರೆಗೆ			
ಆಸ್ತಿ ಪಟ್ಟಿ 4	ಮಂಗಳೂರು ಉಪ-ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಮಂಗಳೂರು ನಗರ ಕಾರ್ಪೋರೇಷನ್ನಿಗೆ ಸೇರಿದ ಮರಕಡ ಗ್ರಾಮ, ಮಂಗಳೂರು ತಾಲ್ಲೂಕು, ಇಲ್ಲಿ ಸರ್ವೇ ನಂ. 37-1ರಲ್ಲಿರುವ 65.50 ಸೆಂಟ್ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	1.17 ಕೋಟಿ	0.117 ಕೋಟಿ
ಆಸ್ತಿ ಪಟ್ಟಿ 5	ಕಾರ್ಕಳ ಉಪ-ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಕಾರ್ಕಳ ತಾಲ್ಲೂಕಿನ ನಿಟ್ಟೆ ಗ್ರಾಮದಲ್ಲಿ ಸರ್ವೇ ನಂ. 792-1ರಲ್ಲಿರುವ 3.89 ಎಕರೆ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	93.00 ಲಕ್ಷ	9.30 ಲಕ್ಷ
ಆಸ್ತಿ ಪಟ್ಟಿ 6	ಮಂಗಳೂರಿನ ಬಾಂಗ್ರಾ ಕುಲೂರಿನ ನಂ. 15,16,17,24,25 ಮತ್ತು 26 -1ರಲ್ಲಿರುವ 14,081.65 ಚದರ ಅಡಿ ವಿಸ್ತೀರ್ಣದ, ಆರು ವಾಣಿಜ್ಯ ನಿವೇಶನಗಳು – ಇದರ ಸಂಪೂರ್ಣ ಸ್ವತ್ತು	2.48 ಕೋಟಿ	0.248 ಕೋಟಿ
ಆಸ್ತಿ ಪಟ್ಟಿ 7	ಉಡುಪಿ ಜಿಲ್ಲೆಯ ಬ್ರಹ್ಮಾವರದ ಆರ್.ಎಸ್. ನಂ. 110/3, 1ರಲ್ಲಿರುವ 3.17 ಎಕರೆ ವಿಸ್ತೀರ್ಣದ, ಇಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	3.06 ಕೋಟಿ	0.306 ಕೋಟಿ
‘ಇ’ ವರ್ಗ: ಭೋಗ್ಯದಲ್ಲಿರುವ ಆವರಣದಲ್ಲಿರುವ ಚರಾಸ್ತಿಗಳ ಮಾರಾಟ (ಒಂದೊಮ್ಮೆ ವರ್ಗ ಎ ಅಥವಾ ಬಿ ಅಥವಾ ಸಿ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ-ಹರಾಜಿನ ದಿನ ಮತ್ತು ಸಮಯ: 01.08.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ			
ಆಸ್ತಿ ಪಟ್ಟಿ 8	ಡಿ. ನಂ. 12/92 ಮತ್ತು 12/93, ಪಡವು ಪೋಸ್ಟ್, ಶಕ್ತಿನಗರ, ಕುಲಶೇಖರ, ಮಂಗಳೂರು, ಕರ್ನಾಟಕ, ಇಲ್ಲಿರುವ ಯಂತ್ರೋಪಕರಣ ಮತ್ತು ಒಂದು ವಾಹನ	66.00 ಲಕ್ಷ	6.60 ಲಕ್ಷ
ಆಸ್ತಿ ಪಟ್ಟಿ 9	ಸರ್ವೇ ನಂ. 209/1ರಲ್ಲಿ ಡಿ. ನಂ. 50/4ಎ ಮತ್ತು 4ಬಿ, ಜಿಂಜೀ ರಸ್ತೆ, ತಿರುವಮತೂರು ಗ್ರಾಮ, ವಿಕ್ರವಂಡಿ ತಾಲ್ಲೂಕು, ವಿಲ್ಲುಪುರಮ್, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು	75.00 ಲಕ್ಷ	7.50 ಲಕ್ಷ
ಆಸ್ತಿ ಪಟ್ಟಿ 10	ಸರ್ವೇ ನಂ. 261/6 ಮತ್ತು 267/2, ಕಟ್ಟಂಡಿಕುಪ್ಪಮ್, ಪನ್‌ರುಟಿ, ಕಡಲೂರು ಜಿಲ್ಲೆ, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು ಮತ್ತು ವಾಹನಗಳು	36.00 ಲಕ್ಷ	3.60 ಲಕ್ಷ
‘ಎಫ್’ ವರ್ಗ: ಆಸ್ತಿಗಳ ಪ್ರತ್ಯೇಕ ಯೂನಿಟ್‌ಗಳ ಮಾರಾಟ (ಚರ ಮತ್ತು ಸ್ಥಿರ ಆಸ್ತಿಗಳು) (ಒಂದೊಮ್ಮೆ ವರ್ಗ ಎ ಅಥವಾ ಬಿ ಅಥವಾ ಸಿ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ-ಹರಾಜಿನ ದಿನ ಮತ್ತು ಸಮಯ: 01.08.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ			
ಆಸ್ತಿ ಪಟ್ಟಿ 11	**ಕೈಗಾರಿಕಾ ಸ್ವತ್ತು** (ಸ್ಥಿರ ಮತ್ತು ಚರ ಆಸ್ತಿಗಳು) ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿನ 100 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ – ಕಟ್ಟಡ, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು, ವಾಹನಗಳು	2.66 ಕೋಟಿ	0.266 ಕೋಟಿ
ಚರಾಸ್ತಿಗಳ ಮಾರಾಟ (ಒಂದೊಮ್ಮೆ ಅಸೆಟ್ ಸೆಟ್ 11 ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ-ಹರಾಜಿನ ದಿನ ಮತ್ತು ಸಮಯ: 01.08.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ			
ಆಸ್ತಿ ಪಟ್ಟಿ 12	**ಯಂತ್ರೋಪಕರಣಗಳು ಮತ್ತು ಚರಾಸ್ತಿಗಳು** ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ ಎಲ್ಲಾ ಚರಾಸ್ತಿಗಳು ಮತ್ತು ವಾಹನಗಳು	42.00 ಲಕ್ಷ	4.20 ಲಕ್ಷ
‘ಹೆಚ್’ ವರ್ಗ: ಸ್ಥಿರಾಸ್ತಿಗಳ ಮಾರಾಟ (ಒಂದೊಮ್ಮೆ ಹರಾಜು ಯಶಸ್ವಿಯಾಗಿ ಅಸೆಟ್ ಸೆಟ್ 12 ಅಡಿಯಲ್ಲಿ ಹರಾಜಿಗೆ ಬಿಡ್ ಗಳು ಬಂದಿದ್ದರೆ, ಇ-ಹರಾಜು ಮೂಲಕ ಮಾತ್ರ) ಇ-ಹರಾಜಿನ ದಿನ ಮತ್ತು ಸಮಯ 01.08.2025 ರಂದು ಸಂಜೆ 05.00 ರಿಂದ 06.00 ರವರೆಗೆ			
ಆಸ್ತಿ ಪಟ್ಟಿ 13	**ಸ್ಥಿರಾಸ್ತಿ (ಭೂಮಿ ಮತ್ತು ಕಟ್ಟಡ)** ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ 100 ಸೆಂಟ್ ವಿಸ್ತೀರ್ಣದ ಭೂಮಿ – ಕಟ್ಟಡದ ಸಹಿತವಾಗಿ.	2.24 ಕೋಟಿ	0.224 ಕೋಟಿ

1. ಈ ಮಾರಾಟದ ನೋಟೀಸನ್ನು ಆಸ್ತಿಗಳ ವಿವರಗಳು ಅರ್ಹತೆ ಇ-ಹರಾಜು ಬಿಡ್ ಪ್ರಪತ್ರ ಇತ್ಯಾದಿಗಳನ್ನು ಒಳಗೊಂಡ ಸಂಪೂರ್ಣ ‘ಇ-ಹರಾಜು ಪ್ರಕ್ರಿಯೆಯ ಮಾಹಿತಿ’ (ಪ್ರಕ್ರಿಯೆ ದಾಖಲೆ)ಯ ಜೊತೆಯಲ್ಲಿ ಓದಿಕೊಳ್ಳತಕ್ಕದ್ದು. ಇದು https://ibbi.baanknet.com/eauction-ibbi/home ನಲ್ಲಿ ದೊರೆಯುತ್ತದೆ, ಅಥವಾ ಹೆಚ್ಚಿನ ವಿವರಗಳಿಗೆ ಲಿಕ್ವಿಡೇಟರ್‌ರನ್ನು ಸಂಪರ್ಕಿಸಬಹುದು.
2. ದಯವಿಟ್ಟು ಗಮನಿಸಿ: **‘ಎ’ ಅಥವಾ ‘ಬಿ’ ಅಥವಾ ’ಸಿ’ ಆಸ್ತಿ ವರ್ಗಕ್ಕೆ** ಹರಾಜು ಪ್ರಕ್ರಿಯೆಯಲ್ಲಿ ಬಿಡ್ಡರುಗಳು ಪಾಲುಗೊಳ್ಳದೆ ಯಶಸ್ವಿಯಾಗದೆ ಇದ್ದಲ್ಲಿ ಸದರಿ ಆಸ್ತಿಗಳನ್ನು ಮೇಲಿನ ಕೋಷ್ಟಕದ ಅನುಸಾರ ಪ್ರತ್ಯೇಕವಾಗಿ ಮಾರಾಟ ಮಾಡಲಾಗುವುದು. ಇ-ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ವರ್ಗದ(ಗಳ) ಅಡಿಯಲ್ಲಿ ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಇ-ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸುವ ಹಕ್ಕನ್ನು ಲಿಕ್ವಿಡೇಟರ್ ಉಳಿಸಿಕೊಂಡಿರುತ್ತಾರೆ.
3. ಆಯಾ ವರ್ಗದ ಮತ್ತು/ಅಥವಾ ಆಸ್ತಿ(ಗಳ) ಸಲುವಾಗಿ ಆಸಕ್ತ ಬಿಡ್‌ದಾರರು ಅರ್ಹತಾ ದಾಖಲೆಗಳು ಮತ್ತು ಇಎಂಡಿ ಜೊತೆಯಲ್ಲಿ, ಪ್ರಕ್ರಿಯಾ ದಾಖಲೆಯಲ್ಲಿ ತಿಳಿಸಿರುವ ಪ್ರಕಾರ, **29.07.2025**ರಂದು ಇಲ್ಲವೆ ಅದಕ್ಕೆ ಮುನ್ನ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಸಲ್ಲಿಸಬೇಕು.
4. ಇ-ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳೂ (ಸೂಚಿತ ಸಮಯಗಳು) ಸೇರಿದಂತೆ ಮುಖ್ಯ ಷರತ್ತುಗಳನ್ನು ಮಾರ್ಪಡಿಸುವ ಅಧಿಕಾರ ಲಿಕ್ವಿಡೇಟರ್ ಅವರಿಗೆ ಇರುತ್ತದೆ – ಸಂಬಂಧಿತ ಕಾನೂನು ಮತ್ತು ನಿಬಂಧನೆಗಳ ಅನ್ವಯ ಇರುವ ಮಿತಿಗಳ ಒಳಗೆ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳ ಬದಲಾವಣೆಗಳ/ ವಿಸ್ತರಣೆಗಳ ಕುರಿತಾದ ಯಾವುದೇ ಮಾಹಿತಿಯು ಇ-ಹರಾಜು ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ, ಮತ್ತು ಅರ್ಹ/ಅರ್ಹತೆ ಗಳಿಸಿದ/ ಯಶಸ್ವೀ ಬಿಡ್‌ದಾರರಿಗೆ ತಿಳಿಯಪಡಿಸಲಾಗುವುದು.
5. ಸಂಭಾವ್ಯ ಬಿಡ್ಡುದಾರರು ಮುಂಗಡ ಹಣ ಪಾವತಿಯನ್ನು ಬ್ಯಾಂಕ್‌ನೆಟ್ ಹರಾಜು ವೇದಿಕೆಯ ಮೂಲಕ ಮಾತ್ರ ಮಾಡಬೇಕು. ಬಿಡ್ಡುದಾರರು ಅನರ್ಹರೆಂದು ಕಂಡುಬಂದರೆ, ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
6. ಈ ಪ್ರಕಟಣೆಯಲ್ಲಿ ತಿಳಿಸಿರುವ ಯಾವುದೇ ಆಸ್ತಿ ಮಾರಾಟ / ಸಕ್ರಿಯ ಸಂಸ್ಥೆಯಂತೆ ಪರಿಗಣಿತ ಮಾರಾಟ ಪ್ರಸ್ತಾಪವನ್ನು ಬದ್ಧ ಕರಾರು ಎಂದು ಪರಿಗಣಿಸಬಾರದು.

ಸಂಕ್ಷಿಪ್ತ ವಿವರಗಳಿಗಾಗಿ ದಯವಿಟ್ಟು ಕೆಳಗಿನ QR ಕೋಡ್‌ಅನ್ನು ಸ್ಕ್ಯಾನ್ ಮಾಡಿರಿ.

ಸಹಿ/-
ರವೀಂದ್ರ ಬೆಳೆಯೂರ್
ಲಿಕ್ವಿಡೇಟರ್
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ ಇನ್ ಲಿಕ್ವಿಡೇಶನ್,
428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 11
ಈಮೇಲ್: Reliable_Cashew_CIRP@beleyur.com
ಫೋನ್: 080 26540193 ಮೊಬೈಲ್: +91 94481 46963

ದಿನಾಂಕ: 10.07.2025
ಸ್ಥಳ: ಬೆಂಗಳೂರು

PUBLIC NOTICE

It is hereby notified that, our clients have agreed to purchase the Schedule Property from its Owners **(i)SRI.M.S.SRINIVAS (SRINIVAS S MYSORE) (ii)SMT.JAYASHREE KRISHNAKUMAR (JAYASHREE.K.K)** and **(iii)SMT.ROOPASHREE.M.S**, the children of late Sri.M.R.Sudheendra Rao, residing in the Schedule Property. If any persons have any manner of claim, right, title, interest or demand of any nature in or over the Schedule Property, they are hereby requested to file their objections along with the photocopies of the documents on which they are relying, with the undersigned within **5 (Five) days** from the date of publication of this notice. Objection/s received thereafter will not be binding on our clients.

SCHEDULE

All that piece and parcel of the residential property bearing **Municipal No.27 (CITB/BDA Site No.733)**, PID No.60-104-27, E.P.I.D.No. 1692439786, measuring East to West 65 ft and North to South 45ft, in all measuring 2925 Sq.fts., with a building thereon, situated at **10th Main Road, 4th Block, Jayanagar,** Bengaluru, within the administrative jurisdiction of BBMP Ward No.168 and bounded as follows:

East by : Property bearing No.712
West by : 10th Main Road
North by : Property bearing No.734
South by : Property bearing No.733A

Sd/- BAYYA REDDY. M
For ISHA LAW CHAMBERS LLP
Advocates & Solicitors
No.101, 2nd Floor, Sri Manjunatha Complex, 22nd Main Road, BSK 2nd Stage, Opp: Banashankari BDA Complex, Bengaluru-560070.

ನೈಋತ್ಯ ರೈಲ್ವೆ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರು ಸೂಚನೆ ಸಂ.
SWR-TRIAL-RAILPAD-1, ದಿನಾಂಕ: 03.07.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	ಎ) 60 ಕೆಜಿ. ರೈಲ್‌ಗಳಿಗೆ ಸೂಕ್ತವಾದ ಆರ್‌ಡಿಎಸ್‌ಒ ಡ್ರಾಯಂಗ್ ಸಂ. ಟಿ-8746 ರಂತೆ ಪಿಎಸ್‌ಸಿ ಸ್ಲೀಪರುಗಳ ಮೇಲೆ ಬಳಕೆಯಾಗುವಂತೆ ಆರ್‌ಡಿಎಸ್‌ಒ ಡ್ರಾಯಂಗ್ ಸಂ. ಟಿ-8747 (ಆಲ್ಟ್-1) ರಂತೆ 10 ಮಿಮೀ. ಕಾಂಪೋಜಿಟ್ ಗ್ರೂವ್ ಮಾಡಲಾದ ರಬ್ಬರ್ ಸೋಲ್ ಪ್ಲೇಟ್ ಹಾಗೂ ಇತ್ತೀಚಿನ ಆಲ್ಟರೇಷನ್ ನೊಂದಿಗೆ ಐಆರ್‌ಎಸ್ ನಿರ್ದಿಷ್ಟತೆಯಂತೆ ರೈಲ್ ಪ್ಯಾಡ್, ಕ್ರಸಂ. ಟಿ-55-2025 (ರಿವಿಷನ್ 01) ಮತ್ತು ಡ್ರಾಫ್ಟ್ ರೈಲ್ ಪ್ಯಾಡ್ (ದಸ್ತಾವೇಜು ಸಂ. ಟಿಡಿಜಿ 0042 ರೆವ್. '01') ಮತ್ತು ಡ್ರಾಫ್ಟ್ ಎಸ್‌ಟಿಆರ್ ಗಳ ತಯಾರಿಕೆ ಮತ್ತು ಪೂರೈಕೆ (ಇ-ಟೆಂಡರು ಸಂ. **SWR-TRIAL-RAILPAD-1**). ಮುಕ್ತಾಯದ ಅವಧಿ: 3 ತಿಂಗಳುಗಳು.	ರೂ. 36,49,000
	ಬಿ) ತೀಕ್ಷ್ಣವಾದ ವಕ್ರರೇಖೆಗಳಲ್ಲಿ ಉಪಯೋಗವಾಗುವಂತೆ ಕರ್ವ್ ವೈಡರ್ ಪಿಎಸ್‌ಸಿ ಸ್ಲೀಪರುಗಳ ಮೇಲೆ 136 ಆರ್‌ಇ & 60 ಕೆಜಿ. (ಯುಐಸಿ) ರೈಲ್‌ಗಳೊಂದಿಗೆ ಆರ್‌ಡಿಎಸ್‌ಒ ಡ್ರಾಯಿಂಗ್ ಸಂ. ಟಿ-8669 ಆಲ್ಟ್ 2 ರಂತೆ ಆರ್‌ಟಿ-8621 ರಿಂದ ಆರ್‌ಟಿ-8624 ರಂತೆ 10 ಮಿಮೀ. ಕಾಂಪೋಜಿಟ್ ಗ್ರೂವ್ ಮಾಡಲಾದ ರಬ್ಬರ್ ಸೋಲ್ ಪ್ಲೇಟ್ ಹಾಗೂ ಇತ್ತೀಚಿನ ಆಲ್ಟರೇಷನ್ ನೊಂದಿಗೆ ಐಆರ್‌ಎಸ್ ನಿರ್ದಿಷ್ಟತೆಯಂತೆ ರೈಲ್ ಪ್ಯಾಡ್, ಕ್ರಸಂ. ಟಿ-55-2025 (ರಿವಿಷನ್ 01) ಮತ್ತು ಡ್ರಾಫ್ಟ್ ರೈಲ್ ಪ್ಯಾಡ್ (ದಸ್ತಾವೇಜು ಸಂ. ಟಿಡಿಜಿ 0042 ರೆವ್. '01') ಮತ್ತು ಡ್ರಾಫ್ಟ್ ಎಸ್‌ಟಿಆರ್ ಗಳ ತಯಾರಿಕೆ ಮತ್ತು ಪೂರೈಕೆ (ಇ-ಟೆಂಡರು ಸಂ. **SWR-TRIAL-RAILPAD-1**). ಮುಕ್ತಾಯದ ಅವಧಿ: 3 ತಿಂಗಳುಗಳು.	ರೂ. 23,34,500
	ಸಿ) ಪಿಎಸ್‌ಸಿ ಸ್ಲೀಪರುಗಳ ಮೇಲೆ ಬಳಕೆಯಾಗುವಂತೆ ಆರ್‌ಡಿಎಸ್‌ಒ ಡ್ರಾಯಂಗ್ ಸಂ. ಟಿ-8747 ರಂತೆ 136 ಆರ್‌ಇ & 60 ಕೆಜಿ (ಯುಐಸಿ) ರೈಲ್‌ಗಳ ಮೇಲೆ ಆರ್‌ಡಿಎಸ್‌ಒ ಡ್ರಾಯಿಂಗ್ ಸಂ. ಟಿ-8528 (ಆಲ್ಟ್-1) ರಂತೆ 10 ಮಿಮೀ. ಕಾಂಪೋಜಿಟ್ ಗ್ರೂವ್ ಮಾಡಲಾದ ರಬ್ಬರ್ ಸೋಲ್ ಪ್ಲೇಟ್ ಹಾಗೂ ಇತ್ತೀಚಿನ ಆಲ್ಟರೇಷನ್ ನೊಂದಿಗೆ ಐಆರ್‌ಎಸ್ ನಿರ್ದಿಷ್ಟತೆಯಂತೆ ರೈಲ್ ಪ್ಯಾಡ್, ಕ್ರಸಂ. ಟಿ-55-2025 (ರಿವಿಷನ್ 01) ಮತ್ತು ಡ್ರಾಫ್ಟ್ ರೈಲ್ ಪ್ಯಾಡ್ (ದಸ್ತಾವೇಜು ಸಂ. ಟಿಡಿಜಿ 0042 ರೆವ್. '01') ಮತ್ತು ಡ್ರಾಫ್ಟ್ ಎಸ್‌ಟಿಆರ್‌ಗಳ ತಯಾರಿಕೆ ಮತ್ತು ಪೂರೈಕೆ (ಇ-ಟೆಂಡರು ಸಂ. **SWR-TRIAL-RAILPAD-1**). ಮುಕ್ತಾಯದ ಅವಧಿ: 3 ತಿಂಗಳುಗಳು.	ರೂ. 15,24,000

ಮೇಲೆ ಸೂಚಿಸಲಾದ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
01.08.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ಟ್ರ್ಯಾಕ್ ಪ್ರೊಕ್ಯೂರ್‌ಮೆಂಟ್ /ಪ್ರ.ಕ. / ಹುಬ್ಬಳ್ಳಿ

PUB/276/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಪುರಸಭಾ ಕಾರ್ಯಾಲಯ ಮಾಗಡಿ
ದೂರವಾಣಿ : 080 -27745221 ಫ್ಯಾಕ್ಸ್ : 080-27745199
ಇಮೇಲ್: tmc_2007magadi@yahoo.co.in ವೆಬ್‌ಸೈಟ್: www.magaditown.gov.in

ಸಂಖ್ಯೆ : ಪುಕಾಮಾ/ಕಿ.ಅ/ಟೆಂಡರ್/ಸಿಆರ್/05/2025-26 ದಿನಾಂಕ : 09-07-2025

ಟೆಂಡರ್ ಪ್ರಕಟಣೆ

ಮಾಗಡಿ ಪುರಸಭಾ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ, ಪುರಸಭಾ ನಿಧಿಯಡಿ ವಿವಿಧ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಧ್ಯಾದೇಶ 1999 ಮತ್ತು ನಿಯಮಗಳು 2000 ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಅರ್ಹ ಗುತ್ತಿಗೆದಾರರು / ಏಜೆನ್ಸಿ / ವಾಹನ ರಿಪೇರಿ ಮಾಡುವವರು (ವರ್ಕ್‌ಶಾಫ್) ರವರುಗಳು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಕೆ.ಡಬ್ಲ್ಯೂ - 1ರ ನಿಯಮಗಳಂತೆ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಮ್ಯಾನ್ಯುಯಲ್ ಟೆಂಡರ್ ಸಲ್ಲಿಸತಕ್ಕದ್ದು.

1) ಕಾಮಗಾರಿ ವಿವರ : ಮಾಗಡಿ ಪುರಸಭೆಯ BEML Model No. BL9H 2018 Model Front And Back Hoe ವಾಹನ ದುರಸ್ಥಿ ಕಾಮಗಾರಿ, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 3.00, ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : 7,500/-, ಗುತ್ತಿಗೆದಾರರ ದರ್ಜೆ : ವಾಹನ ರಿಪೇರಿ ಮಾಡುವವರು (ವರ್ಕ್‌ಶಾಫ್) ರವರು, ಕೆಲಸ ಪೂರ್ತಿಗೊಳಿಸುವ ಅವಧಿ : 45 ದಿನಗಳು. 2) ಕಾಮಗಾರಿ ವಿವರ : ಮಾಗಡಿ ಪುರಸಭಾ ವ್ಯಾಪ್ತಿಯ 19ನೇ ವಾರ್ಡಿನ ಹೊಸಹಳ್ಳಿ ರಸ್ತೆ ಇಲ್ಲಿ ಹೊಸದಾಗಿ ಕೊರೆದಿರುವ ಕೊಳವೆ ಬಾವಿಯಿಂದ ನೀರಿನ ಸಂಪರ್ಕ ಕಲ್ಪಿಸಲು ಪೈಪ್‌ಲೈನ್ ಅಳವಡಿಸುವುದು, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 0.26, ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : 650/-, ಗುತ್ತಿಗೆದಾರರ ದರ್ಜೆ : 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು, ಕೆಲಸ ಪೂರ್ತಿಗೊಳಿಸುವ ಅವಧಿ : 45 ದಿನಗಳು. 3) ಕಾಮಗಾರಿ ವಿವರ : ಮಾಗಡಿ ಪುರಸಭಾ ವ್ಯಾಪ್ತಿಯ ವಾರ್ಡ್ ನಂ. 14 ಫ್ಯಾರೇಜಾನ್ ಮನೆಯಿಂದ ಮೆಹಬೂಬ್ ಮನೆವರೆಗೆ ಪೈಪ್‌ಲೈನ್ ಅಳವಡಿಸಿ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿ, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 0.50, ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : 1,250/-, ಗುತ್ತಿಗೆದಾರರ ದರ್ಜೆ : 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು, ಕೆಲಸ ಪೂರ್ತಿಗೊಳಿಸುವ ಅವಧಿ : 45 ದಿನಗಳು. 4) ಕಾಮಗಾರಿ ವಿವರ : ಮಾಗಡಿ ಪುರಸಭಾ ಕಛೇರಿಗೆ ಜಾರು ಹಾದಿ ನಿರ್ಮಾಣ ಕಾಮಗಾರಿ, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 0.15, ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : 375/-, ಗುತ್ತಿಗೆದಾರರ ದರ್ಜೆ : 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು, ಕೆಲಸ ಪೂರ್ತಿಗೊಳಿಸುವ ಅವಧಿ : 45 ದಿನಗಳು.

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 09-07-2025 ರಿಂದ 24-07-2025 ರ ಸಂಜೆ 5.30 ಗಂಟೆಯವರೆಗೆ, 2) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 25-07-2025 ರ ಬೆಳಿಗ್ಗೆ 11.30 ಗಂಟೆಗೆ, 3) ಟೆಂಡರ್ ಫಾರಂ ಶುಲ್ಕ ಪ್ರತಿ ಕಾಮಗಾರಿಗೆ : ರೂ. 500/-.

ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಪುರಸಭೆ ಮಾಗಡಿ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ : www.magaditown.mrc.gov.in ನಲ್ಲಿ ವೀಕ್ಷಿಸಬಹುದು.

ಸಹಿ/- ಅಧ್ಯಕ್ಷರು, ಪುರಸಭೆ, ಮಾಗಡಿ. ಸಹಿ/- ಉಪಾಧ್ಯಕ್ಷರು, ಪುರಸಭೆ, ಮಾಗಡಿ. ಸಹಿ/- ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಮಾಗಡಿ. ಸಹಿ/- ಮುಖ್ಯಾಧಿಕಾರಿ, ಪುರಸಭೆ, ಮಾಗಡಿ.

ಡಿಐಪಿಆರ್/ರಾಮನಗರ/231/ಮಣಿಪಾಲ್/2025-26

ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣ ಹೆಚ್ಚಲಿ

‘ಎನ್‌ರೂಟ್’ ಆ್ಯಪ್‌ಗೆ ಚಾಲನೆ ನೀಡಿದ ಸಚಿವ ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಧಿಕ ದಟ್ಟಣೆ ಇರುವ ಬೆಂಗಳೂರು ನಗರದಲ್ಲಿ 2030ರ ಹೊತ್ತಿಗೆ ಶೇಕಡ 70ರಷ್ಟು ಜನರು ಸಾರ್ವಜನಿಕ ಸಾರಿಗೆಯಲ್ಲಿಯೇ ಪ್ರಯಾಣಿಸುವಂತೆ ಮಾಡುವ ಗುರಿ ಇದೆ ಎಂದು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಬಹುಸಾರಿಗೆಗಳ ಮಾಹಿತಿ ಮತ್ತು ಟಿಕೆಟ್ ಬುಕ್ಕಿಂಗ್ ಒಂದೇ ಕಡೆ ಮಾಡಬಹುದಾದ ‘ಎನ್‌ರೂಟ್’ ಆ್ಯಪ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಶ್ವದಲ್ಲೇ ಅತಿ ವೇಗದಲ್ಲಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿರುವ ಬೆಂಗಳೂರು ವಿಪರೀತ ವಾಹನದಟ್ಟಣೆಯ ಸಮಸ್ಯೆ ಎದುರಿಸುತ್ತಿದೆ. ಇದರಿಂದ ಸರಾಗ ಸಂಚಾರಕ್ಕೆ ತೊಡಕಾಗಿದೆ. ಜನರು ತಮ್ಮ ಖಾಸಗಿ ವಾಹನಗಳಿಗಿಂತ ಬಸ್, ಮೆಟ್ರೊ, ಆಟೊಗಳಂಥ ಸಾರ್ವಜನಿಕ ಸಾರಿಗೆಯನ್ನು ಬಳಸುವಂತಾದರೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ವಿವರಿಸಿದರು.

ಎಲ್ಲ ಸಾರ್ವಜನಿಕ ಸಂಪರ್ಕಗಳ ಮಾಹಿತಿ ಒಂದೇ ಕಡೆ ಸಿಗುವಂತೆ ಅಪ್ಲಿಕೇಶನ್ ಅಭಿವೃದ್ಧಿಪಡಿಸಿರುವುದು ಉತ್ತಮ ಬೆಳವಣಿಗೆ. ಸಂಯೋಜಿತ ಡಿಜಿಟಲ್ ವ್ಯವಸ್ಥೆ, ಯಾವ ಸಾರಿಗೆ ಎಷ್ಟು ಗಂಟೆಗೆ ಹೊರಡುತ್ತದೆ? ಎಷ್ಟು ಹೊತ್ತಿಗೆ ತಲುಪುತ್ತದೆ ಎಂಬ ಮಾಹಿತಿ ಇದರಲ್ಲಿ ಲಭ್ಯವಾಗುತ್ತಿರುವುದರಿಂದ ಸಾರ್ವಜನಿಕರಿಗೆ ಉಪಯೋಗವಾಗಲಿದೆ ಎಂದು ಶ್ಲಾಘಿಸಿದರು.

‘ಎನ್‌ರೂಟ್’ ಆ್ಯಪ್‌ಗೆ ಸಚಿವ ಪ್ರಿಯಾಂಕ್ ಖರ್ಗೆ ಚಾಲನೆ ನೀಡಿದರು

ಐಟಿ, ಬಿಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಏಕರೂಪ್ ಕೌರ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್,ಬಿಎಂಆರ್‌ಸಿಎಲ್ ಕಾರ್ಯನಿರ್ವಾಹಕ ನಿರ್ದೇಶಕ (ಕಾರ್ಯಾಚರಣೆ ಮತ್ತು ನಿರ್ವಹಣೆ) ಶಂಕರ್ ಎ.ಎಸ್., ರಾಜ್ಯಸಭೆಯ ಮಾಜಿ ಸದಸ್ಯ ಎಂ.ವಿ. ರಾಜೀವ್ ಗೌಡ, ಮರ್ಸಿಡಿಸ್-ಬೆನ್ಜ್ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಮನು ಸಾಲೆ, ಡಬ್ಲ್ಯುಆರ್‌ಐ ಕಾರ್ಯನಿರ್ವಾಹಕ ನಿರ್ದೇಶಕ ಪವನ್ ಮುಲುಕುಟ್ಲಾ, ವಿಲ್ಗ್ರೋ ಇನ್ನೋವೇಶನ್ಸ್ ಫೌಂಡೇಷನ್‌ನ ಮುಖ್ಯ ತಾಂತ್ರಿಕ ಅಧಿಕಾರಿ ಅನಂತ್ ಅರವಮುದನ್, ಟಮ್ಮೋಕ್‌ನ ಸಿಇಒ ಹಿರಣ್ಮಯ್ ಮಲ್ಲಿಕ್, ನಮ್ಮ ಯಾತ್ರಿ ಸಿಒಒ ಶಾನ್ ಎಂ.ಎಸ್. ಭಾಗವಹಿಸಿದ್ದರು.

ಎನ್‌ರೂಟ್ ಅಪ್ಲಿಕೇಶನ್

ಭಾರತದ ಮರ್ಸಿಡಿಸ್ ಬೆನ್ಜ್ ಸಂಶೋಧನೆ ಮತ್ತು ಅಭಿವೃದ್ಧಿ (ಎಂಬಿಆರ್‌ಡಿಐ), ಡಬ್ಲ್ಯುಆರ್‌ಐ ಇಂಡಿಯಾ ಮತ್ತು ವಿಲ್ಗ್ರೋ ಸಂಯುಕ್ತ ಆಶ್ರಯದಲ್ಲಿ ‘ಎನ್‌ರೂಟ್: ಚಲನಶೀಲತೆಯ ಒಂದು ಸೇವೆ’ ಎಂಬ ಸ್ಪರ್ಧೆ ನಡೆಸಿತ್ತು. ಟಮ್ಮೋಕ್ ಮತ್ತು ನಮ್ಮ ಯಾತ್ರಿ ಅಭಿವೃದ್ಧಿಪಡಿಸಿದ ಅಪ್ಲಿಕೇಶನ್ ಪ್ರಶಸ್ತಿ ಪಡೆದಿತ್ತು. ಬಿಎಂಟಿಸಿ, ಮೆಟ್ರೊ ಅಂಕಿಅಂಶಗಳನ್ನು ಇಟ್ಟುಕೊಂಡು ‘ಎನ್‌ರೂಟ್’ ಆ್ಯಪ್ ಅಭಿವೃದ್ಧಿಪಡಿಸಲಾಗಿತ್ತು.

ಪುಷ್ಪಗಳಲ್ಲಿ ಅರಳಲಿದ್ದಾರೆ ‘ರಾಣಿ ಚನ್ನಮ್ಮ’

ಆ.7ರಿಂದ 15ರವರೆಗೆ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಆಯೋಜಿಸುವ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ‘ಕಿತ್ತೂರು ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ’ ಅವರ ವಿಷಯಾಧಾರಿತ ಹೂವಿನ ಪ್ರತಿಕೃತಿಗಳು ಕಣ್ಮನ ಸೆಳೆಯಲಿವೆ.

‘ಸ್ವಾತಂತ್ರ್ಯೋತ್ಸವದ ಅಂಗವಾಗಿ ಆಗಸ್ಟ್ 7 ರಿಂದ 15ರವರೆಗೆ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ನಡೆಯಲಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ನಡೆಸಿದ ಕಿತ್ತೂರು ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಜೀವನವನ್ನು ಪುಷ್ಪಗಳಲ್ಲಿ ಕಟ್ಟಿಕೊಡಲು ತೋಟಗಾರಿಕೆ ಇಲಾಖೆ ಸಿದ್ಧತೆ ನಡೆಸಿದೆ. ಪುಷ್ಪ ಪ್ರದರ್ಶನ ಹೇಗಿರಬೇಕು ಎಂಬುದರ ಕುರಿತು ಈಗಾಗಲೇ ವಿಷಯ ತಜ್ಞರು, ಪರಿಣತರೊಂದಿಗೆ ಚರ್ಚೆ ನಡೆಸುತ್ತಿದ್ದೇವೆ’ ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಸಾಂದರ್ಭಿಕ ಚಿತ್ರ

‘ಫಲಪುಷ್ಪ ಪ್ರದರ್ಶನದಲ್ಲಿ ಕಿತ್ತೂರು ಕೋಟೆಯನ್ನು ಹೇಗೆ ಪ್ರಸ್ತುತ ಪಡಿಸಬೇಕು ಎಂಬುದರ ಕುರಿತು ಪುರಾತತ್ವ ಇಲಾಖೆ ಹಾಗೂ ಸಂಗೊಳ್ಳಿ ರಾಯಣ್ಣನ ಸಮಾಧಿ ಸ್ಥಳ ನಂದಗಡವನ್ನು ಹೇಗೆ ಪ್ರದರ್ಶಿಸಬೇಕು ಎಂಬ ಬಗ್ಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುತ್ತಿದ್ದೇವೆ. ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಕಿತ್ತೂರು ಹಾಗೂ ನಂದಗಡಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲು ಜುಲೈ 10ರಂದು ಸಭೆ ಕರೆಯಲಾಗಿದೆ’ ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರದರ್ಶನಕ್ಕಾಗಿ ಇಲಾಖೆಯ ನರ್ಸರಿಗಳಲ್ಲಿ ವೈವಿಧ್ಯಮಯ ಪುಷ್ಪಗಳನ್ನು ಬೆಳೆಯಲಾಗುತ್ತಿದೆ. ಶೀತ ಪ್ರದೇಶಗಳಲ್ಲಿ ಬೆಳೆಯುವ ಹೂಗಳು ಈ ಬಾರಿಯ ಆಕರ್ಷಣೆ ಆಗಲಿವೆ. ದೇಶ, ವಿದೇಶಗಳಿಂದ ವಿವಿಧ ತಳಿಯ ಹೂಗಳನ್ನು ಆಮದು ಮಾಡಿಕೊಳ್ಳಲಾಗುವುದು’ ಎಂದು ವಿವರಿಸಿದರು.

ಪಾದಚಾರಿ ಮಾರ್ಗ ಒತ್ತುವರಿ ತೆರವು ಇಂದು

ಬೆಂಗಳೂರು: ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಜುಲೈ 11ರಂದು ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ಬಿಬಿಎಂಪಿ ವಲಯ ಆಯುಕ್ತ ದಿಗ್ವಿಜಯ್ ಬೋಡ್ಕೆ ತಿಳಿಸಿದರು.

ಪ್ರತಿ ತಿಂಗಳ ಒಂದು, ಮೂರನೇ ಶನಿವಾರ, ಎರಡು, ನಾಲ್ಕನೇ ಶುಕ್ರವಾರದಂದು ಒತ್ತುವರಿ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದರು.

ಬಸವನಗುಡಿ ವಿಭಾಗದ ಕೆ.ಆರ್. ರಸ್ತೆಯಿಂದ ಈಸ್ಟ್ ಆಂಜನೇಯ ರಸ್ತೆ, ಬಿ.ಟಿ.ಎಂ ಲೇಔಟ್ ವಿಭಾಗದ ಲಸ್ಕರ್ ಹೊಸೂರು ರಸ್ತೆ 20ನೇ ಮುಖ್ಯ ರಸ್ತೆಯ ಫೋರಂ ಮಾಲ್‌ನಿಂದ 80 ಅಡಿ ರಸ್ತೆಯ ಒಳಾಂಗಣ ಕ್ರೀಡಾಂಗಣದವರೆಗೆ, ಚಿಕ್ಕಪೇಟೆ ವಿಭಾಗದ ಕನಕನಪಾಳ್ಯ ಜಯನಗರ 8ನೇ ಮುಖ್ಯರಸ್ತೆಯಿಂದ ಪಟ್ಟಾಲಮ್ಮ ಮುಖ್ಯ ರಸ್ತೆಯವರೆಗೆ, ಜಯನಗರ ವಿಭಾಗದ 4ನೇ 'ಟಿ' ಬ್ಲಾಕ್ ಜಯನಗರ 32ನೇ 'ಇ' ಅಡ್ಡರಸ್ತೆಯಿಂದ ಮಾರೇನಹಳ್ಳಿ ರಸ್ತೆವರೆಗೆ, ಪದ್ಮನಾಭನಗರ ವಿಭಾಗದ ಕದಿರೇನಹಳ್ಳಿ ಕೆಳಸೇತುವೆಯಿಂದ ಕತ್ತರಿಗುಪ್ಪೆ ಸಿಗ್ನಲ್‌ವರೆಗೆ, ವಿಜಯನಗರ ವಿಭಾಗದ ಕಾರ್ಡ್ ರಸ್ತೆಯ ಅತ್ತಿಗುಪ್ಪೆ ಪೆಟ್ರೋಲ್ ಬಂಕ್‌ನಿಂದ ಸ್ಕೈಲೇನ್ ಅಪಾರ್ಟ್‌ಮೆಂಟ್‌ವರೆಗೆ ಪಾದಚಾರಿ ಮಾರ್ಗದ ಒತ್ತುವರಿಯನ್ನು ಶುಕ್ರವಾರ ತೆರವುಗೊಳಿಸಲಾಗುತ್ತದೆ ಎಂದರು.

‘ಅಂತರಂಗದ ಶುದ್ಧಿಗೆ ಚಾತುರ್ಮಾಸ್ಯ ಸಕಾಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂತರಂಗ ಶುದ್ಧಿ ಮಾಡಿಕೊಳ್ಳಲು ಪ್ರತಿಯೊಬ್ಬ ಮನುಷ್ಯನಿಗೂ ಚಾತುರ್ಮಾಸ್ಯಸಕಾಲ’ ಎಂದು ಹರಿಹರಪುರದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಜಯನಗರದಲ್ಲಿರುವ ಕೋದಂಡ ರಾಮ ದೇವಸ್ಥಾನದಲ್ಲಿ ಗುರುವಾರ 25ನೇ ಚಾತುರ್ಮಾಸ್ಯ ವ್ರತಾಚರಣೆ ಕೈಗೊಂಡ ಅವರು, ಆಶೀರ್ವಚನ ನೀಡಿದರು.

‘ಚಾತುರ್ಮಾಸ್ಯದ ಈ ಸಂದರ್ಭದಲ್ಲಿ ನಿಯಮಿತ ಚೌಕಟ್ಟು ಹಾಗೂ ಇತಿಮಿತಿಯೊಳಗೆ ಪ್ರತಿಯೊಬ್ಬರೂ ತಮ್ಮ ತಮ್ಮ ಅಂತರಂಗವನ್ನು ಶುದ್ಧಿ ಮಾಡಿಕೊಳ್ಳಬೇಕು. ಜಪ, ಪೂಜೆ ಪುನಸ್ಕಾರ, ವ್ರತ ಅಥವಾ ಪಾರಾಯಣವನ್ನು ಈ ಸಂಧರ್ಭದಲ್ಲಿ ಮಾಡಿದರೆ ಅಂತರಂಗ ಶುದ್ಧಿಯಾಗುತ್ತದೆ. ಅಂತರಂಗ ಶುದ್ಧಿಯಾದಾಗ ಮಾತ್ರ ಮನುಷ್ಯನಿಗೆ ಮನಸ್ಸು ಶುದ್ಧಿಯಾಗುತ್ತದೆ. ಮನಸ್ಸು ಶುದ್ಧಿಯಾದಾಗ ಮನೆಯಲ್ಲಿ ಆರೋಗ್ಯ, ಮನೆ ಮಂದಿಯಲ್ಲಿ ಒಳ್ಳೆ ರೀತಿಯ ಸಂಬಂಧಗಳು ಬೆಳೆಯುತ್ತವೆ’ ಎಂದು ಹೇಳಿದರು.

ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಅವರು ಕೋದಂಡರಾಮ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿದರು

ಚಾತುರ್ಮಾಸ್ಯ ಸೇವಾ ಸಮಿತಿಯ ಸಂಚಾಲಕ ನಾಗರಾಜ ಶೆಟ್ಟಿ, ‘ಚಾತುರ್ಮಾಸ್ಯದ ಅವಧಿಯಲ್ಲಿ ಪ್ರತಿ ನಿತ್ಯ ಗುರುಗಳಿಂದ ನವಾವರಣ ಶ್ರೀಚಕ್ರ ಪೂಜೆ ನಡೆಯಲಿದೆ. ಸಂಜೆ ವೇಳೆ ಆಶೀರ್ವಚನ ಇರುತ್ತದೆ’ ಎಂದರು.

ಹರಿಹರಪುರ ಮಠದ ಆಡಳಿತಾಧಿಕಾರಿ ಚಂದ್ರನ್, ‘ಗುರುಗಳ ದರ್ಶನ ಮತ್ತು ಸೇವೆಯಿಂದ ಅಜ್ಞಾನ ತೊಲಗಿ, ವಿಜ್ಞಾನ ಪ್ರಾಪ್ತಿಯಾಗುತ್ತದೆ. ಅಜ್ಞಾನದಿಂದ ಜ್ಞಾನ ಪಡೆದು, ಜ್ಞಾನದಿಂದ ಮೋಕ್ಷ ಸಾಧ್ಯವಾಗುತ್ತದೆ’ ಎಂದು ಹೇಳಿದರು.

ಕ್ವಾಂಟಮ್ ರಿಸರ್ಚ್ ಪಾರ್ಕ್ ಅಭಿವೃದ್ಧಿಗೆ ₹48 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಕ್ವಾಂಟಮ್ ಕ್ಷೇತ್ರದ ಬೆಳವಣಿಗೆಯಲ್ಲಿ ಕ್ವಾಂಟಮ್ ರಿಸರ್ಚ್ ಪಾರ್ಕ್ ಮುಂದಾಳತ್ವವನ್ನು ವಹಿಸುವ ಸಾಮರ್ಥ್ಯವನ್ನು ಐಐಎಸ್‌ಸಿ ಹೊಂದಿದ್ದು, ಇದರ ಅಭಿವೃದ್ದಿಗಾಗಿ ₹ 48 ಕೋಟಿ ನೀಡಲಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು.

ಐಐಎಸ್‌ಸಿ ಆವರಣದಲ್ಲಿರುವ ಕ್ವಾಂಟಮ್ ರಿಸರ್ಚ್ ಪಾರ್ಕ್‌ಗೆ ಗುರುವಾರ ಭೇಟಿ ನೀಡಿ ಕ್ವಾಂಟಮ್ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ನೀಲನಕ್ಷೆ ಬಗ್ಗೆ ತಜ್ಞರೊಂದಿಗೆ ಸಮಾಲೋಚನೆ ನಡೆಸಿದರು.

ಕ್ವಾಂಟಮ್ ಪಾರ್ಕ್‌ನಲ್ಲಿ ವಿಶ್ವದರ್ಜೆಯ ಅತ್ಯಾಧುನಿಕ ಸಂಶೋಧನಾ ಸಲಕರಣೆಗಳು, ಪ್ರಯೋಗಾಲಯಗಳು, ಇನ್ ಕ್ಯುಬೇಟರ್‌ನಂಥ ಸಕಲ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ₹ 48 ಕೋಟಿ ಅನುದಾನ ನೀಡಲಾಗಿದೆ. ಈ ಸಂಸ್ಥೆ ದೇಶದ ಕ್ವಾಂಟಮ್ ಕ್ಷೇತ್ರದ ಬೆಳವಣಿಗೆಯ ನಾಯಕತ್ವ ವಹಿಸುವಂತಹ ಎಲ್ಲಾ ಅರ್ಹತೆಗಳನ್ನು ಹೊಂದಿದೆ. ಸಂಸ್ಥೆಯ ಅಭಿವೃದ್ಧಿಗೆ ಸರ್ಕಾರ ಅಗತ್ಯ ಸಹಕಾರ ನೀಡಲು ಸಿದ್ಧವಿದ್ದು, ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿದರು.

ಬೆಂಗಳೂರು ನಗರವನ್ನು ದೇಶದ ಕ್ವಾಂಟಮ್ ಹಬ್ ಮಾಡುವ ನಿಟ್ಟಿನಲ್ಲಿ ಜುಲೈ 31 ಹಾಗೂ ಆಗಸ್ಟ್ 1ರಂದು ‘ಕ್ವಾಂಟಮ್ ಇಂಡಿಯಾ ಬೆಂಗಳೂರು ಸಮಾವೇಶ’ ಆಯೋಜಿಸಲಾಗಿದೆ ಎಂದರು.

ಕ್ವಾಂಟಮ್ ರಿಸರ್ಚ್ ಪಾರ್ಕ್‌ನ ಮುಖ್ಯಸ್ಥ ಪ್ರೊ. ಅರಿಂದಮ್ ಘೋಷ್ ಮಾತನಾಡಿ, ‘ಬೆಂಗಳೂರು ನಗರ ಕ್ವಾಂಟಮ್ ಕ್ಷೇತ್ರದ ಬೆಳವಣಿಗೆಗೆ ಪೂರಕವಾದ ವಾತಾವರಣ ಹೊಂದಿದೆ. ನಗರದಲ್ಲಿರುವ ಶೈಕ್ಷಣಿಕ, ಸಂಶೋಧನಾ ಸಂಸ್ಥೆಗಳು ಮತ್ತು ಕೈಗಾರಿಕೆಗಳನ್ನು ಸರಿಯಾದ ರೀತಿಯಲ್ಲಿ ತೊಡಗಿಸಿಕೊಳ್ಳುವುದರಿಂದ 2035ರ ಒಳಗಾಗಿ ‘ಕ್ವಾಂಟಮ್ ಅಡ್ವಾಂಟೇಜ್ ಡ್ರಿವನ್ ಎಕಾನಮಿ ಇನ್ ಕರ್ನಾಟಕ’ ರಚಿಸಬಹುದಾಗಿದೆ. ಈ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ತಜ್ಞರನ್ನು ಒಳಗೊಂಡಿರುವ ಸಲಹಾ ಸಮಿತಿ ರಚಿಸುವ ಅಗತ್ಯವಿದೆ’ ಎಂದು ಹೇಳಿದರು.

ರಾಯಚೂರ ಸಂಸದ ಜಿ. ಕುಮಾರ ನಾಯಕ, ಕೆಸ್ಟೆಪ್ಸ್ ನಿರ್ದೇಶಕ ಸದಾಶಿವ ಪ್ರಭು, ಐಐಎಸ್‌ಸಿ ನಿರ್ದೇಶಕರಾದ ರಂಗರಾಜನ್, ಪ್ರೊ. ಅಕ್ಷಯ ನಾಯಕ್, ವಿಜ್ಞಾನ ತಂತ್ರಜ್ಞಾನ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ನಗರದ ಐಐಎಸ್‌ಸಿ ಆವರಣದಲ್ಲಿರುವ ಕ್ವಾಂಟಮ್ ರಿಸರ್ಚ್ ಪಾರ್ಕ್‌ಗೆ ಸಚಿವ ಎನ್.ಎಸ್. ಬೋಸರಾಜು ಅವರು ಗುರುವಾರ ಭೇಟಿ ಮಾಡಿ, ತಜ್ಞರೊಂದಿಗೆ ಸಮಾಲೋಚನೆ ನಡೆಸಿದರು.ಪ್ರೊ. ಅರಿಂದಮ್ ಘೋಷ್, ಜಿ.ಕುಮಾರ ನಾಯಕ ಇದ್ದಾರೆ

ಮಾರುಕಟ್ಟೆ ದರ ನೀಡುವಂತೆ ಆಗ್ರಹಿಸಿ ನಾಳೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿ ವ್ಯಾಪ್ತಿಯಲ್ಲಿ ಭೂಸ್ವಾಧೀನ ಮಾಡಿಕೊಂಡಿರುವ ಜಮೀನಿಗೆ ಮಾರುಕಟ್ಟೆ ದರ ನೀಡುವಂತೆ ಆಗ್ರಹಿಸಿ ಜುಲೈ 12ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ದೇವನಹಳ್ಳಿ ಚನ್ನರಾಯಪಟ್ಟಣ ರೈತ ಸಮಿತಿ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಸಂಚಾಲಕರಾದ ಶ್ರೀನಿವಾಸ್, ದೊಡ್ಡೇಗೌಡ, ರಂಗಣ್ಣ, ಜಗದೀಶ್, ಚನ್ನಕೇಶವ, ‘ರಾಜ್ಯ ಸರ್ಕಾರ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ ವ್ಯಾಪ್ತಿಯ 1,777ಎಕರೆ ಜಮೀನನನ್ನು ಭೂಸ್ವಾಧಿನ ಪಡಿಸಿಕೊಳ್ಳುವ ಬಗ್ಗೆ ನಮ್ಮ ತಕರಾರಿಲ್ಲ. ಆದರೆ ಈಗಿನ ಮಾರುಕಟ್ಟೆ ದರ ನೀಡಬೇಕು. ದೇವನಹಳ್ಳಿ ಸುತ್ತಮುತ್ತ ಹೈಟೆಕ್ ಡಿಫೆನ್ಸ್ ಮತ್ತು ಎರೋಸ್ಪೇಸ್ ಪಾರ್ಕ್ ನಿರ್ಮಾಣಕ್ಕೆ ಭೂಮಿ ಕೊಡುವುದಕ್ಕೆ ನಮ್ಮ ಬೆಂಬಲವಿದೆ. ಯಾವುದೇ ಕಾರಣಕ್ಕೂ ಈ ಭಾಗವನ್ನು ಹಸಿರು ವಲಯವನ್ನಾಗಿ ಘೋಷಿಸಬಾರದು’ ಎಂದು ಆಗ್ರಹಿಸಿದರು.

ಗ್ರೆನೇಡ್ ಸ್ಫೋಟಿಸಿ ನಾಸೀರ್ ಪರಾರಿಗೆ ಸಂಚು

ಎನ್‌ಐಎ ತನಿಖೆ ಚುರುಕು: ಚಾಂದ್ ಪಾಷಾ, ಅನೀಸ್ ಫಾತಿಮಾಗೆ ಲಕ್ಷಾಂತರ ರೂಪಾಯಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಚಾಂದ್

ಅನೀಸ್

ಬೆಂಗಳೂರು: ಭಯೋತ್ಪಾದನೆ ಚಟುವಟಿಕೆಯಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಟಿ.ನಾಸೀರ್, ಜೈಲಿನ ಅಧಿಕಾರಿ ಜತೆಗೆ ಸೇರಿಕೊಂಡು ವಿದೇಶಕ್ಕೆ ಪರಾರಿಯಾಗಲು ಸಂಚು ರೂಪಿಸಿದ್ದ ಎನ್ನುವ ಸ್ಫೋಟಕ ಮಾಹಿತಿ ರಾಷ್ಟ್ರೀಯ ತನಿಖಾ ದಳಕ್ಕೆ(ಎನ್‌ಐಎ) ಸಿಕ್ಕಿದೆ. ಆ ಮಾಹಿತಿ ಆಧರಿಸಿ ಎನ್‌ಐಎ ಅಧಿಕಾರಿಗಳು ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿದ್ದಾರೆ.

ಉಗ್ರ ನಾಸೀರ್ ಹಾಗೂ ಆತನ ಸಹಚರರಿಗೆ ನೆರವು ನೀಡಿದ್ದ ಆರೋಪದಡಿ ಜೈಲಿನ ಎಎಸ್‌ಐ ಚಾಂದ್ ಪಾಷಾ, ಮನೋವೈದ್ಯ ನಾಗರಾಜ್ ಹಾಗೂ ವಿದೇಶದಲ್ಲಿ ತಲೆಮರೆಸಿಕೊಂಡಿರುವ ಜುನೈದ್ ಅಹಮದ್‌ನ ತಾಯಿ ಅನೀಸ್ ಫಾತಿಮಾಳನ್ನು ಬಂಧಿಸಿರುವ ಎನ್‌ಐಎ ಅಧಿಕಾರಿಗಳು, ಮೂವರು ಶಂಕಿತ ಉಗ್ರರನ್ನು ತಮ್ಮ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ (ಪಿಡಿಪಿ) ಅಬ್ದುಲ್ ನಾಸೀರ್ ಮದನಿಯ ಸಹಚರ ಎಲ್‌ಇಟಿ ಮುಖಂಡ ಟಿ.ನಾಸೀರ್. 2008ರಲ್ಲಿ ಬೆಂಗಳೂರಿನಲ್ಲಿ ಸರಣಿ ಸ್ಫೋಟ ಪ್ರಕರಣಗಳು ನಡೆದಿದ್ದವು. ಘಟನೆಯಲ್ಲಿ ಇಬ್ಬರು ಮೃತಪಟ್ಟು, 20 ಮಂದಿ ಗಾಯಗೊಂಡಿದ್ದರು. ಆ ಪ್ರಕರಣದಲ್ಲಿ ಟಿ.ನಾಸೀರ್‌ನನ್ನು ಎನ್‌ಐಎ ಬಂಧಿಸಿತ್ತು. ಬೇರೆ ಬೇರೆ ಪ್ರಕರಣಗಳಲ್ಲಿ ಬಂಧನಕ್ಕೆ ಒಳಗಾಗಿ ಪರಪ್ಪನ ಅಗ್ರಹಾರಕ್ಕೆ ಬರುತ್ತಿದ್ದ ಯುವಕರ ಮನವೊಲಿಸಿ ಅವರಿಗೆ ನಾಸೀರ್ ಉಗ್ರ ಚಟುವಟಿಕೆಯ ತರಬೇತಿ ನೀಡುತ್ತಿದ್ದ ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಎಎಸ್‌ಐ ಸೂತ್ರಧಾರ: ‘ಜೈಲಿನಲ್ಲಿದ್ದ ಶಂಕಿತ ಉಗ್ರರ ತಂಡವು ಕಾರಾಗೃಹದ ಅಧಿಕಾರಿಗಳ ಜತೆಗೆ ಸೇರಿಕೊಂಡು ಟಿ.ನಾಸೀರ್ ಜೈಲಿನಿಂದ ಪರಾರಿಯಾಗುವಂತೆ ಮಾಡಲು ಸಂಚು ರೂಪಿಸಿತ್ತು. ಅದಕ್ಕೆ ಯೋಜನೆ ಸಹ ಸಿದ್ಧಗೊಂಡಿತ್ತು. ಚಾಂದ್ ಪಾಷಾಗೆ ನಾಸೀರ್‌ನನ್ನು ಕೋರ್ಟ್‌ಗೆ ಕರೆದೊಯ್ಯುವ ಜವಾಬ್ದಾರಿ ವಹಿಸಲಾಗಿತ್ತು. ನಾಸೀರ್ ಕರೆದೊಯ್ಯಲು ಒಂದು ಜೀಪ್, ಇನ್‌ಸ್ಪೆಕ್ಟರ್ ಅಥವಾ ಪಿಎಸ್‌ಐ ನಿಯೋಜನೆ ಮಾಡಲಾಗುತ್ತಿತ್ತು. ದಾರಿ ಮಧ್ಯೆ ಗ್ರೆನೇಡ್ ಸ್ಫೋಟಿಸಿ ಗಮನ ಬೇರೆಡೆ ಸೆಳೆದು ನಾಸೀರ್ ಪರಾರಿ ಆಗುವಂತೆ ಮಾಡುವುದು ಸಂಚಿನ ಭಾಗ ಆಗಿತ್ತು.

ಈ ಎಲ್ಲ ಮಾಹಿತಿಯನ್ನು ಫಾತಿಮಾ ಮೂಲಕ ಶಂಕಿತ ಉಗ್ರ ಜುನೈದ್‌ಗೆ ರವಾನೆ ಮಾಡಲಾಗಿತ್ತು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾರಿ ಮಧ್ಯೆ ಸ್ಫೋಟಿಸಲು ಸಂಚುಕೋರರಿಗೆ ಗ್ರೆನೇಡ್ ಪೂರೈಕೆ ಮಾಡಲಾಗಿತ್ತು. 2023ರಲ್ಲಿ ಸಿಸಿಬಿ ದಾಳಿಯ ವೇಳೆ ಕೊಡಿಗೇಹಳ್ಳಿ ಮನೆಯ ಮೇಲೆ ದಾಳಿ ನಡೆಸಿ, ಶೋಧ ನಡೆಸಿದಾಗ ಅಪಾರ ಪ್ರಮಾಣದ ಗ್ರೆನೇಡ್ ಪತ್ತೆಯಾಗಿತ್ತು ಎಂದು ಮೂಲಗಳು ತಿಳಿಸಿವೆ.

ಎಎಸ್‌ಐ ಚಾಂದ್ ಪಾಷಾಗೆ ಎಲ್‌ಇಟಿ ಉಗ್ರ ಟಿ.ನಾಸೀರ್ ಸಹಚರರಿಂದ ಲಕ್ಷಾಂತರ ರೂಪಾಯಿ ಸಂದಾಯ ಆಗಿರುವುದು ಬ್ಯಾಂಕ್‌ಗಳ ಪರಿಶೀಲನೆ ವೇಳೆ ಪತ್ತೆಯಾಗಿದೆ. ಹಣವನ್ನು ತನ್ನ ಬ್ಯಾಂಕ್ ಖಾತೆಯ ಬದಲಿಗೆ ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವ ಪುತ್ರ ಹಾಗೂ ಸಂಬಂಧಿಯೊಬ್ಬರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದ ಎಂದು ಮೂಲಗಳು ತಿಳಿಸಿವೆ.

ಜುನೈದ್ ಅಹಮದ್ ತನ್ನ ತಾಯಿ ಅನೀಸ್ ಫಾತಿಮಾ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡುತ್ತಿದ್ದ. ಪುತ್ರನ ಸೂಚನೆಯ ಮೇರೆಗೆ ಟಿ.ನಾಸೀರ್ ಜತೆ ಸಂಪರ್ಕ ಹೊಂದಿ, ಆತ ಸೂಚಿಸಿದಂತೆ ಕೆಲಸ ಮಾಡುತ್ತಿದ್ದಳು ಎಂದು ಮೂಲಗಳು ತಿಳಿಸಿವೆ.

ಮೊಬೈಲ್ ಪೂರೈಕೆ: ₹70 ಲಕ್ಷ ಗಳಿಸಿದ್ದ ವೈದ್ಯ

ನಾಗರಾಜ್

ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಮನೋವೈದ್ಯನಾಗಿದ್ದ ನಾಗರಾಜ್, 14 ವರ್ಷಗಳಿಂದ ಜೈಲಿನ ಕೈದಿಗಳಿಗೆ ಅಂದಾಜು 300ಕ್ಕೂ ಹೆಚ್ಚು ಮೊಬೈಲ್ ಮಾರಾಟ ಮಾಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ. ₹10 ಸಾವಿರ ಬೆಲೆಯ ಮೊಬೈಲ್ ಅನ್ನು ₹30 ಸಾವಿರದಿಂದ ₹35 ಸಾವಿರಕ್ಕೆ ಮಾರಾಟ ಮಾಡುತ್ತಿದ್ದ. ಸದ್ಯ ಆರೋಪಿ ಖರೀದಿಸಿರುವ 90 ಮೊಬೈಲ್‌ಗಳಿಗೆ ಡಿಜಿಟಲ್ ಸಾಕ್ಷ್ಯಗಳು ಸಿಕ್ಕಿವೆ. ಕೈದಿಗಳಿಗೆ ಮೊಬೈಲ್ ಮಾರಾಟ ಮಾಡಿ ನಾಗರಾಜ್ ₹70 ಲಕ್ಷ ಗಳಿಸಿದ್ದ ಎಂದು ಮೂಲಗಳು ತಿಳಿಸಿವೆ.

‘ಮೊಬೈಲ್ ಮಾರಾಟ ಮಾಡಿ ಬಂದ ಹಣವನ್ನು ತನ್ನ ಸ್ನೇಹಿತೆ ಪಲ್ಲವಿ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡುತ್ತಿದ್ದ. ಪಲ್ಲವಿ ಖಾಸಗಿ ಆಸ್ಪತ್ರೆಯ ನರ್ಸ್ ಆಗಿದ್ದು, ತನ್ನ ಸಹಾಯಕಿಯಾಗಿ ನೇಮಿಸಿಕೊಂಡಿದ್ದ’ ಎಂದು ಮೂಲಗಳು ತಿಳಿಸಿವೆ.

ಸ್ಫೋಟ ಪ್ರಕರಣ ಆರೋಪಿ ಸೆರೆ

ವಿಜಯಪುರ: ಕೊಯಮತ್ತೂರಿನಲ್ಲಿ 1998ರಲ್ಲಿ ನಡೆದಿದ್ದ ಸ್ಫೋಟ ಸೇರಿ ವಿವಿಧ ಭಯೋತ್ಪಾದನಾ ಕೃತ್ಯಗಳಲ್ಲಿ ಭಾಗಿಯಾಗಿದ್ದ ಆರೋಪದಡಿ ಸಾದಿಕ್ ರಜಾ ಅಲಿಯಾಸ್ ಟೈಲರ್ ರಜಾ (50) ಎಂಬುವವನ್ನು ತಮಿಳುನಾಡು ಪೊಲೀಸರು ಮತ್ತು ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಪೊಲೀಸರು ಗುರುವಾರ ವಿಜಯಪುರದಲ್ಲಿ ಬಂಧಿಸಿದರು.

ಆರೋಪಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ನಿವಾಸಿ.

ಮಹಿಳೆಯರ ವಿಡಿಯೊ ಚಿತ್ರೀಕರಣ: ಬಂಧನ

ಪ್ರಜಾವಾಣಿ ವಾರ್ತೆ

ಗುರುದೀಪ್

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ನಡೆದಾಡುವ ಮಹಿಳೆಯರ ವಿಡಿಯೊ ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮದಲ್ಲಿ ಅಪ್‌ಲೋಡ್ ಮಾಡುತ್ತಿದ್ದ ಆರೋಪಿಯನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್.ಪುರದಲ್ಲಿ ನೆಲಸಿದ್ದ ಪಂಜಾಬ್‌ನ ಗುರುದೀಪ್ ಸಿಂಗ್(26) ಬಂಧಿತ ಆರೋಪಿ. ಹೋಟೆಲ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆದಿದ್ದ ಗುರುದೀಪ್ ಸಿಂಗ್, ಕೆಲಸ ಹುಡುಕಿಕೊಂಡು ಪಂಜಾಬ್‌ನಿಂದ ನಗರಕ್ಕೆ ಬಂದು, ಕೆ.ಆರ್. ಪುರದಲ್ಲಿ ಅಣ್ಣನ ಜತೆಗೆ ವಾಸವಾಗಿದ್ದ. ಮಹಿಳೆಯೊಬ್ಬರು ನೀಡಿದ ಸುಳಿವು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು. @indianwalk1M ಹೆಸರಿನ ಇನ್‌ಸ್ಟಾಗ್ರಾಂನ ಖಾತೆಯಲ್ಲಿ ಒಟ್ಟು 45 ವಿಡಿಯೊಗಳಿದ್ದವು. ಎಲ್ಲಾ ವಿಡಿಯೊಗಳನ್ನೂ ಅಳಿಸಿ ಹಾಕಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

1930ಕ್ಕೆ ಕರೆ ಮಾಡಿ

ಮಹಿಳೆಯರ ಘನತೆಗೆ ಧಕ್ಕೆ ತರುವ ವಿಡಿಯೊಗಳು ಅಥವಾ ಖಾತೆಗಳನ್ನು ಆನ್‌ಲೈನ್‌ನಲ್ಲಿ ನೋಡಿದರೆ, ತಕ್ಷಣವೇ ಸೈಬರ್ ಸೆಲ್‌ನ 1930ಕ್ಕೆ ಕರೆಮಾಡಿ ಅಥವಾ ವೆಬ್‌ಸೈಟ್: http://cybercrime.gov.inನಲ್ಲಿ ದೂರು ದಾಖಲಿಸಿ ಎಂದು ಪೊಲೀಸರು ಮನವಿ ಮಾಡಿದ್ದಾರೆ.

‘ಕಠಿಣ ಕ್ರಮ’

‘ಕೆಲವು ದಿನಗಳ ಹಿಂದೆಯೂ ಈ ರೀತಿಯ ಘಟನೆ ನಡೆದಿತ್ತು.. ಇಂತಹ ಕೃತ್ಯಗಳನ್ನು ಎಸಗುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪವಿತ್ರಾ ಸೇರಿ ಐವರು ಗೈರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರು ಇಲ್ಲಿನ 57ನೇ ಎಸಿಎಂಎಂ ನ್ಯಾಯಾಲಯಕ್ಕೆ ಗುರುವಾರ ವಿಚಾರಣೆಗೆ ಹಾಜರಾಗಿದ್ದರು. ಪವಿತ್ರಾಗೌಡ, ಪವನ್, ವಿನಯ್, ಕಾರ್ತಿಕ್ ಮತ್ತು ಧನರಾಜ್ ಗೈರಾಗಿದ್ದರು.

ನ್ಯಾಯಾಧೀಶರು, ಪ್ರಕರಣದ ವಿಚಾರಣೆಯನ್ನು ಆಗಸ್ಟ್ 12ಕ್ಕೆ ಮುಂದೂಡಿದರು. ಎಲ್ಲಾ ಆರೋಪಿಗಳೂ ಕಡ್ಡಾಯವಾಗಿ ವಿಚಾರಣೆಗೆ ಹಾಜರಾಗಬೇಕು ಎಂದು ಸೂಚಿಸಿದರು.

ಜುಲೈ 10ರಿಂದ 30ರವರೆಗೆ ಮತ್ತು ಆಗಸ್ಟ್ 5ರಿಂದ 17ರ ಅವಧಿಯಲ್ಲಿ ತಿರುಪತಿ ಮತ್ತು ಧರ್ಮಸ್ಥಳದ ದೇವಾಲಯಗಳಿಗೆ ಭೇಟಿ ನೀಡಲು ಮತ್ತು ರೆಡ್ ಕಾರ್ಪೆಟ್ ಕಂಪನಿಗೆ ವಸ್ತುಗಳ ಖರೀದಿ ಮಾಡಬೇಕಿರುವ ಕಾರಣ ಹೈದರಾಬಾದ್, ಮಂಗಳೂರು, ದೆಹಲಿಗೆ ಹೋಗಲು ಅನುಮತಿ ನೀಡುವಂತೆ ಕೋರಿ ಪವಿತ್ರಾ ಗೌಡ ಅರ್ಜಿ ಸಲ್ಲಿಸಿರುವ ವಿಚಾರವನ್ನು ಆಕೆಯ ಪರ ವಕೀಲರು ನ್ಯಾಯಾಲಯದ ಗಮನಕ್ಕೆ ತಂದರು.

ಪವಿತ್ರಾ ಗೌಡ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ತನಿಖಾಧಿಕಾರಿಗೆ ಸೂಚಿಸಿ, ವಿಚಾರಣೆ ಜು. 14ಕ್ಕೆ ಮುಂದೂಡಿದರು.

ಬ್ಯಾಂಕ್‌ನಲ್ಲಿ ನಕಲಿ ಖಾತೆ ಸೃಷ್ಟಿಸಿ ವೃದ್ಧೆಗೆ ₹1.90 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ಲ್ಯಾಟ್ ಮಾರಾಟ ಮಾಡುವುದಾಗಿ ದಾಖಲಾತಿಗಳನ್ನು ಪಡೆದು ವೃದ್ಧೆಯ ನಕಲಿ ಸಹಿ ಸೃಷ್ಟಿಸಿ, ಬ್ಯಾಂಕ್‌ಗಳಲ್ಲಿ ನಕಲಿ ಖಾತೆ ತೆರೆದು, ₹1.90 ಕೋಟಿ ಸಾಲ ಪಡೆದು ವಂಚಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸರ್ಕಾರಿ ಅಧಿಕಾರಿಗಳು ಸೇರಿ 11 ಮಂದಿ ವಿರುದ್ಧ ಡಿ.ಜೆ. ಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ

ಕೆ.ಬಿ.ಸಂದ್ರ ನಿವಾಸಿ 71 ವರ್ಷದ ಮೇರಿ ಹೇರಿಯೇಟ್ ಅವರ ದೂರು ಆಧರಿಸಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ಅನುರಾಗ್, ದೂರುದಾರರ ಆಪ್ತ ಸಹಾಯಕ ಸೂರ್ಯ, ಗಂಗಾನಗರ ಹಾಗೂ ಬ್ಯಾಟರಾಯನಪುರ ಉಪ ನೋಂದಣಿ ಅಧಿಕಾರಿ ಶಾಂತಮೂರ್ತಿ, ವಾಸುದೇವ ಮೂರ್ತಿ, ಕೆನರಾ ಬ್ಯಾಂಕ್ ಮ್ಯಾನೇಜರ್ ಅನ್ವರ್ ಸೇರಿ 11 ಮಂದಿ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಪ್ರಕರಣದ ಹಿನ್ನೆಲೆ: ಆರ್. ಟಿ. ನಗರ ನಿವಾಸಿ ಮೇರಿ ಅವರು ಕಾವಲ್ ಭೈರಸಂದ್ರದಲ್ಲಿ ಇರುವ 3 ಫ್ಲ್ಯಾಟ್‌ಗಳನ್ನು ಮಾರಾಟ ಮಾಡಿಕೊಡುವಂತೆ ಅನುರಾಗ್‌ಗೆ ಹೇಳಿದ್ದರು. ಹಾಗಾಗಿ ಆಸ್ತಿ ಮಾರಾಟಕ್ಕಾಗಿ ವೃದ್ಧೆಯ ಆಪ್ತ ಸಹಾಯಕ ಸೂರ್ಯ ಮೂಲಕ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್ ಸೇರಿ ಅಗತ್ಯ ದಾಖಲಾತಿಗಳನ್ನು ಆರೋಪಿ ಪಡೆದುಕೊಂಡಿದ್ದ.

ನಕಲಿ ಸಹಿ ಸೃಷ್ಟಿಸಿ, ಸ್ವತ್ತಿನ ಮಾಲೀಕರಂತೆ ಅನ್ಯ ವ್ಯಕ್ತಿಯನ್ನು ತೋರಿಸಿ ಉಪ ನೋಂದಣಿ ಕಚೇರಿಗಳಲ್ಲಿ ಅಧಿಕಾರಿಗಳ ನೆರವಿನಿಂದ ಫ್ಲ್ಯಾಟ್‌ಗಳನ್ನು ಹೇಮಂತ್ ಕುಮಾರ್ ಹಾಗೂ ವಿಷ್ಣು ಎಂಬುವರಿಗೆ ಮಾರಾಟ ಮಾಡಿದ್ದ ಎಂದು ವೃದ್ಧೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಅಸಲಿ ಸ್ವತ್ತಿಗೆ ನಕಲಿ ಮಾಲೀಕರನ್ನು ಸೃಷ್ಟಿಸಿ ಬ್ಯಾಂಕ್ ಆಫ್ ಮಹಾರಾಷ್ಟ್ರ ಹಾಗೂ ಅರ್ಜುನ್ ಸೌಹಾರ್ದ ಪತ್ತಿನ ಸಹಕಾರ ನಿಯಮಿತ ಕೋ ಆಪರೇಟಿವ್ ಸೊಸೈಟಿಯಲ್ಲಿ ದೂರುದಾರರ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಸಿದ್ದ. ಎರಡು ಬ್ಯಾಂಕ್‌ಗಳಿಂದ ₹1.90 ಕೋಟಿ ಹಣ ಮಂಜೂರು ಮಾಡಿಸಿಕೊಂಡು, ಬಳಿಕ ತನ್ನ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡಿದ್ದ. ಇತ್ತೀಚೆಗೆ ಬ್ಯಾಂಕ್‌ಗಳಿಂದ ವೃದ್ಧೆಗೆ ಕರೆ ಮಾಡಿದಾಗ ವಂಚನೆ ಜಾಲ ಬಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ಮಾರಾಟ ಮಾಡಿದ ಎರಡು ಫ್ಲ್ಯಾಟ್‌ಗಳನ್ನು ಖರೀದಿಸಿದ್ದ ಹೇಮಂತ್ ಹಾಗೂ ವಿಷ್ಣು ಎಂಬುವವರು ಈವರೆಗೂ ಮನೆಗಳನ್ನು ಸುಪರ್ದಿಗೆ ತೆಗೆದುಕೊಂಡಿಲ್ಲ. ವಂಚನೆ ಜಾಲದಲ್ಲಿ ಇವರ ಕೈವಾಡವಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ದಾಖಲಾತಿಗಳನ್ನು ಸಂಗ್ರಹಿಸಿ, ಪರಿಶೀಲನೆ ನಡೆಸಲಾಗುತ್ತಿದೆ. ವಂಚನೆ ಎಸಗಿರುವುದು ದೃಢವಾದರೆ ಆರೋಪಿಗಳನ್ನು ಬಂಧಿಸಲಾಗುವುದು ಪೊಲೀಸರು ಮಾಹಿತಿ ನೀಡಿದ್ದಾರೆ.

ಉಪ ಲೋಕಾಯುಕ್ತ ಫಣೀಂದ್ರಗೆ ಬೆದರಿಕೆ

ಬೆಂಗಳೂರು: ಉಪ ಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರಿಗೆ ಅಪರಿಚಿತರು ಕರೆ ಮಾಡಿ ಬೆದರಿಕೆ ಹಾಕಿದ್ದು, ಈ ಸಂಬಂಧ ಕೇಂದ್ರ ಸೈಬರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಜುಲೈ 9ರಂದು ಫಣೀಂದ್ರ ಅವರ ಮೊಬೈಲ್ ಸಂಖ್ಯೆಗೆ ಕರೆ ಮಾಡಿದ್ದ ಅಪರಿಚಿತರು, ನಿಮ್ಮ ಆಧಾರ್ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆ ಬಳಸಿಕೊಂಡು ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿವೆ ಎಂದು ಬೆದರಿಸಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commerical

Koramangala

SALE: KORAMANGALA 5th Block COMMERCIAL 11000 Sft. Rental Income 7Lacs. Sale: 15 Crores, Call: 98450-23695/ 98451-63280/ 98450-23696

Sites

Banashankari

SALE 87000SFT, west facing, Vacant Land Commercial and Residential converted, E-Khata, clear titles, at Hosakote Shidalgatta Road, call Verna Developers, Barton centre, MG Road, BLR. 9916310226 9620253180.

BDA-SITE AVAILABLE @ Banashankari 6th Stage Any Block 30x40, 40x60, 50x80 Contact Rajesh: 9945610779

Kempegowda Layout

COMMERCIAL SITE for sale 50*80 WF BDA 300 ft/ rd very good locality Rs 14000/- Negotiable, Nadaprabhu Kempegowda Layout near Challaghatta Metro Station, Mysore Road. Contact: 9916826976

House

Kengeri

BDA 60X40 site with building 3300sqft. Sir M V layout 2nd Block. Contact 92495 13187

REAL ESTATE BUYING

Industrial & Factory

Mysore

REQUIRED LAND-FOR PURCHASE 20 to-30 Acres Industrail Converted Close to Mysore-City Centre: 9880414447 sitypropman@gmail.com

RENTAL PROPERTIES

Accommodation Available

Flats

FULLY FURNISHED 4 BHK flat at SANSIDH GALAXY, Rachenahalli, behind Manyata tech park with Two car parking gym, Swimming pool, club house, 24 hours Security. Rent 85,000 Negotiable Call 9686230208

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

EDUCATIONAL

Correspondence Courses

STUDY AT HOME SSLC DIRECT 2nd PUC BA, B.Com, BBA/B.Sc, BCA, BSW, B.LISc, B.Ed/M.Ed, M.LISc, MA/M.Com/M.Sc MBA, MSW/MCA, PG-Diploma Courses. Contact: Manasa Correspondence College. Malleshwaram Circle Bangalore 9880498484/ 9738761169/ 9663555154.

JOB OPPORTUNITIES

Teachers/ Professors

AL-AMEEN EDUCATIONAL SOCIETY
Opp. Lalbagh Main Gate, Hosur Road, Bengaluru – 560027
REQUIRES
PRINCIPAL for : Al-Ameen Arts, Science & Commerce College, (Affiliated to Bengaluru City University)
Qualification: Ph.D in Science or Commerce
Experience: Minimum 15 Years
Salary: On the basis of experience and qualification
Apply with photocopies of all Degree certificates, credentials and a recent passport size photograph within 10 days to :
E – mail : bilalkhan.alameen@gmail.com

Accounts & Finance

WANTED MALE/ Female Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

BUSINESS

Business to Business

Finance

WE ARRANGE LOANS for Mortgage of Site, Buildings, Construction, Completion, Takeover of Loans in Co-op Banks and NBFC. Contact : 9353705002.

Business Offers

Finance

MSME LOANS Available for Any Startup Companies,Any Existing Companies NOTE:Also one Approved Loan Available Contact-7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164
*Conditions apply

ADMISSION CORNER

SHRI BALAJI LAW COLLEGE
APPROVED BY BAR COUNCIL OF INDIA, AFFILIATED TO KARNATAKA STATE LAW UNIVERSITY, HUBBALLI
GIRIYAPPA COMPLEX, F38, 80 FEET RING RD, NEAR PUNYA HOSPITAL KHB COLONY, BASAVESHWAR NAGAR, BENGALURU - 560079
ADMISSION OPEN
FOR THE ACADEMIC YEAR 2025-2026
5 YEARS BA., LL.B
&
3 YEARS LL.B

Eligibility for 5 years BA., LL.B: SSLC & PUC (10+2)
&
Eligibility for 3 years LL.B: ANY BACHELOR DEGREE (10+2+3)
VISIT www.shreebalajilawcollege.com
FOR ADMISSION CONTACT: 9731562369 9449253469 9845346935

CONNECT

GURU PURNIMA
Discourse in English
THE SACRED STRUGGLE
by
Shri Eswaran
Sunday, 13th July 2025
10:45 am - 11.45 am
Bharatiya Vidya Bhavan
Race Course Road
All are Welcome
90358 96665



Sponsored by JGi JAIN DEEMED-TO-BE UNIVERSITY

PERSONAL

Change of Name

I, INDIRA PRABHUDEV, Residing at #1203, H Block Prince Town Apartment, Shettihalli Main Road, Shettihalli, Jalahalli West, Bengaluru-15 have changed my name as INDIRA. C, vide affidavit dated 05/06/2025 before Notary N.Mahesha Bengaluru

I RIZWANA W/o Late Sheikh Ubed Ali, Aged about 63 Years, residing at RahmatNagar, Mulbagal Taluk, Kolar District. In my son's passport my name has been mentioned as Shahnaz Begum instead of Rizwana, Hence this affidavit Is to be produce before the concerned authorities to correct my name as Rizwana vide affidavit dated 10.07.2025 before Notary K.S. Munikrishna Mulbagal.

I, RAMESH BABU K, aged 47 years, R/at No.108/B, Sri Lakshmi Narasimha Krupa, 4th Main, Deshabandhu Nagar, Doddabommasandra, Vidyaranyapura, Bengaluru-560097. have changed my minor child name from GAURAV to GAURAV ARYAN RAM.R. vide affidavit dated 3/7/2025 sworn to before K.Ramegowda Advocate and Notary Bangalore.

PROPERTY CORNER

SALE UTTARAHALLI CIRCLE
FULLY FURNISHED FLATS
OC, CC & RERA Approved
2 BHK 70 Lacs & 3 BHK 95 Lacs
Call: 96069-47557 / 96322-37557

CHANGE OF NAME
I, **MOUNIKA KUBER SINGH** W/o Kuber Balaji Singh, Residing at 843 4th Cross, 9th Main, Near Masjid, KN Extension, Yeshwanthpur, Bengaluru 560022, have changed my name to **KSHATRIYA MOUNIKA BAI** vide affidavit dated 05.07.2025 before notary CHANDRAKALA, Bengaluru.

CHANGE OF NAME
I, JAYA, Daughter of G S Chourasia, presently residing at No.261, 7th Main, BEML Layout, 6th Stage, Thubarahalli, Bangalore-560066, and a permanent resident of Jabalpur, hereby declare that I am changing my name from **JAYA** to **JAYA CHOURASIA** vide affidavit dated 07-07-2025 Sworn before Notary Meer Hassan, Bangalore.

CHANGE OF NAME
I, **M. Sridhar** and my son **S. Sai Ashwath,** R/at 201, Shreyas Enclave, 3rd Floor, 41, 2nd Main, Bikasipura, Bengaluru 560061, have changed / expanded our surnames and shall be known as **Sridhar Muthukrishnan** & **Sai Ashwath Sridhar** respectively, vide affidavit dated 09.07.2025 before Notary Mohammed Hussain. K, Bengaluru.

I, KUMARAPPA, Residing at Dasakere Shettikere Hobali Tumkur District, Karnataka have changed my name as KUMARAIAH, vide affidavit dated 7/3/2025 before Notary R.Shivannachari, Bengaluru

CHANGE OF NAME
I, **ARYA S,** residing at No. 82/1, Ramachandrappa, Enclave, 3rd Cross, Thanisandra, Rachenahalli Main Road, Dr. SK Nagar Post, Bangalore-560077 have changed my name to **ARYA SRINIVAS** vide affidavit dated 10.07.2025 before notary Gangaraju B.N, Bangalore. Henceforth I shall be known as **ARYA SRINIVAS** only

ಆರ್ಕಿಡ್ Orchid TRAVEL & TOURS ಟ್ರಾವೆಲ್ ಅಂಡ್ ಟೂರ್ಸ್
ನಿಮ್ಮ ಪ್ರವಾಸ ನಮ್ಮೊಂದಿಗೆ
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
ರಿಯಾಯಿತಿ ದರದಲ್ಲಿ ಪ್ರವಾಸಗಳು 2025
98800 79588

7/11 ದಿನಗಳ ಸಿಂಗಾಪುರ ಮಲೇಶಿಯ–ಥೈಲ್ಯಾಂಡ್	9 ದಿನಗಳ ಗುಜರಾತ್ ಸ್ಪೆಷಲ್
8 ದಿನಗಳ ನೇಪಾಳ ಸ್ಪೆಷಲ್ (ಶ್ರೀ ಮುಕ್ತಿನಾಥ)	18 ದಿನಗಳ ಗ್ರಾಂಡ್ ಯು.ಕೆ. ಮತ್ತು ಯೂರೋಪ್ (10 ದೇಶಗಳು)
7/11 ದಿನಗಳ ವಿಯೆಟ್ನಾಮ್ ಮತ್ತು ಕಾಂಬೋಡಿಯಾ	7 ದಿನಗಳ ಜಪಾನ್
4 ದಿನಗಳ ಪೂರಿ ಜಗನ್ನಾಥ	6 ದಿನಗಳ ಶ್ರೀಲಂಕಾ (ರಾಮಾಯಣ ಸ್ಪೆಷಲ್)

CHANGE OF NAME
I, **R. SRINIVAS,** residing at No 4, Sy. No. 82/1, Ramachandrappa, Enclave, 3rd Cross, Thanisandra, Rachenahalli Main Road, Dr. SK Nagar Post, Bangalore-560077 have changed my minor daughter's name from **PREKSHA** to **PREKSHA SRINIVAS** vide affidavit dated 10.07.2025 before notary Gangaraju B.N, Bangalore. Henceforth she shall be known as **PREKSHA SRINIVAS** only

I, ANUSHA resident of B07, KPT Appts, No.46, Manivilas Gardens, 3rd Main Road, Kamalanagar, Bengaluru-560079 have changed my name to ANUSHA ANANDATHEERTHA GALAGALI video affidavit dated 10/07/2025 sworn before notary R.Basavaraja, Bengaluru

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್
10 Days only
SPOT CASH
ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ,
ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ
ತಕ್ಷಣ ಹಣ 11-07-2025 - 22-07-2025
ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್, ನಂ.58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ, 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
Call: 9632781499

ನಗರದಲ್ಲಿ ಇಂದು

ರಾಜ್ಯಮಟ್ಟದ ಕನ್ನಡ ನಾಟಕೋತ್ಸವ 'ರಂಗ ರಂಗೋಲಿ': 'ಪರ್ವ' ನಾಟಕ ಪ್ರದರ್ಶನ: ನಿರ್ದೇಶನ, ಅತಿಥಿ: ಪ್ರಕಾಶ್ ಬೆಳವಾಡಿ, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿ ಕಾವಲ್, ಬೆಳಿಗ್ಗೆ 10

ಬಜಾಜ್ ಎಂಜಿನಿಯರಿಂಗ್ ತರಬೇತಿ ಕೇಂದ್ರದ ಒಂದನೇ ವಾರ್ಷಿಕೋತ್ಸವ: ಅತಿಥಿಗಳು: ಡಿ. ಜವಾಹರ್, ಡಾ. ಶರಣಪ್ರಕಾಶ ಪಾಟೀಲ, ಸುಧಾಕರ್ ಗುಡಿಪತಿ, ಜೆ. ಸೂರ್ಯಪ್ರಸಾದ್, ಆಯೋಜನೆ ಮತ್ತು ಸ್ಥಳ: ಜಿಟಿಎಸ್ ವಿಶ್ವವಿದ್ಯಾಲಯ, ಬಸವನಗುಡಿ ಮೂರನೇ ಹಂತ, ಬೆಳಿಗ್ಗೆ 10

ಐಐಎಸ್‌ಸಿ ಘಟಿಕೋತ್ಸವ: ಅತಿಥಿ: ಮಂಜುಳಾ ಭಾರ್ಗವ, ಉಪಸ್ಥಿತಿ: ಕ್ರಿಸ್ ಗೋಪಾಲಕೃಷ್ಣನ್, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಐಐಎಸ್‌ಸಿ, ಸದಾಶಿವನಗರ, ಬೆಳಿಗ್ಗೆ 11

ಕಂಪ್ಯೂಟರ್ ತರಬೇತಿ ಕೇಂದ್ರದ ಉದ್ಘಾಟನೆ: ಪಿ.ಸಿ.ಮೋಹನ್, ಉಪಸ್ಥಿತಿ: ಪಾಲ್ ಮುದ್ದಾ, ಕೆ.ಜೆ. ಮೋಹನ್, ಆಯೋಜನೆ: ಸ್ನೇಹದೀಪ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್, ಸ್ಥಳ: ಶ್ರೀಧರ ಕಾರ್ನರ್, ರಾಮಕೃಷ್ಣಪ್ಪ ರಸ್ತೆ ಎರಡನೇ ಮಹಡಿ, ಕಾಕ್ಸ್‌ಟೌನ್, ಬೆಳಿಗ್ಗೆ 11

ನಾಡಪ್ರಭು ಕೆಂಪೇಗೌಡರ ಜಯಂತಿ, ಅಭಿನಂದನಾ ಸಮಾರಂಭ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಕೆ. ಶಿಕಿರಾಜ್ ಶೆಟ್ಟಿ, ಕೃಷ್ಣೇಗೌಡ ಎಂ., ಪ್ರೇಮಾ, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ಬೆಂಗಳೂರು ವಕೀಲರ ಸಂಘ, ಸ್ಥಳ: ಏಳನೇ ಮಹಡಿ, ವಕೀಲರ ಭವನ, ಸಿಟಿ ಸಿವಿಲ್ ಕೋರ್ಟ್‌ನ ಆವರಣ, ಮಧ್ಯಾಹ್ನ 1.30

ಪ್ರೇಮಾ

'ಒಂದು ದೇಶ, ಒಂದು ಚುನಾವಣೆ' ಯುವ ನಾಗರಿಕರ ಜಾಗೃತಿ ಕಾರ್ಯಕ್ರಮ: ಭಾಷಣಕಾರ: ಕೆ. ಅಣ್ಣಾಮಲೈ, ಆಯೋಜನೆ: ಅಭ್ಯುದಯ ಫೌಂಡೇಶನ್, ಸ್ಥಳ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ, ಸಂಜೆ 4

ಎಂ.ಪಿ. ಪ್ರಕಾಶ್ ಜಯಂತಿ: ಉದ್ಘಾಟನೆ: ಸದಾಶಿವಯ್ಯ ಬಿ., ಅಧ್ಯಕ್ಷತೆ: ಪಿ. ವಿಜಯಕುಮಾರ, ಉಪಸ್ಥಿತಿ: ಕೆ.ಪಿ. ನಾಗರಾಜಮೂರ್ತಿ, ದಿಬ್ಬೂರು ಎಸ್. ಗಿರೀಶ್, ಸುಧಾ ನಾಗರಾಜು, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಗಣ, ಎಂಟನೇ ವಿಭಾಗ, ಜಯನಗರ, ಸಂಜೆ 5.30

ಸ್ವರ-ಸಾರಂಗಿ: ಗಾಯನ: ನಿಶಾ ಕುಲಕರ್ಣಿ, ವಿಠಲ್ ಶ್ರೀವಾತ್ಸವ, ತಬಲಾ: ಕೌಶಿಕ ಭಟ್ಟ, ಹಾರ್ಮೋನಿಯಂ: ಅಭಯ ಹೆಗಡೆ, ಸಾರಂಗಿ ವಾದನ: ಮುರಾದ್ ಅಲಿ ಖಾನ್, ತಬಲಾ: ರವೀಂದ್ರ ಯಾವಗಲ್, ಆಯೋಜನೆ: ಸಪ್ತಕ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 6

ರಾಮಕೃಷ್ಣ ಸಂಗೀತ ಸೌರಭ: ಗಾಯನ: ವೆಂಕಟೇಶ್ ಕುಮಾರ, ತಬಲಾ: ರಘುನಾಥ ನಾಕೋಡ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಆಯೋಜನೆ ಮತ್ತು ಸ್ಥಳ: ಸ್ವಾಮಿ ವಿವೇಕಾನಂದ ಸಭಾಂಗಣ, ರಾಮಕೃಷ್ಣ ಮಠ, ದೊಡ್ಡಬಸವಣ್ಣ ರಸ್ತೆ, ಬಸವನಗುಡಿ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ- nagaradalli_indu@prajavani.co.in

ಸುರ್ಜೇವಾಲಾ ನೇತೃತ್ವದಲ್ಲಿ 16ಕ್ಕೆ ಮತ್ತೆ ಸಭೆ

ನಿಗಮ ಮಂಡಳಿ: 'ಕೈ' ಕಸರತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ ಹಾಗೂ 32 ನಿಗಮ ಮಂಡಳಿಗಳಿಗೆ ಅಧ್ಯಕ್ಷರ ನೇಮಕ ಪ್ರಕ್ರಿಯೆಗೆ ಅಂತಿಮ ರೂಪ ನೀಡಲು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಗುರುವಾರ ಸಂಜೆ ಸುದೀರ್ಘ ಸಭೆ ನಡೆಸಿದರು.

ಮೂವರು ನಾಯಕರು ಸಂಜೆ ಆರರಿಂದ ರಾತ್ರಿ 9 ಗಂಟೆಯವರೆಗೆ ಕಸರತ್ತು ನಡೆಸಿದರು. ಒಮ್ಮತದ ಅಭಿಪ್ರಾಯಕ್ಕೆ ಬರಲು ವಿಫಲರಾದರು. ಇದೇ 16ರಂದು ಸುರ್ಜೇವಾಲಾ ಅವರು ಬೆಂಗಳೂರಿಗೆ ಬರಲಿದ್ದು, ಅಂದು ಮತ್ತೆ ಸಭೆ ನಡೆಯಲಿದೆ.

ಮೊದಲ ಹಂತದಲ್ಲಿ 35 ನಿಗಮ ಮಂಡಳಿಗಳಿಗೆ ಶಾಸಕರನ್ನು ನೇಮಕ ಮಾಡಲಾಗಿದೆ. ಎರಡನೇ ಹಂತದಲ್ಲಿ 40 ನಿಗಮ ಮಂಡಳಿಗಳಿಗೆ ಪಕ್ಷದ ಮುಖಂಡರನ್ನು ನೇಮಿಸಲಾಗಿದೆ. ಉಳಿದ 32 ನಿಗಮ ಮಂಡಳಿಗಳಿಗೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ನೇಮಿಸುವ ಸಂಬಂಧ ಚರ್ಚಿಸಲಾಯಿತು.

ನಿಗಮ ಮಂಡಳಿಗಳಿಗೆ ನಿರ್ದೇಶಕರು ಹಾಗೂ ಸದಸ್ಯರ ನೇಮಕ ಆಗಬೇಕಿದೆ. ಸುಮಾರು 695 ಮುಖಂಡರು ಹಾಗೂ ಕಾರ್ಯಕರ್ತರನ್ನು ನೇಮಿಸಲು ಅವಕಾಶ ಇದೆ. ಈ ಮಂಡಳಿಗಳಲ್ಲಿ ವಿವಿಧ ಸಮುದಾಯಗಳಿಗೆ ನೀಡಿರುವ ಅವಕಾಶ, ಯಾವೆಲ್ಲ ಸಮುದಾಯಗಳಿಗೆ ಅವಕಾಶ ಸಿಕ್ಕಿಲ್ಲ ಎಂಬ ಬಗ್ಗೆ ಬೆಳಕು ಚೆಲ್ಲಿದ ಮುಖ್ಯಮಂತ್ರಿ, ಮುಂದಿನ ಹಂತದ ನೇಮಕದ ಸಂದರ್ಭದಲ್ಲಿ ಅವಕಾಶ ವಂಚಿತ ಸಮುದಾಯಗಳಿಗೆ ಆದ್ಯತೆ ನೀಡಬೇಕು ಎಂದರು.

ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳ ನಾಮನಿರ್ದೇಶನದ ವಿಷಯದಲ್ಲಿ ಮೂವರು ನಾಯಕರು ಸಹಮತಕ್ಕೆ ಬರಲಿಲ್ಲ. ವಿವಿಧ ಕ್ಷೇತ್ರಗಳ ನಾಲ್ವರ ಹೆಸರನ್ನು ಅಂತಿಮಗೊಳಿಸಿ ಹೈಕಮಾಂಡ್ ಅನುಮೋದನೆ ಪಡೆಯಲಾಗಿದೆ. ಆದರೆ, ರಾಷ್ಟ್ರೀಯ ನಾಯಕರೊಬ್ಬರ ಹಸ್ತಕ್ಷೇಪದಿಂದ ಈ ಪಟ್ಟಿಗೆ ತಡೆ ಬಿದ್ದಿದೆ. ಈ ನಾಲ್ವರ ಹೆಸರನ್ನೇ ಅಂತಿಮಗೊಳಿಸಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು. 'ಈ ಪಟ್ಟಿಯಲ್ಲಿ ನನ್ನ ಬೆಂಬಲಿಗರಿಗೆ ಅವಕಾಶ ಸಿಕ್ಕಿಲ್ಲ. ಹಿರಿಯ ಮುಖಂಡ ಬಿ.ಎಲ್.ಶಂಕರ್ ಅಥವಾ ಮುಖಂಡ ವಿನಯ್ ಕಾರ್ತಿಕ್ ಪೈಕಿ ಒಬ್ಬರಿಗೆ ಅವಕಾಶ ಕಲ್ಪಿಸಬೇಕು' ಎಂದು ಡಿ.ಕೆ. ಶಿವಕುಮಾರ್ ಪಟ್ಟು ಹಿಡಿದಿದ್ದಾರೆ.

ಸರಸ್ವತಿ ಶಾಲೆಯಲ್ಲಿ ಗುರುಪೂರ್ಣಿಮೆ

ಬೆಂಗಳೂರು: ರಾಜ್ಯ ಸ್ಪಂದನ ಸಿರಿ ವೇದಿಕೆ, ಫಾರ್ವರ್ಡ್-ಕರ್ನಾಟಕ, ವಿಶ್ವ ಹಿಂದೂ ಪರಿಷತ್ ಆಶ್ರಯದಲ್ಲಿ ಸರಸ್ವತಿ ವಿದ್ಯಾನಿಕೇತನ ಪ್ರೌಢಶಾಲೆಯಲ್ಲಿ ಗುರುವಾರ ಗುರುಪೂರ್ಣಿಮೆಯನ್ನು ಆಚರಿಸಲಾಯಿತು.

ಸ್ಪಂದನ ಸಿರಿ ವೇದಿಕೆ ಅಧ್ಯಕ್ಷೆ ಕಲಾವತಿ ಮಧುಸೂದನ ಮಾತನಾಡಿ, 'ಮನೆಯೇ ಮೊದಲ ಪಾಠ ಶಾಲೆ. ಮಕ್ಕಳಿಗೆ ಶಿಸ್ತು, ಸಂಯಮ ಮತ್ತು ಉತ್ತಮ ಬದುಕಿಗೆ ಬೇಕಾದ ವಿದ್ಯೆಗಳನ್ನು ಧಾರೆ ಎರೆಯುವಲ್ಲಿ ಶಾಲೆ ಪ್ರಮುಖ ಪಾತ್ರ ವಹಿಸುತ್ತದೆ. ಸಂಸ್ಕಾರಪೂರ್ಣ ವಾತಾವರಣ ಮಕ್ಕಳಿಗೆ ಅತ್ಯವಶ್ಯಕವಾಗಿದೆ. ಪರಿಸರ ಸಂರಕ್ಷಣೆಗೆ ಎಲ್ಲರೂ ಮುಂದಾಗಬೇಕು' ಎಂದು ಹೇಳಿದರು.

ಸರಸ್ವತಿ ವಿದ್ಯಾನಿಕೇತನ ಪ್ರೌಢಶಾಲೆಯಲ್ಲಿ ಗುರುಪೂರ್ಣಿಮೆ ಆಚರಿಸಲಾಯಿತು

ಶಾಲೆಯ ಅಧ್ಯಕ್ಷ ಡಿ. ವಿ. ಕೃಷ್ಣಪ್ಪ ಅಧ್ಯಕ್ಷತೆ ವಹಿಸಿದ್ದರು. ಪರಿಸರ ಕುರಿತ ಸಂವಾದದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರ ನೀಡಲಾಯಿತು. ಯಶೋದಾ ಸ್ವಾಗತಿಸಿದರು. ಮುಖ್ಯ ಶಿಕ್ಷಕ ಕೆ. ಆರ್. ನರಸಪ್ಪ ಮತ್ತು ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ಪವಿತ್ರಾ ವಂದಿಸಿದರು.

ರಾಜಸ್ವ ನಿರೀಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೌರ ಕಾರ್ಮಿಕರಿಗೆ ಸಿಂಧುತ್ವ ಪ್ರಮಾಣ ಪತ್ರ ನೀಡಲು ಅಕ್ರಮ ಸಂಭಾವನೆಯನ್ನು ನಿರೀಕ್ಷಿಸಿ 224 ಕಡತಗಳನ್ನು ತಡೆಹಿಡಿದಿದ್ದ ಚಾಮರಾಜಪೇಟೆ ವೃತ್ತದ ರಾಜಸ್ವ ನಿರೀಕ್ಷಕ ಮಂಜುನಾಥ ರೆಡ್ಡಿ ಅವರನ್ನು ಜಿಲ್ಲಾಧಿಕಾರಿಯವರು ಅಮಾನತು ಮಾಡಿದ್ದಾರೆ.

ಮಾಸಿಕ ಸಭೆಯಲ್ಲಿ ಹಲವು ಬಾರಿ ಚರ್ಚಿಸಿ ಈ ಬಗ್ಗೆ ತಿಳಿವಳಿಕೆ ನೀಡಿದ್ದರೂ, ಬಾಕಿ ಇರುವ ಪ್ರಕರಣಗಳನ್ನು ವಿಲೇವಾರಿ ಮಾಡಿರಲಿಲ್ಲ. ಹೀಗಾಗಿ, ಜಿಲ್ಲಾಧಿಕಾರಿ ಜಿ. ಜಗದೀಶ ಅವರು ಮಂಜುನಾಥ ರೆಡ್ಡಿ ಅವರನ್ನು ಅಮಾನತುಗೊಳಿಸಿದ್ದಾರೆ.

AIR FORCE SCHOOL, ASTE
GV Camp, Murugeshpalya, Bengaluru-560 017
(Ph:080-25276920/ 25272332)
invites applications for the posts of

S.No.	Post	Nature of Appointment
1	PRT	Contractual
2	Office Superintendent	Regular
3	Computer Lab Attendant	Contractual
4	Dance Teacher	Part-time
5	Helpers – Male/ Female	Regular and Panel

Details of qualifications and documents required to be checked on www.afsaste.edu.in. Hard copies of resume/CV, along with copies of education and experience testimonials, Aadhaar card, PAN card, one passport size photograph and covering letter stating the post applied for with complete contact details (i.e. present address, mobile nos, email id) should be submitted/posted to Air Force School, ASTE, GV Camp, Murugeshpalya, Bengaluru - 560 017. Last date of receipt is 25 Jul 2025 upto 1200 hrs.

School Management Committee (SMC) reserves the right of cancelling the selection process at any stage even after the advertisement without any notice or assigning any reason. Shortlisted candidates will be notified about the dates of the selection process through **e-mail only.**

MYSORE SILK SAREES
BIG SALE
Varamahalakshmi Sale - Upto 50% off

Venue:
Infantry Road, 84/85
Safina Plaza
Unit 02,03 & 04
Tasker Town,
Shivajinagar,
Bengaluru-560 001
Dates: 11,12,13 July
(Friday - Sunday)
Timing: 10am-9pm
Sri Chamundi Silks by Namita Kathare
Ph: +91 9663398130
Instagram ID: @mysoresilksareesss

PARAS

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ಎನ್‌ಐಎಎನ್‌ಪಿ/ಎಡಿವಿ–09–ಸಿಡಿಎನ್/2024–25

ಎಐಎನ್‌ಪಿ–ಎಲ್‌ಪಿಪಿಎಸ್ ಯೋಜನೆ ಅಡಿಯಲ್ಲಿ ತಾತ್ಕಾಲಿಕ ಆಧಾರದ ಮೇರೆಗೆ ಒಂದು ಯಂಗ್ ಪ್ರೊಫೆಷನಲ್ 1 ಹುದ್ದೆಗೆ ತೊಡಗಿಸಿಕೊಳ್ಳಲು 24.07.2025 ರಂದು ಬೆಳಗ್ಗೆ 10.30 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. ಕ್ರೋಢಿಕೃತ ಮಾಸಿಕ ಸಂಭಾವನೆ ರೂ. 30,000/–. ಅಗತ್ಯ ವಿದ್ಯಾರ್ಹತೆ ಎಂ.ಎಸ್ಸಿ. ಬಯೋಕೆಮಿಸ್ಟ್ರಿ. ವಿವರವಾದ ಜಾಹೀರಾತಿಗಾಗಿ ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/–
ಪ್ರಭಾರಿ ಆಡಳಿತಾಧಿಕಾರಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562101
ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427
ಇಮೇಲ್ – eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ:ಕಾಸಬ/ತಾಂಶಾ/ತಾಂಸ/ ಟೆಂಡರ್ ಪ್ರಕಟಣೆ ಸಂಖ್ಯೆ: 06/2025–26 ದಿ:10/07/2025
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ, ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗೆ ಕೆ.ಡಬ್ಲೂ 4 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಕೆ.ಪಿ.ಪಿ ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 21/07/2025 ಸಾಯಂಕಾಲ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ 22/07/2025 ರಂದು (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್
ವಿಶೇಷ ಆಸ್ತಿ ಮರುಪಡೆಯುವಿಕೆ ಶಾಖೆ/ಆಸ್ತಿ ರಿಕವರಿ ವರ್ಟಿಕಲ್ ಘಟಕ, 756 L, ಓವರಿಸೀಸ್ ಟವರ್ಸ್, ಅಣ್ಣಾ ಸಲೈ, ಚೆನ್ನೈ 600002

ತಗಾದೆ ಸೂಚನೆ

ಸೆಕ್ಷನ್ 13(2) ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ\2002 ರ ಅಡಿ ಸೂಚನೆ (ಇನ್ನು ಮುಂದೆ 'ಕಾಯಿದೆ' ಎನ್ನಲಾಗುವುದು)

ಆದರೆ ಕ್ರಿಯೆಟಿವ್ ಟೆಕ್ನಾಲಾಜಿಸ್ (ಸಾಲಗಾರ) ನೇರ ಕ್ರೆಡಿಟ್ ಅಡಿಯಲ್ಲಿ ರೂ.100 ಲಕ್ಷ ಆರ್ಥಿಕ ಸಹಾಯವನ್ನು ಮಂಜೂರು ಮಾಡಲಾಗಿದೆ. ಯೋಜನೆ (DCS), ಕೊರೊನಾ ಬಿಕ್ಕಟ್ಟಿನ ಸಮಯದಲ್ಲಿ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ರೂ.20 ಲಕ್ಷ ಸಕಾಲಿಕ WC ನೆರವು (ECGLS) 1.0 ಅಡಿಯಲ್ಲಿ (TWARIT), SMES (ARISE) ಯೋಜನೆಯ ಮೂಲಕ ಬಂಡವಾಳ ಹೂಡಿಕೆಯನ್ನು ಪುನರುಜ್ಜೀವನಗೊಳಿಸಲು ಸಹಾಯದ ಅಡಿಯಲ್ಲಿ ರೂ.154.70 ಲಕ್ಷ ಮತ್ತು ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ (SIDBI) 4E–ಹಣಕಾಸು ಯೋಜನೆಗಳ ಅಡಿಯಲ್ಲಿ ರೂ.141.21 ಲಕ್ಷ ಮತ್ತು ಹೇಳಲಾದ ಹಣಕಾಸಿನ ನೆರವಿನ ಮಂಜೂರಾತಿಯ ಭಾಗವಾಗಿ, ಸಾಲಗಾರ/ ಅಡಮಾನದಾರರು ಕೆಳಗೆ ತಿಳಿಸಲಾದ ಚರಾಸ್ತಿಗಳ ಮೇಲೆ SIDBI ಪರವಾಗಿ ಭದ್ರತಾ ಆಸಕ್ತಿಯನ್ನು ಸೃಷ್ಟಿಸಿದ್ದಾರೆ. ಬದ್ಧವಾದ ಡೀಫಾಲ್ಟ್‌ಗಳ ಪರಿಣಾಮವಾಗಿ, ಸಾಲಗಾರನ ಖಾತೆಯನ್ನು 09/12/2024 ರಂದು ಅನುತ್ಪಾದಕ ಆಸ್ತಿ (NPA) ಎಂದು ವರ್ಗೀಕರಿಸಲಾಗಿದೆ. SIDBIಯ ಅಧಿಕೃತ ಅಧಿಕಾರಿಯು 25/06/2025 ರಂದು ಸರ್ಫೇಸಿ ಕಾಯ್ದೆ, 2002 ರ ಸೆಕ್ಷನ್ 13(2) ರ ಅಡಿಯಲ್ಲಿ ಸಾಲಗಾರ/ ಹೈಪೋಥೆಕೇಟರ್/ ಜಾಮೀನುದಾರರ ವಿಳಾಸಗಳಿಗೆ ಬೇಡಿಕೆ ಸೂಚನೆಯನ್ನು ನೀಡಿದ್ದರು. ಕೆಳಗೆ ತಿಳಿಸಲಾದ ಸೂಚನೆಯನ್ನು ಸಾಲಗಾರರು ಮತ್ತು ಖಾತರಿದಾರರಿಗೆ ತಲುಪಿಸದ ಪರಿಣಾಮವಾಗಿ, ಈ ಸಾರ್ವಜನಿಕ ಸೂಚನೆಯನ್ನು ಪ್ರಕಟಿಸಲಾಗಿದೆ. ಈ ಪ್ರಕಟಣೆಯ ಮೂಲಕ, ಕೆಳಗೆ ತಿಳಿಸಲಾದ ಸಾಲಗಾರರು ಮತ್ತು ಖಾತರಿದಾರರು ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 60 ದಿನಗಳಲ್ಲಿ SIDBI ಗೆ ಪಾವತಿಸಲು ಕೋರಲಾಗಿದೆ, ಅದರ ಮೇಲಿನ ಬಡ್ಡಿಯೊಂದಿಗೆ ವಾರ್ಷಿಕ 2% ಒಪ್ಪಂದದ ದರದಲ್ಲಿ ಮತ್ತು ದಂಡ ಶುಲ್ಕಗಳೊಂದಿಗೆ, ಮಾಸಿಕ ಸಂಯುಕ್ತ ಬಡ್ಡಿಯ ಆಧಾರದ ಮೇಲೆ, ಇತರ ಶುಲ್ಕಗಳು ಮತ್ತು ಬಾಕಿ ಇರುವ ಹಣದೊಂದಿಗೆ ಪಾವತಿ ಮಾಡುವವರೆಗೆ, ಇದನ್ನು ಮಾಡದಿದ್ದರೆ, ಸುರಕ್ಷಿತ ಸಾಲಗಾರನಾಗಿ SIDBI ಸರ್ಫೇಸಿ ಕಾಯ್ದೆಯ ಅಧ್ಯಾಯ 3ರ ಅಡಿಯಲ್ಲಿ ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ಅಡಿಯಲ್ಲಿ ಒದಗಿಸಲಾದ ಒಂದು ಅಥವಾ ಹೆಚ್ಚಿನ ಕ್ರಮಗಳನ್ನು ಆಶ್ರಯಿಸುವ ಮೂಲಕ ತನ್ನ ಭದ್ರತಾ

ಆಸಕ್ತಿಯನ್ನು ಜಾರಿಗೊಳಿಸಲು ಅರ್ಹವಾಗಿರುತ್ತದೆ. ಕೆಳಗೆ ತಿಳಿಸಲಾದ ಬಾಕಿಗಳನ್ನು ವಸೂಲಿ ಮಾಡಲು SIDBI ಗೆ ಅಡಮಾನ ಇಡಲಾದ ಸುರಕ್ಷಿತ ಸ್ವತ್ತುಗಳು, ಅದರ ವೆಚ್ಚಗಳು ಮತ್ತು ಪರಿಣಾಮಗಳಿಗೆ ಸಂಬಂಧಿಸಿದಂತೆ ನಿಮ್ಮ ಸ್ವಂತ ಅಪಾಯದಲ್ಲಿ

ಕ್ರ.ಸಂ.	ಸಾಲಗಾರ(ರು)/ ಜಾಮೀನುದಾರರ(ರು) ಹೆಸರು ಮತ್ತು ವಿಳಾಸ	ಬಾಕಿ ಮೊತ್ತ
1.	**ಕ್ರಿಯೆಟಿವ್ ಟೆಕ್ನಾಲಾಜಿಸ್ (ಪಾಲುದಾರರು/ ಸಾಲಗಾರರು/ ಹೈಪೋಥೆಕೇಟರ್) ನೋಂದಾಯಿತ ಕಚೇರಿ:** ನೆಲ ಮಹಡಿ, ನಂ. 48/2, 3ನೇ ಮುಖ್ಯ ರಸ್ತೆ, ಕ್ಯೊನಿಕ್ಸ್ ಲೇಔಟ್, ತಿಗಳರಪಾಳ್ಯ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು (ಗ್ರಾಮೀಣ), ಕರ್ನಾಟಕ 560058. **ಕಾರ್ಖಾನೆ ವಿಳಾಸ: ಕ್ರಿಯೆಟಿವ್ ಟೆಕ್ನಾಲಾಜಿಸ್,** ನಂ. 39/2, 7ನೇ 'ಎ' ಕ್ರಾಸ್, 10ನೇ ಮುಖ್ಯ ರಸ್ತೆ, ಮುನೇಶ್ವರ ಲೇಔಟ್, ಬಾಲಾಜಿನಗರ, ತಿಗಳರಪಾಳ್ಯ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು, ಕರ್ನಾಟಕ, 560058. **ಮತ್ತು ಕ್ರಿಯೆಟಿವ್ ಟೆಕ್ನಾಲಾಜಿಸ್,** ನಂ. 39/3, 7ನೇ 'ಎ' ಕ್ರಾಸ್, 10ನೇ ಮುಖ್ಯ ರಸ್ತೆ, ಮುನೇಶ್ವರ ಲೇಔಟ್, ಬಾಲಾಜಿನಗರ, ತಿಗಳರಪಾಳ್ಯ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು, ಕರ್ನಾಟಕ, 560058. **ಶ್ರೀ ಸುನೀಲ್ ಕುಮಾರ್ ಬಿ ಬಾಗೇವಾಡಿ, (ಪಾಲುದಾರ/ಖಾತರಿದಾರ)**	10/06/2025 ರಂತೆ ಬಡ್ಡಿ, ಹೆಚ್ಚಿನ ಬಡ್ಡಿ, ದಂಡ ಶುಲ್ಕಗಳು ಮತ್ತು ವೆಚ್ಚ ಮತ್ತು ಶುಲ್ಕಗಳು ಸೇರಿದಂತೆ ರೂ. 2,69,77,997.30/– (ರೂಪಾಯಿ ಎರಡು ಕೋಟಿ ಅರವತ್ತೊಂಬತ್ತು ಲಕ್ಷ ಎಪ್ಪತ್ತೇಳು ಸಾವಿರದ ಒಂಬತ್ತು ನೂರ ತೊಂಬತ್ತೇಳು ಮತ್ತು ಮೂವತ್ತು ಪೈಸೆಗಳು ಮಾತ್ರ) ಒಪ್ಪಂದದ ದರದಲ್ಲಿ ಬಡ್ಡಿಯೊಂದಿಗೆ (ವಾರ್ಷಿಕವಾಗಿ 2% ದಂಡ ಶುಲ್ಕಗಳೊಂದಿಗೆ) 10/06/2025 ರಿಂದ ಜಾರಿಗೆ ಬರುವಂತೆ SIDBI ಗೆ ಪಾವತಿಸುವವರೆಗೆ.
2.	(i) ನಂ. 25, ನೆಲ ಮಹಡಿ, ಸುವರ್ಣ ನಗರ, 2ನೇ ಮುಖ್ಯ ರಸ್ತೆ, ಜಿ.ಎಂ ಕಾಟೇಜ್, ದೊಡ್ಡಬಿದರಕಲ್ಲು, ನಾಗಸಂದ್ರ, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ–560073. (ii) ನಂ. 26, ನೆಲ ಮಹಡಿ, ಸುವರ್ಣ ನಗರ, ಟಿ.ಪಿ. ಕೈಲಾಸಂ ರಸ್ತೆ, ಜಿ.ಎಂ. ಕಾಟೇಜ್ ದೊಡ್ಡಬಿದರಕಲ್ಲು, ನಾಗಸಂದ್ರ ಅಂಚೆ, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ 560073. **ಶ್ರೀಮತಿ ಬೇಬಿ ಸುನೀಲ್ ಬಾಗೇವಾಡಿ, (ಪಾಲುದಾರ/ಖಾತರಿದಾರ)**	
3.	(I) ನಂ.25, ನೆಲ ಮಹಡಿ, ಸುವರ್ಣ ನಗರ, 2ನೇ ಮುಖ್ಯ ರಸ್ತೆ, ಜಿ.ಎಂ ಕಾಟೇಜ್, ದೊಡ್ಡಬಿದರಕಲ್ಲು, ನಾಗಸಂದ್ರ, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ–560073. (ii) ನಂ.26, ನೆಲ ಮಹಡಿ, ಸುವರ್ಣ ನಗರ, ಟಿ.ಪಿ. ಕೈಲಾಸಂ ರಸ್ತೆ, ಜಿ.ಎಂ. ಕಾಟೇಜ್ ದೊಡ್ಡಬಿದರಕಲ್ಲು, ನಾಗಸಂದ್ರ ಅಂಚೆ, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ 560073. (iii) ನಂ.27, 5ನೇ ಕ್ರಾಸ್, ಕಲ್ಯಾಣ್ ನಗರ, ಟಿ ದಾಸರಹಳ್ಳಿ, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ – 560057.	

ಅಡಮಾನ ಇರಿಸಲಾದ ಚರ ಆಸ್ತಿಗಳ ವಿವರಗಳು

(i) ನೆಲ ಮಹಡಿ, ನಂ.48/2, 3ನೇ ಮುಖ್ಯ ರಸ್ತೆ, ಕ್ಯೊನಿಕ್ಸ್ ಲೇಔಟ್, ತಿಗಳರಪಾಳ್ಯ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು–560058 ರಲ್ಲಿ ಇರುವ ಯೋಜನೆಗೆ ಸಂಬಂಧಿಸಿದ ಸಾಲಗಾರರ ಎಲ್ಲಾ ಚಲಿಸಬಲ್ಲ ಆಸ್ತಿಗಳ ಮೇಲೆ SIDBI ಪರವಾಗಿ ಅಡಮಾನದ ಮೂಲಕ ಮೊದಲ ಶುಲ್ಕ ವಿಧಿಸಲಾಗುತ್ತದೆ. (ii) ಸಂಖ್ಯೆ 39(2), 7ನೇ 'ಎ' ಕ್ರಾಸ್, 10ನೇ ಮುಖ್ಯರಸ್ತೆ, ಮುನೇಶ್ವರ ಲೇಔಟ್, ಬಾಲಾಜಿನಗರ, ತಿಗಳರಪಾಳ್ಯ ಮುಖ್ಯರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು, ಕರ್ನಾಟಕ, ಅದರ ಚಲಿಸಬಲ್ಲ, ಸ್ಥಾವರ, ಯಂತ್ರೋಪಕರಣಗಳು ಸೇರಿದಂತೆ ಆದರೆ ಸೀಮಿತವಾಗಿಲ್ಲ. ಯಂತ್ರೋಪಕರಣಗಳ ಬಿಡಿಭಾಗಗಳು, ಉಪಕರಣಗಳು ಮತ್ತು ಪರಿಕರಗಳು, ಕಚೇರಿ ಉಪಕರಣಗಳು, ಕಂಪ್ಯೂಟರ್‌ಗಳು, ಪೀಠೋಪಕರಣಗಳು ಮತ್ತು ನೆಲೆವಸ್ತುಗಳು, ಮತ್ತು ಎಲ್ಲಾ ಇತರ ಚಲಿಸಬಲ್ಲ, ಪ್ರಸ್ತುತ ಮತ್ತು ಭವಿಷ್ಯದ (ಪುಸ್ತಕ ಸಾಲಗಳನ್ನು ಉಳಿಸಿ ಮತ್ತು ಹೊರತುಪಡಿಸಿ). ಉಪಕರಣಗಳು ಇತ್ಯಾದಿ ಪ್ರಮುಖ ವಸ್ತುಗಳನ್ನು ಕೆಳಗೆ ವಿವರಿಸಲಾಗಿದೆ – ಸ್ಥಾಪಿಸಲಾಗಿದೆಯೋ ಇಲ್ಲವೋ ಮತ್ತು ಈಗ ಸಡಿಲವಾಗಿ ಬಿದ್ದಿದೆಯೋ ಅಥವಾ ಪ್ರಕರಣಗಳಲ್ಲಿದೆಯೋ ಅಥವಾ ಈ ಉಡುಗೊರೆಗಳ ಭದ್ರತೆಯ ನಿರಂತರತೆಯ ಸಮಯದಲ್ಲಿ ಈಗ ಬಿದ್ದಿದೆಯೋ ಅಥವಾ ಸಂಗ್ರಹಿಸಲಾಗಿದೆಯೋ ಅಥವಾ ಇನ್ನು ಮುಂದೆ ಕಾಲಕಾಲಕ್ಕೆ ಸಾಲಗಾರರ ಆವರಣ, ಕಾರ್ಖಾನೆ, ಶೋರೂಮ್‌ಗಳು ಮತ್ತು ಗೋದಾಮುಗಳ ಒಳಗೆ ಅಥವಾ ಅವುಗಳ ಸುತ್ತಲೂ ಅಥವಾ ಬೇರೆಲ್ಲಿಯಾದರೂ ಅವುಗಳನ್ನು ಯಾವುದೇ ಪಕ್ಷವು ಸಾಲಗಾರರ ಆದೇಶ ಅಥವಾ ರೇವಣಿ ಅಥವಾ ಸಾಗಣೆಯ ಸಮಯದಲ್ಲಿ ಅಥವಾ ಸಮುದ್ರದಲ್ಲಿ ಅಥವಾ ವಿತರಣೆಯ ಸಮಯದಲ್ಲಿ, ಸಾಲಗಾರರ ಸ್ವಾಧೀನದಲ್ಲಿ ಹೇಗೆ ಮತ್ತು ಎಲ್ಲಿಯಾದರೂ ಮತ್ತು ಬದಲಿ ಅಥವಾ ಸೇರ್ಪಡೆಯ ಮೂಲಕ ತರಲಾಗುತ್ತದೆ ಅಥವಾ ಸಂಗ್ರಹಿಸಲಾಗುತ್ತದೆ ಅಥವಾ ಇರುತ್ತದೆ.

SIDBI ಗೆ ಅಡಮಾನ ಇಡಲಾದ ಪ್ರಮುಖ ಸ್ವತ್ತುಗಳ ಪಟ್ಟಿ:

ಕ್ರ.ಸಂ.	ಸ್ವತ್ತುಗಳ ವಿವರಣೆ	ಪ್ರಮಾಣ	ತಯಾರಕರು/ಪೂರೈಕೆದಾರರು
1.	AWEA ಮೆಕಾಟ್ರಾನಿಕ್ ಕಂಪನಿ ಲಿಮಿಟೆಡ್ ನಿಂದ ಆಮದು ಮಾಡಿಕೊಳ್ಳುವ ಮೂಲಕ AWEA LP 3021 ಸೇತುವೆ ಪ್ರಕಾರದ ಲಂಬ ಯಂತ್ರ ಕೇಂದ್ರ - USD 229,000.	1 ನಂ.	AWEA ಮೆಕಾಟ್ರಾನಿಕ್ ಕಂಪನಿ ಲಿಮಿಟೆಡ್
2.	CNC ವರ್ಟಿಕಲ್ ಯಂತ್ರ ಕೇಂದ್ರ ಮಾದರಿ CVM–1160 ಯಂತ್ರ SR ಸಂಖ್ಯೆ 04 3752	1 ನಂ.	ಮೆಸರ್ಸ್ ಕಾಸ್ಮೋಸ್ ಇಂಪೆಕ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
3.	CNC ವರ್ಟಿಕಲ್ ಯಂತ್ರ ಕೇಂದ್ರ ಮಾದರಿ CVM–1160 ಯಂತ್ರ SR ಸಂಖ್ಯೆ 04 3320	1 ನಂ.	ಮೆಸರ್ಸ್. ಕಾಸ್ಮೋಸ್ ಇಂಪೆಕ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
4.	ಮಿಲ್ಲಿಂಗ್ ಆಂಗಲ್ ಹೆಡ್ ಸ್ಪಿಂಡಲ್ ಬೋರ್ BT 50	1 ನಂ.	ಮೆಸರ್ಸ್. ರೇ ಮೆಕಾಟ್ರಾನಿಕ್ಸ್ & ಮೆಷಿನರಿ ಪ್ರೈವೇಟ್ ಲಿಮಿಟೆಡ್
5.	ಬೋಲೆ ಮೇಕ್ ಪ್ಲಾಸ್ಟಿಕ್ ಇಂಜೆಕ್ಷನ್ ಮೋಲ್ಡಿಂಗ್ ಯಂತ್ರ ಮಾದರಿ: BL250EKH/C980	1 ನಂ.	ಮೆಸರ್ಸ್. ರೇ ಮೆಷಿನರಿಸ್
6.	ಬೋಲೆ ಮೇಕ್ ಪ್ಲಾಸ್ಟಿಕ್ ಇಂಜೆಕ್ಷನ್ ಮೋಲ್ಡಿಂಗ್ ಯಂತ್ರ ಮಾದರಿ: BL120EKH/C360	1 ನಂ.	ಮೆಸರ್ಸ್. ರೇ ಮೆಷಿನರಿಸ್
7.	ಇತರ ಪರಿಕರಗಳೊಂದಿಗೆ API i ಸ್ಕ್ಯಾನ್ ಲೈಟ್ 3D ಸ್ಕ್ಯಾನರ್	1 ನಂ.	ಮೆಸ್ಸರ್ಸ್. ಎಪಿಐ ಟೆಕ್ನಿಕಲ್ ಸರ್ವೀಸಸ್ (ಇಂಡಿಯಾ ಪ್ರೈವೇಟ್ ಲಿಮಿಟೆಡ್)
8.	ಆಸ್ಕರ್ ಮ್ಯಾಕ್ಸ್ EDM ಯಂತ್ರ ಮಾದರಿ: S1060	1 ಜೊತೆ	ಮೆಸರ್ಸ್. ರೇ ಮೆಷಿನರಿಸ್
9.	ಪ್ಲಾಸ್ಟಿಕ್ ಇಂಜೆಕ್ಷನ್ ಮೋಲ್ಡಿಂಗ್ ಯಂತ್ರ ಮಾದರಿ ಸಂಖ್ಯೆ MA860/280G II	2 ನಂ.	ಮೆಸರ್ಸ್. ಹೈಟನ್ ಹುವಾಯುವಾನ್ ಮೆಷಿನರಿ ಇಂಡಿಯಾ ಪ್ರೈವೇಟ್ ಲಿಮಿಟೆಡ್.
10.	(i) SMF ಬ್ಯಾಟರಿಗಳು 12V/120AH	30ನಂ.	ಮೆಸರ್ಸ್. ಫಾರ್ಮ್ಯಾಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
	(ii) ಸ್ಟ್ಯಾಂಡ್‌ನೊಂದಿಗೆ ಫಾರ್ಮ್ಯಾಕ್ಸ್ 100 KVA ಆನ್‌ಲೈನ್ UPS.	1 ನಂ.	
11.	ಏರ್ ಕಂಪ್ರೆಸರ್ G11 FF A 7.5 TM 500L	1 ನಂ.	ಮೆಸರ್ಸ್. ಮಲ್ಟಿ ಟೆಕ್ ಏರ್ ಸೊಲ್ಯೂಷನ್ಸ್
12.	125 KVA ವಿದ್ಯುತ್ ಶಕ್ತಿ ಸೈಲೆಂಟ್ ವೋಲ್ವೋ ಐಷರ್ ಮೇಕ್ ಡೀಸೆಲ್ ಜೆನ್‌ಸೆಟ್ ಮಾದರಿ EE694-TCI	1 ಜೊತೆ	ಮೆಸ್ಸರ್ಸ್. ಟೆಕ್ನೋ ಪವರ್ ಸಿಸ್ಟಮ್ಸ್
13.	ಯುಎಸ್ ವೀಲರ್ ವರ್ಟಿಕಲ್ ಯಂತ್ರ ಕ್ಯಾಂಟರ್ ಮಾದರಿ: EM800A	1 ಜೊತೆ	ಮೆಸರ್ಸ್. ರೇ ಮೆಕಾಟ್ರಾನಿಕ್ಸ್ & ಮೆಷಿನರಿ ಪ್ರೈವೇಟ್ ಲಿಮಿಟೆಡ್

ಸಾಲಗಾರನು ಸುರಕ್ಷಿತ ಸ್ವತ್ತುಗಳನ್ನು ಪುನಃ ಪಡೆದುಕೊಳ್ಳಲು ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ, ಕಾಯ್ದೆಯ ಸೆಕ್ಷನ್ 13 ರ ಉಪವಿಭಾಗ (8) ರ ನಿಬಂಧನೆಗಳತ್ತ ಸಾಲಗಾರನ ಗಮನವನ್ನು ಆಹ್ವಾನಿಸಲಾಗಿದೆ.ಈ ಸೂಚನೆಯನ್ನು ಸ್ವೀಕರಿಸಿದ ನಂತರ, ಕಾಯ್ದೆಯ ಸೆಕ್ಷನ್13ರ ಉಪವಿಭಾಗ 13ರ ಪ್ರಕಾರ, ನೀವು (ಸಾಲಗಾರ/ಅಡಚಣೆದಾರ/ಖಾತರಿದಾರರು) SIDBI ಯ ಪೂರ್ವ ಲಿಖಿತ ಒಪ್ಪಿಗೆಯಿಲ್ಲದೆ ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ (ಸಾಮಾನ್ಯ ವ್ಯವಹಾರದ ಹಾದಿಯಲ್ಲಿ ಹೊರತುಪಡಿಸಿ) ಯಾವುದೇ ಸುರಕ್ಷಿತ .ಸ್ವತ್ತುಗಳನ್ನು ವರ್ಗಾಯಿಸುವುದನ್ನು ನಿಷೇಧಿಸಲಾಗಿದೆ ಮತ್ತು ನಿರ್ಬಂಧಿಸಲಾಗಿದೆ ಎಂಬುದನ್ನು ದಯವಿಟ್ಟು ಗಮನಿಸಿ ಮತ್ತು ಈ ಕಾಯ್ದೆಯ ಸೆಕ್ಷನ್ 13(13) ರಲ್ಲಿ ಒಳಗೊಂಡಿರುವ ಮೇಲಿನ ನಿಬಂಧನೆಯನ್ನು ಪಾಲಿಸದಿರುವುದು ಕಾಯ್ದೆಯ

ಸೆಕ್ಷನ್ 29 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ.ಈ ಶಾಸನಬದ್ಧ ಸೂಚನೆಯನ್ನು ಸದರಿ ಹಣಕಾಸಿನ ಸಹಾಯಕ್ಕೆ ಸಂಬಂಧಿಸಿದಂತೆ SIDBI ಗೆ ಕಾನೂನು ಅಥವಾ ಒಪ್ಪಂದ ಅಥವಾ ಎರಡರಲ್ಲೂ ಲಭ್ಯವಿರುವ ಎಲ್ಲಾ ಇತರ ಹಕ್ಕುಗಳು ಮತ್ತು ಪರಿಹಾರಗಳಿಗೆ ಹಾನಿಯಾಗದಂತೆ ನೀಡಲಾಗಿದೆ.

ದಿನಾಂಕ: 11.07.2025
ಸ್ಥಳ: ಚೆನ್ನೈ

ಸಹಿ/–, ಅಧಿಕೃತ ಅಧಿಕಾರಿ
ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/31/2025-26 ದಿನಾಂಕ: 09.07.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ.ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಮಂಜುನಾಥ್ ಬಿನ್ ರಾಜಣ್ಣ, #32, ಕೋಟೆ ಬೀದಿ, ವಾರ್ಡ್ ನಂ. 10, ಅತ್ತಿಬೆಲೆ ಗ್ರಾಮ, ಮತ್ತು ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–562107.	ಆನೇಕಲ್	ಅತ್ತಿಬೆಲೆ	ಅತ್ತಿಬೆಲೆ	325/2	0–30	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ'** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

"ಸದಸ್ಯ ಕಾರ್ಯದರ್ಶಿರವರ ದಿನಾಂಕ: 17.03.2025ರ ಅಧಿಕೃತ ಜ್ಞಾಪನ ಪತ್ರದಲ್ಲಿ ಅಧಿಕಾರ ಪ್ರತ್ಯೋಜಿಸಿರುವಂತೆ ಸಹಿ ಮಾಡಿದೆ."

ಸಹಿ/–,
ಸದಸ್ಯ ಕಾರ್ಯದರ್ಶಿಗಳ ಪರವಾಗಿ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಎಲ್‌ಸಿ/1733/2025–26

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ CENTUM
CIN: L85110KA1993PLC013869
ನೋಂದಾಯಿತ ಕಛೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ,
ಯಲಹಂಕ ನ್ಯೂ ಟೌನ್, ಬೆಂಗಳೂರು – 560 106
Tel: 080 - 4143 6000 Fax: 080 - 4143 6005
Email: investors@centumelectronics.com Website: www.centumelectronics.com

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ 32ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, **ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ("ಕಂಪನಿ") ಷೇರುದಾರರ 32ನೇ (ಮೂವತ್ತೆರಡನೆಯ)** ವಾರ್ಷಿಕ ಸಾಮಾನ್ಯ ಸಭೆ **(AGM)** ಮಂಗಳವಾರ, **ಆಗಸ್ಟ್ 05, 2025** ರಂದು ಬೆಳಿಗ್ಗೆ **10:30 IST** ಕ್ಕೆ **ನಡೆಯಲಿದೆ. ಇದನ್ನು ವೀಡಿಯೊ ಕಾನ್ಫರೆನ್ಸಿಂಗ್ ("VC") ಅಥವಾ ಇತರ ಆಡಿಯೋ ವಿಷುಯಲ್ ಮೀನ್ಸ್ ("OAVM")** ಮೂಲಕ ನಡೆಸಲಾಗುವುದು ಮತ್ತು ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯಲ್ಲಿ ನಿಗದಿಪಡಿಸಿದಂತೆ, ಇದನ್ನು ಷೇರುದಾರರಿಗೆ [ಜುಲೈ 4, 2025 ರಂದು ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ರೊಂದಿಗೆ ಇ–ಮೇಲ್ ವಿಳಾಸಗಳನ್ನು ನೋಂದಾಯಿಸಿರುವ ಷೇರುದಾರರಿಗೆ] ಇ–ಮೇಲ್ ಮಾಡಲಾಗಿದೆ. ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಹಾಗು ಕಂಪನಿಯಲ್ಲಿ ನೋಂದಾಯಿಸದ ಎಲ್ಲಾ ಷೇರುದಾರರಿಗೆ ಕಂಪನಿಯು ಪತ್ರಗಳನ್ನು ನೀಡಿದೆ, ಅಲ್ಲಿ ಷೇರುದಾರರು ವಾರ್ಷಿಕ ವರದಿಯನ್ನು ಪಡೆಯಬಹುದು.

32ನೇ ವಾರ್ಷಿಕ ಮಹಾಸಭೆಯ ಸೂಚನೆ ಮತ್ತು 2024-25ರ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ https://www.centumelectronics.com/annual-report/ ನಲ್ಲಿ, RTA ವೆಬ್‌ಸೈಟ್ https://evoting.kfintech.com ನಲ್ಲಿ ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ನಲ್ಲಿ ಲಭ್ಯವಿದೆ.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("MCA") ಸೆಪ್ಟೆಂಬರ್ 19, 2024 ರ ಇತ್ತೀಚಿನ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024 (ಒಟ್ಟಾರೆಯಾಗಿ "MCA ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ) ಸೇರಿದಂತೆ ತನ್ನ ಸುತ್ತೋಲೆಗಳ ಮೂಲಕ, ಷೇರುದಾರರ ಭೌತಿಕ ಉಪಸ್ಥಿತಿಯಿಲ್ಲದೆ VC ಅಥವಾ OAVM ಮೂಲಕ ವಾರ್ಷಿಕ ಮಹಾಸಭೆಯನ್ನು ನಡೆಸಲು ಅನುಮತಿ ನೀಡಿದೆ. ಕಂಪನಿಗಳ ಕಾಯ್ದೆ, 2013 ("ಕಾಯ್ದೆ") ನಿಬಂಧನೆಗಳ ಅನುಸಾರವಾಗಿ, ಮತ್ತು ಸೆಕ್ಯುರಿಟೀಸ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (SEBI) ಹೊರಡಿಸಿದ ವಿವಿಧ ಸುತ್ತೋಲೆಗಳು, ಹಾಗು ಅಕ್ಟೋಬರ್ 3, 2024 ರ ಇತ್ತೀಚಿನ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 ಮತ್ತು ಸೆಕ್ಯುರಿಟೀಸ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ("SEBI ಲಿಸ್ಟಿಂಗ್ ರೆಗ್ಯುಲೇಷನ್ಸ್") ಮತ್ತು MCA ಸುತ್ತೋಲೆಗಳ ನಿಯಮ 44 ಸೇರಿದಂತೆ, ಕಂಪನಿಯ 32 ನೇ (ಮೂವತ್ತೆರಡು) ವಾರ್ಷಿಕ ಮಹಾಸಭೆಯನ್ನು VC/OAVM ಮೂಲಕ ನಡೆಸಲಾಗುತ್ತಿದೆ.

ಕಾಯಿದೆಯ ನಿಬಂಧನೆಗಳಿಗೆ ಅನುಸಾರವಾಗಿ, ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು, MCA ಸುತ್ತೋಲೆಗಳು ಮತ್ತು SEBI ಸುತ್ತೋಲೆ ಸಂಖ್ಯೆ. SEBI/HO/CFD/CFD-PoD-2/CIR/2024/133 ದಿನಾಂಕ ಅಕ್ಟೋಬರ್ 3, 2024 ರಂದು, ವಾರ್ಷಿಕ ಮಹಾಸಭೆಯ ಸೂಚನೆ ಮತ್ತು 2024–25 ರ ಹಣಕಾಸು ವರ್ಷದ ವಾರ್ಷಿಕ ವರದಿಯ ಎಲೆಕ್ಟ್ರಾನಿಕ್ ಪ್ರತಿಗಳನ್ನು ಎಲ್ಲಾ ಷೇರುದಾರರಿಗೆ ಇ–ಮೇಲ್ ಮೂಲಕ ಮಾತ್ರ ಕಳುಹಿಸಲಾಗಿದೆ.

ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 91 ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ಮತ್ತು SEBI (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ರ ನಿಯಮ 42 ರ ನಿಬಂಧನೆಗಳ ಪ್ರಕಾರ, ಕಂಪನಿಯು ಜುಲೈ 25, 2025 ರ ಶುಕ್ರವಾರವನ್ನು ಈಕ್ವಿಟಿ ಷೇರುಗಳ ಮೇಲಿನ ಅಂತಿಮ ಲಾಭಾಂಶಕ್ಕೆ ಅರ್ಹರಾಗಿರುವ ಸದಸ್ಯರನ್ನು ನಿರ್ಧರಿಸಲು ದಾಖಲೆ ದಿನಾಂಕವಾಗಿ ನಿಗದಿಪಡಿಸಿದೆ, ಇದು 2024–25 ರ ಹಣಕಾಸು ವರ್ಷದ ಕಂಪನಿಯ ಮುಂಬರುವ ವಾರ್ಷಿಕ ಮಹಾಸಭೆಯಲ್ಲಿ ಘೋಷಿಸಿದರೆ ಮಾತ್ರ. ಅಂತಹ ಲಾಭಾಂಶವನ್ನು ವಾರ್ಷಿಕ ಮಹಾಸಭೆಯ ದಿನಾಂಕದಿಂದ 30 ದಿನಗಳ ಒಳಗೆ ಪಾವತಿಸಲಾಗುತ್ತದೆ.

ಕಂಪನಿಗಳ ಕಾಯ್ದೆ 2013 ರ ಸೆಕ್ಷನ್ 108 ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014 ರ ನಿಯಮ 20, SEBI (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015 ರ ನಿಯಮ 44 ಮತ್ತು ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡಗಳಿಗೆ ಅನುಸಾರವಾಗಿ, ಕಂಪನಿಯು ತನ್ನ ಸದಸ್ಯರಿಗೆ 32 ನೇ ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ನಿಗದಿಪಡಿಸಿದಂತೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ವಾರ್ಷಿಕ ಮಹಾಸಭೆಯಲ್ಲಿ ರಿಮೋಟ್ ಇ–ವೋಟಿಂಗ್ ಮತ್ತು ಇನ್‌ಸ್ಟಾ ಪೋಲ್ ವ್ಯವಸ್ಥೆಯ ಮೂಲಕ ವ್ಯವಹಾರಗಳ ಮೇಲೆ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಸೌಲಭ್ಯವನ್ನು ಒದಗಿಸುತ್ತಿದೆ.

ಎಲ್ಲಾ ಸದಸ್ಯರಿಗೆ ಈ ಕೆಳಗಿನ ಮಾಹಿತಿಯನ್ನು ನೀಡಲಾಗಿದೆ:

1. ಸದಸ್ಯರು ತಮ್ಮ ರಿಮೋಟ್ ಇ–ವೋಟಿಂಗ್ ರುಜುವಾತುಗಳನ್ನು ಬಳಸಿಕೊಂಡು https://emeetings.kfintech.com ನಲ್ಲಿ VC/OAVM ಮೂಲಕ 32 ನೇ ವಾರ್ಷಿಕ ಮಹಾಸಭೆಗೆ ಹಾಜರಾಗಬಹುದು.
2. VC / OAVM ಮತ್ತು ಇನ್‌ಸ್ಟಾ ಪೋಲ್ ಪ್ರಕ್ರಿಯೆಯ ಮೂಲಕ ಭಾಗವಹಿಸುವ ಸೂಚನೆಗಳನ್ನು 32 ನೇ ವಾರ್ಷಿಕ ಮಹಾಸಭೆಯ ಸೂಚನೆಯ ಭಾಗವಾಗಿ ಒದಗಿಸಲಾಗಿದೆ.
3. **ಜುಲೈ 29, 2025 ರ ಮಂಗಳವಾರ**ದಂದು ಠೇವಣಿದಾರರು ನಿರ್ವಹಿಸುವ ಫಲಾನುಭವಿ ಮಾಲೀಕರ ದಾಖಲೆಯಲ್ಲಿ ಸದಸ್ಯರ ನೋಂದಣಿಯಲ್ಲಿ ಹೆಸರುಗಳನ್ನು ಹೊಂದಿರುವ ಸದಸ್ಯರು ಮಾತ್ರ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಪಡೆಯಲು ಅಥವಾ 32 ನೇ ವಾರ್ಷಿಕ ಮಹಾಸಭೆಯಲ್ಲಿ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. **ಕಟ್–ಆಫ್ ದಿನಾಂಕ**ದಂದು ಸದಸ್ಯರಲ್ಲದವರು ವಾರ್ಷಿಕ ಮಹಾಸಭೆ ಸೂಚನೆಯನ್ನು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು.
4. **ರಿಮೋಟ್ ಇ–ವೋಟಿಂಗ್ ಅವಧಿಯು ಆಗಸ್ಟ್ 02, 2025 ರ ಶನಿವಾರ ಬೆಳಿಗ್ಗೆ 9.00 ಗಂಟೆಗೆ ಪ್ರಾರಂಭವಾಗಿ ಆಗಸ್ಟ್ 04, 2025 ರ ಸೋಮವಾರ ಸಂಜೆ 5.00 ಗಂಟೆಗೆ** ಕೊನೆಗೊಳ್ಳುತ್ತದೆ. ನಂತರ ಮತದಾನಕ್ಕಾಗಿ ರಿಮೋಟ್ ಇ–ವೋಟಿಂಗ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಸದಸ್ಯರು ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರು ಅದನ್ನು ನಂತರ ಬದಲಾಯಿಸಲು ಅನುಮತಿಸಲಾಗುವುದಿಲ್ಲ.
5. ಒಂದಾನುವೇಳೆ ಯಾರಾದರೂ, ವಾರ್ಷಿಕ ಮಹಾಸಭೆ ಸೂಚನೆ ರವಾನೆಯ ನಂತರ ಕಂಪನಿಯ ಸದಸ್ಯರಾಗಿದ್ದರೆ, ಆದರೆ ರಿಮೋಟ್ ಇ–ಮತದಾನಕ್ಕಾಗಿ ಕಟ್–ಆಫ್ ದಿನಾಂಕದಂದು ಅಥವಾ ದಿನಾಂಕದ ಮೊದಲು, ಅಥವಾ ಸೂಚನೆ ರವಾನೆಯ ನಂತರ ಇಮೇಲ್ ವಿಳಾಸವನ್ನು ನೋಂದಾಯಿಸಿದ್ದರೆ, ಅಂತಹ ಸದಸ್ಯರು ಇ–ಮತದಾನಕ್ಕಾಗಿ ಕಾರ್ಯವಿಧಾನ ಮತ್ತು ಸೂಚನೆಗಳಲ್ಲಿ ಒದಗಿಸಲಾದ ರೀತಿಯಲ್ಲಿ ಯೂಜರ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯಬಹುದು.
6. ವಾರ್ಷಿಕ ಮಹಾಸಭೆಗೆ ಮೊದಲು ರಿಮೋಟ್ ಇ–ವೋಟಿಂಗ್ ಮೂಲಕ ಮತ ಚಲಾಯಿಸಿದ ಸದಸ್ಯರು VC/ OAVM ಮೂಲಕ ವಾರ್ಷಿಕ ಮಹಾಸಭೆಗೆ ಹಾಜರಾಗಬಹುದು ಆದರೆ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ. ರಿಮೋಟ್ ಇ–ವೋಟಿಂಗ್ ಮೂಲಕ ಮತ ಚಲಾಯಿಸದ ಮತ್ತು VC/ OAVM ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಹಾಜರಿರುವ ಸದಸ್ಯರು ವಾರ್ಷಿಕ ಮಹಾಸಭೆಯ ಸಮಯದಲ್ಲಿ ಲಭ್ಯವಿರುವ ಇನ್‌ಸ್ಟಾ ಪೋಲ್ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.
7. ವಾರ್ಷಿಕ ಮಹಾಸಭೆಯ ಸಮಯದಲ್ಲಿ ರಿಮೋಟ್ ಇ–ವೋಟಿಂಗ್ ಮತ್ತು ವಾರ್ಷಿಕ ಮಹಾಸಭೆಯ ಇ–ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಕಂಪನಿಯು ಶ್ರೀ ಎಸ್.ಪಿ. ನಾಗರಾಜನ್ ಅವರನ್ನು ಪರಿಶೀಲನಾಕಾರರಾಗಿ ನೇಮಿಸಿದೆ.
8. ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಎಲೆಕ್ಟ್ರಾನಿಕ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಮೂಲಕ ಡೆಪಾಸಿಟರಿಯೊಂದಿಗೆ ನೋಂದಾಯಿಸಬೇಕು ಮತ್ತು ಭೌತಿಕ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ಕಂಪನಿಯ ಆರ್.ಟಿ.ಎ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಮ್ ಟವರ್ ಬಿ, ಪ್ಲಾಟ್ ಸಂಖ್ಯೆ 31 & 32, ಹಣಕಾಸು ಜಿಲ್ಲೆ ನಾನಕ್ರಾಮ್‌ಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ – 500 032 ಗೆ ಬರೆಯುವ ಮೂಲಕ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ.
9. ವಾರ್ಷಿಕ ಮಹಾಸಭೆಯ ಮೊದಲು ಅಥವಾ ಸಮಯದಲ್ಲಿ ಯಾವುದೇ ತಾಂತ್ರಿಕ ನೆರವು ಅಥವಾ ಬೆಂಬಲದ ಅಗತ್ಯವಿರುವ ಸದಸ್ಯರು KFin ಟೆಕ್ನಾಲಜೀಸ್ ಲಿಮಿಟೆಡ್ ನ ಟೋಲ್ ಫ್ರೀ ಸಂಖ್ಯೆ 1800–309–4001 ಗೆ ಸಂಪರ್ಕಿಸಲು ಅಥವಾ evoting@kfintech.com ನಲ್ಲಿ ಅವರಿಗೆ ಬರೆಯಲು ಕೋರಲಾಗಿದೆ. ಸದಸ್ಯರು ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ಶ್ರೀ ಎನ್ ಶಿವಕುಮಾರ್ ಅವರನ್ನು ಹಿಂದೆ ತಿಳಿಸಿದ RTA ವಿಳಾಸದಲ್ಲಿ ಅಥವಾ shivakumar.n@kfintech.com ಅಥವಾ 1800–309–4001 ನಲ್ಲಿ ಸಂಪರ್ಕಿಸಬಹುದು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ನ ಪರವಾಗಿ
ಸಹಿ/–
ಇಂದು ಎಚ್ ಎಸ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 10ನೇ ಜುಲೈ, 2025

ವಿಜಯ್, ಪ್ರಿಯಾಂಕ

ದೂರ ತೀರ ಯಾನ

ಮಂಸೋರೆ ಹೊಸ ಯಾನ

ಮಂಸೋರೆ ನಿರ್ದೇಶನದ ‘ದೂರ ತೀರ ಯಾನ’ ಇಂದು(ಜುಲೈ 11) ತೆರೆಕಂಡಿದೆ. ಹರಿವು, ನಾತಿಚರಾಮಿ, ಆ್ಯಕ್ಟ್ 1978 ಹೀಗೆ ಭಿನ್ನ ಭಿನ್ನ ಮಾದರಿಯ ಚಿತ್ರಗಳಿಂದಲೇ ಗುರುತಿಸಿಕೊಂಡಿರುವ ಮಂಸೋರೆ ಹೊಸ ಪ್ರಯತ್ನವಿದು. ತಮ್ಮ ಸಿಗ್ನೇಚರ್ ಅಂಶಗಳ ಜೊತೆಗೆ ನವಪೀಳಿಗೆಯ ಪ್ರೇಮಕಥೆಯೊಂದನ್ನು ಹೇಳುತ್ತಿರುವ ಇವರ ಹೊಸ ಹೆಜ್ಜೆ ಹಿಂದಿರುವ ಕಾರಣಗಳು ಇಲ್ಲಿವೆ...

- ಅಭಿಲಾಷ್ ಪಿ.ಎಸ್.

• ಸಿನಿಮಾ ಮಾದರಿ ಬದಲಾವಣೆಯ ಆಲೋಚನೆ ಬಂದಿದ್ದು ಏತಕ್ಕಾಗಿ?

ನಾನು ಇಲ್ಲಿಯವರೆಗೆ ಮಾಡಿದ ಸಿನಿಮಾಗಳಲ್ಲಿ ಬೇರೆ ಬೇರೆ ಜಾನರ್‌ಗಳಿತ್ತು. ಇವುಗಳಲ್ಲಿ ಕಥೆಗಳು ಬದಲಾದರೂ, ಕಥೆ ಹೇಳುವ ರೀತಿ ಭಿನ್ನವಾಗಿದ್ದರೂ ಪ್ರಸ್ತುತಿಯಲ್ಲಿ ಕೆಲವು ಸಾಮ್ಯತೆಗಳು ಇದ್ದವು. ಈ ಮಾದರಿಯ ಸಿನಿಮಾಗಳು ಒಟಿಟಿ, ಚಿತ್ರೋತ್ಸವಗಳ ಪ್ರೇಕ್ಷಕರಿಗೆ ಬಹುಬೇಗನೆ ಕನೆಕ್ಟ್ ಆಯಿತು. ಚಿತ್ರಮಂದಿರಗಳಲ್ಲಿ ಇಂತಹ ಸಿನಿಮಾಗಳನ್ನು ನೋಡಲು ಜನರು ಇನ್ನೂ ಮನಸ್ಸು ಮಾಡುತ್ತಿಲ್ಲ. ಅವರನ್ನು ನಾವಿನ್ನೂ ಈ ಮಾದರಿಯ ಸಿನಿಮಾ ನೋಡಿಸಲು ತಯಾರು ಮಾಡಿಲ್ಲ.

ಕಳೆದ ಕೆಲವು ವರ್ಷಗಳಲ್ಲಿ ಚಿತ್ರಮಂದಿರಗಳಲ್ಲಿ ನೋಡಬೇಕಾದ ಸಿನಿಮಾ, ಒಟಿಟಿಯಲ್ಲಿ ನೋಡಬಹುದಾದ ಸಿನಿಮಾ ಎಂಬ ವಿಭಾಗ ಪ್ರಾರಂಭವಾಯಿತು. ಇದು ಬೆಳೆದು ಒಟಿಟಿ–ಚಿತ್ರಮಂದಿರಗಳ ಅಂತರ ಹೆಚ್ಚಿಸಿದೆ. ಹೆಚ್ಚಿನ ಸಿನಿಮಾಗಳನ್ನು ಒಟಿಟಿಗೆಂದೇ ತಯಾರು ಮಾಡಿದ ಕಾರಣ ಚಿತ್ರಮಂದಿರಗಳಿಗೆ ಬರುವ ಪ್ರೇಕ್ಷಕರ ಸಂಖ್ಯೆ ಇಳಿಯಿತು. ಒಟಿಟಿಯವರು ಸಿನಿಮಾಗಳನ್ನು ಹಲವು ಷರತ್ತುಗಳ ಮೂಲಕ ನಿಯಂತ್ರಣ ಮಾಡಲು ಪ್ರಾರಂಭಿಸಿದರು.

ಈಗ ಸಿನಿಮಾ ಎಂದರೆ ಮೊದಲು ವಹಿವಾಟು. ನಂತರ ಕಲೆ, ಸಿದ್ಧಾಂತ ಎಲ್ಲವೂ ಬರುತ್ತದೆ. ಕ್ಯಾಮೆರಾ ಎತ್ತಿದ ತಕ್ಷಣ ಹಣ ಬೇಕೇ ಬೇಕು. ಆ ಹಣ ವಾಪಸ್ ಪಡೆಯಲು ಈ ಹಿಂದೆ ಹಲವು ಮಾರ್ಗಗಳಿದ್ದವು. ಚಿತ್ರೋತ್ಸವಗಳಿಗೆ ಸಿನಿಮಾ ಹೋದರೆ ಸಬ್ಸಿಡಿ ಬರುತ್ತಿತ್ತು, ಪ್ರಶಸ್ತಿಗಳಲ್ಲಿ ಹಣ ಬರುತ್ತಿತ್ತು. ಚಿತ್ರಮಂದಿರಗಳ ಮೇಲೆಯೇ ಅವಲಂಬಿತವಾಗುವ ಪ್ರಮೇಯವಿರುತ್ತಿರಲಿಲ್ಲ. ಈಗ ಸಬ್ಸಿಡಿ ವಿಳಂಬವಾಗುತ್ತಿದೆ. ಸರ್ಕಾರ ನೀಡುತ್ತಿರುವ ಸಬ್ಸಿಡಿಯಲ್ಲಿ ಸಿನಿಮಾ ಮಾಡುವುದೇ ಕಷ್ಟವಿದೆ. ಈ ಸಮಯದಲ್ಲಿ ಸಿನಿಮಾ ಮಾಡಲೇಬೇಕು, ಆದರೆ ಬೇರೆ ರೀತಿಯಲ್ಲಿ ಹಣ ಮರುಪಡೆಯುವ ಆಯ್ಕೆ ಇಲ್ಲವೆಂದಾಗ ನಾನು ಮಾಡಿದ ತಪ್ಪಿನ ಅರಿವಾಯಿತು.

ಚಿತ್ರಮಂದಿರಗಳಲ್ಲಿ ಜನರನ್ನು ಕೂರಿಸುವ ಮಾದರಿಗಿಂತ ಅವರಿಗೆ ನನ್ನ ಸಿಗ್ನೇಚರ್ ಸ್ಟೈಲ್ ಸಿನಿಮಾ ತೋರಿಸುತ್ತಿದ್ದೆ. ‘19.20.21’ ಬಳಿಕ ಆದ ಅನುಭವಗಳಿವು. ಆ ಸಂದರ್ಭದಲ್ಲಿ ಪ್ರೇಕ್ಷಕರಿಗೆ ಒಗ್ಗಿರುವ ಮಾದರಿಯಲ್ಲಿ ನನ್ನ ಕಥೆಗಳನ್ನು ಹೇಳಿದರೆ ಪ್ರೇಕ್ಷಕರನ್ನೇ ಹಣ ಮರುಪಡೆಯುವ ಮೊದಲ ಆಯ್ಕೆಯಾಗಿಸಬಹುದು ಎಂದು ಅರಿತೆ. ಹಾಡುಗಳು, ಕಲರ್‌ಫುಲ್ ಆಗಿರುವ ಛಾಯಾಚಿತ್ರಗ್ರಹಣ ಮುಂತಾದ ಅಂಶಗಳನ್ನು ಸೇರಿಸಿಕೊಂಡು ಕಥೆ ಹೇಳಿದರೆ ಅವರು ಬೇಗ ಕನೆಕ್ಟ್ ಆಗುತ್ತಾರೆ ಎಂದರಿತೆ.

• ಈ ಆಲೋಚನೆ ಹಿಂದಿರುವ ಸೂತ್ರವೇನು?

ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ತಲುಪೋಣ ಎಂದು ಈ ಕಥೆ ಆರಿಸಿಕೊಂಡಿದ್ದೆ. ಈ ಮಾದರಿಯಲ್ಲಿ ನನ್ನ ಕಥೆಗಳನ್ನು ಹೇಳಿ ಪ್ರೇಕ್ಷಕರ ಬ್ಯಾಂಕಿಂಗ್ ಮಾಡಿಕೊಂಡರೆ ದೀರ್ಘಾವಧಿಯವರೆಗೆ ಸಿನಿಮಾ ಮಾಡಬಹುದು. ಒಟಿಟಿಯ ಕಾರ್ಪೊರೇಟ್ ನಿಯಮಗಳು ಯಾವಾಗ ಬೇಕಾದರೂ ಬದಲಾಗಬಹುದು, ಸರ್ಕಾರ ಬದಲಾದ ಸಂದರ್ಭದಲ್ಲಿ ಸಬ್ಸಿಡಿ ಏನಾಗುತ್ತದೋ ತಿಳಿದಿಲ್ಲ.

ಚಿತ್ರಮಂದಿರಗಳನ್ನು, ಪ್ರೇಕ್ಷಕರನ್ನೇ ತಲೆಯಲ್ಲಿಟ್ಟುಕೊಂಡು ಸಿನಿಮಾ ಮಾಡಿದಾಗ ಅವರು ಬ್ಯಾಂಕ್ ರೀತಿ ಇರುತ್ತಾರೆ. ಸ್ಟಾರ್ ಸಿನಿಮಾಗಳು ನಡೆಯುವುದೇ ಈ ಬ್ರ್ಯಾಂಡಿಂಗ್ ಮೇಲೆ. ಸ್ಟಾರ್ ಸಿನಿಮಾ ರಿಲೀಸ್ ಆಗುತ್ತಿದೆ ಎಂದಾಗ ಕಥೆ ನೋಡಿ ಪ್ರೇಕ್ಷಕರು ಬರುವುದಿಲ್ಲ. ನಿರ್ದೇಶಕ, ಹೀರೊ, ನಿರ್ಮಾಣ ಸಂಸ್ಥೆಗಳನ್ನು ನೋಡಿ ಪ್ರೇಕ್ಷಕರು ಚಿತ್ರಮಂದಿರಕ್ಕೆ ಬರುತ್ತಿದ್ದಾರೆ. ಮೊದಲೆರಡು ದಿನಗಳಲ್ಲೇ ಇಂತಹ ಚಿತ್ರಗಳ ಹೂಡಿಕೆ ಮರಳಿಬರುತ್ತದೆ. ಸಿನಿಮಾ ಚೆನ್ನಾಗಿದ್ದರೆ ಮುಂದೆ ಬರುವುದೆಲ್ಲವೂ ಲಾಭ. ಈ ಮಾರುಕಟ್ಟೆಯನ್ನು ಅಧ್ಯಯನ ಮಾಡಿ ನನ್ನ ಮಾದರಿಯನ್ನು ಬದಲಾಯಿಸಿಕೊಂಡಿದ್ದೇನೆ. ಇಲ್ಲಿ ಪೂರ್ತಿಯಾಗಿ ಮಂಸೋರೆ ಬದಲಾಗಿಲ್ಲ. ನನ್ನ ಸಿಗ್ನೇಚರ್ ಬಿಟ್ಟುಕೊಡುತ್ತಿಲ್ಲ. ನನ್ನ ಆಲೋಚನೆಗಳನ್ನು ಇಟ್ಟುಕೊಂಡು ಈಗಿನ ಹರಿವಿನಲ್ಲಿ ಸಾಗಲಿದ್ದೇನೆ.

• ‘ದೂರ ತೀರ ಯಾನ’ದ ವಿಶೇಷವೇನು?

ಮೊದಲು ಕೇವಲ ಸಿನಿಮಾ ನೋಡಲು ಬರುತ್ತಿದ್ದರು. ‘ಥಿಯೇಟ್ರಿಕಲ್ ಎಕ್ಸ್‌ಪೀರಿಯನ್ಸ್’ ಎಂಬ ಪದವಿರಲಿಲ್ಲ. ಮೊಬೈಲ್, ಟಿವಿ, ಹೋಂಥಿಯೇಟರ್ ಬಂದ ಮೇಲೆ ಈ ಪದ ಚಾಲ್ತಿಗೆ ಬಂದಿದೆ. ಇದು ಬಂದ ಬಳಿಕ ಸಿನಿಮಾಗಳೆಂದರೆ ಅದ್ದೂರಿಯಾಗಿರಬೇಕು, ಸೆಟ್ ಹಾಕಬೇಕು, ಎಲಿವೇಷನ್ಸ್ ಬೇಕು ಎಂಬಿತ್ಯಾದಿ ಮಾತುಗಳಿವೆ. ಆದರೆ ನಾನು ಈ ಹಾದಿ ಹಿಡಿಯದೆ ಪ್ರೇಕ್ಷಕರಿಗೆ ಬೇರೆ ಮಾದರಿಯ ‘ಥಿಯೇಟ್ರಿಕಲ್ ಎಕ್ಸ್‌ಪೀರಿಯನ್ಸ್’ ನೀಡುತ್ತಿದ್ದೇನೆ. ಇದೊಂದು ಪ್ರಯೋಗ. ಈ ಸಿನಿಮಾದಲ್ಲಿರುವ ಪಯಣವೇ ಪ್ರೇಕ್ಷಕರನ್ನು ಹೊಸ ಲೋಕಕ್ಕೆ ಕೊಂಡೊಯ್ಯುತ್ತದೆ. ಪ್ರಕೃತಿ ಎನ್ನುವುದು ಪ್ರತಿಯೊಬ್ಬನನ್ನು ಪ್ರತಿ ಬಾರಿಯೂ ಸೆಳೆಯುತ್ತದೆ. ‘ಮುಂಗಾರು ಮಳೆ’ ಹಿಟ್ ಆಗಿರುವುದಕ್ಕೆ ಇದೂ ಒಂದು ಕಾರಣ. ಜೋಗಕ್ಕೆ ನೂರು ಬಾರಿ ಹೋದರೂ ಅದು ಅದ್ಭುತವಾಗಿಯೇ ಕಾಣುತ್ತದೆ. ಈ ಪ್ರಕೃತಿಯನ್ನೇ ವೇದಿಕೆಯಾಗಿಟ್ಟುಕೊಂಡು ಹುಡುಗ–ಹುಡುಗಿಯ ಪಯಣವನ್ನು ಕಟ್ಟಿಕೊಡುತ್ತಾ, ಮನಸ್ಸಿನೊಳಗೆ ಕುಳಿತುಕೊಳ್ಳುವ ಸಂಗೀತವನ್ನು ಬಳಸಿಕೊಂಡು ಈ ಸಿನಿಮಾ ಹೆಣೆದಿದ್ದೇನೆ. ಪ್ರಕೃತಿಯನ್ನು ಸಂಗೀತದ ಜೊತೆ ಸಮ್ಮಿಲನಗೊಳಿಸಿ ಮ್ಯಾಜಿಕ್‌ಗಾಗಿ ಕಾಯುತ್ತಿದ್ದೇನೆ.

• ಹೊಸ ಮಾದರಿಯಲ್ಲಿ ಮಂಸೋರೆ ಎದುರಿಸಿದ ಸವಾಲುಗಳು?

ಇವತ್ತಿನ ಪೀಳಿಗೆಯ ಕಲಾವಿದರ ಜೊತೆ ಕೆಲಸ ಮಾಡುವುದೇ ನನ್ನ ಮೊದಲ ಸವಾಲಾಗಿತ್ತು. ನನ್ನ ಜೀವನಾನುಭವ ಬೇರೆ, ಅವರ ಜೀವನಾನುಭವ ಬೇರೆ. ಅವರನ್ನು ನನ್ನ ಹಾದಿಯಲ್ಲಿ ಹೆಜ್ಜೆ ಹಾಕುವಂತೆ ಮಾಡಿದರೆ ಹಳೆಯ ಸಿನಿಮಾಗಳ ಛಾಪು ಇರುತ್ತದೆ. ಬದಲಾಗಿ ಅವರ ಹಾದಿಯಲ್ಲಿ ನಾನು ಹೆಜ್ಜೆ ಹಾಕಬೇಕಿತ್ತು. ನನ್ನತನವನ್ನು ಕಳೆದುಕೊಳ್ಳುತ್ತಾ ನವಪೀಳಿಗೆಯ ಪ್ರೇಮಕಥೆ ಹೇಳಿದ್ದೇನೆ. ಈಗಿನ ಪೀಳಿಗೆಗೆ ಈ ಸಿನಿಮಾ ನಮ್ಮದು ಎನ್ನಿಸಬೇಕು. ಇದರ ಜೊತೆಗೆ ಬರವಣಿಗೆಯೂ ಸವಾಲಿನಿಂದಿತ್ತು. ಕತೆಯಲ್ಲಿ ಖಳನಾಯಕನಿಲ್ಲ. ನಾಯಕ–ಖಳನಾಯಕನಿದ್ದರೆ ಬರವಣಿಗೆ ಬಹಳ ಸುಲಭ. ಖಳನಾಯಕನಿಗೂ ಮೀರಿದ ಸಮಸ್ಯೆಗಳು ಇಲ್ಲಿವೆ. ಈ ಸಮಸ್ಯೆಗಳು ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣುತ್ತಿರುತ್ತದೆ. ಈ ರೀತಿಯ ಕ್ಲಿಷ್ಟವಾದ ಸೂಕ್ಷ್ಮ ಆಲೋಚನೆಗಳನ್ನು ಬರವಣಿಗೆಯಲ್ಲಿ ತಂದು ದೃಶ್ಯವಾಗಿ ರೂಪಿಸುವುದು ಬಹು ದೊಡ್ಡ ಸವಾಲಾಗಿತ್ತು. ಇದರಲ್ಲಿ ಸ್ವಲ್ಪ ಎಡವಿದರೂ ಬಹಳ ಗಂಭೀರ ಸಿನಿಮಾವಾಗುತ್ತಿತ್ತು. ನನಗೆ ಇನ್ನೊಂದು ಗಂಭೀರ ಸಿನಿಮಾ ಆಗಬಾರದು ಎನ್ನುವುದಿತ್ತು. ಮನಸ್ಸಿಗೆ ಮುದ ಕೊಡುವ ಸಿನಿಮಾವಾಗಬೇಕು ಎನ್ನುವುದು ನನ್ನ ನಿರ್ಧಾರವಾಗಿತ್ತು.

• ಟ್ರಾವೆಲ್ ಸಿನಿಮಾಗಳಲ್ಲಿ ಛಾಯಾಚಿತ್ರಗ್ರಹಣ, ಸಂಗೀತ ಪ್ರಮುಖ. ಇದರ ಬಗ್ಗೆ...

ನಾನು ಮೊದಲು ಹಿರಿಯ ಛಾಯಾಚಿತ್ರಗ್ರಾಹಕರಾದ ಶೇಖರ್‌ಚಂದ್ರ ಅವರನ್ನು ಆಯ್ಕೆ ಮಾಡಿದೆ. ಇದರಿಂದ ನಾನು ಧೈರ್ಯವಾಗಿದ್ದೆ. ನನ್ನ ಕೆಲಸವೂ ಹಗುರವಾಯಿತು. ಬೆಂಗಳೂರಿನಿಂದ ಗೋವಾದವರೆಗಿನ ಪಯಣವನ್ನು ನಾವು ಸಿನಿಮಾದಲ್ಲಿ ಸೆರೆಹಿಡಿದಿದ್ದೇವೆ. ಈ ಸಂದರ್ಭದಲ್ಲಿ ನೂರಾರು ಸಮಸ್ಯೆಗಳು ಎದುರಾದವು. ಊಹಿಸಲಸಾಧ್ಯವಾದ ವಾತಾವರಣಗಳನ್ನು ನಾವು ಅನುಭವಿಸಿದೆವು. ಸುಮಾರು 65 ಜನ 22 ದಿನ ಸಂಚಾರಿ ಜೀವನದಲ್ಲಿದ್ದೆವು. ಏಕಾಏಕಿ ಮಳೆ ಬರುತ್ತಿತ್ತು, ಮಳೆ ಜೊತೆಗೆ ಬಿಸಿಲು. ಹೀಗಿರುವಾಗ ತಾಂತ್ರಿಕವಾಗಿಯೂ ಬಹಳಷ್ಟು ಸಮಸ್ಯೆಗಳು ಬಂದವು. ಇನ್ನೇನು ರೋಲಿಂಗ್ ಎನ್ನುವಾಗ ಏಕಾಏಕಿ ಮೋಡಬರುತ್ತಿತ್ತು. ಮತ್ತೆ ಲೈಟಿಂಗ್ ಸರಿಪಡಿಸಿಕೊಳ್ಳುವಾಗ ಬಿಸಿಲು. ಇವುಗಳೆಲ್ಲವನ್ನೂ ಶೇಖರ್‌ಚಂದ್ರ ಅವರು ನಿಭಾಯಿಸಿ ಕಥೆಯನ್ನು ಅದ್ಭುತವಾಗಿ ಸೆರೆಹಿಡಿದಿದ್ದಾರೆ.

ಬಕೇಶ್ ಹಾಗೂ ಕಾರ್ತಿಕ್ ಸಂಗೀತ ಈ ದೃಶ್ಯಕಾವ್ಯಕ್ಕೆ ಮ್ಯಾಜಿಕ್‌ನಂತೆ ಕೆಲಸ ಮಾಡಲಿದೆ. ಸಿನಿಮಾದ ಹಾಡುಗಳನ್ನು ಕೇಳಿದರೇ ಸಿನಿಮಾ ಏನನ್ನುವುದು ತಿಳಿಯುತ್ತದೆ.

> **• ಇದೇ ಹರಿವಿನಲ್ಲಿರುತ್ತೀರೋ ಅಥವಾ ಆಗಾಗ ತೀರಕ್ಕೆ ಬರುತ್ತೀರೊ?**
>
> ನನಗೆ ಒಂದೇ ಮಾದರಿಯ ಸಿನಿಮಾ ಮಾಡಲು ಇಷ್ಟವಿಲ್ಲ. ನನಗೀಗ ಇರುವ ಪ್ರೇಕ್ಷಕರ ಬ್ಯಾಂಕ್ ಅನ್ನು ಸದಾ ಕುತೂಹಲದಲ್ಲಿ ಇರಿಸಿದ್ದೇನೆ. ‘ಹರಿವು’ ಸಿನಿಮಾಗೆ ರಾಷ್ಟ್ರ ಪ್ರಶಸ್ತಿ ಬಂದ ನಂತರ, ಈ ಮಾದರಿಯ ಸಿನಿಮಾ ಮಾಡಿದರೆ ಪ್ರಶಸ್ತಿ ಬರುತ್ತದೆ ಎಂದು ನಾನು ಅದನ್ನೇ ಅನುಸರಿಸಿಲ್ಲ. ಬೇರೆ ಮಾದರಿಯ ಸಿನಿಮಾ (ನಾತಿಚರಾಮಿ) ಮಾಡಿದೆ. ಅದಕ್ಕೂ ಪ್ರಶಸ್ತಿಗಳು ಬಂದವು. ಜೀವನ ಎನ್ನುವುದೇ ಅನಿರೀಕ್ಷಿತ. ಈ ಜೀವನದ ರೀತಿಯೇ ಸಿನಿಮಾವಿರಬೇಕು. ಮಂಸೋರೆ ಗಂಭೀರವಾದ ಸಿನಿಮಾಗಳನ್ನೇ ಮಾಡುತ್ತಾರೆ ಎನ್ನುವ ಸಂದರ್ಭದಲ್ಲಿ ‘ದೂರ ತೀರ ಯಾನ’ ಘೋಷಿಸಿದ್ದೆ. ಈ ಸಿನಿಮಾ ಬಿಡುಗಡೆಯಾಗಿ ಒಂದೆರಡು ವಾರ ಪ್ರಚಾರದ ಬಳಿಕ ನಾನು ಮತ್ತೆ ಶೂನ್ಯ. ಮುಂದೆ ಏನು ಎಂದು ನನಗೆ ತಿಳಿದಿಲ್ಲ. ಸಿನಿಮಾ ಗೆಲ್ಲಲಿ ಅಥವಾ ಸೋಲಲಿ ಇದೇ ಮಾದರಿಯನ್ನು ಪುನರಾವರ್ತಿಸುವುದಿಲ್ಲ. ಕಥೆಗಳ ಗುಚ್ಛ ನನ್ನಲ್ಲಿದೆ. ಆದರೆ ಇವುಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು, ಹೇಗೆ ಹೇಳಬೇಕು ಎನ್ನುವುದನ್ನು ಯೋಚನೆ ಮಾಡಿಲ್ಲ.

ಸಿನಿಮಾದ ಕಥೆ ಏನು?

‘ಇದೊಂದು ಟ್ರಾವೆಲಿಂಗ್ ಸ್ಟೋರಿ. ಚಿತ್ರದಲ್ಲಿ ವಿಜಯ್ ಕೃಷ್ಣ–ಪ್ರಿಯಾಂಕ ಕುಮಾರ್ ಮುಖ್ಯಭೂಮಿಕೆಯಲ್ಲಿದ್ದಾರೆ. ಚಿತ್ರದ ಮೊದಲ ಹತ್ತು ನಿಮಿಷ ಮಾತ್ರ ಬೆಂಗಳೂರಿನಲ್ಲಿ ನಡೆಯುತ್ತದೆ. ಉಳಿದೆಲ್ಲಾ ಕಥೆ ದಾರಿಯಲ್ಲಿ ಸಾಗುತ್ತದೆ. ಬೆಂಗಳೂರಿನಿಂದ ಗೋವಾಕ್ಕೆ ಹೊರಟ ಹುಡುಗ - ಹುಡುಗಿ ತಮ್ಮ ಪ್ರೀತಿಯನ್ನು ಹೊಸ ರೀತಿಯಲ್ಲಿ ಕಂಡುಕೊಳ್ಳುವ ಕಥೆ ಇದಾಗಿದೆ. ಇದನ್ನು ಮ್ಯೂಸಿಕಲ್ ಜರ್ನಿ ಸಿನಿಮಾ ಎನ್ನಲೂಬಹುದು. ವೃತ್ತಿ–ಪ್ರವೃತ್ತಿ ನಡುವೆ ಪ್ರೀತಿಯ ಹುಡುಕಾಟವಿದು’ ಎನ್ನುತ್ತಾರೆ ಮಂಸೋರೆ.

ತರುಣ್ ಹೊಸ ಸಿನಿಮಾ

ಏಳುಮಲೆ

‘ಕಾಟೇರ’ ಚಿತ್ರದ ನಿರ್ದೇಶಕ ತರುಣ್ ಕಿಶೋರ್ ಸುಧೀರ್ ನಿರ್ಮಾಣದ, ಪುನೀತ್ ರಂಗಸ್ವಾಮಿ ನಿರ್ದೇಶನದ ಹೊಸ ಸಿನಿಮಾದ ಶೀರ್ಷಿಕೆ ಇತ್ತೀಚೆಗೆ ಅನಾವರಣಗೊಂಡಿತು. ಚಿತ್ರಕ್ಕೆ ‘ಏಳಮಲೆ’ ಎಂಬ ಶೀರ್ಷಿಕೆ ಇಡಲಾಗಿದ್ದು, ನಟ ಶಿವರಾಜ್‌ಕುಮಾರ್ ಸಮಾರಂಭದಲ್ಲಿ ಅತಿಥಿಯಾಗಿದ್ದರು.

‘ಏಕ್ ಲವ್ ಯಾ’ ಸಿನಿಮಾ ಮೂಲಕ ಚಂದನವನ ಪ್ರವೇಶಿಸಿದ್ದ ನಟ ರಾಣಾ, ‘ಮಹಾನಟಿ’ ವಿಜೇತೆ ಪ್ರಿಯಾಂಕಾ ಆಚಾರ್ ಈ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಶಿವರಾಜ್‌ಕುಮಾರ್, ‘ತರುಣ್ ಹಾಗೂ ನಂದಕಿಶೋರ್ ನಿರ್ದೇಶನದಲ್ಲಿ ನಾನು ಸಿನಿಮಾ ಮಾಡಿಲ್ಲ. ಮುಂದೆ ಮಾಡಬೇಕು. ಕಥೆ ಸಿದ್ಧಪಡಿಸಿಕೋ ಡೇಟ್ಸ್ ಕೊಡುತ್ತೇನೆ ಎಂದು ತರುಣ್‌ಗೆ ಹೇಳಿದ್ದೇನೆ. ರಾಣಾ ಬಹಳ ಮುದ್ದಾದ ಹುಡುಗ. ‘ಏಳುಮಲೆ’ ಟೈಟಲ್ ಟೀಸರ್ ನೋಡಿಯೇ ಸಿನಿಮಾ ಮೇಲೆ ಭರವಸೆ ಮೂಡಿದೆ. ಪ್ರಿಯಾಂಕ ಅವರಿಗೆ ಇದು ಮೊದಲ ಸಿನಿಮಾ. ನಾನು ‘ಜನುಮದ ಜೋಡಿ’ ಸಿನಿಮಾ ಮಾಡುವಾಗ, ನಟಿ ಶಿಲ್ಪಾ ಅವರು ಏಕಾಏಕಿ ನಾಯಕಿಯಾಗಿ ಆಯ್ಕೆಯಾಗಿದ್ದರು. ಈ ಸಿನಿಮಾಗೆ ನನಗೆ ಪ್ರಶಸ್ತಿ ಬರಲಿಲ್ಲ, ಆದರೆ ಶಿಲ್ಪಾಗೆ ರಾಜ್ಯ ಪ್ರಶಸ್ತಿ ಬಂತು. ಹೊಸಬರ ಸಿನಿಮಾಗಳು ಬರುತ್ತಿರಬೇಕು. ನಾವು ನಮ್ಮ ಗೀತಾ ಪಿಕ್ಚರ್ಸ್‌ನಿಂದ ‘ಪಬ್ಬಾರ್’ ಎನ್ನುವ ಸಿನಿಮಾ ಮಾಡುತ್ತಿದ್ದೇವೆ. ಇದರಲ್ಲೂ ಹೊಸಬರು ಇದ್ದಾರೆ. ಸಿನಿಮಾ ಹೇಗಾಗುತ್ತದೋ ಗೊತ್ತಿಲ್ಲ, ಆದರೆ ಪ್ರಯತ್ನ ಇರಲೇಬೇಕು’ ಎಂದರು.

> **ಕಾಡುವ ಸಿನಿಮಾಗಳ ಪಟ್ಟಿಗೆ ‘ಏಳುಮಲೆ’ ಸಿನಿಮಾ ಸೇರುತ್ತದೆ. ಮನಸ್ಸಿಗೆ, ಹೃದಯಕ್ಕೆ ಸಿನಿಮಾ ಹತ್ತಿರವಾಗಬೇಕು. ದುಡ್ಡಿಗಿಂತ ಹೆಚ್ಚಾಗಿ ಪ್ರೇಕ್ಷಕರ ಮೆಚ್ಚುಗೆ ಇಂತಹ ಸಿನಿಮಾಗಳಿಗೆ ಬೇಕು.**
> **–ಟಿ.ಎಸ್.ನಾಗಾಭರಣ,** ನಟ

ಚಿನ್ನಕ್ಕೆ ಕೊರತೆಯಿಲ್ಲ: ‘ಒಂದು ಕಥೆ ಮೊದಲು ನಮ್ಮಲ್ಲಿ ಕುತೂಹಲ ಹುಟ್ಟಿಸಬೇಕು. ಆಗಷ್ಟೇ ನಿರ್ಮಾಣಕ್ಕೆ ಒಪ್ಪಲು ಸಾಧ್ಯ. ಪುನೀತ್ ಅವರು ‘ಕಾಟೇರ’ ಸಿನಿಮಾ ಸಂದರ್ಭದಲ್ಲಿ ನನ್ನ ನಿರ್ದೇಶನ ತಂಡದಲ್ಲಿದ್ದರು. ಇದೇ ಸಂದರ್ಭದಲ್ಲಿ ನನಗೆ ‘ಏಳುಮಲೆ’ಯ ಒನ್‌ಲೈನ್ ಹೇಳಿದ್ದರು. ಚಿತ್ರರಂಗ ಎನ್ನುವುದು ಚಿನ್ನದ ಗಣಿಗಾರಿಕೆ ಮಾಡಿದಂತೆ. ಕೆಲವೊಮ್ಮ ಬೇಗ ಚಿನ್ನ ಸಿಗುತ್ತದೆ, ಕೆಲವೊಮ್ಮೆ ವಿಳಂಬವಾಗುತ್ತದೆ. ಕನ್ನಡ ಚಿತ್ರರಂಗದಲ್ಲಿ ಖಂಡಿತವಾಗಿಯೂ ಚಿನ್ನಕ್ಕೆ ಬರವಿಲ್ಲ’ ಎಂದರು ತರುಣ್.

‘ಈಗಾಗಲೇ ಈ ಸಿನಿಮಾದ ಆಡಿಯೊ ಹಕ್ಕುಗಳು ಒಳ್ಳೆಯ ಬೆಲೆಗೆ ಮಾರಾಟವಾಗಿದೆ. ಶೀರ್ಷಿಕೆ ಬಿಡುಗಡೆ ಮುನ್ನವೇ ಕರ್ನಾಟಕದಾದ್ಯಂತ ಸಿನಿಮಾ ಖರೀದಿ ಆಗಿದೆ. ಇದರಿಂದ ಹೆಮ್ಮೆ ಇದೆ. ಒಳ್ಳೆಯ ಕಾಂಟೆಂಟ್ ಸಿನಿಮಾಗಳಿಗೆ ಖಂಡಿತಾ ಭವಿಷ್ಯವಿದೆ. ಕರ್ನಾಟಕ ಮತ್ತು ತಮಿಳುನಾಡು ಗಡಿಯಲ್ಲಿ ನಡೆಯುವ ಕಥೆ ಇದು. ನೈಜ ಘಟನೆ ಹಾಗೂ ಕಾಲ್ಪನಿಕ ಕಥೆಯ ಸಮ್ಮಿಶ್ರಣವಿದು’ ಎಂದು ಸಿನಿಮಾ ಬಗ್ಗೆ ವಿವರಣೆ ನೀಡಿದರು ತರುಣ್.

ಸಿನಿಮಾದಲ್ಲಿ ಟಿ.ಎಸ್.ನಾಗಾಭರಣ, ಕಿಶೋರ್ ಕುಮಾರ್, ಸರ್ದಾರ್ ಸತ್ಯ, ಜಗಪ್ಪ ನಟಿಸಿದ್ದಾರೆ. ಅದ್ವೈತ್ ಗುರುಮೂರ್ತಿ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ನಾಗಾರ್ಜುನ ಶರ್ಮಾ ಹಾಗೂ ಪುನೀತ್ ರಂಗಸ್ವಾಮಿ ಸಂಭಾಷಣೆ, ಡಿ. ಇಮ್ಮನ್ ಸಂಗೀತ ಚಿತ್ರಕ್ಕಿದೆ. ಈ ಸಿನಿಮಾ ಕನ್ನಡ, ತಮಿಳು ಹಾಗೂ ತೆಲುಗಿನಲ್ಲಿ ರಿಲೀಸ್ ಆಗಲಿದೆ. ತರುಣ್ ಹಾಗೂ ಅಟ್ಲಾಂಟಾ ನಾಗೇಂದ್ರ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ.

ಜೋಗತಿ ವೇಷದಲ್ಲಿ ಕಿಟ್ಟಿ

ಶ್ರೀನಗರ ಕಿಟ್ಟಿ

ನಾಯಕನಾಗಿ, ಖಳನಾಯಕನಾಗಿ ಮಿಂಚಿರುವ ನಟ ಶ್ರೀನಗರ ಕಿಟ್ಟಿ ಇದೀಗ ಜೋಗತಿಯಾಗಿ ತೆರೆ ಮೇಲೆ ಬರಲಿದ್ದಾರೆ. ರವಿ ಬೆಳಗೆರೆ ಅವರು ಜೋಗತಿಯರ ಜೀವನದ ಆಗು ಹೋಗುಗಳ ಬಗ್ಗೆ ಬರೆದಿರುವ ‘ವೇಷಗಳು’ ಎಂಬ ಸಣ್ಣಕಥೆಯು ಸಿನಿಮಾ ರೂಪ ಪಡೆಯುತ್ತಿದೆ.

ಗ್ರೀನ್ ಟ್ರೀ ಸ್ಟುಡಿಯೋಸ್ ಅಡಿಯಲ್ಲಿ ಕಿಶನ್ ರಾವ್ ದಳವಿ ಅವರು ಈ ಚಿತ್ರಕ್ಕೆ ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಚಿತ್ರದ ಶೀರ್ಷಿಕೆ ಟೀಸರ್ ಶ್ರೀನಗರ ಕಿಟ್ಟಿ ಅವರ ಜನ್ಮದಿನದಂದು ಬಿಡುಗಡೆಯಾಗಿದೆ.

ಭಾವನಾ ಬೆಳಗೆರೆ ಹಾಗೂ ಶ್ರೀನಗರ ಕಿಟ್ಟಿ ಅರ್ಪಿಸುವ ‘ವೇಷಗಳು’ ಚಿತ್ರದಲ್ಲಿ ಶ್ರೀನಗರ ಕಿಟ್ಟಿ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

‘ಈ ಚಿತ್ರದಲ್ಲಿ ಜೋಗತಿಯರ ಬಗ್ಗೆ ಹಾಗೂ ಅವರ ಜೀವನ ಶೈಲಿಯ ಬಗ್ಗೆ ಹೇಳಲಾಗುತ್ತಿದೆ. ಇಲ್ಲಿ ಶ್ರೀನಗರ ಕಿಟ್ಟಿ ಅವರು ಬಸಪ್ಪ ಹಾಗೂ ಬಸಮ್ಮ ಜೋಗತಿಯಾಗಿ ಎರಡು ಗೆಟಪ್‌ಗಳಲ್ಲಿ ಇರಲಿದ್ದಾರೆ. ಈಗಾಗಲೇ ಶ್ರೀನಗರ ಕಿಟ್ಟಿ ಅವರು ಜೋಗತಿ ಪಾತ್ರಕ್ಕಾಗಿ ಮಂಜಮ್ಮ ಜೋಗತಿ ಅವರನ್ನು ಸಂಪರ್ಕಿಸಿ ಜೋಗತಿಯರ ನಡೆ, ನುಡಿಯ ಬಗ್ಗೆ ಸಾಕಷ್ಟು ಮಾಹಿತಿ ಪಡೆದುಕೊಂಡು

ಸಿದ್ಧತೆ ಮಾಡಿಕೊಂಡಿದ್ದಾರೆ. ಚಿತ್ರದಲ್ಲಿ ಬಸಪ್ಪ ಪಾತ್ರವೇ ಬಹುತೇಕ ಆವರಿಸಿಕೊಂಡಿದೆ. ಮುಂದಿನ ತಿಂಗಳಿಂದ ‘ವೇಷಗಳು’ ಚಿತ್ರದ ಚಿತ್ರೀಕರಣ ಆರಂಭಿಸಿ ಮಧ್ಯಪ್ರದೇಶದ ಮಹಾಕಾಲೇಶ್ವರ, ಉತ್ತರ ಕರ್ನಾಟಕ, ಬೆಂಗಳೂರು ಹಾಗೂ ಮೈಸೂರಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗುವುದು. ಮುಂದಿನ ದಿನಗಳಲ್ಲಿ ಚಿತ್ರದ ಉಳಿದ ಕಲಾವಿದರ ಬಗ್ಗೆ ಮಾಹಿತಿ ನೀಡಲಾಗುವುದು’ ಎಂದಿದ್ದಾರೆ ಕಿಶನ್ ರಾವ್.

ಚಿತ್ರಕ್ಕೆ ಕೌಶಿಕ್ ಹರ್ಷ ಸಂಗೀತ, ರಾಜ್‌ಗುರು ದತ್ತರಾಜ್ ಸಂಭಾಷಣೆ, ಅಕ್ಷಯ್ ಪಿ.ರಾವ್ ಸಂಕಲನವಿದೆ.

ಏಳು ಅಧ್ಯಾಯಗಳಲ್ಲಿ ‘ಮಹಾವತಾರ್..’

ಕ್ಲೀಮ್ ಪ್ರೊಡಕ್ಷನ್ಸ್ ನಿರ್ಮಿಸಿ ಹೊಂಬಾಳೆ ಫಿಲ್ಮ್ಸ್ ಪ್ರಸ್ತುತಪಡಿಸಿರುವ ‘ಮಹಾವತಾರ್ ನರಸಿಂಹ’ ಸಿನಿಮಾ ಜುಲೈ 25ರಂದು ಬಿಡುಗಡೆಯಾಗಲಿದೆ.

‘ಮಹಾವತಾರ್ ನರಸಿಂಹ’ ಸಿನಿಮಾವು ವಿಷ್ಣುವಿನ ದಶಾವತಾರಗಳ ಆಧಾರದ ಮೇಲೆ ಮುಂದಿನ ದಶಕದವರೆಗೆ ಸಾಗಲಿರುವ ಬೃಹತ್ ಆನಿಮೇಟೆಡ್ ಸರಣಿಯ ಮೊದಲ ಅಧ್ಯಾಯವಾಗಿದೆ. ಅಶ್ವಿಕ್ ಕುಮಾರ್ ಈ ಅಧ್ಯಾಯದ ನಿರ್ದೇಶಕರಾಗಿದ್ದಾರೆ.

‘ಈ ಕಥೆಯು ಪ್ರಹ್ಲಾದನ ನಂಬಿಕೆಗೆ ವಿರುದ್ಧವಾಗಿ ನಿಲ್ಲುವ ತಂದೆ ಹಿರಣ್ಯಕಶಿಪುವನ್ನು ಮತ್ತು ಅವನ ಅಹಂಕಾರವನ್ನು ನಾಶಮಾಡಲು ಭೂಮಿಗೆ ಇಳಿದ ದೈವಿಕ ಅವತಾರ ನರಸಿಂಹನ ಕುರಿತದ್ದಾಗಿದೆ. ಪೌರಾಣಿಕ ಹಿನ್ನೆಲೆಯಲ್ಲಿ, ಉತ್ಕೃಷ್ಟ ತಾಂತ್ರಿಕ ನೆಲೆಗಟ್ಟಿನಲ್ಲಿ ಈ ಸಿನಿಮಾ ಕಟ್ಟಿಕೊಡಲಾಗುತ್ತಿದೆ’ ಎಂದಿದೆ ತಂಡ.

‘ಮಹಾವತಾರ್’ ಯೂನಿವರ್ಸ್‌ನ ಈ ಮೊದಲ ಅಧ್ಯಾಯವನ್ನು ಶಿಲ್ಪಾ ಧವನ್, ಕುಶಾಲ್ ದೇಸಾಯಿ, ಚೈತನ್ಯ ದೇಸಾಯಿ ನಿರ್ಮಾಣ ಮಾಡಿದ್ದಾರೆ. ಈ ಸರಣಿಯ ಮುಂದಿನ ಸಿನಿಮಾಗಳಾಗಿ ‘ಮಹಾವತಾರ್ ಪರಶುರಾಮ’ (2027), ‘ಮಹಾವತಾರ್ ರಘುನಂದನ’ (2029), ‘ಮಹಾವತಾರ್ ಧ್ವಾರಕಾಧೀಶ್’ (2031), ‘ಮಹಾವತಾರ್ ಗೋಕುಲನಂದ’ (2033), ‘ಮಹಾವತಾರ್ ಕಲ್ಕಿ ಭಾಗ 1’ (2035), ‘ಮಹಾವತಾರ್ ಕಲ್ಕಿ ಭಾಗ 2’ (2037) ಮೂಡಿಬರಲಿವೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಒಟ್ಟು ಐದು ಭಾಷೆಗಳಲ್ಲಿ 3ಡಿಯಲ್ಲಿ ಈ ಸಿನಿಮಾ ವೀಕ್ಷಣೆಗೆ ಲಭ್ಯವಾಗಲಿದೆ.

ಜುಲೈ 25ಕ್ಕೆ ‘ಬಂದೂಕ್’ ರಿಲೀಸ್



ಚಿತ್ರರಂಗಕ್ಕೆ ಹೊಸ ನಿರ್ದೇಶಕರ ಪ್ರವೇಶ ನಿರಂತರವಾಗಿ ಆಗುತ್ತಿದೆ. ಇದಕ್ಕೆ ಹೊಸ ಸೇರ್ಪಡೆ ಮಹೇಶ್ ರವಿಕುಮಾರ್. ‘ಬಂದೂಕ್’ ಎನ್ನುವ ಸಿನಿಮಾವನ್ನು ಇವರು ನಿರ್ದೇಶಿಸಿದ್ದು, ಸಿನಿಮಾ ಜುಲೈ 25ಕ್ಕೆ ತೆರೆಕಾಣಲಿದೆ.

ಈ ಚಿತ್ರದಲ್ಲಿ ಬಾಲಾಜಿ ಮನೋಹರ್, ಶ್ವೇತಾ ಪ್ರಸಾದ್, ಗೋಪಾಲಕೃಷ್ಣ ದೇಶಪಾಂಡೆ, ಶಂಕರ್ ಅಶ್ವಥ್, ಹರೀಶ್ ರೈ ಮುಂತಾದವರು ನಟಿಸಿದ್ದಾರೆ.

ಕ್ರೈಮ್ ಆ್ಯಕ್ಷನ್ ಡ್ರಾಮಾ ಕಥಾಹಂದರ ಹೊಂದಿರುವ ‘ಬಂದೂಕ್’ ಸಿನಿಮಾಗೆ ಶ್ರೀನಿವಾಸ್ ಮೂರ್ತಿ ಮತ್ತು ಚಂದ್ರಶೇಖರ್ ಬಂಡವಾಳ ಹೂಡಿದ್ದಾರೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಹೊನ್ನಾವರ, ಉಡುಪಿ, ಮಲ್ಪೆ, ಮಂಗಳೂರು ಮುಂತಾದ ಕಡೆ ಶೂಟಿಂಗ್ ನಡೆಸಿದೆ. ಎಚ್.ವೈ. ರೋಹಿತ್ ಕುಮಾರ್ ಛಾಯಾಚಿತ್ರಗ್ರಹಣ, ವಸಂತಕುಮಾರ್ ಸಂಕಲನ, ಪ್ರಸನ್ನ ಕುಮಾರ್ ಎಂ.ಎಸ್. ಸಂಗೀತ ಚಿತ್ರಕ್ಕಿದೆ. ಸದ್ಯ ಫಸ್ಟ್‌ಲುಕ್ ಬಿಡುಗಡೆ ಮಾಡಿರುವ ಚಿತ್ರತಂಡ ಪ್ರಚಾರಕ್ಕೆ ಇಳಿದಿದೆ.

ಐದು ಸಿನಿಮಾಗಳು ತೆರೆಗೆ

ದೂರ ತೀರ ಯಾನ

ನಿರ್ದೇಶಕ ಮಂಸೋರೆ ಅವರ ಸಿನಿಮಾವಿದು. ಡಿ.ಕ್ರಿಯೇಷನ್ಸ್‌ನ ದೇವರಾಜ್ ಆರ್. ನಿರ್ಮಾಣ ಮಾಡಿರುವ ಈ ಸಿನಿಮಾ ಟ್ರಾವೆಲಿಂಗ್ ಸ್ಟೋರಿ ಹೊಂದಿದೆ. ಬೆಂಗಳೂರಿನಿಂದ ಗೋವಾಕ್ಕೆ ಹೊರಟ ನಾಯಕ–ನಾಯಕಿ ತಮ್ಮ ಪ್ರೀತಿಯನ್ನು ಕಂಡುಕೊಳ್ಳುವ ಕಥೆ ಇದಾಗಿದೆ. ಇದೊಂದು ಮ್ಯೂಸಿಕಲ್ ಜರ್ನಿ ಸಿನಿಮಾವಾಗಿದ್ದು ಚಿತ್ರದಲ್ಲಿ ವಿಜಯ್ ಕೃಷ್ಣ ನಾಯಕರಾಗಿ ಹಾಗೂ ಪ್ರಿಯಾಂಕ ಕುಮಾರ್ ನಾಯಕಿಯಾಗಿ ನಟಿಸಿದ್ದಾರೆ. ಬಕೇಶ್ ಹಾಗೂ ಕಾರ್ತಿಕ್ ಸಂಗೀತ ಸಂಯೋಜನೆ, ಶೇಖರ್‌ಚಂದ್ರ ಛಾಯಾಚಿತ್ರಗ್ರಹಣ, ನಾಗೇಂದ್ರ ಕೆ. ಉಜ್ಜನಿ ಸಂಕಲನ, ಚೇತನ ತೀರ್ಥಹಳ್ಳಿ ಸಂಭಾಷಣೆ ಚಿತ್ರಕ್ಕಿದೆ.

ಕಾಟನ್‌ಪೇಟೆ ಗೇಟ್

ವೇಣುಗೋಪಾಲ್

ಆರ್.ಎಸ್. ಪ್ರೊಡಕ್ಷನ್ಸ್ ಮೂಲಕ ಕನ್ನಡ ಚಿತ್ರರಂಗಕ್ಕೆ ‘ಯುವರಾಜ’, ‘ಕಂಠಿ’, ‘ಭರ್ಜರಿ’, ‘ಬಹದ್ದೂರ್’ ಸೇರಿದಂತೆ ಹಲವು ಸಿನಿಮಾಗಳನ್ನು ನೀಡಿರುವ ಆರ್. ಶ್ರೀನಿವಾಸ್ ನಿರ್ಮಿಸಿರುವ ಚಿತ್ರವಿದು. ಆ್ಯಕ್ಷನ್, ಹಾಸ್ಯ, ಭಾವನೆಗಳ ಸಮ್ಮಿಶ್ರಣವಾದ ಈ ಸಿನಿಮಾವನ್ನು ವೈ. ರಾಜಕುಮಾರ್ ನಿರ್ದೇಶಿಸಿದ್ದಾರೆ. ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ವೇಣುಗೋಪಾಲ್, ಯಶ್ವನ್, ಸುರಭಿ ತಿವಾರಿ, ಅನುಷಾ ಜೈನ್, ಸುಧೀಕ್ಷಾ, ಕಿಸ್ಲೆ ಚೌಧರಿ, ಪಾರ್ಥು ಮುಂತಾದವರು ತಾರಾಬಳಗದಲ್ಲಿದ್ದಾರೆ.

ಫಸ್ಟ್ ಡೇ ಫಸ್ಟ್ ಶೋ

‘ಒಂದ್ ಕಥೆ ಹೇಳ್ಲಾ’ ಸಿನಿಮಾ ಮೂಲಕ ನಿರ್ದೇಶಕರಾಗಿ ಹೆಜ್ಜೆ ಇಟ್ಟ ಗಿರೀಶ್ ನಿರ್ದೇಶನದ ಚಿತ್ರವಿದು. ‘ನನ್ನ ಹಿಂದಿನ ನಾಲ್ಕು ಸಿನಿಮಾಗಳು ಬೇರೆ ರೀತಿ ಅಭಿರುಚಿಯ ಚಿತ್ರಗಳು. ‘ಫಸ್ಟ್ ಡೇ ಫಸ್ಟ್ ಶೋ’ ಕಥೆ ಅನ್ನುವುದಕ್ಕಿಂತ ಇಡೀ ಚಿತ್ರರಂಗವನ್ನು ಪ್ರತಿನಿಧಿಸುವ ಸಂಭ್ರಮ ಎನ್ನಬಹುದು’ ಎಂದಿದ್ದಾರೆ ಗಿರೀಶ್. ಚಿತ್ರದಲ್ಲಿ ಗಿರೀಶ್ ಜಿ., ಜೀವಿತಾ ವಸಿಷ್ಠ, ರೋಹಿತ್ ಶ್ರೀನಾಥ್, ಅನಿರುದ್ಧ ಶಾಸ್ತ್ರಿ, ಬಿ.ಎಂ. ವೆಂಕಟೇಶ್, ರೇಷ್ಮಾ ಲಿಂಗರಾಜಪ್ಪ, ಗಿಲ್ಲಿ ನಟ, ದಶಾವರ ಚಂದ್ರು, ಹರೀಶ್ ಅರಸು ಮುಂತಾದವರಿದ್ದಾರೆ. ಈ ಚಿತ್ರಕ್ಕೆ ಊರ್ಮಿಳಾ ಕಿರಣ್ ಬಂಡವಾಳ ಹೂಡಿದ್ದಾರೆ. ಉಜ್ವಲ್ ಚಂದ್ರ ಸಂಕಲನ, ರಾಕೇಶ್ ಸಿ. ತಿಲಕ್ ಹಾಗೂ ಅರುಣ್ ಕುಮಾರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಮಕ್ಕಳ ಚಿತ್ರ ‘ಲಕ್ಷ್ಯ’

ಬಹುತೇಕ ಉತ್ತರ ಕರ್ನಾಟಕದವರೇ ಸೇರಿ ನಿರ್ಮಿಸಿರುವ ಮಕ್ಕಳ ಚಿತ್ರವಿದು. 1990ರ ದಶಕದಲ್ಲಿ ಉತ್ತರ ಕರ್ನಾಟಕದಲ್ಲಿ ನಡೆದ ನೈಜ ಘಟನೆಯನ್ನು ಸ್ಫೂರ್ತಿಯಾಗಿಟ್ಟುಕೊಂಡು ತಯಾರಾದ ಈ ಚಿತ್ರಕ್ಕೆ ಅರ್ಜುನ ಪಿ.ಡೋಣೂರ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಇದು ಮಕ್ಕಳ ‘ಲಕ್ಷ್ಯ’ದ ಕುರಿತಾದ ಚಿತ್ರ. ಮಕ್ಕಳು ಯಾವ ವಿಷಯಕ್ಕೆ ‘ಲಕ್ಷ್ಯ’ ಕೊಡುತ್ತಾರೆ, ಅದರಿಂದ ಏನಾಗುತ್ತದೆ ಎಂಬುದೇ ಈ ಚಿತ್ರದ ಕಥಾಹಂದರ ಎಂದಿದೆ ಚಿತ್ರತಂಡ. ಸಂಪೂರ್ಣ ಉತ್ತರ ಕರ್ನಾಟಕದ ಭಾಷೆ, ಅಲ್ಲಿನ ಕಲಾವಿದರೇ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಸಾಮ್ರಾಟ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಈ ಚಿತ್ರದ ಹಾಡುಗಳಿಗೆ ದೊಡ್ಡರಂಗೇಗೌಡ, ಶಂಕರ ಪಾಗೋಜಿ, ಶಿವಾನಂದ ಭೂಶಿ ಸಾಹಿತ್ಯ ಬರೆದಿದ್ದಾರೆ. ಎಂ.ಬಿ. ಅಳ್ಳಿಕಟ್ಟಿ ಛಾಯಾಚಿತ್ರಗ್ರಹಣ, ಆರ್. ಮಹಾಂತೇಶ್ ಸಂಕಲನ ಚಿತ್ರಕ್ಕಿದೆ. ಸಂಗಮೇಶ ಉಪಾಸೆ, ಸಂಗಮೇಶ್ ಮೊದಲಾದ ಕಲಾವಿದರು ತಾರಾಬಳಗದಲ್ಲಿದ್ದಾರೆ.

> **ಮಕ್ಕಳ ಚಿತ್ರವಾದರೂ, ಇದರಲ್ಲಿ ಗಂಭೀರ ಸಾಮಾಜಿಕ ವಿಷಯಗಳಿವೆ. ಮನರಂಜನೆಯ ಜೊತೆಗೆ ಸಾಮಾಜಿಕವಾಗಿ ಚರ್ಚಿಸುವ ಅಂಶಗಳಿವೆ.**
> **ಅರ್ಜುನ ಪಿ. ಡೋಣೂರ,** ನಿರ್ದೇಶಕ



ಜಾವಾ ಕಾಫಿ

ಸಾತ್ವಿಕ ನಿರ್ಮಾಣ ಮಾಡಿ ನಿರ್ದೇಶನ ಮಾಡಿರುವ ಚಿತ್ರವಿದು. ಅವರೇ ನಾಯಕಿಯಾಗಿ ನಟಿಸಿದ್ದಾರೆ. ಕೇರಳದ ಸಾತ್ವಿಕ ನಿರ್ದೇಶನದ ಚೊಚ್ಚಲ ಚಿತ್ರ ಇದಾಗಿದೆ. ಅವರೇ ಕಥೆ ಚಿತ್ರಕಥೆಯನ್ನೂ ಬರೆದು ಸಾಹಸ ನಿರ್ದೇಶನ ಮಾಡಿದ್ದಾರೆ. ಅಜಯ್ ವರ್ಧನ್ ಈ ಚಿತ್ರದ ನಾಯಕರಾಗಿ ನಟಿಸಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರವು ಬೆಂಗಳೂರು, ಮಂಗಳೂರು, ಕೇರಳ ಮುಂತಾದೆಡೆ ಚಿತ್ರೀಕರಣಗೊಂಡಿದೆ.

ಪ್ರೇಮ್ ‘ಕೆಡಿ’ಯ ರಕ್ತಸಿಕ್ತ ಅಧ್ಯಾಯ!

ಧ್ರುವ ಸರ್ಜಾ

ಧ್ರುವ ಸರ್ಜಾ ಅಭಿನಯಿಸಿ, ‘ಜೋಗಿ’ ಪ್ರೇಮ್ ನಿರ್ದೇಶಿಸಿರುವ ಬಹುನಿರೀಕ್ಷಿತ ‘ಕೆಡಿ’ ಚಿತ್ರದ ಟೀಸರ್ ಬಿಡುಗಡೆಗೊಂಡಿದೆ. ಬಹುತಾರೆಯರನ್ನು ಹೊಂದಿರುವ ಈ ಚಿತ್ರದಲ್ಲಿ ಪ್ರೇಮ್ ಬೆಂಗಳೂರಿನ ರಕ್ತಸಿಕ್ತ ಜಗತ್ತಿನ ಕಥೆಯನ್ನು ಹೇಳಲು ಹೊರಟಿದ್ದಾರೆ.

ಕಥೆಯ ನಾಯಕ ‘ಕಾಳಿದಾಸ’ ವಿರೋಧಿಗಳ ಪಡೆಯನ್ನು ಹೊಡೆದುರುಳಿಸುವುದೇ ಚಿತ್ರದ ಮುಖ್ಯಕಥೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ರಕ್ತ ಬಸಿಯುತ್ತಿರುವ ಕತ್ತಿಯೊಂದಿಗೆ ನಾಯಕ ಧ್ರುವ ಸರ್ಜಾ ಪ್ರವೇಶಿಸಿದ್ದು, ಟೀಸರ್ ತುಂಬ ಆ್ಯಕ್ಷನ್ ದೃಶ್ಯಗಳು ಮತ್ತು ರಕ್ತವೇ ತುಂಬಿದೆ.

‘ಧಾಕ್ ದೇವ’ನಾಗಿ ಸಂಜಯ್ ದತ್ ನಟಿಸಿದ್ದಾರೆ. ಇವರು ಕಥೆಯ ಪ್ರಮುಖ ಖಳನಾಯಕ. ರವಿಚಂದ್ರನ್ ‘ಅಣ್ಣಯ್ಯಪ್ಪ’ನಾಗಿ ಕಾಣಿಸಿಕೊಂಡರೆ, ರಮೇಶ್ ಅರವಿಂದ್ ‘ಧರ್ಮ’ನ ಪಾತ್ರದಲ್ಲಿದ್ದಾರೆ. ‘ಮಹಾಲಕ್ಷ್ಮಿ’ಯಾಗಿ ನಾಯಕಿ ರೀಷ್ಮಾ ನಾಣಯ್ಯ ನಟಿಸಿದ್ದು, ‘ಸತ್ಯವತಿ’ ಪಾತ್ರದಲ್ಲಿ ಶಿಲ್ಪಾ ಶೆಟ್ಟಿ ಇದ್ದಾರೆ. 1980ರ ದಶಕದಲ್ಲಿನ ಬೆಂಗಳೂರಿನ ರೌಡಿಸಂ ಕಥೆಯನ್ನು ಚಿತ್ರ ಹೊಂದಿದೆ. ‘ಅವರಿಬ್ಬರದ್ದು ರಕ್ತ ಸಂಬಂಧ. ಆದರೆ ರಕ್ತ ಮೈಯಲ್ಲಿ ಹರಿಯುವುದಿಲ್ಲ’ ಎಂಬ ಡೈಲಾಗ್ ನಾಯಕ ಮತ್ತು ಖಳನಾಯಕನ ನಡುವಿನ ಕಥೆಯನ್ನು ಹೇಳುತ್ತಿದೆ.

ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತವಿದ್ದು, ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ, ಸಂಕೇತ್ ಆಚಾರ್ ಸಂಕಲನವಿದೆ.

ರೈತ ಸ್ನೇಹಿ

ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಿಗೆ ಮರುಜೀವ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ರಾಜ್ಯದಲ್ಲಿ ರೈತರು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ಇರುವ ಸೂಕ್ತ ಹಾಗೂ ನ್ಯಾಯಯುತ ಮಾರುಕಟ್ಟೆ ವ್ಯವಸ್ಥೆ ಎಂದರೆ ಅದು 'ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ' (ಎಪಿಎಂಸಿ). ರಾಜ್ಯಾದ್ಯಂತ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಅನ್ನದಾತ ರೈತರು ಬೆಳೆದ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಸಿಗುವಂತೆ ಮಾಡಲು ಮತ್ತು ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಈ ಸಮಿತಿಗಳು ಕೆಲಸ ಮಾಡುತ್ತವೆ. ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆಗೆ ತಿದ್ದುಪಡಿಯಿಂದಾಗಿ ಎಪಿಎಂಸಿಗಳು ಈಗ ರೈತಸ್ನೇಹಿಯಾಗಿ ಕಾರ್ಯ ನಿರ್ವಹಿಸುತ್ತಲಿವೆ.



ಮಾರಾಟದಲ್ಲಿ ಹೊಸ ದಾಖಲೆ ಬರೆದ ಎಪಿಎಂಸಿ

> ಕೃಷಿ ಮಾರುಕಟ್ಟೆಯ ಒಳಗೆ ರೈತರಿಗೆ ಉತ್ತಮ ಬೆಲೆ, ಹಣದ ಪಾವತಿಯ ಖಾತ್ರಿ ಇರುತ್ತದೆ. ರೈತರು ಎಪಿಎಂಸಿ ಮೇಲೆ ವಿಶ್ವಾಸ ಇಟ್ಟ ಕಾರಣಕ್ಕೆ ದಾಖಲೆಯ ವಹಿವಾಟು ಸಾಧ್ಯವಾಗಿದೆ.
> **ಶಿವಾನಂದ ಎಸ್. ಪಾಟೀಲ,** ಕೃಷಿ ಮಾರುಕಟ್ಟೆ ಸಚಿವ

ಪರವಾನಗಿ ಪಡೆದವರು

46,664 ವರ್ತಕರು

19,480 ದಲ್ಲಾಳರು

2,049 ಸಂಸ್ಕರಣದಾರರು

171 ಮುಖ್ಯ ಮಾರುಕಟ್ಟೆ

410 ಉಪ ಮಾರುಕಟ್ಟೆ

1.61 ಕೋಟಿ ಟನ್ ಮಾರಾಟವಾದ ಕೃಷಿ ಉತ್ಪನ್ನಗಳು

₹75 ಸಾವಿರ ಕೋಟಿ ಹಣಕಾಸಿನ ವಹಿವಾಟು

₹490 ಕೋಟಿ ಸಂಗ್ರಹವಾದ ಮಾರುಕಟ್ಟೆ ಶುಲ್ಕ

ದಂಡ ವಸೂಲಿಯಲ್ಲಿ ದಾಖಲೆ

■ ಮಾರುಕಟ್ಟೆ ಶುಲ್ಕ ಪಾವತಿಸದೆ ವಂಚಿಸುತ್ತಿದ್ದ 6,230 ಪ್ರಕರಣಗಳನ್ನು ಪತ್ತೆಹಚ್ಚಲಾಗಿದ್ದು, ₹4.80 ಕೋಟಿ ದಂಡ ಸೇರಿ ₹6.40 ಕೋಟಿ ವಸೂಲು ಮಾಡಲಾಗಿದೆ.

ಕೃಷಿ ಮಾರುಕಟ್ಟೆ ಪ್ರಾಂಗಣದಿಂದ ಹೊರಗೆ ಕೃಷಿ ಉತ್ಪನ್ನಗಳ ಮಾರಾಟಕ್ಕೆ ನೀಡಿದ್ದ ಅವಕಾಶ ವಾಪಸ್ ಪಡೆದ ಬಳಿಕ ಎಪಿಎಂಸಿ ಪ್ರಾಂಗಣಗಳಲ್ಲಿ ವ್ಯಾಪಾರ ಜಿಗಿತ ಕಂಡಿದ್ದು, 2024–25ನೇ ಸಾಲಿನಲ್ಲಿ ₹75 ಸಾವಿರ ಕೋಟಿ ಮೌಲ್ಯದ ವಹಿವಾಟು ದಾಖಲಿಸಿದೆ.

ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರ 2020ರಲ್ಲಿ ಕಾಯ್ದೆಗೆ ತಿದ್ದುಪಡಿ ತಂದು ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ) ಹೊರಗೂ ರೈತರು ತಾವು ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಮಾಡಿಕೊಟ್ಟಿತ್ತು. ಇದರಿಂದ ಎಪಿಎಂಸಿಗಳಲ್ಲಿನ ವ್ಯಾಪಾರ ಗಣನೀಯವಾಗಿ ಕುಸಿದಿತ್ತು. ಆದಾಯವಿಲ್ಲದೆ ಸಂಕಷ್ಟಕ್ಕೆ ಒಳಗಾಗಿದ್ದವು.

'ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ'ಗೆ ತಂದಿದ್ದ ತಿದ್ದುಪಡಿಯಿಂದಾಗಿ ಖಾಸಗಿಯವರಿಗೆ ಹಾಗೂ ಮಾರುಕಟ್ಟೆ ಹೊರಗೆ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಅವಕಾಶ ದೊರಕಿತ್ತು. ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಈ ಕಾಯ್ದೆಗೆ ತಿದ್ದುಪಡಿ ಮಾಡಲಾಗುವುದು ಎಂದು ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಹೇಳಿತ್ತು. ಅಧಿಕಾರಕ್ಕೆ ಬಂದ ನಂತರ ಭರವಸೆ ಈಡೇರಿಸಿತ್ತು. 2024 ಏಪ್ರಿಲ್‌ನಿಂದ ರೈತರು ಮಾರುಕಟ್ಟೆ ಒಳಗೇ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಆರಂಭಿಸಿದ್ದರು. ಕಳೆಗುಂದಿದ್ದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಿಗೆ ಮತ್ತೆ ಮರುಜೀವ ಬಂದಿತ್ತು. ಒಂದೇ ವರ್ಷದಲ್ಲಿ ಕೃಷಿ ಉತ್ಪನ್ನಗಳ ಮಾರಾಟದಲ್ಲಿ ಎಪಿಎಂಸಿಗಳು ಹೊಸ ದಾಖಲೆ ಬರೆದಿವೆ.

'ಕೃಷಿ ಉತ್ನನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಪ್ರಾಂಗಣಗಳ ಸುಧಾರಣೆ, ರೈತಸ್ನೇಹಿ ಮಾರುಕಟ್ಟೆ ವ್ಯವಸ್ಥೆ, ಕೈಗಾರಿಕೆಗಳಿಗೆ ಪೂರಕವಾದ ಕೆಲವು ನೀತಿ ಸೇರಿದಂತೆ ಹಲವು ಸುಧಾರಣೆಗಳನ್ನು ಕಾಯ್ದೆಯಲ್ಲಿ ಅಳವಡಿಸಿದ್ದು ದಾಖಲೆಯ ವಹಿವಾಟಿಗೆ ಕಾರಣ. ಮಾರುಕಟ್ಟೆ ಪ್ರಾಂಗಣದ ಹೊರಗಿನ ವ್ಯವಹಾರ ಚಟುವಟಿಕೆಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲಾಗಿದೆ. ಅದಕ್ಕಾಗಿಯೇ ಹೆಚ್ಚುವರಿ ನಿರ್ದೇಶಕರನ್ನು ಒಳಗೊಂಡ ನಾಲ್ಕು ವಿಭಾಗೀಯವಾರು ಕಚೇರಿಗಳನ್ನು ತೆರೆಯಲಾಗಿದೆ. ತೂಕ, ಮಾರಾಟ, ಆದಾಯದ ಖಾತರಿಯನ್ನು ರೈತರಿಗೆ ನೀಡಲಾಗುತ್ತಿದೆ' ಎನ್ನುತ್ತಾರೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ.

ಮಾರುಕಟ್ಟೆ ಪ್ರಾಂಗಣದ ಹೊರಗಿನ ವ್ಯವಹಾರ ಚಟುವಟಿಕೆಗಳನ್ನು ನಿಯಂತ್ರಿಸುವ ಜತೆಗೆ, ಇಲಾಖೆಯ ಅನುಮತಿ, ಪರವಾನಗಿ ಇಲ್ಲದೆ ಆನ್‌ಲೈನ್ ಮೂಲಕ ನಡೆಸುತ್ತಿದ್ದ ಇ–ಕಾಮರ್ಸ್, ಬಹುರಾಷ್ಟ್ರೀಯ ಕಂಪನಿಗಳ ಕೃಷಿ ಉತ್ಪನ್ನಗಳ ವಹಿವಾಟನ್ನು ಕಾಯ್ದೆಯ ವ್ಯಾಪ್ತಿಗೆ ತರಲಾಗಿದೆ. ಎಪಿಎಂಸಿಯ ಎಲ್ಲ ಕಾರ್ಯಚಟುವಟಿಕೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಆನ್‌ಲೈನ್ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. ಅಕ್ಕಿ ಗಿರಣಿಗಳೂ ಸೇರಿ ಎಪಿಎಂಸಿ ಹೊರಗಿನ ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟು ಜಾಗಗಳನ್ನು ಉಪ ಮಾರುಕಟ್ಟೆ ಎಂದು ಘೋಷಿಸಿ, ಎಪಿಎಂಸಿ ನಿಯಂತ್ರಣಕ್ಕೆ ಒಳಪಡಿಸಲಾಗುತ್ತಿದೆ.

₹30.48 ಕೋಟಿ ಶುಲ್ಕ ಸಂಗ್ರಹ

ಏಕೀಕೃತ ಮಾರಾಟ ವೇದಿಕೆಯಡಿ ಆನ್‌ಲೈನ್ ಮೂಲಕ ಮಾರುಕಟ್ಟೆ ಶುಲ್ಕ ಪಾವತಿಸಿ, ಸಾಗಾಣಿಕೆ ಪರವಾನಗಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಮಾರುಕಟ್ಟೆ ಶುಲ್ಕದ ಜತೆಗೆ, ಬಳಕೆದಾರರ ಶುಲ್ಕ, ಬಾಡಿಗೆ ಸೇರಿದಂತೆ ಎಲ್ಲ ಹಣಕಾಸಿನ ವಹಿವಾಟನ್ನೂ ಆನ್‌ಲೈನ್ ಮೂಲಕವೇ ಪಾವತಿಸಲು ₹10 ಕೋಟಿ ವೆಚ್ಚದಲ್ಲಿ ಡಿಜಿಟಲೀಕರಣ ಕಾರ್ಯ ಕೈಗೊಂಡು, ಆನ್‌ಲೈನ್ ಮೂಲಕವೇ ₹30.48 ಕೋಟಿ ಶುಲ್ಕ ಸಂಗ್ರಹಿಸಲಾಗಿದೆ.

ತೊಗರಿ–ಕಡಲೆಗೆ ಬೆಂಬಲ ಬೆಲೆ

ತೊಗರಿ ಮತ್ತು ಕಡಲೆಯನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದ್ದು, ಪ್ರತಿ ಕ್ವಿಂಟಲ್ ತೊಗರಿಗೆ ₹7,550 ಹಾಗೂ ಕಡಲೆಗೆ ₹5,650 ನಿಗದಿಪಡಿಸಲಾಗಿದೆ. ರಾಜ್ಯದಲ್ಲಿ ತೊಗರಿ ಬೆಳೆಯನ್ನು 15.02 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆಲಾಗುತ್ತಿದೆ. ಅಂದಾಜು 11.96 ಲಕ್ಷ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ವಿಜಯಪುರ, ಕೊಪ್ಪಳ ಬೆಳಗಾವಿ, ಬಳ್ಳಾರಿ, ವಿಜಯನಗರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಖರೀದಿ ಕೇಂದ್ರ ಆರಂಭಿಸಲಾಗುವುದು. ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ಕೇಂದ್ರ ಸರ್ಕಾರ ₹3,06,150 ಟನ್ ಖರೀದಿಗೆ ಅನುಮತಿ ನೀಡಿದೆ.

6.63 ಲಕ್ಷ ಟನ್ ಕಡಲೆ ಉತ್ಪಾದನೆ ನಿರೀಕ್ಷೆ

10.03 ಲಕ್ಷ ಹೆಕ್ಟೇರ್‌ನಲ್ಲಿ ಕಡಲೆ ಬೆಳೆಯಲಾಗುತ್ತಿದೆ. 6.63 ಲಕ್ಷ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಧಾರವಾಡ, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ಗದಗ, ಬೆಳಗಾವಿ, ವಿಜಯಪುರ, ಕಲಬುರಗಿ, ಯಾದಗಿರಿ, ಬೀದರ್, ಬಾಗಲಕೋಟೆ, ದಾವಣಗೆರೆ, ಚಿಕ್ಕಮಗಳೂರು ಮತ್ತು ರಾಯಚೂರು ಜಿಲ್ಲೆಗಳಲ್ಲಿ ಖರೀದಿ ಕೇಂದ್ರ ಆರಂಭಿಸಲಾಗುವುದು. ಬೆಂಬಲ ಬೆಲೆಯಲ್ಲಿ 96,498 ಟನ್ ಕಡಲೆ ಖರೀದಿ ಮಾಡಲಾಗುವುದು.

ಜಾಗೃತ ದಳ ರಚನೆ: ₹72,000 ಕೋಟಿ ವಹಿವಾಟು

ಕೃಷಿ ಉತ್ಪನ್ನಗಳ ಅಕ್ರಮ ಸಾಗಾಣಿಕೆ ತಡೆಗೆ 4 ಕಂದಾಯ ವಿಭಾಗಗಳಲ್ಲಿ ಜಾಗೃತ ದಳ ರಚಿಸಲಾಗಿದ್ದು, ಒಟ್ಟು ₹85.45 ಲಕ್ಷ ಶುಲ್ಕ ದಂಡ ಸಂಗ್ರಹ ಮಾಡಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಹೊರ ರಾಜ್ಯಗಳಿಂದ ತಂದು ಮಾರಾಟ ಮಾಡುವ ಕೃಷಿ ಉತ್ಪನ್ನಗಳಿಗೂ ಮಾರುಕಟ್ಟೆ ಸೆಸ್ ಸಂಗ್ರಹಕ್ಕೆ ಕಾನೂನು ತಿದ್ದುಪಡಿ ತರಲಾಗಿದೆ. ಈ ಸೆಸ್ ಪಾವತಿಸದ ಪ್ರಕರಣಗಳಲ್ಲಿ ₹30 ಲಕ್ಷಕ್ಕೂ ಅಧಿಕ ದಂಡ ವಸೂಲು ಮಾಡಲಾಗಿದೆ. ಜಾಗೃತ ದಳ ರಚನೆ ನಂತರ ₹45,000 ಕೋಟಿ ಇದ್ದ ಮಾರುಕಟ್ಟೆ ವಹಿವಾಟು ₹72,000 ಕೋಟಿಯನ್ನು ದಾಟಿದೆ.

ಸಚಿವರು ಹಾಕಿಕೊಂಡಿರುವ ನೂತನ ಯೋಜನೆಗಳು

1. 2025–25ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ಹಲವು ಹೊಸ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.
2. ರಾಜ್ಯದ ಎಲ್ಲ ಎಪಿಎಂಸಿಗಳಲ್ಲಿ ಪರವಾನಗಿ ಪಡೆದು ಕಾರ್ಯ ನಿರ್ವಹಿಸುತ್ತಿರುವ ಶ್ರಮಿಕರು ಮೃತರಾದ ಸಂದರ್ಭದಲ್ಲಿ ಅವರ ವಾರಸುದಾರರಿಗೆ ₹1.0 ಲಕ್ಷ ವಿಮಾ ಮೊತ್ತ ನೀಡಲಾಗುತ್ತಿದ್ದು, ಆ ಮೊತ್ತವನ್ನು ₹5.0 ಲಕ್ಷಕ್ಕೆ ಹೆಚ್ಚಿಸುವ ಯೋಜನೆ.
3. ಕೊಪ್ಪಳ ಜಿಲ್ಲೆ ಬೂದುಗುಂಪ ಗ್ರಾಮದಲ್ಲಿ ಕುರಿ ಮತ್ತು ಮೇಕೆ ಮಾರುಕಟ್ಟೆಯನ್ನು ಕೆಕೆಆರ್‌ಡಿಬಿಯಿಂದ ₹25 ಕೋಟಿ ವೆಚ್ಚದಲ್ಲಿ ಅಗತ್ಯ ಮೂಲ ಸೌಲಭ್ಯಗಳೊಂದಿಗೆ ಸ್ಥಾಪಿಸುವ ಯೋಜನೆ.
4. ಕುರಿ ಮತ್ತು ಮೇಕೆ ಸಾಗಾಣಿಕೆದಾರರಿಗೆ ಅನುಕೂಲವಾಗಲು ಬೆಂಗಳೂರಲ್ಲಿ ಅತ್ಯಾಧುನಿಕ ಕುರಿ ಮತ್ತು ಮೇಕೆ ಮಾರುಕಟ್ಟೆ ಪ್ರಾರಂಭಿಸಲಾಗುವುದು.
5. ರಾಯಚೂರಿನಲ್ಲಿ ₹25 ಕೋಟಿ ವೆಚ್ಚದಲ್ಲಿ ಒಣಮೆಣಸಿನಕಾಯಿ ಮಾರುಕಟ್ಟೆ ನಿರ್ಮಾಣ.
6. ರಾಜ್ಯದ ಎಲ್ಲ ಮಾರುಕಟ್ಟೆಗಳನ್ನು ಡಿಜಿಟಲೀಕರಣಗೊಳಿಸಲು ಕ್ರಮ.
7. ಮಂಗಳೂರಿನಲ್ಲಿರುವ ಮಾರುಕಟ್ಟೆಯಲ್ಲಿ ₹35 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಕೃಷಿ ಸಂಕೀರ್ಣ ನಿರ್ಮಾಣದ ವರದಿ ಸಿದ್ಧಪಡಿಸಲಾಗಿದ್ದು, ಯೋಜನೆ ಅನುಷ್ಠಾನಕ್ಕೆ ಕ್ರಮ.
8. ಬೆಂಗಳೂರು ನಗರದಲ್ಲಿ ಸುಸಜ್ಜಿತ ಅಂತರರಾಷ್ಟ್ರೀಯ ಮಟ್ಟದ ವಾಣಿಜ್ಯ ಪುಷ್ಪ ಮಾರುಕಟ್ಟೆ ಎಪಿಎಂಸಿ ವತಿಯಿಂದ ಸ್ಥಾಪನೆಗೆ ಮಾ.29, 2025ರ ಆದೇಶದನ್ವಯ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು, ಯೋಜನೆ ಅನುಷ್ಠಾನಕ್ಕೆ ಕ್ರಮ ವಹಿಸಲಾಗುತ್ತಿದೆ.
9. ರೈತರು ಒತ್ತಡಕ್ಕೆ ಒಳಗಾಗಿ ಕೃಷಿ ಉತ್ಪನ್ನಗಳ ಮಾರಾಟವನ್ನು ತಪ್ಪಿಸುವ ಸಲುವಾಗಿ ಆರ್‌ಐಡಿಎಫ್–29 ಮತ್ತು 30ರ ಅಡಿ, ಆಯ್ದ 15 ಸ್ಥಳಗಳಲ್ಲಿ ಶೀತಲಗೃಹಗಳ ಸ್ಥಾಪನೆಗೆ ಕ್ರಮ, ಕಾಮಗಾರಿ ಪ್ರಗತಿಯಲ್ಲಿದೆ.
10. ಚಿಕ್ಕಬಳ್ಳಾಪುರ, ಕೆಜಿಎಫ್‌ನಲ್ಲಿ ಉಪ ಮಾರುಕಟ್ಟೆಗಳನ್ನು ಸ್ಥಾಪಿಸಲು ಕ್ರಮ
11. ನಬಾರ್ಡ್‌ನ ಆರ್‌ಐಡಿಎಫ್–28, 29 ಮತ್ತು 30ನೇ ಯೋಜನೆಗಳಡಿ ₹538 ಕೋಟಿ ವೆಚ್ಚದಲ್ಲಿ ಎಪಿಎಂಸಿಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ.

ಕನಿಷ್ಠ ಬೆಂಬಲ ಬೆಲೆ

ಕೃಷಿ ಉತ್ಪನ್ನಗಳ ಬೆಲೆ ಕುಸಿತ ಕಂಡಾಗ ಅನ್ನದಾತರ ಹಿತ ಕಾಪಾಡುವ ಉದ್ದೇಶದಿಂದ ರಾಜ್ಯ 16 ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ಖರೀದಿ ಮಾಡಲು 2024–25ನೇ ಸಾಲಿನಲ್ಲಿ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದಿದೆ. ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ 16 ಉತ್ಪನ್ನಗಳನ್ನು ಖರೀದಿ ಮಾಡಲಾಗಿದೆ. ಕಳೆದ ಐದು ವರ್ಷಗಳಲ್ಲಿ ಹೋಲಿಸಿದರೆ 2024–25ನೇ ಸಾಲಿನಲ್ಲಿ ಅತಿ ಹೆಚ್ಚಿನ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಲ್ಲಿ ಖರೀದಿಸಿ ರಾಜ್ಯದ ರೈತರ ಹಿತರಕ್ಷಣೆ ಮಾಡಲಾಗಿದೆ. ಖರೀದಿ ಪ್ರಮಾಣ ಶೇ 50 ರಿಂದ 60 ರಷ್ಟು ಹೆಚ್ಚಳವಾಗಿ, ಈ ಸಾಲಿನಲ್ಲಿ 10 ಲಕ್ಷ ಮೆಟ್ರಿಕ್ ಟನ್ ಪ್ರಮಾಣದ ₹7,000 ಕೋಟಿ ಉತ್ಪನ್ನಗಳನ್ನು ಖರೀದಿ ಮಾಡಲಾಗಿದೆ. ಸುಮಾರು 6.50 ಲಕ್ಷ ರೈತರ ಈ ಯೋಜನೆಯ ಲಾಭ ಪಡೆದಿರುವುದು ದಾಖಲೆಯಾಗಿದೆ.

ಕಲಬುರಗಿಯಲ್ಲಿ ಸಚಿವ ಶಿವಾನಂದ ಎಸ್ ಪಾಟೀಲ ಅವರಿಗೆ ಮುಖಂಡರಾದ ಎಂ.ಬಿ. ಸಜ್ಜನ್, ಶರಣಬಸಪ್ಪ ಮಮಶೆಟ್ಟಿ ಅವರಿಂದ ಮನವಿ ಸಲ್ಲಿಕೆ

ಕಳೆದ 5 ವರ್ಷಗಳಲ್ಲಿ ವಸೂಲಾದ ಮಾರುಕಟ್ಟೆ ಶುಲ್ಕ ಮತ್ತು ಬಳಕೆದಾರರ ಶುಲ್ಕ ವಸೂಲಾತಿ ವಿವರ (ಲಕ್ಷರೂ.ಗಳಲ್ಲಿ)

ವರ್ಷ	ಮಾರುಕಟ್ಟೆ ಶುಲ್ಕ ವಸೂಲಾತಿ	ಬಳಕೆದಾರರ ಶುಲ್ಕ ವಸೂಲಾತಿ	ಒಟ್ಟು ವಸೂಲಾತಿ
2019–20	56170.75	5650.32	61821.07
2020–21	26460.89	3024.46	29485.35
2021–22	16077.40	3846.63	19924.03
2022–23	15610.41	3834.59	19445.00
2023–24	16983.43	4717.97	21701.40
2024–25	43885.60	5954.63	49840.23
2025–26 (ಮೇ ಅಂತ್ಯಕ್ಕೆ)	8563.76	667.83	9231.59



> ಸಚಿವ ಶಿವಾನಂದ ಪಾಟೀಲರು ಎಲ್ಲ ಜಿಲ್ಲೆಗಳಿಗೂ ಪ್ರವಾಸ ಮಾಡಿ, ರೈತರ ಅಭಿಪ್ರಾಯ ಪಡೆದು ಎಪಿಎಂಸಿಯಲ್ಲೇ ವ್ಯಾಪಾರ–ವಹಿವಾಟು ನಡೆಸಲು ಕ್ರಮ ಕೈಗೊಂಡಿದ್ದಾರೆ. ಇದೊಂದು ಉತ್ತಮ ಕೆಲಸ.
> **ಎಚ್.ಆರ್. ಬಸವರಾಜಪ್ಪ**
> ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ

ಹೊಸ ಮೈಲಿಗಲ್ಲು ಸ್ಥಾಪನೆ

2024-25ನೇ ಸಾಲಿನಲ್ಲಿ ಎಪಿಎಂಸಿಗಳಲ್ಲಿ ದಾಖಲೆ ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳ ವಹಿವಾಟು ನಡೆಸಿದೆ. 2023-24ನೇ ಸಾಲಿನಲ್ಲಿ 30 ಲಕ್ಷ ಮೆಟ್ರಿಕ್ ಟನ್ನಷ್ಟು ಇದ್ದ ಕೃಷಿ ಉತ್ಪನ್ನಗಳ ವಹಿವಾಟು 2024-25ನೇ ಸಾಲಿನಲ್ಲಿ 164 ಲಕ್ಷ ಮೆಟ್ರಿಕ್ ಟನ್ (ಪ್ರತಿಶತ 447) ಹೆಚ್ಚಳ ಕಂಡಿದೆ. ವಹಿವಾಟು ಮೊತ್ತವು ₹26,918 ಕೋಟಿಯಿಂದ ₹72,413 ಕೋಟಿಗೆ (ಪ್ರತಿಶತ 169) ತಲುಪಿರುವುದು ದೊಡ್ಡ ಮೈಲಿಗಲ್ಲಾಗಿದೆ. ಎಪಿಎಂಸಿಗಳಲ್ಲಿ ಪಾರದರ್ಶಕ ವ್ಯವಸ್ಥೆ, ಆನ್ಲೈನ್ ಮಾರುಕಟ್ಟೆ ಶುಲ್ಕ ಸಂಗ್ರಹ ಹಾಗೂ ಪರಿಣಾಮಕಾರಿ ಕ್ರಮಗಳಿಂದ ಈ ಸಾಧನೆ ಸಾಧ್ಯವಾಗಿದೆ.

ಬೆಂಬಲ ಬೆಲೆ ಹೆಚ್ಚಳ

ಈಗ ನಿಗದಿಪಡಿಸಿರುವ ಬೆಂಬಲ ಬೆಲೆ ಕಡಿಮೆಯಾಗಿದ್ದು, ಹೆಚ್ಚಳ ಮಾಡಬೇಕು ಎಂಬುದು ರಾಜ್ಯ ಸರ್ಕಾರದ ಬೇಡಿಕೆಯಾಗಿದ್ದು, ಅದಕ್ಕೆ ಸ್ಪಂದಿಸಿದ ಕೇಂದ್ರ ಸರ್ಕಾರ 2025-26ನೇ ಸಾಲಿಗೆ 14 ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಹೆಚ್ಚಳ ಮಾಡಿದೆ.

ಎಫ್‌ಎಕ್ಯೂ ಗುಣಮಟ್ಟ ಉತ್ಪನ್ನಗಳು	ಪ್ರಭೇದ	2025–26ನೇ ಸಾಲಿಗೆ ಎಂಎಸ್‌ಪಿ (ಪ್ರತಿ ಕ್ವಿಂಟಾಲ್ ರೂ.ಗಳಲ್ಲಿ)
ಭತ್ತ	ಸಾಮಾನ್ಯ	2,369
	ಗ್ರೇಡ್–ಎ	2,389
ಬಿಳಿಜೋಳ	ಹೈಬ್ರೀಡ್	3,699
	ಮಾಲ್ದಂಡಿ	3,749
ಸಜ್ಜೆ	ಎಫ್‌ಎಕ್ಯೂ	2,755
ರಾಗಿ	ಎಫ್‌ಎಕ್ಯೂ	4,886
ಮೆಕ್ಕೆಜೋಳ	ಎಫ್‌ಎಕ್ಯೂ	2,400
ತೊಗರಿ	ಎಫ್‌ಎಕ್ಯೂ	8,000
ಹೆಸರು	ಎಫ್‌ಎಕ್ಯೂ	8,768
ಉದ್ದು	ಎಫ್‌ಎಕ್ಯೂ	7,800
ಶೇಂಗಾ (ಸಿಪ್ಪೆ ಸಹಿತ)	ಎಫ್‌ಎಕ್ಯೂ	7,263
ಸೂರ್ಯಕಾಂತಿ	ಎಫ್‌ಎಕ್ಯೂ	7,721
ಸೋಯಾಬೀನ್ (ಹಳದಿ)	ಎಫ್‌ಎಕ್ಯೂ	5,328
ಎಳ್ಳು	ಎಫ್‌ಎಕ್ಯೂ	9,846
ಹುಚ್ಚೆಳ್ಳು	ಎಫ್‌ಎಕ್ಯೂ	9,537
ಹತ್ತಿ	ಮಧ್ಯಮ ಎಳೆ	7,710
	ಉದ್ದನೆ ಎಳೆ	8,110

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಚೇತನ ತಂದ ಶಿವಾನಂದ ಪಾಟೀಲ



ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆಗೆ ಹಿಂದಿನ ಸರ್ಕಾರ ತಂದಿದ್ದ ತಿದ್ದುಪಡಿಯನ್ನು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆ ಹಿಂದಕ್ಕೆ ಪಡೆದು ನುಡಿದಂತೆ ನಡೆದಿದೆ. ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಕಾಯ್ದೆ ಹಿಂದಕ್ಕೆ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರೈತಸ್ನೇಹಿ ಸರ್ಕಾರ ಎನಿಸಿದೆ.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆಯ ಮರುಸ್ಥಾಪನೆಯಿಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣದಲ್ಲಿ ₹ 72,000 ಕೋಟಿಗೂ ಅಧಿಕ ಮೌಲ್ಯದ ಕೃಷಿ ಉತ್ಪನ್ನಗಳ ಆವಕವಾಗಿವೆ. ಕೇವಲ ಕೃಷಿ ಉತ್ಪನ್ನಗಳ ಒಳಬರುವಿಕೆ ಮಾತ್ರವಲ್ಲ ಮಾರುಕಟ್ಟೆ ಶುಲ್ಕ ಸಂಗ್ರಹಣೆಯಲ್ಲೂ ಕೂಡ ಗಣನೀಯ ಏರಿಕೆಯಾಗಿ, 2024-25ನೇ ಸಾಲಿನಲ್ಲಿ ₹498.40 ಕೋಟಿ ಶುಲ್ಕ ಸಂಗ್ರಹಣೆಯಾಗಿದೆ.

ರಾಜ್ಯದಲ್ಲಿ ಒಟ್ಟು 171 ಮುಖ್ಯ ಮಾರುಕಟ್ಟೆಗಳು ಹಾಗೂ 410 ಉಪ ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿದ್ದು, ಎಲ್ಲ ಮಾರುಕಟ್ಟೆಗಳಲ್ಲಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಲಾಗುತ್ತಿದೆ. ಎಪಿಎಂಸಿ ಕಾಯ್ದೆ ಮರುಸ್ಥಾಪನೆ ನಂತರ 2024-25ನೇ ಸಾಲಿನಲ್ಲಿ ಮಾರುಕಟ್ಟೆ ಶುಲ್ಕ ಪಾವತಿಸದೆ ವಂಚಿಸುತ್ತಿದ್ದ 6,230 ಪ್ರಕರಣಗಳಲ್ಲಿ ₹1.60 ಕೋಟಿ ಮಾರುಕಟ್ಟೆ ಶುಲ್ಕ ಮತ್ತು ₹4.80 ಕೋಟಿ ದಂಡ ಸೇರಿ ಒಟ್ಟು ₹6.80 ಕೋಟಿ ಸಂಗ್ರಹ ಮಾಡಲಾಗಿದೆ.

ರಾಜ್ಯದ ನಾಲ್ಕು ವಿಭಾಗಗಳಲ್ಲಿ ಕಾನೂನು ಜಾರಿಕೋಶ ಸ್ಥಾಪನೆ ಮಾಡಲಾಗಿದ್ದು, ನಿಯಂತ್ರಣಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸಹಕಾರಿಯಾಗಿದೆ. ಆರ್ಥಿಕವಾಗಿ ಹಿಂದುಳಿದ ಮಾರುಕಟ್ಟೆಗಳ ಅಭಿವೃದ್ಧಿಗಾಗಿ ಸರ್ಕಾರ ಮಾರುಕಟ್ಟೆ ಅಭಿವೃದ್ಧಿ ನೆರವು ನಿಧಿ ಸ್ಥಾಪನೆಗೆ ತಿದ್ದುಪಡಿ ಮೂಲಕ ಸಾಂಸ್ಥಿಕ ವ್ಯವಸ್ಥೆ ಮಾಡಲು ಕ್ರಮ ಕೈಗೊಂಡಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಸಂಗ್ರಹ ಮಾಡುವ 60 ಪೈಸೆ ಶುಲ್ಕದಲ್ಲಿ 3 ಪೈಸೆಯನ್ನು ಮಾರುಕಟ್ಟೆ ನೆರವು ನಿಧಿಗೆ ಜಮಾ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ನಿಧಿಯನ್ನು ಆರ್ಥಿಕವಾಗಿ ಹಿಂದುಳಿದ ಮಾರುಕಟ್ಟೆ ಸಮಿತಿಗಳಲ್ಲಿ ಮೂಲ ಸೌಕರ್ಯ ನಿರ್ಮಿಸಲು ವಿನಿಯೋಗಿಸುವ ಯೋಜನೆ ರೂಪಿಸಿರುವುದು ರೈತ ಪರ ಕಾಳಜಿ ಸೂಚಿಸುತ್ತದೆ.

■ **ರೈತರ ಹಿತದೃಷ್ಟಿಯಿಂದ ಕೈಗೊಂಡಿರುವ ಕ್ರಮಗಳು**

- ಕಬ್ಬು ಬೆಳೆಗಾರರ ಹಿತರಕ್ಷಣೆ ಮತ್ತು ತೂಕದಲ್ಲಿನ ವಂಚನೆ ತಡೆಗೆ ಎಲ್ಲ ಸಕ್ಕರೆ ಕಾರ್ಖಾನೆಗಳ ಬಳಿ ಎಪಿಎಂಸಿಗಳ ಮೂಲಕ ಡಿಜಿಟಲ್ ತೂಕದ ಯಂತ್ರಗಳನ್ನು ಸ್ಥಾಪಿಸಲು ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು, ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ.
- ಎಪಿಎಂಸಿಗಳಲ್ಲಿ ದೈನಂದಿನ ಕಾರ್ಯ ಚಟುವಟಿಕೆಗಳನ್ನು Centre for Smart Governance ಸಹಾಯದೊಂದಿಗೆ ಮಾರುಕಟ್ಟೆ ಸಮಿತಿಗಳ ಸ್ವಂತ ನಿಧಿಯಿಂದ ಡಿಜಿಟಲೀಕರಣಗೊಳಿಸಲು ERP ಯನ್ನು (Enterprise Resource Planning) ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.
- ರೈತರು ಒತ್ತಡಕ್ಕೆ ಒಳಗಾಗಿ ಕೃಷಿ ಉತ್ಪನ್ನಗಳ ಮಾರಾಟ ಮಾಡುವುದನ್ನು ತಪ್ಪಿಸಲು ಆರ್‌ಡಿಎಫ್-29 ಮತ್ತು 30ರ ಅಡಿಯಲ್ಲಿ ಆಯ್ದ 15 ಸ್ಥಳಗಳಲ್ಲಿ ಶೀತಲಗೃಹಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.
- ಎಪಿಎಂಸಿಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಕೇಂದ್ರಗಳನ್ನು ನೋಡಲ್ ಸಂಸ್ಥೆ ಬೆಸ್ಕಾಂನಿಂದ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.
- ಆರ್‌ಡಿಎಫ್-28ರ ಅಡಿಯಲ್ಲಿ ಅಂದಾಜು ₹179 ಕೋಟಿ ವೆಚ್ಚದಲ್ಲಿ ಆಯ್ದ 18 ಕಾಮಗಾರಿಗಳನ್ನು ಹಾಗೂ ಆರ್‌ಡಿಎಫ್-29ರ ಅಡಿಯಲ್ಲಿ ಸುಮಾರು ₹210 ಕೋಟಿ ವೆಚ್ಚದಲ್ಲಿ ಆಯ್ದ 70 ಕಾಮಗಾರಿಗಳನ್ನು ಹಾಗೂ ಆರ್‌ಡಿಎಫ್–30ರ ಅಡಿಯಲ್ಲಿ ಅಂದಾಜು ₹145 ಕೋಟಿ ವೆಚ್ಚದಲ್ಲಿ 10 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

■ **ಶೂನ್ಯ ತ್ಯಾಜ್ಯ ತರಕಾರಿ ಮಾರುಕಟ್ಟೆ**

- ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸುವ ಮೂಲಕ ಶೂನ್ಯ ತ್ಯಾಜ್ಯ ತರಕಾರಿ ಮಾರುಕಟ್ಟೆಗಳನ್ನಾಗಿ ಪರಿವರ್ತಿಸಲು ಬೆಂಗಳೂರು, ಮೈಸೂರು ಮತ್ತು ಕೋಲಾರಗಳಲ್ಲಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.

■ **ಕಾಯಕ ನಿಧಿ ಮೊತ್ತ ಹೆಚ್ಚಳ**

- ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರಮಿಕರು ಮರಣ ಹೊಂದಿದಲ್ಲಿ ಮೃತರ ಶವ ಸಂಸ್ಕಾರಕ್ಕಾಗಿ ಕಾಯಕ ನಿಧಿ ಯೋಜನೆಯಲ್ಲಿ ನೀಡುವ ಮೊತ್ತವನ್ನು ₹10,000 ದಿಂದ ₹25,000ಕ್ಕೆ ಹೆಚ್ಚಳ ಮಾಡಲಾಗಿದೆ.

■ **ರಾಯಚೂರಿನಲ್ಲಿ ಒಣಮೆಣಸಿನಕಾಯಿ ಮಾರುಕಟ್ಟೆ**

- ಆರ್‌ಡಿಎಫ್-30ರ ಅಡಿಯಲ್ಲಿ ರಾಯಚೂರಿನಲ್ಲಿ ಅಂದಾಜು ₹25 ಕೋಟಿ ವೆಚ್ಚದಲ್ಲಿ ಒಣಮೆಣಸಿನಕಾಯಿ ಮಾರುಕಟ್ಟೆ ನಿರ್ಮಿಸಲು ಅನುಮೋದನೆ ದೊರೆತಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

■ **ಮಂಗಳೂರಲ್ಲಿ ಕೃಷಿ ಸಂಕೀರ್ಣ**

- ಮಂಗಳೂರಿನ ನೆಲ್ಲಿಕಾಯಿ ರಸ್ತೆಯಲ್ಲಿರುವ ಮಾರುಕಟ್ಟೆಯಲ್ಲಿ ₹35 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಕೃಷಿ ಸಂಕೀರ್ಣವನ್ನು ನಿರ್ಮಿಸಲು ವಿಸ್ತೃತ ವರದಿ ಸಿದ್ಧಪಡಿಸಲಾಗಿದ್ದು, ಯೋಜನೆಯ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ.

■ **ಬೆಂಗಳೂರಲ್ಲಿ ಪುಷ್ಪ ಮಾರುಕಟ್ಟೆ**

- ರಾಜ್ಯದಲ್ಲಿ ಸುಮಾರು 40 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿರುವ ಪುಷ್ಪ ಬೆಳೆಯ ಮಾರಾಟ ಮತ್ತು ರಫ್ತು ಉತ್ತೇಜಿಸಲು ಬೆಂಗಳೂರಿನಲ್ಲಿ ಸುಸಜ್ಜಿತವಾದ ಅಂತಾರಾಷ್ಟ್ರೀಯ ಮಟ್ಟದ ವಾಣಿಜ್ಯ ಪುಷ್ಪ ಮಾರುಕಟ್ಟೆಯನ್ನು ಎಪಿಎಂಸಿಯಿಂದ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

■ **ಸಾಗಾಣಿಕೆ ಪರ್ಮಿಟ್**

- ಲೈಸೆನ್ಸ್ ಪಡೆದ ವರ್ತಕರು ಮಾರುಕಟ್ಟೆ ಪ್ರಾಂಗಣದ ಒಳಗಡೆ ರೈತರಿಂದ ನೇರವಾಗಿ ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಖರೀದಿಸುವ ವಹಿವಾಟಿಗೆ ಸಂಬಂಧಿಸಿದಂತೆ ಏಕೀಕೃತ ಮಾರಾಟ ವೇದಿಕೆ ಅಡಿಯಲ್ಲಿ ಆನ್ಲೈನ್ ಮೂಲಕ ಮಾರುಕಟ್ಟೆ ಶುಲ್ಕ ಪಾವತಿಸಿ ಸಾಗಾಣಿಕೆ ಪರ್ಮಿಟ್ ನಮೂನೆ 35-ಎ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

■ **ಬೆಂಬಲ ಬೆಲೆಯಲ್ಲಿ 16 ಕೃಷಿ ಉತ್ಪನ್ನ ಖರೀದಿ**

- ಕೃಷಿ ಉತ್ಪನ್ನಗಳ ಬೆಲೆ ಕುಸಿತ ಕಂಡಾಗ ರೈತರ ಹಿತರಕ್ಷಣೆ ಉದ್ದೇಶದಿಂದ ರಾಜ್ಯ ಸರ್ಕಾರ 16 ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ಖರೀದಿ ಮಾಡಲು 2024-25ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದಿದೆ. ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ 16 ಕೃಷಿ, ತೋಟಗಾರಿಕೆ ಉತ್ಪನ್ನಗಳನ್ನು ಖರೀದಿ ಮಾಡಲಾಗಿದೆ.
- ಕಳೆದ ಐದು ವರ್ಷಗಳಿಗೆ ಹೋಲಿಕೆ ಮಾಡಿದಾಗ 2024-25ನೇ ಸಾಲಿನಲ್ಲಿ ಅತಿ ಹೆಚ್ಚಿನ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಲ್ಲಿ ಖರೀದಿಸಲಾಗಿದೆ. ಖರೀದಿ ಪ್ರಮಾಣ ಪ್ರತಿಶತ 50ರಿಂದ 60ರಷ್ಟು ಹೆಚ್ಚಾಗಿದೆ.
- 2024-25ನೇ ಸಾಲಿನಲ್ಲಿ ಅಂದಾಜು 10 ಲಕ್ಷ ಮೆಟ್ರಿಕ್ ಟನ್ ಪ್ರಮಾಣದ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ಅಂದಾಜು ₹7,000 ಕೋಟಿ ಮೊತ್ತದಲ್ಲಿ ಖರೀದಿ ಮಾಡಲಾಗಿದ್ದು, 6.50 ಲಕ್ಷ ರೈತರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ.

■ **ಸಿಬ್ಬಂದಿ ಕೊರತೆ ನಡುವೆ ಉತ್ತಮ ಸಾಧನೆ**

ಕೃಷಿ ಮಾರಾಟ ಇಲಾಖೆಯಲ್ಲಿ 3,471 ಮಂಜೂರಾದ ಹುದ್ದೆಗಳಿದ್ದು, ಪ್ರಸ್ತುತ 1003 ಹುದ್ದೆಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಶೇ. 71ರಷ್ಟು ಸಿಬ್ಬಂದಿ ಕೊರತೆ ನಡುವೆಯೂ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಮಾರುಕಟ್ಟೆ ಸುಧಾರಣೆ ಮತ್ತು ಮಾರುಕಟ್ಟೆ ಶುಲ್ಕದ ಪ್ರಮಾಣ ಗಣನೀಯವಾಗಿ ಏರಿಕೆಯಾಗಿರುವುದು ಕಾರ್ಯಕ್ಷಮತೆಗೆ ಸಾಕ್ಷಿಯಾಗಿದೆ.

ಸೆಸ್‌ನಲ್ಲಿ ಗಣನೀಯ ಸಾಧನೆ

ರಾಜ್ಯ ಸರ್ಕಾರ ಎಪಿಎಂಸಿ ಕಾಯ್ದೆಯನ್ನು ಹಿಂಪಡೆಯುವ ಪೂರ್ವದಲ್ಲಿ ಮಾರುಕಟ್ಟೆ ಸೆಸ್ ಶೇ.1.5 ರಷ್ಟಿದ್ದು, ಆಗ ಸೆಸ್ ಪ್ರಮಾಣ ₹628 ಕೋಟಿ ಇತ್ತು. ತಿದ್ದುಪಡಿ ಕಾಯ್ದೆ ಜಾರಿ ನಂತರ ಸೆಸ್ ಪ್ರಮಾಣ ₹294 ಕೋಟಿಗೆ ಕುಸಿದಿತ್ತು. ತಿದ್ದುಪಡಿ ಕಾಯ್ದೆ ಹಿಂತೆಗೆದುಕೊಂಡ ನಂತರ ಸೆಸ್ ಪ್ರಮಾಣವನ್ನು 60 ಪೈಸೆಗೆ ಇಳಿಸಿದರೂ ₹498 ಕೋಟಿ ಸೆಸ್ ಸಂಗ್ರಹ ಮಾಡಿರುವುದು ಗಮನಾರ್ಹ.

₹400 ಕೋಟಿ ಪ್ರೋತ್ಸಾಹಧನ

ರಾಜ್ಯ ಸರ್ಕಾರ ಕೊಬ್ಬರಿಗೆ ₹1,500 ಹಾಗೂ ತೊಗರಿಗೆ ₹450 ಹೆಚ್ಚುವರಿ ಪ್ರೋತ್ಸಾಹ ಧನ ನೀಡಿದ್ದು, ಈ ಉದ್ದೇಶಕ್ಕಾಗಿ ಒಟ್ಟು ₹400 ಕೋಟಿ ಬಿಡುಗಡೆ ಮಾಡಲಾಗಿದೆ.

ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ ₹12,000 ಬೆಂಬಲ ಬೆಲೆಯೊಂದಿಗೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ '₹1,500 ಪ್ರೋತ್ಸಾಹ ಧನ' ಸೇರಿಸಿ ಒಟ್ಟು 58,893 ರೈತರಿಂದ 6.81 ಲಕ್ಷ ಕ್ವಿಂಟಾಲ್ ಖರೀದಿ ಮಾಡಲಾಗಿದೆ. ತೊಗರಿಗೆ ಪ್ರತಿ ಕ್ವಿಂಟಾಲ್‌ಗೆ ₹7,550 ಬೆಂಬಲ ಬೆಲೆಯೊಂದಿಗೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ '₹450 ಪ್ರೋತ್ಸಾಹ ಧನ' ಸೇರಿಸಿ ಒಟ್ಟು 1,42,979 ರೈತರಿಂದ 21.63 ಲಕ್ಷ ಕ್ವಿಂಟಾಲ್ ತೊಗರಿ ಖರೀದಿ ಮಾಡಲಾಗಿದೆ. ರಾಜ್ಯ ಸರ್ಕಾರದಿಂದ ಬೆಂಬಲ ಬೆಲೆಯಲ್ಲಿ ಖರೀದಿ ಆರಂಭಿಸಿದ ನಂತರ ಕೊಬ್ಬರಿ ಬೆಲೆಯಲ್ಲಿ ಸ್ಥಿರತೆ ಸಾಧಿಸಲಾಗಿದ್ದು, ಈ ಹಿಂದಿನ ವರ್ಷಗಳಲ್ಲಿ ಕ್ವಿಂಟಾಲ್‌ಗೆ ₹12,000 ದಿಂದ ₹13,000 ಇದ್ದ ಕೊಬ್ಬರಿ ಬೆಲೆ ಈ ವರ್ಷ ₹22,000 ದಾಟಿದೆ.

ಹೃದಯಾಘಾತ: ಚಾಲಕರಿಗೆ ಹೆಚ್ಚು ಅಪಾಯ

ಆಟೊ ರಿಕ್ಷಾ, ಕ್ಯಾಬ್ ಚಾಲಕರ ಹೃದಯ ತಪಾಸಣೆಗೆ ತಜ್ಞರ ಸಮಿತಿ ಶಿಫಾರಸು • ಹಾಸನದಲ್ಲಿ ಹೃದಯಾಘಾತ ಪ್ರಕರಣ ಏರಿಕೆಯಾಗಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನದಲ್ಲಿ ಹೃದಯಾಘಾತ ಮರಣ ಪ್ರಕರಣಗಳು ದಿಢೀರ್ ಏರಿಕೆಯಾಗಿಲ್ಲ ಎನ್ನುವುದನ್ನು ಖಚಿತಪಡಿಸಿರುವ ತಜ್ಞರ ಸಮಿತಿ, ಈ ಪ್ರಕರಣಗಳ ಅಧ್ಯಯನದ ಆಧಾರದಲ್ಲಿ ಹೃದಯಾಘಾತಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅಪಾಯ ಎದುರಿಸುತ್ತಿರುವ ಸಾರ್ವಜನಿಕ ಸಾರಿಗೆ ಚಾಲಕರಿಗೆ ಹೃದಯ ತಪಾಸಣೆ ನಡೆಸಲು ಶಿಫಾರಸು ಮಾಡಿದೆ.

ಹಾಸನದಲ್ಲಿ ಮೇ ಮತ್ತು ಜೂನ್ ತಿಂಗಳಲ್ಲಿ ವರದಿಯಾದ ಹೃದಯಾಘಾತ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಿರುವ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್ ಅವರ ಅಧ್ಯಕ್ಷತೆಯ ತಜ್ಞರ ಸಮಿತಿ, ಗುರುವಾರ ಇಲ್ಲಿ ವರದಿ ಬಿಡುಗಡೆ ಮಾಡಿತು.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಹಾಸನ ಸೇರಿದಂತೆ ರಾಜ್ಯದ ಯಾವುದೇ ಭಾಗದಲ್ಲಿ ಹೃದಯಾಘಾತ ಮರಣ ಪ್ರಕರಣಗಳು ದಿಢೀರ್ ಏರಿಕೆಯಾಗಿಲ್ಲ. ಹಾಸನದಲ್ಲಿ 2024ರ ಮೇ ಮತ್ತು ಜೂನ್ ತಿಂಗಳಲ್ಲಿ 19 ಹೃದಯಾಘಾತ ಮರಣ ಪ್ರಕರಣಗಳು ವರದಿಯಾಗಿದ್ದವು. ಈ ವರ್ಷ ಎರಡು ತಿಂಗಳಲ್ಲಿ 20 ಮರಣ ಪ್ರಕರಣಗಳು ವರದಿಯಾಗಿವೆ. ತಜ್ಞರ ಸಮಿತಿಯು ಅಲ್ಲಿ ಇತ್ತೀಚೆಗೆ ವರದಿಯಾದ 24 ಪ್ರಕರಣಗಳನ್ನು ಅಧ್ಯಯನ ಮಾಡಿದ್ದು, ನಾಲ್ಕು ಮರಣ ಪ್ರಕರಣಗಳು ಹೃದಯಾಘಾತ ವಲ್ಲ ಎನ್ನುವುದು ದೃಢಪಟ್ಟಿದೆ. ರಸ್ತೆ ಅಪಘಾತ, ಮೂತ್ರಪಿಂಡ ಕಾಯಿಲೆ, ಗ್ಯಾಸ್ಟ್ರೋಎಂಟರೈಟಿಸ್ ಮತ್ತು ವಿದ್ಯುತ್ ಆಘಾತದಿಂದ ನಾಲ್ವರು ಮೃತಪಟ್ಟಿದ್ದಾರೆ. 10 ಮರಣ ಪ್ರಕರಣಗಳಿಗೆ ಮಾತ್ರ ಹೃದಯಾಘಾತ ಕಾರಣ' ಎಂದು ಹೇಳಿದರು.

'ಹೃದಯಾಘಾತದಿಂದ ವರದಿಯಾದ 10 ಮರಣ ಪ್ರಕರಣಗಳಲ್ಲಿ ಮೂವರಿಗೆ ಹೃದಯ ಸಂಬಂಧಿ ಕಾಯಿಲೆಯಿತ್ತು. ಉಳಿದ ಏಳು ಪ್ರಕರಣಗಳಲ್ಲಿ ಶವ ಪರೀಕ್ಷೆ ಹಾಗೂ ಇಸಿಜಿ ಪರೀಕ್ಷೆಯಿಂದ ಮರಣಕ್ಕೆ ಹೃದಯಾಘಾತವೇ ಕಾರಣ ಎನ್ನುವುದು ಖಚಿತಪಟ್ಟಿದೆ. ಉಳಿದ ಹತ್ತು ಪ್ರಕರಣಗಳು ಸಂಭವನೀಯ ಹೃದಯಾಘಾತ ಮರಣ ಪ್ರಕರಣಗಳಾಗಿವೆ. ಈ ಪ್ರಕರಣಗಳಲ್ಲಿ ಮೃತರು ಅಧಿಕ ರಕ್ತದೊತ್ತಡ, ಮಧುಮೇಹ, ಅತೀವ ಬೊಜ್ಜಿನಂತಹ ಸಮಸ್ಯೆ ಎದುರಿಸುತ್ತಿದ್ದರು' ಎಂದು ವಿವರಿಸಿದರು.

ಚಿಕ್ಕ ವಯಸ್ಸಿನಲ್ಲಿ ಹೃದಯಾಘಾತ: '20 ಮರಣ ಪ್ರಕರಣಗಳಲ್ಲಿ ಶೇ75 ರಷ್ಟು ನಿಖರ ಕಾರಣಗಳನ್ನು ಗುರುತಿಸಲಾಗಿದೆ. ಕೆಲ ಪ್ರಕರಣಗಳಲ್ಲಿ ಶವ ಪರೀಕ್ಷೆಗೆ ಕುಟುಂಬಸ್ಥರು ಸಹಕರಿಸದ ಕಾರಣ ಉಳಿದ ಶೇ25 ರಷ್ಟು ಕಾರಣ ದೃಢಪಡಿಸಲು ಸಾಧ್ಯವಾಗಿಲ್ಲ. ಚಿಕ್ಕ ವಯಸ್ಸಿನವರು ಹೃದಯಾಘಾತದಿಂದ ಮೃತಪಟ್ಟಿರುವುದು ಕಳವಳಕಾರಿ. ಹಾಸನದಲ್ಲಿ ವರದಿಯಾದ ಹೃದಯಾಘಾತ ಮರಣ ಪ್ರಕರಣಗಳಲ್ಲಿ 19, 21, 23, 32, 37, 38 ಮತ್ತು 43 ವರ್ಷದವರೂ ಸೇರಿದ್ದಾರೆ. ಇವರಲ್ಲಿ ನಾಲ್ಕು ಪ್ರಕರಣಗಳ ಶವ ಪರೀಕ್ಷೆ ಮಾಡಲಾಗಿದ್ದು, ಇಬ್ಬರಿಗೆ ಹೃದಯಾಘಾತಕ್ಕೆ ಸಂಬಂಧಿಸಿದಂತೆ ಕೌಟುಂಬಿಕ ಇತಿಹಾಸ ಇರುವುದು ಖಚಿತಪಟ್ಟಿದೆ' ಎಂದು ಹೇಳಿದರು.

ಹಾಸನದಲ್ಲಿ ತಿಂಗಳುವಾರು ಹೃದಯಾಘಾತ ಪ್ರಕರಣ

ತಿಂಗಳು	ಹೃದಯಾಘಾತ ಪ್ರಕರಣ	ಮರಣ ಪ್ರಕರಣ
ಜನವರಿ	178	11
ಫೆಬ್ರುವರಿ	181	10
ಮಾರ್ಚ್	182	10
ಏಪ್ರಿಲ್	200	09
ಮೇ	198	09
ಜೂನ್	159	11

ಅಧ್ಯಯನದ ಮುಖ್ಯಾಂಶಗಳು

- ಹಾಸನದಲ್ಲಿ ಹೃದ್ರೋಗ ಸಂಬಂಧಿ ಸಾವು ಪ್ರಕರಣಗಳು ಹಿಂದಿನಂತೆಯೇ ಇದ್ದು, ಯಾವುದೇ ಹೆಚ್ಚಳ ಸೂಚಿಸುವುದಿಲ್ಲ
- ಬೆಂಗಳೂರಿನ ಜಯದೇವ, ಮೈಸೂರು ಮತ್ತು ಕಲಬುರಗಿ ಕೇಂದ್ರದಲ್ಲಿ ವರದಿಯಾದ ಹೃದ್ರೋಗ ಸಂಬಂಧಿ ಪ್ರಕರಣಗಳ ವಿಶ್ಲೇಷಣೆಯಿಂದಲೂ ಕಳೆದ 6 ತಿಂಗಳಲ್ಲಿ ಹೃದಯ ಸಂಬಂಧಿ ಸಾವು ರಾಜ್ಯದಲ್ಲಿ ಹೆಚ್ಚುತ್ತಿಲ್ಲ
- ಕಿರಿಯ ವಯಸ್ಸಿನಲ್ಲಿ ಹಠಾತ್ ಸಾವುಗಳು ಸಂಭವಿಸುತ್ತಿರುವುದು ಹೃದಯ ಸಂಬಂಧಿ ಕಾಯಿಲೆ ಹೆಚ್ಚುತ್ತಿ ರುವುದನ್ನು ಸೂಚಿಸುತ್ತದೆ

'ಚಾಲಕರಿಗೆ ಹೃದಯ ತಪಾಸಣೆ'

ದಿನೇಶ್ ಗುಂಡೂರಾವ್

'ಹಾಸನದಲ್ಲಿ ಎರಡು ತಿಂಗಳಲ್ಲಿ ವರದಿಯಾದ 20 ಹೃದಯಾಘಾತ ಮರಣ ಪ್ರಕರಣಗಳಲ್ಲಿ 6 ಮಂದಿ ಆಟೊ ರಿಕ್ಷಾ ಮತ್ತು ಕ್ಯಾಬ್ ಚಾಲಕರಾಗಿದ್ದಾರೆ. ಇದರಿಂದಾಗಿ ಆಟೊ ರಿಕ್ಷಾ, ಕ್ಯಾಬ್ ಮತ್ತು ಸಾರ್ವಜನಿಕ ಸಾರಿಗೆ ಚಾಲಕರು ಕಿರಿಯ ವಯಸ್ಸಿನಲ್ಲಿಯೇ ಹೃದ್ರೋಗದ ಅಪಾಯ ಎದುರಿಸುತ್ತಿರುವುದು ತಿಳಿದುಬಂದಿದೆ. ಜಯದೇವ ಸಂಸ್ಥೆಯ ಅಧ್ಯಯನದ ಪ್ರಕಾರವೂ ಹೃದಯಾಘಾತ ಪ್ರಕರಣಗಳಲ್ಲಿ ಶೇ 30 ರಷ್ಟು ಮಂದಿ ಆಟೊ ರಿಕ್ಷಾ ಮತ್ತು ಕ್ಯಾಬ್ ಚಾಲಕ ರಾಗಿದ್ದಾರೆ. ಅವರ ಜೀವನಶೈಲಿ, ಸರಿಯಾಗಿ ಊಟ-ತಿಂಡಿ ಮಾಡದಿರುವುದು ಸೇರಿ ವಿವಿಧ ಕಾರಣಗಳಿವೆ. ತಜ್ಞರ ಸಮಿತಿಯ ಶಿಫಾರಸಿನ ಅನುಸಾರ ಸಾರ್ವಜನಿಕ ಸಾರಿಗೆ ಚಾಲಕರಿಗೆ ಅವರ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಹೃದಯ ತಪಾಸಣೆ ಶಿಬಿರಗಳನ್ನು ನಡೆಸಲಾಗುತ್ತದೆ' ಎಂದು ದಿನೇಶ್ ಗುಂಡೂರಾವ್ ಅವರು ತಿಳಿಸಿದರು.

ಅಪಾಯದ ವರ್ಗದ ಬಗ್ಗೆ ಅಧ್ಯಯನ: 'ಸಾರ್ವಜನಿಕ ಸಾರಿಗೆ ಚಾಲಕರು ಸೇರಿ ಹೃದಯಾಘಾತದ ಅಪಾಯ ಎದುರಿಸುತ್ತಿರುವ ವರ್ಗವನ್ನು ಗುರುತಿಸಲು ಜಯದೇವ ಸಂಸ್ಥೆಯು ಅಧ್ಯಯನ ನಡೆಸಿ, ವರದಿ ನೀಡಲಿದೆ. ಇದರ ಆಧಾರದ ಮೇಲೆ ಅವರಿಗೆ ತಪಾಸಣೆ ತಡೆಸಿ, ಹೃದ್ರೋಗ ತಡೆಯಲು ಕ್ರಮವಹಿಸುತ್ತೇವೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಶೇ 20 ರಷ್ಟು ಒಪಿಡಿ ಹೆಚ್ಚಳ: ರವೀಂದ್ರನಾಥ್

ಕೆ.ಎಸ್. ರವೀಂದ್ರನಾಥ್

'ಹಾಸನದ ಹೃದಯಾಘಾತ ಪ್ರಕರಣಗಳು ಮಾಧ್ಯಮದಲ್ಲಿ ವರದಿಯಾದ ಬಳಿಕ ಹೃದಯ ತಪಾಸಣೆ ಮಾಡಿಸಿಕೊಳ್ಳುವವರ ಸಂಖ್ಯೆ ಏರಿಕೆಯಾಗಿದೆ. ಜಯದೇವ ಹೃದ್ರೋಗ ಸಂಸ್ಥೆಯ ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ಕೇಂದ್ರದಲ್ಲಿ ಹೃದಯ ತಪಾಸಣೆಗೆ ಭೇಟಿ ನೀಡುವ ಹೊರ ರೋಗಿಗಳ ಸಂಖ್ಯೆ ಶೇ 20 ರಷ್ಟು ಹೆಚ್ಚಳವಾಗಿದೆ. ತಪಾಸಣೆಗೆ ಬರುವವರ ಸಂಖ್ಯೆ ಹೆಚ್ಚಳವಾದರೂ ಹೃದ್ರೋಗ ಪ್ರಕರಣಗಳು ಏರಿಕೆಯಾಗಿಲ್ಲ. ಅನಗತ್ಯವಾಗಿ ಆತಂಕ ಪಡುವ ಅಗತ್ಯವಿಲ್ಲ' ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್ ತಿಳಿಸಿದರು.

ಸುದ್ದಿ 2 ನಿಮಿಷ

ಅನ್ನಭಾಗ್ಯ ಯೋಜನೆ: ಜನ ಜಾಗೃತಿಗೆ ನಾಲ್ಕು ಹಂತದ ಸಮಿತಿ

ಬೆಂಗಳೂರು: 'ಅನ್ನಭಾಗ್ಯ' ಯೋಜನೆಯ ಕುರಿತು ಜನರಲ್ಲಿ ಅರಿವು ಮೂಡಿಸಲು, ಕಾಳಸಂತೆ ಮಾರಾಟಕ್ಕೆ ಕಡಿವಾಣ ಹಾಕಲು ನಾಲ್ಕು ಹಂತದಲ್ಲಿ ಜಾಗೃತಿ ಸಮಿತಿಗಳನ್ನು ರಚಿಸಲಾಗುತ್ತಿದೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಈಗಾಗಲೇ ರಾಜ್ಯಮಟ್ಟದ ಸಮಿತಿ ರಚಿಸಲಾಗಿದೆ. ಜಿಲ್ಲಾ, ತಾಲ್ಲೂಕು ಸಮಿತಿಗಳನ್ನು ರಚಿಸುವ ಕಾರ್ಯ ಪ್ರಗತಿಯಲ್ಲಿದೆ. ನ್ಯಾಯಬೆಲೆ ಅಂಗಡಿಗಳ ಮಟ್ಟದ ಸಮಿತಿಗಳನ್ನು ಪುನರ್‌ರಚಿಸಲಾಗಿದೆ. ಈ ಸಮಿತಿಗಳ ಕಾರ್ಯನಿರ್ವಹಣೆ, ಅಧಿಕಾರ ವ್ಯಾಪ್ತಿ ನಿಗದಿಪಡಿಸಲು ನಿಯಮಗಳನ್ನು ರೂಪಿಸಲಾಗಿದೆ. ರಾಜ್ಯಮಟ್ಟದ ಸಮಿತಿಗೆ ಆಹಾರ ಸಚಿವರೇ ಅಧ್ಯಕ್ಷರಾಗಿರುತ್ತಾರೆ. ನ್ಯಾಯಬೆಲೆ ಅಂಗಡಿ ಹಂತದ ಜಾಗೃತಿ ಸಮಿತಿಗೆ ಆ ವ್ಯಾಪ್ತಿಯಲ್ಲಿ ಪಡಿತರ ಚೀಟಿ ಹೊಂದಿರುವ ಮೂವರು ಮಹಿಳೆಯರ ಪ್ರಾತಿನಿಧ್ಯವನ್ನು ಕಡ್ಡಾಯಗೊಳಿಸಲಾಗಿದೆ ಎಂದರು.

ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಹಂತದ ಜಾಗೃತಿ ಸಮಿತಿಗಳ ಅವಧಿ ಎರಡು ವರ್ಷ ಇರುತ್ತದೆ. ಮೂರು ತಿಂಗಳಿಗೆ ಒಮ್ಮೆ ಸಭೆ ಸೇರಬೇಕು. ನ್ಯಾಯಬೆಲೆ ಅಂಗಡಿಗಳ ಹಂತದಲ್ಲಿನ 20,483 ಸಮಿತಿಗಳಿಗೆ ಯಾವುದೇ ಕಾಲಮಿತಿ ನಿಗದಿ ಮಾಡಿಲ್ಲ. ಅವು ನಿರಂತರವಾಗಿ ಕಾರ್ಯನಿರ್ವಹಿಸಲಿದ್ದು, ಪ್ರತಿ ತಿಂಗಳು 7ರಂದು ಸಭೆ ನಡೆಸಲಿವೆ ಎಂದು ಮಾಹಿತಿ ನೀಡಿದರು.

ರಾಜ್ಯಮಟ್ಟದ ಜಾಗೃತಿ ಸಮಿತಿಗೆ ಸಂಸದ ತುಕಾರಾಂ, ಶಾಸಕರಾದ ಇಕ್ಬಾಲ್ ಹುಸೇನ್, ಹರೀಶ್ ಗೌಡ, ವಿಧಾನಪರಿಷತ್ ಸದಸ್ಯ ಬಸವನಗೌಡ ಬಾದರ್ಲಿ, ಎಂ. ನಾರಾಯಣಸ್ವಾಮಿ, ಭೀಮಣ್ಣ, ವಾಣಿ ಆರ್. ಸಗರ್‌ಕರ್, ರೇವತಿ ಅನಂತರಾಮು, ಮೋಹನ್ ಕುಮಾರ್ ದಾನಪ್ಪ ಹಾಗೂ ವಿವಿಧ ಇಲಾಖೆಗಳ ಆರು ಅಧಿಕಾರಿಗಳು ಸದಸ್ಯರಾಗಿ ನೇಮಕವಾಗಿದ್ದಾರೆ. ಆಹಾರ ಇಲಾಖೆ ಕಾರ್ಯದರ್ಶಿ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಾರೆ ಎಂದು ಹೇಳಿದರು.

ಲೈಂಗಿಕ ಕಿರುಕುಳ: ಅಧೀನ ಕಾರ್ಯದರ್ಶಿಗೆ ನೋಟಿಸ್

ಬೆಂಗಳೂರು: ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಕುರಿತು ವಿಚಾರಣೆಗೆ ಹಾಜರಾಗುವಂತೆ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಬಿ. ನಂದಕುಮಾರ್ ಅವರಿಗೆ ಆಂತರಿಕ ದೂರುಗಳ ಸಮಿತಿ ನೋಟಿಸ್ ನೀಡಿದೆ.

ವಿಕಾಸಸೌಧದಲ್ಲಿರುವ ನಗರಾಭಿವೃದ್ಧಿ ಕಚೇರಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಮಹಿಳೆ, ತಾನು ಕೆಲಸ ಮಾಡುವ ಶಾಖೆಯ ಅಧೀನ ಕಾರ್ಯದರ್ಶಿ ವಿರುದ್ಧ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದರು.

ಈ ಕುರಿತು ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ನಗರಾಭಿವೃದ್ಧಿ ಇಲಾಖೆಯ ಆಂತರಿಕ ದೂರು ಸಮಿತಿಗೆ ಪತ್ರ ಬರೆದಿದ್ದರು. ದೂರಿನ ಆಧಾರದಲ್ಲಿ ವಿಚಾರಣೆ ಹಾಜರಾಗುವಂತೆ ಸಮಿತಿ ಅಧ್ಯಕ್ಷೆ ಬಿ.ಎಸ್. ಭಾಗ್ಯ ಅವರು ನೋಟಿಸ್ ಜಾರಿ ಮಾಡಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	122.35	23,571	23,356
ಹಾರಂಗಿ	2,859	2,853.18	5,493	4,000
ಕಬಿನಿ	2,284.00	2,281.77	13,720	12,000
ಹೇಮಾವತಿ	2,922	2,919.90	13,475	12,550
ಲಿಂಗನಮಕ್ಕಿ	1,819	1,797.05	39,430	7,694
ಸೂಪಾ (ಮೀ)	564	537.5	17,658	5,697
ಮಾಣಿ	595	586.39	5,439	-
ತುಂಗಭದ್ರಾ	1,633	1,624.83	46,955	45,492
ಮಲಪ್ರಭಾ	2,079.5	2,069.15	7,331	194
ಘಟಪ್ರಭಾ	2175	2,166.25	14,826	4,757
ಭದ್ರಾ *	186	173.7	14,039	2,303
ಆಲಮಟ್ಟಿ (ಮೀ)	519.6	517.31	1,16,002	1,02,715
ನಾರಾಯಣಪುರ (ಮೀ)	492.25	490.80	1,00,000	760

* ನೆಲಮಟ್ಟದಿಂದ

'ಕೋಮಾ ಸ್ಥಿತಿಯಲ್ಲಿ ರಾಜ್ಯ ಬೇಹುಗಾರಿಕೆ'

ಬೆಂಗಳೂರು: ಗ್ಯಾಂಗ್‌ರೇಪ್, ಕಾಲ್ತುಳಿತ, ಆತ್ಮಹತ್ಯೆ, ಕೊಲೆಗಳ ಕಾರಣಕ್ಕೆ ಕರ್ನಾಟಕ ಸುದ್ದಿ ಆಗುತ್ತಿದೆ. ರಾಜ್ಯದ ಬೇಹುಗಾರಿಕಾ ದಳ ಕೋಮಾ ಸ್ಥಿತಿಗೆ ತಲುಪಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ತನಿಖಾ ಸಂಸ್ಥೆ ರಾಜ್ಯದಲ್ಲಿ ದಾಳಿ ನಡೆಸಿದೆ. ಜೀವಾವಧಿ ಶಿಕ್ಷೆಗೆ ಒಳಗಾದ ಮೂವರನ್ನು ಬಂಧಿಸಿದೆ ಎಂದು ಅವರು ಹೇಳಿದರು.

ಗುರುಪೂರ್ಣಿಮೆ: ಮಂತ್ರಾಲಯಕ್ಕೆ ಭಕ್ತಸಾಗರ

ಪ್ರಜಾವಾಣಿ ವಾರ್ತೆ

ರಾಯಚೂರು: ಆಷಾಢ ಶುಕ್ಲ ಪೂರ್ಣಿಮೆಯ ಪ್ರಯುಕ್ತ ಮಂತ್ರಾಲಯದ ರಾಯರ ಮಠದಲ್ಲಿ ಮೃತ್ತಿಕಾ ಸಂಗ್ರಹಣ ಮಹೋತ್ಸವ ಗುರುವಾರ ಅದ್ದೂರಿಯಾಗಿ ನಡೆಯಿತು.

ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರು ಭವ್ಯ ಮೆರವಣಿಗೆಯಲ್ಲಿ ತೆರಳಿ ತುಳಸಿ ವನಕ್ಕೆ ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಪವಿತ್ರ ಮೃತ್ತಿಕಾ ಸಂಗ್ರಹಿಸಿ ಸುವರ್ಣ ಪಲ್ಲಕ್ಕಿಯಲ್ಲಿ ಇರಿಸಲಾಯಿತು. ವೇದ ಪಠಣ ಮತ್ತು ಭಜನೆ ಮಾಡುತ್ತ ಮೆರವಣಿಗೆ ಮೂಲಕ ಮಠಕ್ಕೆ ತರಲಾಯಿತು. ರಾಯರ ಬೃಂದಾವನದ ಮುಂದೆ ಇರಿಸಿ ಮಂಗಳಾರತಿ ಮಾಡಿದರು.

ರಾಯರ ದಿನವೆಂದೇ ನಂಬಲಾದ ಗುರುವಾರವೇ ಗುರು ಪೂರ್ಣಿಮೆ ಬಂದ ಕಾರಣ ಬುಧವಾರ ರಾತ್ರಿಯೇ ಭಾರಿ ಸಂಖ್ಯೆಯಲ್ಲಿ ಭಕ್ತರು ಬಂದಿದ್ದರು. ತುಂಗಭದ್ರೆ ನದಿ ತಟದಲ್ಲಿ ಸ್ನಾನ ಮಾಡಿ ಪೂಜೆ ಸಲ್ಲಿಸುವ ಮೂಲಕ ರಾಯರ ದರ್ಶನ ಪಡೆದರು.

ಗುರು ಪೂರ್ಣಿಮೆ ಪ್ರಯುಕ್ತ ಮಂತ್ರಾಲಯದಲ್ಲಿ ಭಕ್ತರು ರಾಯರ ದರ್ಶನ ಪಡೆಯಲು ಮಠದ ಹೊರಾಂಗಣದಲ್ಲಿ ಅಪಾರ ಸಂಖ್ಯೆಯಲ್ಲಿ ಸರತಿ ಸಾಲಿನಲ್ಲಿ ನಿಂತಿದ್ದರು ಚಿತ್ರ: ಶ್ರೀನಿವಾಸ ಇನಾಂದಾರ್

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.
ಸಂ:ಪಿಬಿ/ಟೆಂಡರ್ ಪ್ರಕಟಣೆ/AE-1/2025-26/1240 ದಿ:-08.07.202
ಅಲ್ಪಾವದಿ ಇ-ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	PWD/2025-26/RD/WORK_INDENT21887	350.00
2	PWD/2025-26/RD/WORK_INDENT21837	450.00
3	PWD/2024-25/RD/WORK_INDENT18625	250.00
4	PWD/2025-26/IND0109	39.12
5	PWD/2024-25/IND0082	26.20

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ: KPP Portal ನಲ್ಲಿ ಇರುವಂತೆ. 2.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 18.07.2025(16.00 ಗಂಟೆಗೆ). 3.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ: 19.07.2025(16.30 ಗಂಟೆಗೆ). 4.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಅರ್ಥಿಕ ಬಿಡ್ ತೆರೆಯುವ ದಿನಾಂಕ: KPP Portal ನಲ್ಲಿ ಇರುವಂತೆ
NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು kppp Portal ನಲ್ಲಿ ನೊಡಿಕೊಳ್ಳಬಹುದು
ವಾ.ಸಾ.ಸಂ.ಇ/ವಿಜಯನಗರ/2025-26/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/140
ಸಹಿ/-ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-30/532/2025-26 ದಿನಾಂಕ: 10.07.2025
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ
ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : 1) ಚಾಮರಾಜನಗರ ಜಿಲ್ಲೆ, ಬದನಗುಪ್ಪೆ-ಕೆಲಂಬಳ್ಳಿ ಕೈಗಾರಿಕಾ ಪ್ರದೇಶದ ಉಪ ಬಡಾವಣೆ 2 ರಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಡೆಕ್ ಸ್ಲ್ಯಾಬ್ ಮತ್ತು ನೀರು ಸರಬರಾಜು ಕೊಳವೆ ಮಾರ್ಗ ನಿರ್ಮಾಣದೊಂದಿಗೆ ರಸ್ತೆ ಡಾಂಬರೀಕರಣ ಮಾಡುವ ಕಾಮಗಾರಿ.
2) ಮೈಸೂರು ತಾಲ್ಲೂಕು ಮತ್ತು ಜಿಲ್ಲೆಯ ಹೆಬ್ಬಾಳ ಮತ್ತು ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಹೆಚ್.ಡಿ.ಇ.ಪಿ ನೀರು ಸರಬರಾಜು ಕೊಳವೆ ಮಾರ್ಗ ಒದಗಿಸಿ ಅಳವಡಿಸುವುದು ಮತ್ತು ಆರ್‌ಸಿಸಿ ರಸ್ತೆ ಬದಿ ಚರಂಡಿ ನಿರ್ಮಾಣ ಮಾಡುವುದರೊಂದಿಗೆ ರಸ್ತೆ ಮರು ಡಾಂಬರೀಕರಣ ಕಾಮಗಾರಿ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30.07.2025 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು
DIPR/CP/1677/Zen/2025-26

ಖರ್ಗೆ ನಿವಾಸಕ್ಕೆ ಸಿ.ಎಂ ಆಪ್ತ ಸಚಿವರ ದಂಡು

ಪ್ರಜಾವಾಣಿ ವಾರ್ತೆ

ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: 'ಐದು ವರ್ಷವೂ ನಾನೇ ಮುಖ್ಯಮಂತ್ರಿ ಆಗಿ ಮುಂದುವರಿಯಲಿದ್ದೇನೆ' ಎಂದು ನವದೆಹಲಿಯಲ್ಲಿ ಸಿದ್ದರಾಮಯ್ಯ ಪುನರುಚ್ಚರಿಸಿದ ಬೆನ್ನಲ್ಲೆ, ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಸಚಿವರು ಸದಾಶಿವ ನಗರದಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ನಿವಾಸಕ್ಕೆ ದೌಡಾಯಿಸಿ ಚರ್ಚೆ ನಡೆಸಿರುವುದು ರಾಜ್ಯ ರಾಜಕೀಯದಲ್ಲಿ ಕುತೂಹಲ ಮೂಡಿಸಿದೆ.

ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಸಂಜೆ ಪಕ್ಷದ ವರಿಷ್ಠರನ್ನು ಭೇಟಿ ಮಾಡುವ ಮೊದಲೇ ಸುದ್ದಿಗೋಷ್ಠಿ ನಡೆಸಿದ ಸಿದ್ದರಾಮಯ್ಯ, 'ಮುಖ್ಯಮಂತ್ರಿ ಬದಲಾವಣೆಯ ವಿಚಾರ ಊಹಾಪೋಹ' ಎಂದಿದ್ದಾರೆ.

ಅವರ ಹೇಳಿಕೆ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದ್ದಂತೆ, ಸಚಿವರಾದ ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಜಮೀರ್ ಅಹಮದ್‌ಖಾನ್, ಈಶ್ವರ ಖಂಡ್ರೆ, ಶರಣಪ್ರಕಾಶ್ ಪಾಟೀಲ ಮತ್ತು ದಿನೇಶ್ ಗುಂಡೂರಾವ್ ಅವರು ಖರ್ಗೆ ಮನೆಗೆ ತೆರಳಿ ಮಾತುಕತೆ ನಡೆಸಿದರು.

ರಾಜ್ಯ ಸರ್ಕಾರದಲ್ಲಿ ನಾಯಕತ್ವ ಬದಲಾವಣೆ ಕುರಿತ ಚರ್ಚೆಗೆ ತಮ್ಮ ಮಾತಿನ ಮೂಲಕ ಸಿದ್ದರಾಮಯ್ಯ ತೆರೆ ಎಳೆದಿರುವುದು ಕೆಲವು ಸಚಿವರಲ್ಲಿ ಸಂಚಲನ ಮೂಡಿಸಿದೆ. ಸದ್ಯದಲ್ಲೇ ಸಚಿವ ಸಂಪುಟ ಪುನರ್‌ರಚನೆ ವಿಚಾರ ಮುನ್ನಲೆಗೆ ಬರುವ ಸಾಧ್ಯತೆಯಿದೆ. ಈ ಕಾರಣಕ್ಕೆ ಖರ್ಗೆ ಅವರನ್ನು ಸಚಿವರು ಭೇಟಿ ಮಾಡಿದ್ದಾರೆ. ಹೈಕಮಾಂಡ್ ಮಟ್ಟದಲ್ಲಿನ ಬೆಳವಣಿಗೆಗಳ ಬಗ್ಗೆ ಮಾಹಿತಿ ಪಡೆಯುವುದು ಸಚಿವರ ಉದ್ದೇಶವಾಗಿತ್ತು. ಸುಮಾರು 45 ನಿಮಿಷ ಸಚಿವರುಗಳ ಜೊತೆ ಮಾತುಕತೆ ನಡೆಸಿದ ಖರ್ಗೆ, ಬಳಿಕ ದೆಹಲಿಗೆ ತೆರಳಿದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಖರ್ಗೆ ಭೇಟಿ ಬಳಿಕ ಮಾತನಾಡಿದ ಸತೀಶ ಜಾರಕಿಹೊಳಿ, 'ನಾವೆಲ್ಲರೂ ಒಟ್ಟಿಗೆ ಬಂದು ರಾಜ್ಯದ ಸ್ಥಿತಿಯ ಬಗ್ಗೆ ಖರ್ಗೆಯವರ ಜೊತೆ ಚರ್ಚೆ ಮಾಡಿದ್ದೇವೆ. ಅದು ಬಿಟ್ಟು ಬೇರೆ ಏನೂ ಚರ್ಚೆ ಮಾಡಿಲ್ಲ' ಎಂದರು. 'ಖರ್ಗೆಯವರ ಬಳಿ ರಾಜಕೀಯ ಚರ್ಚೆ ಮಾಡಿಲ್ಲ. ಸಿದ್ದರಾಮಯ್ಯ ಅನುಯಾಯಿಗಳು ಎನ್ನುವುದಕ್ಕಿಂತ ನಾವು ಕಾಂಗ್ರೆಸ್ ಅನುಯಾಯಿಗಳು' ಎಂದು ಎಚ್.ಸಿ. ಮಹದೇವಪ್ಪ ಹೇಳಿದರು. 'ನಮ್ಮ ಪಾಡಿಗೆ ನಾವು ಬಂದಿದ್ದೆವು. ಬೇರೆ ಏನೂ ಇಲ್ಲ' ಎಂದು ದಿನೇಶ್ ಗುಂಡೂರಾವ್ ಪ್ರತಿಕ್ರಿಯಿಸಿದರು.

'ಶೇ 10ರಷ್ಟು ಶಾಸಕರಿಗೆ ಸಿ.ಎಂ ಸಂದೇಶ'

'ಪಂದ್ಯ ಮುಗಿಯಿತು ಎಂಬ ಸಂದೇಶವನ್ನು ಸಿದ್ದರಾಮಯ್ಯ ಅವರು ಕೊಟ್ಟಿದ್ದಾರೆ. ಹೀಗಾಗಿ, ಮುಖ್ಯಮಂತ್ರಿ ಬದಲಾವಣೆ ಚರ್ಚೆ ಇಂದಿಗೇ ಮುಗಿಯಬೇಕು. ಯಾರು ಶೇ 10 ರಷ್ಟು ಶಾಸಕರು ಈ ವಿಚಾರ ಮಾತನಾಡುತ್ತಿದ್ದಾರೊ ಅವರಿಗೂ ಸ್ಪಷ್ಟ ಸಂದೇಶವಿದು' ಎಂದು ಸತೀಶ ಜಾರಕಿಹೊಳಿ ಹೇಳಿದರು.

'ಮುಖ್ಯಮಂತ್ರಿ ಹೇಳಿರುವುದರಲ್ಲಿ ಹೊಸದೇನಿಲ್ಲ. ಈಗ ಹೇಳಬೇಕಾದ ಸಂದರ್ಭ ಬಂದಿದೆ. ಅದಕ್ಕೆ ಹೇಳಿದ್ದಾರೆ' ಎಂದು ಸಮರ್ಥಿಸಿಕೊಂಡರು.

'ಮುಖ್ಯಮಂತ್ರಿ ಬದಲಾವಣೆ ಎಲ್ಲಿಯೂ ಚರ್ಚೆ ಆಗಿಲ್ಲ. ಅಧಿಕಾರ ಹಂಚಿಕೆ ಇಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ಶಾಸಕರು ಕೂಡಾ ನಾಯಕತ್ವ ಬದಲಾವಣೆ ಮಾಡುವಂತೆ ಬೇಡಿಕೆ ಇಟ್ಟಿಲ್ಲ. ಅನುದಾನ ನೀಡುವಂತೆ ಎಲ್ಲ ಶಾಸಕರು ಸುರ್ಜೇವಾಲಾ ಬಳಿ ಮನವಿ ಮಾಡಿರಬಹುದು. ಕೇವಲ ಶೇ 10ರಷ್ಟು ಮಂದಿ ನಾಯಕತ್ವದ ಬದಲಾವಣೆ ಬಗ್ಗೆ ಮಾತನಾಡಿರಬಹುದು. ಸುಮಾರು 20 ಶಾಸಕರು ಹೇಳಿರಬಹುದು ಅಷ್ಟೇ. ಮುಖ್ಯಮಂತ್ರಿ ಆಯ್ಕೆ ಮಾಡುವಾಗ ಮತದಾನ ಆಗಿತ್ತು. ಹೆಚ್ಚು ಮತ ಪಡೆದ ಕಾರಣಕ್ಕೆ ಸಿದ್ದರಾಮಯ್ಯ ಅವರನ್ನು ವರಿಷ್ಠರು ಮುಖ್ಯಮಂತ್ರಿ ಮಾಡಿದ್ದಾರೆ. ಹೀಗಾಗಿ, ಮುಖ್ಯಮಂತ್ರಿ ಬೆಂಬಲಕ್ಕೆ ಹೆಚ್ಚು ಶಾಸಕರಿದ್ದಾರೆ' ಎಂದರು.

ಶಾಸಕರ ದಂಡು: ಸತೀಶ ಜಾರಕಿಹೊಳಿ ನಿವಾಸಕ್ಕೆ ಶಾಸಕರಾದ ಕುಣಿಗಲ್ ರಂಗನಾಥ್, ಎಚ್.ಸಿ. ಬಾಲಕೃಷ್ಣ, ಅನಿಲ್ ಚಿಕ್ಕಮಾದು, ಬಸವಂತಪ್ಪ, ಯಾಸೀರ ಅಹಮದ್ ಖಾನ್ ಪಠಾಣ, ತರೀಕೆರೆ ಶ್ರೀನಿವಾಸ್, ದರ್ಶನ್ ಧ್ರುವ ನಾರಾಯಣ್, ಡಿ.ಜಿ. ಶಾಂತನಗೌಡ, ವಿಧಾನ ಪರಿಷತ್ ಸದಸ್ಯ ರಾಜೇಂದ್ರ ಸೇರಿದಂತೆ ಹಲವು ಶಾಸಕರು ಭೇಟಿ ನೀಡಿ ಮಾತುಕತೆ ನಡೆಸಿದರು.

ಮಹದೇವಪ್ಪ- ಸತೀಶ ಪ್ರತ್ಯೇಕ ಚರ್ಚೆ

ಎಚ್.ಸಿ. ಮಹದೇವಪ್ಪ

ಸತೀಶ ಜಾರಕಿಹೊಳಿ

ಖರ್ಗೆ ಅವರನ್ನು ಭೇಟಿ ಮಾಡುವುದಕ್ಕೂ ಮೊದಲು ಎಚ್.ಸಿ. ಮಹದೇವಪ್ಪ ಅವರ ನಿವಾಸಕ್ಕೆ ತೆರಳಿ ಸತೀಶ ಜಾರಕಿಹೊಳಿ ಸಮಾಲೋಚನೆ ನಡೆಸಿರುವುದು ಕೂಡಾ ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಉಭಯ ಸಚಿವರು ಸುಮಾರು 25 ನಿಮಿಷ ಮಾತುಕತೆ ನಡೆಸಿದರು. ಬಳಿಕ ಮಾತನಾಡಿದ ಇಬ್ಬರೂ, ಮುಖ್ಯಮಂತ್ರಿಯ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. 'ಸಿದ್ದರಾಮಯ್ಯ ಶಾಸಕಾಂಗ ಪಕ್ಷದ ನಾಯಕರು. ಶಾಸಕರಿಂದ ಆಯ್ಕೆಯಾಗಿದ್ದಾರೆ. ಮುಖ್ಯಮಂತ್ರಿ ಗಾದಿ ವಿಚಾರದ ಚರ್ಚೆಗೆ ಈಗ ತೆರೆ ಬಿದ್ದಿದೆ' ಎಂದಿದ್ದಾರೆ.

ಎಚ್.ಸಿ. ಮಹದೇವಪ್ಪ ಮಾತನಾಡಿ, 'ಮುಖ್ಯಮಂತ್ರಿ ಬದಲಾವಣೆ ಕುರಿತು ಚರ್ಚೆ ಇಲ್ಲ ಎಂದು ಹೈಕಮಾಂಡ್ ಈಗಾಗಲೇ ಹೇಳಿದೆ. ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೂ ಇದನ್ನು ಸ್ಪಷ್ಟಪಡಿಸಿದ್ದಾರೆ. ಹೈಕಮಾಂಡ್ ಏನು ತೀರ್ಮಾನ ಮಾಡಿದೆಯೊ ಅದನ್ನು ಮುಖ್ಯಮಂತ್ರಿ ಹೇಳಿದ್ದಾರೆ. ಎಲ್ಲರೂ ಹೇಳಿದ ಮೇಲೆ ಇನ್ನೇನಿದೆ? ಪಕ್ಷದಲ್ಲಿ ಯಾವುದೇ ಗೊಂದಲದ ಸನ್ನಿವೇಶ ಇಲ್ಲ' ಎಂದರು.

ಡಿಕೆಶಿಗೆ ಶಾಸಕರ ಬೆಂಬಲ ಇಲ್ಲ: ಸಿ.ಎಂ

ಒಂದನೇ ಪುಟದಿಂದ...

- **ಕೆಲವು ಸಚಿವರ ಕಾರ್ಯವೈಖರಿ ಬಗ್ಗೆ ಶಾಸಕರು ಸುರ್ಜೇವಾಲಾ ಅವರಲ್ಲಿ ದೂರಿತ್ತಿದ್ದಾರೆ. ಕೆಲವು ಸಚಿವರನ್ನು ಸಂಪುಟದಿಂದ ಕೈಬಿಡುವ ಪ್ರಸ್ತಾವ ಇದೆಯೇ?**

ಸದ್ಯ ಸಚಿವ ಸಂಪುಟ ಪುನರ್ ರಚನೆ ಆಗುವುದಿಲ್ಲ.

- **ಗ್ಯಾರಂಟಿ ಯೋಜನೆಗಳಿಂದ ಜನರು ಸೋಮಾರಿಗಳಾಗುತ್ತಿದ್ದಾರೆ ಎಂದು ರಂಭಾಪುರ ಸ್ವಾಮೀಜಿ ಹೇಳಿಕೆ ನೀಡಿದ್ದಾರಲ್ಲ.**

ಸರ್ಕಾರದ ಗ್ಯಾರಂಟಿ ಯೋಜನೆಗಳು ಸಮಾಜದ ಬಡವರ ಪರಿಸ್ಥಿತಿಯನ್ನು ಉತ್ತಮಪಡಿಸಿವೆ. ಯಾವ ಹಿನ್ನೆಲೆ ಅಥವಾ ಸಂದರ್ಭದಲ್ಲಿ ಸ್ವಾಮೀಜಿಗಳು ಈ ರೀತಿ ಹೇಳಿದ್ದಾರೆ ಎಂದು ನನಗೆ ತಿಳಿದಿಲ್ಲ. ಆದರೆ, ಶಕ್ತಿ ಯೋಜನೆಯಡಿ ಹೆಣ್ಣುಮಕ್ಕಳು ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣ ಮಾಡಿದರೆ ಸೋಮಾರಿಗಳಾಗುತ್ತಾರೆಯೇ.

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಉಲ್ಲಂಘನೆ ಪ್ರಕರಣ

ಸುಬ್ಬಾರೆಡ್ಡಿ ಮನೆಯಲ್ಲಿ ಇ.ಡಿ ಶೋಧ

ಪ್ರಜಾವಾಣಿ ವಾರ್ತೆ



ಶಾಸಕ ಎಸ್. ಎನ್. ಸುಬ್ಬಾರೆಡ್ಡಿ

ಬೆಂಗಳೂರು: ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ ನಿಯಮಗಳ ಉಲ್ಲಂಘನೆ ಪ್ರಕರಣದಲ್ಲಿ ಬಾಗೇಪಲ್ಲಿ ಶಾಸಕ, ಕಾಂಗ್ರೆಸ್‌ನ ಎಸ್.ಎನ್. ಸುಬ್ಬಾರೆಡ್ಡಿ ಅವರ ಮನೆ, ಕಚೇರಿ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ನಗರದ ಮಾರತ್‌ಹಳ್ಳಿಯಲ್ಲಿರುವ ಸುಬ್ಬಾರೆಡ್ಡಿ ಅವರ ಮನೆ, ಕಚೇರಿ ಸೇರಿ ಒಟ್ಟು ಐದು ಕಡೆ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಮಾರತ್‌ಹಳ್ಳಿಯ ನಿವಾಸದಲ್ಲಿ ದಾಳಿ ನಡೆಸಿದ ವೇಳೆ ಸುಬ್ಬಾರೆಡ್ಡಿ ಮತ್ತು ಕುಟುಂಬದವರು ಮನೆಯಲ್ಲಿಯೇ ಇದ್ದರು ಎಂದು ಮೂಲಗಳು ಖಚಿತಪಡಿಸಿವೆ.

ಕರ್ನಾಟಕ ರಾಜ್ಯ ಬೀಜ ನಿಗಮದ ಅಧ್ಯಕ್ಷರೂ ಆಗಿರುವ ಸುಬ್ಬಾರೆಡ್ಡಿ ಅವರು, ರಿಯಲ್ ಎಸ್ಟೇಟ್ ಉದ್ಯಮಿಯೂ ಹೌದು. ಮಾರತ್‌ಹಳ್ಳಿಯ ಅವರ ಕಚೇರಿಯಲ್ಲಿ ಶೋಧ ನಡೆಸಿ, ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.

ಮಾರತ್‌ಹಳ್ಳಿಯ ಸಿಕೆಬಿ ಬಡಾವಣೆಯಲ್ಲಿ ಸುಬ್ಬಾರೆಡ್ಡಿ ಅವರ ಕುಟುಂಬವು 'ಭಗಿನಿ ಹಾಸ್ಪಿಟಾಲಿಟೀಸ್ ಪ್ರೈವೆಟ್ ಲಿಮಿಟೆಡ್' ಎಂಬ ಐಷಾರಾಮಿ ಹೋಟೆಲ್ ಮತ್ತು ಪಾರ್ಟಿ ಹಾಲ್ ನಡೆಸುತ್ತಿದೆ. ಅಲ್ಲಿಯೂ ದಾಳಿ ನಡೆಸಿದ ಇ.ಡಿ ಅಧಿಕಾರಿಗಳು, ಹೋಟೆಲ್‌ನ ಲೆಕ್ಕಪತ್ರಗಳ ವಿವರ ಇದ್ದ ಹಾರ್ಡ್ ಡಿಸ್ಕ್ ಅನ್ನು ವಶಕ್ಕೆ ಪಡೆದಿದ್ದಾರೆ. ಜತೆಗೆ ಹೋಟೆಲ್‌ನ ಆಡಳಿತ ವಿಭಾಗದ ಸಿಬ್ಬಂದಿಯನ್ನು ವಿಚಾರಣೆ ನಡೆಸಿದ್ದಾರೆ ಎಂದು ವಿವರಿಸಿವೆ.

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ ನಿಯಮಗಳ ಉಲ್ಲಂಘನೆ ಸಂಬಂಧ ದೇಶದಾದ್ಯಂತ ಗುರುವಾರ ಹಲವು ಉದ್ಯಮಿಗಳ ಮನೆ ಮತ್ತು ಕಚೇರಿಗಳು ಸೇರಿ ಒಟ್ಟು 37 ಕಡೆ ಇ.ಡಿ ದಾಳಿ ನಡೆಸಿದೆ. ಅದರ ಭಾಗವಾಗಿಯೇ ಸುಬ್ಬಾರೆಡ್ಡಿ ಅವರ ಮನೆ- ಕಚೇರಿಗಳಲ್ಲಿ ಶೋಧ ನಡೆಸಲಾಗಿದೆ. ಆದರೆ, ಅವರ ಬಾಗೇಪಲ್ಲಿ ನಿವಾಸ, ಕೋಲಾರದಲ್ಲಿನ ಕಚೇರಿಗಳ ಮೇಲೆ ದಾಳಿ ನಡೆದಿಲ್ಲ.

ಶೋಧದ ವಿವರ

- ಸುಬ್ಬಾರೆಡ್ಡಿ ಅವರು ಮಲೇಷ್ಯಾ, ಹಾಂಗ್‌ಕಾಂಗ್ ಮತ್ತು ಜರ್ಮನಿಯಲ್ಲಿ ಉದ್ಯಮ ನಡೆಸುತ್ತಿದ್ದು, ಆಸ್ತಿಗಳನ್ನು ಖರೀದಿಸಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ಅಗತ್ಯ ಮಾಹಿತಿ ನೀಡಿಲ್ಲ
- ಭಾರತದಿಂದ ಹಣ ವರ್ಗಾವಣೆ ಮಾಡಿ ವಿದೇಶಗಳಲ್ಲಿ ಐಷಾರಾಮಿ ಕಾರುಗಳನ್ನು ಖರೀದಿಸಿದ್ದಾರೆ. ಆದರೆ ಅವುಗಳನ್ನು ತಮ್ಮ ಸಂಬಂಧಿಗಳ ಹೆಸರಿನಲ್ಲಿ ನೋಂದಣಿ ಮಾಡಿದ್ದಾರೆ

ಪ್ರದೀಪ್ ಈಶ್ವರ್ ಆಪ್ತನ ಮನೆಯಲ್ಲಿ ಶೋಧ

ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಅವರ ಆಪ್ತ ಜೋಳದ ಕಿಟ್ಟಪ್ಪ ಅವರ ಮನೆಯಲ್ಲಿ ರೆವಿನ್ಯೂ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ಶೋಧ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಟಿಯು: ಇಂಟರ್ನ್‌ಶಿಪ್‌ಗೆ ಆದ್ಯತೆ

ವಿದ್ಯಾರ್ಥಿಗಳ ಕೌಶಲ ವೃದ್ಧಿಗೆ ಆದ್ಯತೆ, ವೆಬ್ ಮೂಲಕ ನೋಂದಣಿ ಕಡ್ಡಾಯ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) 2025–26ನೇ ಸಾಲಿನಿಂದ ಸ್ನಾತಕ ಕೋರ್ಸ್‌ಗಳಲ್ಲಿ ಹೊಸ ಮಾದರಿಯ ಇಂಟರ್ನ್‌ಶಿಪ್ ಕಾರ್ಯಕ್ರಮ ಪರಿಚಯಿಸಿದೆ.

ಹಿಂದೆ ಸ್ನಾತಕ ಕೋರ್ಸ್‌ಗಳ ಅಂತಿಮ ವರ್ಷದ ವಿದ್ಯಾರ್ಥಿಗಳು ತಮ್ಮಿಷ್ಟದ ಕಂಪನಿಯಲ್ಲಿ ಇಂಟರ್ನ್‌ಶಿಪ್ ಮಾಡಿ, ಪ್ರಮಾಣಪತ್ರ ಸಲ್ಲಿಸುತ್ತಿದ್ದರು. ಇದರಿಂದ ಈ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡಲು ವಿಶ್ವವಿದ್ಯಾಲಯಕ್ಕೆ ಸಾಧ್ಯವಾಗುತ್ತಿರಲಿಲ್ಲ.

ಇಂಟರ್ನ್‌ಶಿಪ್ ಗುಣಮಟ್ಟ ಕುರಿತು ಕೆಲ ತಕರಾರು, ಅಪವಾದಗಳು ಬಂದಿದ್ದರಿಂದ ವಿಶ್ವವಿದ್ಯಾಲಯವೇ ನಿಗಾ ಇರಿಸಲು ಬಯಸಿದೆ. ವಿದ್ಯಾರ್ಥಿಗಳಲ್ಲಿ ವೃತ್ತಿಕೌಶಲ ವೃದ್ಧಿಗೆ ಪರಿಣಾಮಕಾರಿಯಾಗಿ ಇಂಟರ್ನ್‌ಶಿಪ್ ಮಾಡಿಸಲು ಉದ್ದೇಶಿಸಿದೆ.

2025–26ನೇ ಸಾಲಿನ ತರಗತಿ ಆಗಸ್ಟ್‌ನಿಂದ ಆರಂಭವಾಗಲಿದ್ದು, ಸುಮಾರು 80 ಸಾವಿರ ವಿದ್ಯಾರ್ಥಿಗಳು ಬಿ.ಇ, ಬಿ.ಟೆಕ್, ಬಿ.ಪ್ಲ್ಯಾನ್, ಬಿ.ಎಸ್ಸಿ (ಆನರ್ಸ್), ಬಿ.ಆರ್ಕ್ ಅಂತಿಮ ವರ್ಷದಲ್ಲಿ ಓದಲಿದ್ದಾರೆ. ಈ ಪೈಕಿ ಅರ್ಧದಷ್ಟು ವಿದ್ಯಾರ್ಥಿಗಳು ಏಳನೇ ಮತ್ತು ಉಳಿದವರು ಎಂಟನೇ ಸೆಮಿಸ್ಟರ್‌ನಲ್ಲಿ ಇಂಟರ್ನ್‌ಶಿಪ್ ಮಾಡಲಿದ್ದಾರೆ.

‘ಇಂಟರ್ನ್‌ಶಿಪ್‌ಗೆ ವಿದ್ಯಾರ್ಥಿಗಳ ನೋಂದಣಿಗೆ ವೆಬ್‌ಸೈಟ್‌ನಲ್ಲಿ ಅವಕಾಶವಿದೆ. ಭಾರತ ಅಲ್ಲದೇ ವಿಶ್ವದ ಪ್ರತಿಷ್ಠಿತ ಕಂಪನಿಗಳಲ್ಲಿ ಇಂಟರ್ನ್‌ಶಿಪ್ ಮಾಡಬಹುದು. ನೋಂದಣಿ ಕಡ್ಡಾಯ. ಶೈಕ್ಷಣಿಕ ವರ್ಷದ ಆರಂಭದಲ್ಲೇ ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡುತ್ತೇವೆ’ ಎಂದು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ ‘ಪ್ರಜಾವಾಣಿ’ಗೆ ತಿಳಿಸಿದರು.

‘ವೆಬ್‌ಸೈಟ್‌ನ ಇಂಟರ್ನ್‌ಶಿಪ್ ಕುರಿತ ಪುಟದಲ್ಲಿ ಕಂಪನಿಗಳೂ ಇಂಟರ್ನ್‌ಶಿಪ್ ಅವಕಾಶ ಕುರಿತ ಮಾಹಿತಿ ಪೋಸ್ಟ್ ಮಾಡಬಹುದು. ವಿದ್ಯಾರ್ಥಿಗಳ ಪ್ರೊಫೈಲ್ ವೀಕ್ಷಿಸಬಹುದು. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಮತ್ತು ವಿಟಿಯು ಮಾರ್ಗಸೂಚಿ ಅನುಸಾರ ಹೊಸ ಪದ್ಧತಿಯಡಿ ಪ್ರಕ್ರಿಯೆ ನಡೆಯಲಿದೆ. ಇದರಿಂದ ಪ್ರತಿ ವಿದ್ಯಾರ್ಥಿಯ ಇಂಟರ್ನ್‌ಶಿಪ್ ಮೇಲ್ವಿಚಾರಣೆಗೆ ಅನುಕೂಲವಾಗಲಿದೆ’ ಎಂದು ತಿಳಿಸಿದರು.

ಪ್ರಸ್ತುತ ವಿದ್ಯಾರ್ಥಿಗಳ ಇಂಟರ್ನ್‌ಶಿಪ್ ಕುರಿತು ಮೇಲ್ವಿಚಾರಣೆ ಮಾಡಲು ಆಗುತ್ತಿರಲಿಲ್ಲ. ಉದ್ದೇಶಿತ ಕ್ರಮದಲ್ಲಿ ಇಡೀ ಪ್ರಕ್ರಿಯೆ ಮೇಲೆ ನಿಗಾ ವಹಿಸಬಹುದು

ಪ್ರೊ.ಎಸ್.ವಿದ್ಯಾಶಂಕರ, ಕುಲಪತಿ, ವಿಟಿಯು

ವಿಟಿಯು ವ್ಯಾಪ್ತಿಯಲ್ಲಿ 3 ಲಕ್ಷ ವಿದ್ಯಾರ್ಥಿಗಳು

ವಿಟಿಯು ವ್ಯಾಪ್ತಿಯಲ್ಲಿ ರಾಜ್ಯದಲ್ಲಿ 215 ಎಂಜಿನಿಯರಿಂಗ್, ಆರ್ಕಿಟೆಕ್ಚರ್ ಕಾಲೇಜುಗಳಿವೆ. ಈ ಪೈಕಿ 39 ಸ್ವಾಯತ್ತ, 16 ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, 25 ಆರ್ಕಿಟೆಕ್ಚರ್ ಸ್ಕೂಲ್ ಮತ್ತು ಎರಡು ಘಟಕ ಮಹಾವಿದ್ಯಾಲಯಗಳಿವೆ. ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಡಿ 3 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ನೀಡಲಾಗುತ್ತಿದೆ.

ಜಾತಿ ನಿಂದನೆ ಕೇಸ್ ಬೆದರಿಕೆ; ಹೆದರಿ ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮಹೆಬೂಬ್

ಸೈಯದ್ ಮುಲ್ಲಾ

ವಡಗೇರಾ (ಯಾದಗಿರಿ ಜಿಲ್ಲೆ): ಜಾತಿನಿಂದನೆ ಪ್ರಕರಣ ದಾಖಲಿಸುತ್ತೇವೆ ಎಂದು ಪರಿಶಿಷ್ಟ ಜಾತಿ ಕುಟುಂಬ ಎಚ್ಚರಿಸಿದ್ದರಿಂದ ಬೆದರಿದ ಯುವಕ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಮಗನ ಸಾವಿನ ವಿಷಯ ತಿಳಿದು ತಂದೆಯೂ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಕೋನಹಳ್ಳಿ ಗ್ರಾಮದ ಮಾರ್ಗದಲ್ಲಿ ಮಹೆಬೂಬ್ (21) ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ವಿಷಯ ಕೇಳಿ ತಂದೆ ಸೈಯದ್ ಮೀರಸಾಬ್ ಮುಲ್ಲಾ (50) ಅವರಿಗೆ ಹೃದಯಾಘಾತವಾಗಿದೆ. ಚಿಕಿತ್ಸೆಗಾಗಿ ಕಲಬುರಗಿಗೆ ಒಯ್ದಿದ್ದು, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

ಜಮೀನಿಗೆ ತೆರಳುವ ರಸ್ತೆ ಕುರಿತು ಪರಿಶಿಷ್ಟ ಜಾತಿ ಕುಟುಂಬದೊಂದಿಗೆ ಜಗಳವಾಗಿತ್ತು. ಜಾತಿ ನಿಂದನೆ ಪ್ರಕರಣ ಕುರಿತು ಕುಟುಂಬದವರು ಬೆದರಿಕೆ ಹಾಕುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

‘ಈ ಸಂಬಂಧ 8 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದು, ಈಶಪ್ಪ ನಾಯ್ಕಲ್ ಎಂಬುವರನ್ನು ಬಂಧಿಸಲಾಗಿದೆ’ ಎಂದು ವಡಗೇರಾ ಠಾಣೆ ಪಿಎಸ್ಐ ತಿಳಿಸಿದ್ದಾರೆ.

NMDC Limited
(A Government of India Enterprise)
‘Khanij Bhavan’, 10-3-311/A, Castle Hills, Masab Tank, Hyderabad – 500 028
Corporate Identity Number (CIN) - L13100TG1958GOI001674

WORKS DIVISION
CONTRACTS DEPARTMENT
CORRIGENDUM NO. XI

Tender Enquiry No: *HO(Works)/CONTRACTS/INTEGRATED MRSS/DIOM/2025/1068/244 Dated: 15/03/2025*

NMDC Limited, A “NAVARATNA” Public Sector Company under Ministry of Steel, Govt. of India, is issuing this press notification regarding the modification (as indicated in **Corrigendum No. XI** Dated: 10/07/2025) in the technical **eligibility / qualification requirements** of following live tender for the work of *Design, Engineering, Manufacture, Supply, Storage, Handling at site, Civil & Structural Work, Erection, Testing, Commissioning and Demonstration of Performance Guarantee for an* ***Integrated Main Receiving and Stepdown Substation (MRSS)*** *at Screening Plant–II (SP-II) Complex, Donimalai, Karnataka*

The detailed **Corrigendum No. XI**, Tender documents and other Corrigendum of above tender can be viewed and /or downloaded **from following website links;**

1. NMDC website – **https://nmdcportals.nmdc.co.in/nmdctender**
2. Central Public Procurement portal - **https://www.eprocure.gov.in/epublish/app** and search tender through tender enquiry number
3. MSTC Portal - portal **https://www.mstcecommerce.com/eprocn/**

For accessing the detailed **Corrigendum No. XI**, Tender documents and other Corrigendum of above tender from MSTC portal, bidders to visit MSTC website (use Microsoft Edge browser for compatibility) and search Tender Event No. **NMDC/Head Office/Contract/44/24-25/ET/845.**

The bidders are requested to submit their bids online through MSTC Portal. The details of submission of bid through online are given in NIT. The Bidders on regular basis are required to visit the NMDC’s website/CPP Portal/ MSTC Portal for corrigendum, if any, at a future date.

For further clarification, the following can be contacted –

General Manager (Contracts), NMDC Limited, Hyderabad, Fax No. 040 – 2353 4746, Telephone No. 040 – 23532800, email: **contracts@nmdc.co.in**.

For and on behalf of NMDC Ltd
Executive Director (Works)

ಸಂಕ್ಷಿಪ್ತ ಸುದ್ದಿ

ಲಂಚ: ವೈದ್ಯಕೀಯ ಅಧೀಕ್ಷಕ ವಶಕ್ಕೆ

ಕಾರವಾರ: ಗುತ್ತಿಗೆದಾರರೊಬ್ಬರಿಂದ ಲಂಚ ಪಡೆಯುತ್ತಿದ್ದ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಕ್ರಿಮ್ಸ್) ವೈದ್ಯಕೀಯ ಅಧೀಕ್ಷಕ ಡಾ.ಶಿವಾನಂದ ಕುಡ್ತಲಕರ್ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಗುರುವಾರ ವಶಕ್ಕೆ ಪಡೆದರು.

ಡಾ.ಶಿವಾನಂದ ಕುಡ್ತಲಕರ್

‘ಕ್ರಿಮ್ಸ್‌ಗೆ ಬೆಡ್‌ಶೀಟ್ ಪೂರೈಸಿದ್ದಕ್ಕೆ ₹3.34 ಲಕ್ಷ ಬಿಲ್ ಪಾವತಿ ಬಾಕಿ ಇತ್ತು. ಬಿಡುಗಡೆಗೆ ₹ 50 ಸಾವಿರ ಲಂಚಕ್ಕೆ ಗುತ್ತಿಗೆದಾರ ಮೊಹಸೀನ್ ಖಾನ್ ಅವರಿಗೆ ಬೇಡಿಕೆ ಇಟ್ಟಿದ್ದು, ₹ 20 ಸಾವಿರ ಪಡೆದಿದ್ದರು. ಮತ್ತೆ ₹ 30 ಸಾವಿರ ಪಡೆಯುವಾಗ ಸಿಕ್ಕಿಬಿದ್ದರು’ ಎಂದು ಲೋಕಾಯುಕ್ತ ಎಸ್ಪಿ ಕುಮಾರಚಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

ಅಲ್ಪಸಂಖ್ಯಾತರಿಗೆ ಉಚಿತ ಶಿಕ್ಷಣ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು (ಕೆಎಸ್ಒಯು) ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗೆ ಇನ್ನು ಮುಂದೆ ಉಚಿತ ಶಿಕ್ಷಣ ನೀಡಲಿದೆ. ಈ ಸಂಬಂಧ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜೊತೆ ವಿ.ವಿಯು ಬುಧವಾರ ಒಡಂಬಡಿಕೆ ಮಾಡಿಕೊಂಡಿದೆ.

‘ಇಲಾಖೆ ₹ 5.05 ಕೋಟಿ ಅನುದಾನ ನೀಡಿದೆ. ಇದನ್ನು ಬಳಸಿ ಮುಸ್ಲಿಂ, ಕ್ರೈಸ್ತ, ಬೌದ್ಧ, ಸಿಖ್, ಜೈನ್, ಪಾರ್ಸಿ ಸಮುದಾಯದ 4,500 ವಿದ್ಯಾರ್ಥಿಗಳವರೆಗೆ ಉಚಿತವಾಗಿ ಶಿಕ್ಷಣ ನೀಡಲಾಗುವುದು’ ಎಂದು ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಗುರುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಇಲಾಖೆಯೇ ಪ್ರವೇಶ ಶುಲ್ಕ ಭರಿಸಲಿದೆ. ವಿದ್ಯಾರ್ಥಿಗಳು ವಿ.ವಿ ಪೋರ್ಟಲ್, ಇಲ್ಲವೇ ಕೇಂದ್ರ ಕಚೇರಿ ಅಥವಾ ಪ್ರಾದೇಶಿಕ ಕೇಂದ್ರಗಳಲ್ಲಿ ಅರ್ಜಿ ಪಡೆದು ಸಲ್ಲಿಸಬಹುದು’ ಎಂದರು.

ಚಿದಾನಂದ ಪ್ರಶಸ್ತಿಗೆ ವಿವೇಕ ರೈ ಆಯ್ಕೆ

ಮಂಗಳೂರು: ವಿದ್ವಾಂಸ ಎಂ. ಚಿದಾನಂದ ಮೂರ್ತಿ ಅವರ ಹೆಸರಿನಲ್ಲಿ ಬೆಂಗಳೂರಿನ ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿಯು ಕೊಡಮಾಡುವ 2025ನೇ ಸಾಲಿನ ‘ಚಿದಾನಂದ ಪ್ರಶಸ್ತಿ’ಗೆ ಸಂಶೋಧಕ, ಸಾಹಿತಿ ಬಿ.ಎ. ವಿವೇಕ ರೈ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹10 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ ಎಂದು ಸಮಿತಿ ಅಧ್ಯಕ್ಷ ಸಿ.ಯು. ಮಂಜುನಾಥ್ ತಿಳಿಸಿದ್ದಾರೆ.

ಸಹಾಯವಾಣಿ: ಶಾಲೆಗಳಲ್ಲಿ ಮಾಹಿತಿ ಕಡ್ಡಾಯ

ಬೀದರ್: ಎಲ್ಲ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು, ಪದವಿಪೂರ್ವ ಕಾಲೇಜುಗಳಲ್ಲಿ ಪ್ರಾರ್ಥನೆ, ಅಸೆಂಬ್ಲಿ ಸಮಯದಲ್ಲಿ ಕಡ್ಡಾಯವಾಗಿ ಮಕ್ಕಳ ಸಹಾಯವಾಣಿ ‘1098’ರ ಮಾಹಿತಿ ನೀಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಶಾಲಾ–ಕಾಲೇಜುಗಳ ಗೋಡೆಗಳು, ಅವುಗಳ ವೆಬ್‌ಸೈಟ್‌ನಲ್ಲಿ ‘1098’ ಕುರಿತ ಮಾಹಿತಿ ಪ್ರಕಟಿಸಬೇಕು. ಪುಸ್ತಕ, ನೋಟ್‌ಬುಕ್‌ಗಳ ಮೇಲೆ ಹಾಗೂ ಎಲ್ಲ ಪುಟಗಳ ಕೆಳಭಾಗದಲ್ಲಿ ಕಡ್ಡಾಯವಾಗಿ ಮಾಹಿತಿ ಪ್ರಕಟಿಸಲು ಸೂಚಿಸಿದೆ.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್
(ಭಾರತ ಸರ್ಕಾರದ ಉದ್ಯಮ)
Shaping The Future

MAK® LUBRICANTS ಡಿಸ್ಟ್ರಿಬ್ಯೂಟರ್ ನೇಮಕಾತಿ ಸೂಚನೆ

ಭಾರತ್ ಪೆಟ್ರೋಲಿಯಂ ಫಾರ್ಚೂನ್ 500 ಶ್ರೇಯಾಂಕದ ಸಾರ್ವಜನಿಕ ವಲಯದ ತೈಲ ಕಂಪನಿಯಾಗಿದೆ. ನಾವು ***MAK*® LUBRICANTS** ತಯಾರಕರು – ದೇಶದ ಅಗ್ರ ಲೂಬ್ ಬ್ರ್ಯಾಂಡ್‌ಗಳಲ್ಲಿ ಒಂದಾಗಿದೆ. ***MAK*® LUBRICANTS** ಅನ್ನು ಪ್ರಮುಖ ವಾಹನ ತಯಾರಕರು ಅನುಮೋದಿಸಿದ್ದಾರೆ ಮತ್ತು ನಿಜವಾದ ತೈಲಗಳಿಗಾಗಿ ಪ್ರಮುಖ OEMಗಳೊಂದಿಗೆ (ಮೂಲ ಸಲಕರಣೆ ತಯಾರಕರು) ಟೈ–ಅಪ್‌ಗಳನ್ನು ಹೊಂದಿದ್ದಾರೆ. ನಮ್ಮ ಶ್ರೇಣಿಯ ಲೂಬ್ರಿಕಂಟ್‌ಗಳು ಆಟೋಮೋಟಿವ್ ಮತ್ತು ಕೈಗಾರಿಕಾ ಲೂಬ್ರಿಕಂಟ್‌ಗಳು, ಗ್ರೀಸ್‌ಗಳು, ಗೇರ್ ಎಣ್ಣೆಗಳು, ಬ್ರೇಕ್ ಫ್ಲೂಯಿಡ್‌ಗಳು ಮತ್ತು ಕೂಲಂಟ್‌ಗಳನ್ನು ಒಳಗೊಂಡಿದೆ. **ಕರ್ನಾಟಕ** ರಾಜ್ಯದಲ್ಲಿನ ಮಾರುಕಟ್ಟೆಗಳನ್ನು ವಿಸ್ತರಿಸಲು ಪ್ರಾಥಮಿಕ ಲೂಬ್ ವಿತರಕರು (PLD) ಮತ್ತು ಕೈಗಾರಿಕಾ ಲೂಬ್ ವಿತರಕರು (ILD) ಅನ್ನು ನೇಮಿಸಲು ನಾವು ಬಯಸುತ್ತೇವೆ. ವಿವರವಾದ ಜಾಹೀರಾತು ನಮ್ಮ ವೆಬ್‌ಸೈಟ್ www.bharatpetroleum.in → Tenders → View Tender → New Tenders → Select: Date From (11/07/2025) → Due Date (01/08/2025) → Select Department: Lubricant – Distributorship → Choose a Tender Type: Press → Open File “Southern Region Lubes Network Expansion 2025 – 26” ನಲ್ಲಿ ಲಭ್ಯವಿದೆ.

ಅರ್ಜಿಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು, ಅದನ್ನು ಭರ್ತಿ ಮಾಡಿ ಮತ್ತು ಅನ್ವಯಿಸುವ ಶುಲ್ಕಗಳೊಂದಿಗೆ ಸಲ್ಲಿಸಬೇಕು. ಕೊರಿಜೆಂಡಮ್, ಯಾವುದಾದರೂ ಇದ್ದರೆ, ಮೇಲೆ ತಿಳಿಸಲಾದ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: 01/08/2025, 17:00 ಗಂಟೆಯೊಳಗೆ,

ಸಂಪರ್ಕ ವಿವರಗಳು:
ಟೆರಿಟರಿ ಮ್ಯಾನೇಜರ್ ಬೆಂಗಳೂರು - 9167782240
ಟೆರಿಟರಿ ಮ್ಯಾನೇಜರ್ ಬೆಳಗಾವಿ - 9028046061

Bharatgas COOK FOOD. SERVE LOVE. | MAK® LUBRICANTS | Bharat Petroleum Aviation Service

Energising Lives, Energising Naya Bharat

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಲೋ.ಇ, ಉಡುಪಿ ವಿಭಾಗ – ಉಡುಪಿ – 576101.
ದೂರವಾಣಿ & ಫ್ಯಾಕ್ಸ್: (0820) 2531802
ನಂ: ಪಿಡಬ್ಲ್ಯೂಡಿ:ಯುಡಿಎನ್: ಎನ್‌ಐಟಿ: 09:2025–26:ಎಇ–2 ದಿ: 09.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)

2024–25ನೇ ಸಾಲಿನ, 5054 – ಜಿಲ್ಲಾ ಮುಖ್ಯ ರಸ್ತೆ ಸೇತುವೆಗಳು ಯೋಜನೆಯಡಿಯ ರೂ.702.05 ಲಕ್ಷದ ಮೊತ್ತದ (ಜಿ.ಎಸ್.ಟಿ ಹೊರತುಪಡಿಸಿ), ಹೆಬ್ರಿ ತಾಲೂಕು ನಾಡ್ಪಾಲು ಗ್ರಾಮ ಪಂಚಾಯತ್ ವ್ಯಾಪ್ತಿಯ ನೆಲ್ಲಿಕಟ್ಟೆ–ನೆಮ್ಮಾಡಿ ರಸ್ತೆ ಅಭಿವೃದ್ಧಿ ಮತ್ತು ಕೆದ್ಲುಮಕ್ಕಿ ಸೇತುವೆ ನಿರ್ಮಾಣ ಹಾಗೂ ಕಾರ್ಕಳ ತಾಲೂಕು ಈದು ಗ್ರಾಮದ ಮುಗೇರಡ್ಕ ಬೊಲ್ಲೊಟ್ಟು ಸಂಪರ್ಕ ರಸ್ತೆಯ ಮತದಬೆಟ್ಟು ಖಂಡಿಗ ಬಳಿ ಸೇತುವೆ ನಿರ್ಮಾಣ ಕಾಮಗಾರಿ. (ಇಂಡೆಂಟ್ ಸಂಖ್ಯೆ: 20955) ಕಾಮಗಾರಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 1ನೇ ದರ್ಜೆಯ ಅರ್ಹ ಗುತ್ತಿಗೆದಾರರಿಂದ ‘ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್’ kppp.karnataka.gov.in ಮುಖಾಂತರ ಟೆಂಡರನ್ನು, ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ – 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25.07.2025ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸುವುದು.

ವಾಸಾಇ/ಸನಿಲು/ಕೆಎಸ್‌ಎಂಸಿಎ/234/25–26 ದಿ: 10.07.2025
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕರ್ನಾಟಕ ವಿಶ್ವವಿದ್ಯಾಲಯ
‘A’ Grade NAAC Accredited University Potential for Excellence
ಪಾವಟೆನಗರ, ಧಾರವಾಡ – 580003. ದೂರವಾಣಿ: (0836) 2215270
ಇ–ಮೇಲ್: academic.pg@kud.ac.in ವೆಬ್‌ಸೈಟ್: www.kud.ac.in
ಸಂಖ್ಯೆ: KU/Aca/P.G./Ph.D/NHT/2025-26/17 ದಿನಾಂಕ: 09–07–2025

2025–26 ನೇ ಸಾಲಿನ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶಕ್ಕಾಗಿ ಅಧಿಸೂಚನೆ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ 2025–26 ನೇ ಸಾಲಿಗೆ ಎಲ್ಲಾ ಸ್ನಾತಕೋತ್ತರ ಪದವಿ / ಸ್ನಾತಕೋತ್ತರ ಡಿಪ್ಲೋಮಾ / ಡಿಪ್ಲೋಮಾ / ಅಡ್ವಾನ್ಸ್ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಪದವಿಗಳ ಮೊದಲನೇ ಸೆಮಿಸ್ಟರ್‌ಗಳಿಗೆ ದಿನಾಂಕ: 10–07–2025 ರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಪ್ರವೇಶ ಅರ್ಹತೆ, ಪ್ರವೇಶ ಮಿತಿ, ಪ್ರವೇಶ ಪರೀಕ್ಷಾ ದಿನಾಂಕ, ಪ್ರವೇಶ ಕೌನ್ಸಲಿಂಗ್ ದಿನಾಂಕಗಳು ಮುಂತಾದ ಮಾಹಿತಿಯನ್ನು ಕ.ವಿ.ವಿ. ವೆಬ್‌ಸೈಟ್: **www.kud.ac.in** ಮುಖಾಂತರ ಪಡೆಯುವುದು ಅಥವಾ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಿಂದ ಮಾಹಿತಿ ಪಡೆದುಕೊಳ್ಳುವುದು.

ವಾಸಾಸಂಇ/ಧಾರವಾಡ/406/ಅಡ್ವರ್ಟೋರ್/2025–26
ಸಹಿ/– ಕುಲಸಚಿವರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಮ.ಪ ಟೆಂಡರ.ಪ್ರ–02/2025–26/1070 ದಿನಾಂಕ: 08.07.2025

ಮರು ಟೆಂಡರ್ (Call-2) ಪ್ರಕಟಣೆ (ಇ–ಪ್ರಕ್ಯೂರಮೆಂಟ್ ಪದ್ದತಿಯಲ್ಲಿ ಮಾತ್ರ)

ಉಲ್ಲೇಖ: ಈ ಕಚೇರಿ ಪತ್ರ ಸಂಖ್ಯೆ: ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಮ.ಪ ಟೆಂಡರ.ಪ್ರ–02/2025–26/246 ದಿನಾಂಕ: 28.04.2025

ಉಲ್ಲೇಖದ ಈ ಕಚೇರಿಯ ಪತ್ರದಲ್ಲಿ ಕರೆಯಲಾಗಿದ್ದ 2024–25 ನೇ ಸಾಲಿನ **H/Ac 5054- MDR Bridge Improvements Appendix-E** ಯೋಜನೆ ಅಡಿಯಲ್ಲಿ ಕರೆಯಲಾಗಿದ್ದ **Construction of a footbridge for a stream near Hadavalli Panchayat Hudil the house of Venkatraya in Bhatkal Taluk PWD/2025-26/BG/WORK_INDENT21405/Call-2** ರೂ. 30.00 ಲಕ್ಷದ ಕಾಮಗಾರಿಗಳಿಗೆ ಮರು ಟೆಂಡರನ (Call-2) ದಿನಾಂಕದ ವಿವರ ಈ ಕೆಳಗಿನಂತಿದೆ.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 17–07–2025 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 18–07–2025 16.30 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 19–07–2025 17.00 ಗಂಟೆವರೆಗೆ

ಹೆಚ್ಚಿನ ವಿವರಗಳನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಕಾರವಾರ ಇವರ ಕಛೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದು.

DIPR/ADK/KSMCA/371/25-26 dt.10.07.2025
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆ:ಕಾಇಂ/ಲೋಇವಿ/ಮಧು:ಕಿಇಂ–2/ಟೆಂಡರ್/2025–26/567 ದಿ: 08.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:09/2025–26 (ಕೆಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-2, 3 &4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಮಧುಗಿರಿ ಹಾಗೂ ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137– 283336. ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ:201.90 ಲಕ್ಷಗಳವರೆಗೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 24–07–2025 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 25–07–2025 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 28–07–2025 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : 18–07–2025 ಸಂಜೆ 4.00 ಗಂಟೆಗೆ ವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/194/KSMCA/2025-26

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222
ಇ–ಮೇಲ್: sitodirector@gmail.com
ಸಂಖ್ಯೆ:ಸಂಗಾಂಟ್ರಾಅಚಿ/ಇ–ಟೆಂಡರ್/ಎಲ್‌ಎಮ್‌ಒ/31/2025–26 ದಿನಾಂಕ:08.07.2025

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು–11 ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.

Supply, Installation & Commissioning of 6KL Liquid Medical Oxygen Tank on Turnkey basis, supply of Liquid Medical Oxygen and supply of Medical Cylinders.

(1) ಟೆಂಡರ್ ದಾಖಲೆಗಳನ್ನು **https://kppp.karnataka.gov.in** ನಿಂದ ದಿನಾಂಕ **11.07.2025**ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ದಿನಾಂಕ **28.07.2025**ರ ಸಂಜೆ **4:00** ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. (2) ಟೆಂಡರನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

ಸಹಿ/– ನಿರ್ದೇಶಕರು, ಟೆಂಡರ್ ಆಹ್ವಾನ ಪ್ರಾಧಿಕಾರ
ಡಿಐಪಿಆರ್/ಎಸ್‌ಐ/1737/2025–26

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಹುಬ್ಬಳ್ಳಿ – ಬಾಯಪಾಸ್ ರಸ್ತೆ, ಯುನಿಟ್–2, ಫುಡ್ ಪಾರ್ಕ್ ಎದುರಿಗೆ, ಸೆಕ್ಟರ್ ನಂ. 85, 5ನೇ ಅಡ್ಡರಸ್ತೆ, ನವನಗರ, ಬಾಗಲಕೋಟೆ. ದೂ.: 08354–220446,
ಇ–ಮೇಲ್ : eerwssdbagalkot@gmail.com
ಸಂಖ್ಯೆ : ಗ್ರಾ.ಕು.ನೀ. ಮತ್ತು ನೈ.ವಿ./ಬಾಗಲಕೋಟೆ/ಪಿಬಿ–3/ಟೆಂಡರ್/2025–26/792 ದಿನಾಂಕ : 09–07–2025

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ TTF ಮತ್ತು ಮುಧೋಳ ತಾಲೂಕಿನ MVS O&M ಲೆಕ್ಕ ಶಿರ್ಷಿಕೆ ಅಡಿ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

1) ಒಂದು ಲಕೋಟೆ ಟೆಂಡರ್ (Single Cover)

1) RWSSD/2025-26/WS/WORK_INDENT9437 APT - 38.69 Lakhs, (Gen Category) (MVS O&M) (Saidapur), 2) RWSSD/2025-26/WS/WORK_INDENT9436 APT - 8.25 Lakhs, (Gen Category).

1) ಗುತ್ತಿಗೆದಾರರ ಅರ್ಹತೆ : 3 & 4 ನೇ ದರ್ಜೆ ಹಾಗೂ ಮೇಲ್ಪಟ್ಟ, 2) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್.ಡಿ. ಮೊತ್ತ ಕೆ.ಪಿ.ಪಿ.ಪಿ. ಪ್ರಕಾರ, 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 16–07–2025 ರ ಸಂಜೆ 5.30 ಗಂಟೆಯವರೆಗೆ, 4) ಟೆಂಡರ್ ತೆರೆಯುವ ದಿನಾಂಕ : 18–07–2025 ರ ಬೆಳಿಗ್ಗೆ 10.30 ಗಂಟೆಯ ನಂತರ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಇಂಜನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ. ಅಂತರ್ಜಾಲ ತಾಣದ ವಿಳಾಸ : https://kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಗ್ರಾ.ಕು.ನೀ. & ನೈ. ವಿಭಾಗ, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/165/ಮಣಿಪಾಲ್/2025–26

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಕಾಅ–2/ಟೆಂಡರ್–7/2025–26 ದಿನಾಂಕ: 09.07.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **ಚಿಕ್ಕಬಳ್ಳಾಪುರ ಹಾಗೂ ರಾಮನಗರ ಜಿಲ್ಲೆಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣ ಕಾಮಗಾರಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ದುರಸ್ತಿ ಹಾಗೂ ಕೊಳವೆಬಾವಿ ಕೊರೆಯುವ ಕಾಮಗಾರಿಗಳಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ: 627, 629, 268/call-2, 376/call-2, 535/call-2, 584, 545/call-2, 515, 594, 595, 251/call-3, 564, 563, 562, 561, 342 and 474/call-2)** ಇ–ಪೋರ್ಟಲ್ ಮುಖಾಂತರ ದಿನಾಂಕ: **09.07.2025**ರಂದು ಟೆಂಡರ್ ಕರೆಯಲಾಗಿದ್ದು, ಕ್ರಮವಾಗಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **07.08.2025** ಮತ್ತು **23.07.2025**ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.

ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು–2, ಕ.ವ.ಶಿ.ಸಂ.ಸಂಘ
DIPR/CP/YC/1746/2025-26

ಕರ್ನಾಟಕ ಲೋಕಸೇವಾ ಆಯೋಗ
ಉದ್ಯೋಗ ಸೌಧ, ಬೆಂಗಳೂರು–560 001.
ಸಂಖ್ಯೆ: : KPSCKA/RCT2/LTRS/2/2025-RCT-2-Part(7)/2008 ದಿನಾಂಕ: 09–07–2025

ಪ್ರಕಟಣೆ

ಆಯೋಗದ ಅಧಿಸೂಚನೆ ಸಂ: ಪಿಎಸ್‌ಸಿ 506 ಆರ್‌ಟಿಬಿ–2/2023–24/3497, ದಿ:15–03–2024 ರಂದು ಅಧಿಸೂಚಿಸಲಾದ ಪದವಿ ಮಟ್ಟದ ವಿವಿಧ ಇಲಾಖೆಗಳಲ್ಲಿನ ಉಳಿಕೆ ಮೂಲ ವೃಂದದ ವಿವಿಧ ಗ್ರೂಪ್ ‘ಸಿ’ 60 ಹುದ್ದೆಗಳಿಗೆ ದಿನಾಂಕ: 12–07–2025ರಂದು ಕನ್ನಡ ಭಾಷಾ ಪರೀಕ್ಷೆ ಮತ್ತು 13–07–2025 ರಂದು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ದಿ:05–07–2025 ರಿಂದ ಪ್ರವೇಶಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 102 ಸೇನೆನಿ 2022, ದಿ: 18–03–2025ರನ್ವಯ ನಿಯಮ 7ರ ತಿದ್ದುಪಡಿಯನ್ವಯ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅಥವಾ ರಾಜ್ಯ ಸರ್ಕಾರವು ಅದಕ್ಕೆ ತತ್ಸಮಾನವೆಂದು ಘೋಷಿಸಿದ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್‌ಎಲ್.ಸಿ. ಗಿಂತ ಉನ್ನತ ಮಟ್ಟದ ಪರೀಕ್ಷೆಗಳಲ್ಲಿ ಕನ್ನಡ ವಿಷಯವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಭ್ಯಸಿಸಿದ್ದರೆ ಅಥವಾ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿ ಅಂತಹ ಪರೀಕ್ಷೆಗಳನ್ನು ಪಾಸು ಮಾಡಿದ್ದರೇ ಅಥವಾ ಆಯೋಗ ಅಥವಾ ಇನ್ನಿತರೆ ಯಾವುದೇ ಆಯ್ಕೆ ಪ್ರಾಧಿಕಾರವು ಈ ಹಿಂದೆ ನಡೆಸಿದ ಕನ್ನಡ ಭಾಷೆಯ ಪರೀಕ್ಷೆಯಲ್ಲಿ (ಕಡ್ಡಾಯ ಕನ್ನಡ ಪರೀಕ್ಷೆ) ಉತ್ತೀರ್ಣರಾಗಿದ್ದರೆ ಅಂತಹ ಅಭ್ಯರ್ಥಿಗಳಿಗೆ ಸದರಿ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ.

ಮುಂದುವರೆದು, ಆಯೋಗದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹೈಕ ಮತ್ತು ಉಳಿಕೆ ಮೂಲ ವೃಂದದ ಹುದ್ದೆಗಳ ನೇಮಕಾತಿ ಸಂಬಂಧ ನಡೆಸಲಾದ ಕನ್ನಡ ಭಾಷಾ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ: 20–06–2025 ಮತ್ತು ದಿನಾಂಕ: 01–07–2025 ರಂದು ಪ್ರಕಟಿಸಲಾಗಿರುತ್ತದೆ. ಸದರಿ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಪ್ರಸ್ತುತ ದಿನಾಂಕ: 12–07–2025 ರಂದು ನಡೆಯಲಿರುವ ಕನ್ನಡ ಭಾಷಾ ಪರೀಕ್ಷೆಗೆ ಪ್ರವೇಶ ಪತ್ರ ಜಾರಿಯಾಗಿದ್ದರೂ ಸಹ ಕನ್ನಡ ಭಾಷಾ ಪರೀಕ್ಷೆಗೆ ಹಾಜರಾಗುವುದರಿಂದ ವಿನಾಯಿತಿ ನೀಡಿದೆ. ಆದಾಗ್ಯೂ ಒಂದು ವೇಳೆ ದಿ:12–07–2025 ರಂದು ನಡೆಸುವ ಕನ್ನಡ ಭಾಷಾ ಪರೀಕ್ಷೆಗೆ ಹಾಜರಾದಲ್ಲಿ ಸದರಿ ಫಲಿತಾಂಶವನ್ನೇ ಅಂತಿಮವೆಂದು ಪರಿಗಣಿಸಲಾಗುವುದೆಂದು ಈ ಮೂಲಕ ತಿಳಿಸಿದೆ.

ಸಹಿ/– ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕ ಸೇವಾ ಆಯೋಗ

ಸೂಚನೆ: ಅಭ್ಯರ್ಥಿಗಳು ಈಗಾಗಲೇ ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಉಳಿಕೆ ಮೂಲ ವೃಂದದ ಮತ್ತು ಹೈಕ ವೃಂದದ ಹುದ್ದೆಗಳ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಫಲಿತಾಂಶವನ್ನು ಸ್ವತಃ ಖಚಿತಪಡಿಸಿಕೊಂಡು ಪ್ರಸ್ತುತ ಕನ್ನಡ ಭಾಷಾ ಪರೀಕ್ಷೆಗೆ ಹಾಜರಾಗುವುದು ಅಥವಾ ಗೈರು ಹಾಜರಾಗುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

ವಾ.ಸಾ.ಸಂ.ಇ/ವಾಪ್ರ/1742/ಆಕಾರ್/2025–26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)
ಸಂ:ಮುಇಂವಿ/ಟಿಮತ್ತುಪಿ/ಅಇಂ(ವಿ)–2/ಕಾ.ಇಂ–ಟಿ1/KCO–174/ಸ.ಇಂ/ 2025–26/3216–34 ದಿನಾಂಕ:10.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಬಿಡ್ ವಿಚಾರಣಾ ಸಂಖ್ಯೆಗಳು/ಕಾಮಗಾರಿಗಳ ವಿವರ
1. ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2416
ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕಿನ **ಕೊಡಗನೂರು (ಕಬ್ಬೂರು)** ನಲ್ಲಿ **2x20ಎಂ.ವಿ.ಎ, 66/11ಕೆ.ವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆ.ವಿ ದಾವಣಗೆರೆ–ಚಿತ್ರದುರ್ಗ ಎಸ್.ಸಿ Line-2 (tapped to 66/11kV ಮಾಯಕೊಂಡ ಉಪಕೇಂದ್ರ) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11ಕೆ.ವಿ ಕೊಡಗನೂರು (ಕಬ್ಬೂರು) ಉಪಕೇಂದ್ರದವರೆಗೆ ಕೊಯೋಟ್ (Coyote) ವಾಹಕದಿಂದ **8.315ಕಿ.ಮೀಗಳ** ಉದ್ದಕ್ಕೆ 66ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
2. ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2417
ವಿಜಯಪುರ ಜಿಲ್ಲೆ, ಸಿಂದಗಿ ತಾಲ್ಲೂಕಿನ **ಕೊರಳ್ಳಿ (ಹಿಕ್ಕನಗುತ್ತಿ)** ನಲ್ಲಿ **2x20ಎಂ.ವಿ.ಎ, 110/11ಕೆ.ವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆ.ವಿ ಡಿ.ಸಿ ಅಹೇರಿ (ಸಿಂದಗಿ)–ಆಲಮೇಲ ಪ್ರಸರಣ ಮಾರ್ಗದ ಒಂದು ಸರ್ಕ್ಯೂಟ್‌ನಿಂದ ಪ್ರಸ್ತಾವಿತ 110/11ಕೆ.ವಿ ಕೊರಳ್ಳಿ (ಹಿಕ್ಕನಗುತ್ತಿ) ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **3.063ಕಿ.ಮೀಗಳ** ಉದ್ದಕ್ಕೆ 110ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
3. ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2418
ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ **ಭೋಗಸಂದ್ರದಲ್ಲಿ 2x20ಎಂ.ವಿ.ಎ, 66/11ಕೆ.ವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆ.ವಿ ಹೊಸಕೆರೆ–ಹಗಲವಾಡಿ ಎಸ್.ಸಿ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11ಕೆ.ವಿ ಭೋಗಸಂದ್ರ ಉಪಕೇಂದ್ರದವರೆಗೆ ಡಿ.ಸಿ (DC) ಗೋಪುರಗಳ ಮೇಲೆ ಕೊಯೋಟ್ (Coyote) ವಾಹಕದಿಂದ **6.87ಕಿ.ಮೀಗಳ** ಉದ್ದಕ್ಕೆ 66ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು ಹಾಗೂ ಪ್ರಸ್ತಾವಿತ 66ಕೆ.ವಿ ಪ್ರಸರಣ ಮಾರ್ಗವನ್ನು ಕೊನೆಗೊಳಿಸುವ ಸಲುವಾಗಿ, ಒಂದು (01) ಸಂಖ್ಯೆಯ 66ಕೆ.ವಿ ಟರ್ಮಿನಲ್ ಬೇಯನ್ನು ಹಾಲಿಯಿರುವ 66/11ಕೆ.ವಿ ಹೊಸಕೆರೆ ಉಪಕೇಂದ್ರದಲ್ಲಿ ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ “ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ” ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ **ದಿನಾಂಕ 11.07.2025 ರಂದು 15:00 ಗಂಟೆ ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ 02.08.2025 ಮತ್ತು ಸಮಯ 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕದ ವಿಸ್ತರಣೆ/ತಿದ್ದುಪಡಿ ಇದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್(ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560009

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಳವಳ್ಳಿ
ಸಂಖ್ಯೆ:ಕೃ.ಉ.ಮಾ.ಸ.(ಮಳವಳ್ಳಿ)/53/2025–26
ದಿನಾಂಕ:07–07–2025

ಟೆಂಡರ್ ಪ್ರಕಟಣೆ (ಇ ಪ್ರೊಕ್ಯೂರ್‌ಮೆಂಟ್ ಮೂಲಕ)

ಮಳವಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 2025–26 ನೇ ಸಾಲಿಗೆ ಕೆಲಸದ ಆದೇಶ ನೀಡಿದ ದಿನಾಂಕದಿಂದ 31–05–2026 ರವರೆಗೆ ಮುಖ್ಯ ಮಾರುಕಟ್ಟೆ ಮತ್ತು ಕಿರುಗಾವಲು ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಕೆಲಸ ನಿರ್ವಹಿಸಲು ಭದ್ರತಾ ಸಿಬ್ಬಂದಿ ಸೇವೆ ಒದಗಿಸಲು 2025–26 ನೇ ಸಾಲಿಗೆ ಕಾರ್ಮಿಕ ಇಲಾಖೆ ನಿಗಧಿಪಡಿಸಿರುವ ದರಕ್ಕಿಂತ ಕಡಿಮೆ ಇಲ್ಲದಂತೆ ಸಂಬಂಧಿಸಿದ ಇಲಾಖೆಯಲ್ಲಿ ನೊಂದಾಯಿತ ಅರ್ಹ ಏಜೆನ್ಸಿ/ಸಂಸ್ಥೆಯವರಿಂದ ಇಪ್ರೊಕ್ಯೂರ್‌ಮೆಂಟ್ ಮೂಲಕ http://www.eproc.Karnataka.gov.in ಸ್ಪರ್ಧಾತ್ಮಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಭದ್ರತಾ ಸಿಬ್ಬಂದಿ ಸೇವೆಯ ಟೆಂಡರ್ ಇ.ಎಂ.ಡಿ. ರೂ.25,000=00 ಹಾಗೂ ಇ–ಟೆಂಡರ್ ಪ್ರೊಸೆಸ್ಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಸಂದಾಯ ಮಾಡುವುದು.

(1) ಟೆಂಡರ್ ಬಿಡ್‌ಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿ:25.07.2025 ಸಂಜೆ 5–00 ಗಂಟೆ ವರೆಗೆ
(2) ಟೆಂಡರ್ ತೆರೆಯುವ ದಿನಾಂಕ:28.07.2025 ರ ಸಂಜೆ 11–00 ಗಂಟೆಗೆ. (3) ಹೆಚ್ಚಿನ ವಿವರಗಳು ಹಾಗೂ ಷರತ್ತು–ವ–ನಿಬಂಧನೆಗಳನ್ನು ಸಮಿತಿಯ ಕಛೇರಿಯ ವೇಳೆಯಲ್ಲಿ ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಳವಳ್ಳಿ ಪೋನ್ ನಂ:08231–244900 ಇವರಿಂದ ಅಥವಾ ಕರ್ನಾಟಕ ಸರ್ಕಾರದ ವೆಬ್‌ಸೈಟ್ http://www. eproc.Karnataka.gov.in ನಿಂದ ಪಡೆಯಬಹುದು

ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ತಿದ್ದುಪಡಿ ಬದಲಾವಣೆ ಉಂಟಾದಲ್ಲಿ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ತೆರೆಯುವ ಹಾಗೂ ಪತ್ರ ವ್ಯವಹಾರ ವಿಳಾಸ:–ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಳವಳ್ಳಿ.

ಸಹಿ/–ಕಾರ್ಯದರ್ಶಿ(ಪ್ರಭಾರ) ಕೃ.ಉ.ಮಾ.ಸ.ಮಳವಳ್ಳಿ
ಸಹಿ/–ಆಡಳಿತಾಧಿಕಾರಿಗಳು ಕೃ.ಉ.ಮಾ.ಸ. ಮಳವಳ್ಳಿ

ತುಮಕೂರು ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ, ತುಮಕೂರು
ಸಂ:07/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಸಇಂ/MVS O&M/2025-26/1070 ದಿನಾಂಕ: 04–07–2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 07/2025–26
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈ ವಿಭಾಗ, ತುಮಕೂರು ಇವರು 2025–26 ನೇ ಸಾಲಿಗೆ ದ್ವಿ–ಲಕೋಟೆ ಪದ್ದತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.

ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಅನುಮೋದನೆಗೊಂಡಿರುವ ತುಮಕೂರು ತಾಲ್ಲೂಕಿನ **07** ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **https://kppp.karnataka.gov.in/** ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕಾಮಗಾರಿ ಕನಿಷ್ಠ ಮೊತ್ತ **ರೂ. 55.14** ಲಕ್ಷಗಳು, ಇ.ಎಂ.ಡಿ ಮೊತ್ತ **ರೂ.1,10,280/–** ಗಳು ಅ) ಕಾಮಗಾರಿ ಗರಿಷ್ಠ ಮೊತ್ತ **ರೂ. 151.28** ಲಕ್ಷಗಳು, ಇ.ಎಂ.ಡಿ ಮೊತ್ತ **ರೂ. 2,26,920/–** ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ **ದಿನಾಂಕ : 24–07–2025 ಸಂಜೆ 5:00 ಘಂಟೆ** ವರೆಗೆ (2) ಪೂರ್ವಭಾವಿ ಸಭೆ **ದಿನಾಂಕ: 21–07–2025** ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25–07–2025 ಸಂಜೆ 05.30 ಘಂಟೆ**ಯ ನಂತರ (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30–07–2025 ಬೆಳಿಗ್ಗೆ 11.00 ಘಂಟೆ**ಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ, ತುಮಕೂರು
DIPR/TUM/RO-59/25-26/Oysters

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಜಗತ್ತನ್ನು ಬದಲಿಸಲು ನಾವು ಬಳಸಬಹುದಾದ ಅತ್ಯಂತ ಶಕ್ತಿಶಾಲಿ ಅಸ್ತ್ರವೆಂದರೆ ಶಿಕ್ಷಣ.

–ನೆಲ್ಸನ್ ಮಂಡೇಲಾ

ಸಂಪಾದಕೀಯ

ಅಂಕಗಳ ಪ್ರಮಾಣ ಕುಗ್ಗಿಸುವುದಲ್ಲ; ಶಿಕ್ಷಣ ಗುಣಮಟ್ಟ ಹಿಗ್ಗಿಸುವ ಜರೂರು

ರಾಜ್ಯ ಪಠ್ಯಕ್ರಮ ಅನುಸರಿಸುವ ಶಾಲೆಗಳಲ್ಲಿ ಇನ್ನುಮುಂದೆ ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ನಡೆಸುವ ಮಾದರಿಯಲ್ಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸಬೇಕು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು (ಕೆಎಸ್‌ಇಎಬಿ) ಸರ್ಕಾರಕ್ಕೆ ಶಿಫಾರಸು ಮಾಡಿದೆ. ತೇರ್ಗಡೆಗೆ ಬೇಕಾದ ಅಂಕಗಳ ಪ್ರಮಾಣವನ್ನು 35ರಿಂದ 33ಕ್ಕೆ ಇಳಿಸಬೇಕು ಮತ್ತು ಪ್ರಥಮ ಭಾಷೆಯ ಪ್ರಶ್ನೆಪತ್ರಿಕೆಯನ್ನು 125ರಿಂದ 100 ಅಂಕಗಳಿಗೆ ಇಳಿಸಬೇಕು ಎನ್ನುವುದು ಶಿಫಾರಸಿನ ಮುಖ್ಯ ತಿರುಳು. ‘ಸಿಬಿಎಸ್‌ಇ–ಐಸಿಎಸ್‌ಇಯಲ್ಲಿರುವ ಅಂಕ ನೀಡುವ ವ್ಯವಸ್ಥೆಗೆ ಹೋಲಿಸಿದರೆ ರಾಜ್ಯ ಪಠ್ಯಕ್ರಮ ಅನುಸರಿಸುವ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳು ಈಗಿರುವ ಪರೀಕ್ಷಾ ವ್ಯವಸ್ಥೆಯಲ್ಲಿ ಅನನುಕೂಲ ಎದುರಿಸುವಂತಹ ಸನ್ನಿವೇಶ ಇದೆ. ಈ ಸಮಸ್ಯೆಯನ್ನು ನಿವಾರಿಸಬೇಕು’ ಎಂಬ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒತ್ತಡಕ್ಕೆ ಕೆಎಸ್‌ಇಎಬಿ ಮಣಿದಂತಿದೆ. ಶಿಕ್ಷಣ ಮಂಡಳಿಗಳ ನಡುವಿನ ಪರೀಕ್ಷಾ ವ್ಯವಸ್ಥೆಗಳಲ್ಲಿ ಸಮಾನತೆ ತರಬೇಕು ಎನ್ನುವ ಆಶಯವೇನೋ ಅರ್ಥವಾಗುವಂಥದ್ದೇ. ಆದರೆ, ಆ ಗುರಿ ಸಾಧಿಸಲು ಹಿಡಿದ ಹಾದಿ ನೋಡಿದರೆ ಶೈಕ್ಷಣಿಕ ಗುಣಮಟ್ಟದಲ್ಲೂ ರಾಜಿ ಮಾಡಿಕೊಳ್ಳಲು ಹೊರಟಂತಿದೆ ಎಂಬ ಕಳವಳ ಉಂಟಾಗುತ್ತದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶವು ಶೇ 62ಕ್ಕೆ ಕುಸಿದಿದೆ. ಅದರಲ್ಲೂ ಉತ್ತರ ಕರ್ನಾಟಕ ಜಿಲ್ಲೆಗಳ ಸಾಧನೆ ಕಳಪೆಯಾಗಿದೆ.



ಫಲಿತಾಂಶ ಸುಧಾರಣೆಗೆ ಸರ್ಕಾರವು ಅಡ್ಡಮಾರ್ಗ ಹಿಡಿಯುವ ಬದಲು ಇಡೀ ಶಿಕ್ಷಣ ವ್ಯವಸ್ಥೆಯನ್ನು ಪರಾಮರ್ಶೆಗೆ ಒಳಪಡಿಸಿ ಲೋಪದೋಷಗಳನ್ನು ಪತ್ತೆ ಮಾಡಬೇಕು.

ಇಂತಹ ಸನ್ನಿವೇಶದಲ್ಲಿ ಫಲಿತಾಂಶದ ಸುಧಾರಣೆಗೆ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ ಎನ್ನುವುದು ನಿರ್ವಿವಾದ. ಆದರೆ, ತೇರ್ಗಡೆಯಾಗಲು ಬೇಕಾಗಿರುವ ಅಂಕಗಳ ಪ್ರಮಾಣವನ್ನು ಇಳಿಕೆ ಮಾಡುವುದಷ್ಟೇ ಅರ್ಥಪೂರ್ಣ ಸುಧಾರಣೆ ಎನಿಸಿಕೊಳ್ಳುವುದಿಲ್ಲ. ಬದಲಾಗಿ, ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಇರುವ ದೋಷಗಳನ್ನು ಮರೆಮಾಚಿಸುವ ನಿಟ್ಟಿನಲ್ಲಿ ಇದೊಂದು ತಂತ್ರದಂತೆ ಭಾಸವಾಗುತ್ತದೆ.

ಫಲಿತಾಂಶ ಸುಧಾರಣೆಯೇ ಕೆಎಸ್‌ಇಎಬಿಯ ನೈಜ ಉದ್ದೇಶವಾಗಿದ್ದರೆ, ಅದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಶಾಲೆಗಳ ಸಾಧನೆಯತ್ತ ದೃಷ್ಟಿ ಹರಿಸಬೇಕಿತ್ತು. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆಯು ಈ ಶಾಲೆಗಳನ್ನು ನಡೆಸುತ್ತಿದೆ. ಈ ಶಾಲೆಗಳು ಪ್ರತೀ ಪರೀಕ್ಷೆಯಲ್ಲಿ ಸತತವಾಗಿ ಶೇ 90ಕ್ಕಿಂತ ಹೆಚ್ಚಿನ ಫಲಿತಾಂಶವನ್ನು ತರುತ್ತಿವೆ. ಮಾನದಂಡಗಳ ಮಟ್ಟವನ್ನು ಕೆಳಗಿಳಿಸಿ ಮಾಡಿದಂತಹ ಸಾಧನೆಯಲ್ಲ ಈ ಶಾಲೆಗಳದ್ದು. ಬದಲಾಗಿ, ಶೈಕ್ಷಣಿಕವಾಗಿ ವಿದ್ಯಾರ್ಥಿಗಳಿಗೆ ಅಗತ್ಯವಾದ ಎಲ್ಲ ರೀತಿಯ ಬೆಂಬಲ ಒದಗಿಸುವ ಮೂಲಕ, ವಸತಿ ಶಾಲೆಯಲ್ಲಿ ಮೂಲಸೌಕರ್ಯದ ವ್ಯವಸ್ಥೆ ಮಾಡುವ ಮೂಲಕ, ಸೂಕ್ತ ತರಬೇತಿ ಪಡೆದ ಶಿಕ್ಷಕರನ್ನು ನೇಮಿಸಿಕೊಳ್ಳುವ ಮೂಲಕ, ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡುತ್ತಾ, ನಿರಂತರ ಮೌಲ್ಯಮಾಪನ ಮಾಡುತ್ತಾ ಅವರನ್ನು ತಿದ್ದುವ ಮೂಲಕ ಮಾಡಿದ ಸಾಧನೆ ಇದಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಎಷ್ಟೋ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯ ದಯನೀಯ ಸ್ಥಿತಿಯಲ್ಲಿದ್ದರೆ, ಶಿಕ್ಷಕರ ಕೊರತೆಯೂ ತೀವ್ರವಾಗಿದೆ. ಹೀಗಾಗಿ 50 ಸಾವಿರ ಅತಿಥಿ ಶಿಕ್ಷಕರನ್ನು ಈ ಶಾಲೆಗಳು ಅವಲಂಬಿಸುವಂತಾಗಿದೆ. ಸುಸ್ಥಿರ ಕಲಿಕಾ ವ್ಯವಸ್ಥೆಯಿಲ್ಲದೆ ಮಕ್ಕಳು ಪರೀಕ್ಷೆಗೆ ಸಮರ್ಪಕವಾಗಿ ತಯಾರಾಗಲು ಸಾಧ್ಯವಿಲ್ಲ. ವಸ್ತುಸ್ಥಿತಿ ಹೀಗಿರುವಾಗ ತೇರ್ಗಡೆಯಾಗಲು ಬೇಕಾದ ಅಂಕಗಳ ಪ್ರಮಾಣವನ್ನು ಕಡಿಮೆ ಮಾಡುವುದು ಸಮಸ್ಯೆಗಳಿಂದಲೇ ಪಲಾಯನ ಮಾಡಿದಂತೆ.

ಫಲಿತಾಂಶ ಸುಧಾರಣೆಗೆ ಸರ್ಕಾರವು ಅಡ್ಡಮಾರ್ಗ ಹಿಡಿಯುವ ಬದಲು ಇಡೀ ಶಿಕ್ಷಣ ವ್ಯವಸ್ಥೆಯನ್ನು ಪರಾಮರ್ಶೆಗೆ ಒಳಪಡಿಸಿ ಲೋಪದೋಷಗಳನ್ನು ಪತ್ತೆ ಮಾಡಬೇಕು. ತೇರ್ಗಡೆ ಪ್ರಮಾಣ ಹೆಚ್ಚಿಸುವ ಸಂಕುಚಿತ ಗುರಿಯ ಬದಲಾಗಿ, ವಿದ್ಯಾರ್ಥಿಗಳು ಕಲಿಕೆಯಲ್ಲಿ –ಅದು ಸರ್ಕಾರಿ ಶಾಲೆಯೇ ಆಗಿರಲಿ ಅಥವಾ ಖಾಸಗಿ ಶಾಲೆಯೇ ಆಗಿರಲಿ– ಹಿಂದೆ ಬೀಳಲು ಕಾರಣವಾದ ಅಂಶಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಪಠ್ಯಕ್ರಮವು ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಮೀರಿದೆಯೇ? ಶಿಕ್ಷಕರಿಗೆ ಸರಿಯಾದ ತರಬೇತಿ ಸಿಕ್ಕಿದೆಯೇ? ಮೂಲ ಪರಿಕಲ್ಪನೆಗಳು ಮಕ್ಕಳಿಗೆ ಅರ್ಥವಾಗುತ್ತಿವೆಯೇ? ಸಾಮಾಜಿಕ–ಆರ್ಥಿಕ ಅಡೆತಡೆ ಮೀರಿ ಕಲಿಕೆಯಲ್ಲಿ ತೊಡಗಲು ಅವರಿಗೆ ಬೆಂಬಲದ ಅಗತ್ಯವಿದೆಯೇ? –ಇವೇ ಮೊದಲಾದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ಮೂಲ ಪರಿಕಲ್ಪನೆಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದ ವಿದ್ಯಾರ್ಥಿಯನ್ನು ತೇರ್ಗಡೆ ಮಾಡಿದರೆ ತಾತ್ಕಾಲಿಕವಾಗಿ ಫಲಿತಾಂಶ ಸುಧಾರಿಸಬಹುದು. ಆದರೆ, ಉನ್ನತ ಶಿಕ್ಷಣದ ಹಂತ ತಲುಪಿದಾಗ ಆ ವಿದ್ಯಾರ್ಥಿಯು ತೀವ್ರ ತೊಂದರೆ ಅನುಭವಿಸಬೇಕಾಗುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. ರಾಷ್ಟ್ರೀಯ ಶಿಕ್ಷಣ ಮಂಡಳಿಗಳ ಜೊತೆ ಹೆಜ್ಜೆ ಹಾಕುವುದು ದೋಷಪೂರಿತ ಕ್ರಮ ಎಂದು ಹೇಳಲಾಗದು. ಆದರೆ, ಗುಣಮಟ್ಟದ ಬೋಧನೆ, ಮೂಲಸೌಕರ್ಯ ಒದಗಿಸುವಿಕೆ ಮತ್ತು ವಿದ್ಯಾರ್ಥಿಗಳಿಗೆ ಅಗತ್ಯವಾದ ಬೆಂಬಲದ ಮೂಲಕ ಆ ಪಯಣ ಸಾಗಬೇಕು. ರಾಜ್ಯಕ್ಕೆ ಬೇಕಾಗಿರುವುದು ತೇರ್ಗಡೆಯಾಗಲು ಬೇಕಾದ ಅಂಕಗಳ ಪ್ರಮಾಣ ಕುಗ್ಗಿಸುವ ಕ್ರಮವಲ್ಲ; ಬದಲು, ಶೈಕ್ಷಣಿಕ ಗುಣಮಟ್ಟವನ್ನು ಎತ್ತರಿಸುವ ಕಾರ್ಯ ಜರೂರಾಗಿ ಆಗಬೇಕು. ಕ್ಷಣಿಕ ಪ್ರಯೋಜನಕ್ಕಾಗಿ ದೂರಗಾಮಿ ಪ್ರಗತಿಯಲ್ಲಿ ಮಾರಕವಾಗುವಂತಹ ಅಡ್ಡಮಾರ್ಗ ಹಿಡಿಯುವುದು ಸರಿಯಲ್ಲ.

ಯುವ‘ರಂಗ’: ಯಾವಾಗ ಸಂಕ್ರಮಣ?

ವಿಶ್ಲೇಷಣೆ

ಮಂಡ್ಯ ರಮೇಶ್

ಎಲ್ಲ ಸಾಮಾಜಿಕ ವ್ಯವಸ್ಥೆಗಳು ಪಲ್ಲಟಗೊಂಡು ಗೊಂದಲಗಳ ಗೊಂಚಲಿನಂತಿರುವ ಪ್ರಸಕ್ತ ಸಾಮಾಜಿಕ ಸಂದರ್ಭದಲ್ಲಿ ರಂಗಭೂಮಿ ಎದುರಿಸುತ್ತಿರುವ ಸವಾಲುಗಳು ಮತ್ತು ಆ ಸವಾಲುಗಳ ಕೇಂದ್ರದಲ್ಲಿರುವ ಯುವಕರ ಮನೋಧರ್ಮ ಕುರಿತು ಯೋಚಿಸುವುದು ಅವಶ್ಯಕ. ರಂಗಭೂಮಿ ಮೂಲತಃ ಶ್ರಮಿಕ ಪರಂಪರೆಗೆ ಸೇರಿದ ವ್ಯವಸಾಯೀ ಕ್ಷೇತ್ರ. ಭೂಮಿಯಲ್ಲಿ ಉತ್ತು, ಬಿತ್ತು, ಕಳೆ ತೆಗೆದು, ಗೊಬ್ಬರ ಹಾಕಿ, ಮಳೆಯನ್ನು ನಿರೀಕ್ಷಿಸುತ್ತ ಆಕಾಶದತ್ತ ಮುಖ ಮಾಡಿ ನಿಲ್ಲುವ ರೈತನಷ್ಟೇ ಶ್ರಮದಾಯಕ ಕೆಲಸ ರಂಗಕರ್ಮಿಯದು. ಆದರೆ, ಬಹುತೇಕ ಯುವಜನರು ಹೊಂದಿರುವ ‘ಕಡಿಮೆ ದುಡಿಮೆ, ಹೆಚ್ಚು ಹಣ’ ಎನ್ನುವ ಮನೋಭಾವ ರಂಗಭೂಮಿಯಲ್ಲೂ ಕಾಣಿಸುತ್ತಿದೆ. ನಟ, ನಿರ್ದೇಶಕ, ತಂತ್ರಜ್ಞ, ಸಂಘಟಕ ಸೇರಿದಂತೆ ರಂಗಭೂಮಿಯ ಎಲ್ಲರೂ ಸುಲಭ ಮಾರ್ಗಗಳನ್ನು ಹುಡುಕಿಕೊಳ್ಳುವ ಆತುರದಲ್ಲಿದ್ದಾರೆ. ವಿದ್ಯುನ್ಮಾನ ಮಾಧ್ಯಮದ ಆಕ್ರಮಣವೂ, ಪ್ರತಿ ಕ್ಷಣಕ್ಕೂ ಉಸಿರಾಡುವ ಪ್ರಯೋಗಶೀಲ ರಂಗಭೂಮಿಯ ಮೇಲೆ ಕೊಂಚ ಪರಿಣಾಮ ಮಾಡಿದ್ದರೂ, ಅದೇನೂ ಶಾಶ್ವತವಲ್ಲ.

ರೈತನಾಗು, ಕಮ್ಮಾರನಾಗು, ಗಾರೆ ಕೆಲಸ ಚಂದ, ಮರಗೆಲಸ ಅದ್ಭುತ ಎಂದೆಲ್ಲಾ ಮಕ್ಕಳಿಗೆ ಹೇಳುವ ಪೋಷಕರು, ಗುರುಗಳು ಹಾಗೂ ಗೆಳೆಯರು ಈಗ ಹುಡುಕಿದರೂ ಸಿಗಲಾರರು. ಟಿ.ವಿ, ಸಿನಿಮಾ ಸೇರಿ ಚೆನ್ನಾಗಿ ದುಡ್ಡು ಮಾಡು ಎಂದು ಹೇಳುವವರು ಎಲ್ಲೆಡೆ ಸಿಗುತ್ತಾರೆ. ಹತ್ತಾರು ವರ್ಷಗಳ ಕಾಲ ಶಾಸ್ತ್ರೋಕ್ತವಾಗಿ ಕಲಿತು ಅನುಭವ ಗಳಿಸಿ, ಧ್ಯಾನಸ್ಥನಾಗಿ ರಂಗಭೂಮಿ ಕಲಾವಿದನಾಗು ಎಂದು ಹೇಳುವವರು ಸಿಗುವುದಂತೂ ತೀರಾ ದುರ್ಲಭ.

ರಂಗಭೂಮಿಯಲ್ಲಿ ತೊಡಗಿಕೊಂಡು ನಿರಂತರವಾಗಿ ಕೆಲಸ ಮಾಡು, ಆ ದುಡಿಮೆಯಲ್ಲಿ ಸಂತಸ ಇದೆ ಎಂದು ಹೇಳುವವರು ಇಲ್ಲವೆನ್ನುವಷ್ಟು ಕಡಿಮೆ. ಬಾಹ್ಯ ಪ್ರೇರಣೆಗಳಿಗೆ ಯುವಜನ ಸುಲಭವಾಗಿ ಆಕರ್ಷಣೆಗೊಳ್ಳುವುದರಿಂದ, ಸಲೀಸಾಗಿ ಹಣ ಮಾಡುವ ಉದ್ದೇಶದಿಂದ ಸಿನಿಮಾ– ಕಿರುತೆರೆಯತ್ತ ಎಲ್ಲರ ಕಣ್ಣುಗಳು ಹೊರಳಿವೆ. ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ರಂಗಭೂಮಿಯಲ್ಲಿನ ಕಲಿಕೆ ಶ್ರೇಷ್ಠ ವೇದಿಕೆ ಎನ್ನುವ ಗ್ರಹಿಕೆ ಯುವಜನರಲ್ಲಿ ಕಡಿಮೆಯಾಗಿದೆ. ‘ರಿಯಾಲಿಟಿ ಶೋ’ಗಳಲ್ಲಿ ಮುಖ ತೋರಿಸುವುದೇ ಜೀವನದ ಉದ್ದೇಶ ಎನ್ನುವ ಅಲ್ಪತೃಪ್ತಿಯ ಮನೋಭಾವ ಮುನ್ನೆಲೆಗೆ ಬಂದಿದೆ. ಇಚ್ಛಾಶಕ್ತಿ ಮತ್ತು ಸಿದ್ಧತೆಯ ಕೊರತೆಯಿಂದಾಗಿ ಸಾಧನೆಯ ಮಹತ್ವಾಕಾಂಕ್ಷೆಯಿಂದ ತರುಣ, ತರುಣಿಯರು ದೂರವಾಗುವಂತಾಗಿದೆ.

ರಂಗಭೂಮಿ ಸಮಷ್ಟಿ ಕಲೆ. ಅದು ಏಕವ್ಯಕ್ತಿ ಕಲೆಯಲ್ಲ. ನಟ– ನಟಿಯರನ್ನು ತಿಂಗಳುಗಟ್ಟಲೆ ಒಗ್ಗೂಡಿಸಿಕೊಂಡು, ಅವರಲ್ಲಿ ಉತ್ಸಾಹ ಗರಿಗೆದರುವಂತೆ ಮಾಡಿ, ರಂಗ ಚಟುವಟಿಕೆಗಳಲ್ಲಿ ತೊಡಗಿಸಿ, ಬದುಕಿನ ಅನುಭವಗಳನ್ನು ಕ್ರೋಡೀಕರಿಸಿಕೊಳ್ಳುವ ತಂತ್ರಗಳನ್ನು ಕಲಿಸಬೇಕಾಗುತ್ತದೆ. ತಂಡದೊಂದಿಗೆ ಹೊಂದಾಣಿಕೆ, ಪಾತ್ರ ಅರ್ಥಮಾಡಿಕೊಳ್ಳುವಿಕೆ, ಸಂಭಾಷಣೆಯ ಕಂಠಪಾಠ, ಲಯಜ್ಞಾನ, ಪ್ರಸಾಧನ –ಹೀಗೆ ಹಲವು ಸಂಗತಿಗಳು ರಂಗಭೂಮಿಯ ಕಲಿಕೆಯಲ್ಲಿ ಸೇರಿರುತ್ತವೆ. ರಂಗಸಜ್ಜಿಕೆ ಹಾಗೂ ರಂಗಪರಿಕರಗಳ ಅರಿವಿನೊಂದಿಗೆ ಜನರನ್ನು ಸೇರಿಸುವ ಕಲೆಯೂ ರಂಗಕರ್ಮಿಗೆ ಬೇಕಾಗುತ್ತದೆ. ಇದೆಲ್ಲದರ ಸಮೀಕರಣ ಸಾಧ್ಯವಾದಾಗಲೇ ರಂಗದ ಮೇಲೆ ನಾಟಕವೊಂದು ಜೀವಗೊಳ್ಳುತ್ತದೆ.

ಆದರೆ, ಇಂದಿನ ಸ್ಥಿತಿ ಭಿನ್ನವಾದುದು. ಕ್ಯಾಮೆರಾಗಳಿಗೆ ಮುಖ ತೋರಿಸುವುದೇ ನಟನೆ ಎನ್ನುವಂತಾಗಿದೆ. ಈಗಂತೂ ಎಲ್ಲರ ಕೈಯಲ್ಲಿ ಮೊಬೈಲ್ ಇದೆ. ಸಾಮಾಜಿಕ ಜಾಲತಾಣಗಳು ಬೆರಳಿಗೆ ಎಟಕುವಂತಿವೆ. ಜನ ಗುರ್ತಿಸುವಿಕೆಗೂ ಹೆಚ್ಚು ಶ್ರಮ ಪಡಬೇಕಿಲ್ಲ. ವಾಸ್ತವ ಹೀಗಿರುವಾಗ, ಬದ್ಧತೆ ಹಾಗೂ ಶ್ರಮ ಎರಡನ್ನೂ ಬಯಸುವ ರಂಗಭೂಮಿಯ ತ್ರಾಸದಾಯಕ ಬದುಕು ಯಾರಿಗೆ ಬೇಕು? ಆದರೆ, ಕೃಷಿಯಂತೆ ಶ್ರಮದಾಯಕವಾದರೂ ಪುಷ್ಟಿದಾಯಕವಾದುದು ರಂಗಭೂಮಿ. ಸಿನಿಮಾ– ಕಿರುತೆರೆಯ ಆಕರ್ಷಣೆಯನ್ನೂ ಮೀರಿ ಯುವಕ, ಯುವತಿಯರು ರಂಗಭೂಮಿಗೆ ಬರುತ್ತಿಲ್ಲವೇ? ಇಲ್ಲ ಎನ್ನಲಾಗದು. ಹಾಗೆ ನೋಡಿದರೆ, ಹಿಂದೆಂದಿಗಿಂತಲೂ ಹೆಚ್ಚಿನ ಸಂಖ್ಯೆಯ ಯುವಜನ ರಂಗಭೂಮಿಗೆ ಬರುತ್ತಿದ್ದಾರೆ. ಕೊರತೆ ಇರುವುದು ಸಂಖ್ಯೆಯಲ್ಲಲ್ಲ; ಬದ್ಧತೆಯಲ್ಲಿ. ನಾಟಕ ಕ್ಷೇತ್ರಕ್ಕೆ ಬರುತ್ತಿರುವ ಬಹುತೇಕರಿಗೆ ರಂಗಭೂಮಿ ಚಿಮ್ಮುಹಲಗೆಯಂತೆ ಕಾಣಿಸುತ್ತದೆ; ರಂಗಭೂಮಿಯಿಂದ ಸಿನಿಮಾ–ಕಿರುತೆರೆಯಲ್ಲಿ ಸುಲಭವಾಗಿ ಅವಕಾಶ ದೊರೆಯುತ್ತದೆನ್ನುವ ಲೆಕ್ಕಾಚಾರ ಅವರದಾಗಿರುತ್ತದೆ. ಉದ್ದೇಶ ಏನಾದರೂ ಇರಲಿ, ಕಲಿತು ಹೋಗಬೇಕೆನ್ನುವ ಕನಿಷ್ಠ ಆಸೆಯಾದರೂ ಇದೆಯಲ್ಲ ಎಂದು ಸಮಾಧಾನ ಪಡಬೇಕಾದ ಸ್ಥಿತಿ ನನ್ನಂತಹವರದ್ದು.

ರಂಗಭೂಮಿ ಶಿಕ್ಷಣಕ್ಕೆಂದು ನನ್ನ ಬಳಿಗೆ ಬರುವ ನೂರಕ್ಕೆ ತೊಂಬತ್ತರಷ್ಟು ವಿದ್ಯಾರ್ಥಿಗಳು ಸಿನಿಮಾ ನಟ– ನಟಿ ಆಗಬೇಕು ಎನ್ನುವ ಆಸೆ ಹೊಂದಿದವರೇ ಆಗಿರುತ್ತಾರೆ. ‘ನಮ್ ಹುಡುಗನಿಗೆ ಅಭಿನಯಿಸುವ ಆಸೆ ಇದೆ, ನಿಮ್ಮ ಬಳಿ ಕಳಿಸ್ತೇನೆ’ ಎಂದು ಪೋಷಕರು ಹೇಳುತ್ತಾರೆ. ಹಾಗೆ ಬರುವ ಹುಡುಗನನ್ನು ‘ನಟನೆ ಮಾಡಬೇಕು ಅಂತ ಯಾಕನ್ನಿಸುತ್ತೆ’ ಎಂದು ಸರಳ ಪ್ರಶ್ನೆ ಕೇಳಿದರೂ, ಉತ್ತರ ದೊರೆಯುವುದಿಲ್ಲ. ಈ ನಿರುತ್ತರಕ್ಕೆ ರಂಗಭೂಮಿಯ ಬಗೆಗಿನ ಅಸ್ಪಷ್ಟತೆಯಷ್ಟೇ ಕಾರಣವಲ್ಲ; ಕೆಲವರಿಗೆ ಕನ್ನಡ ಮಾತನಾಡಿ ಅಭ್ಯಾಸವಿಲ್ಲ. ಕನ್ನಡ ಅವರಿಗೆ ಹೆಚ್ಚು ಬಳಕೆಯಿಲ್ಲದ ಭಾಷೆ! ಹೋಗಲಿ, ಅವರು ಕಲಿತಿರುವ ಇಂಗ್ಲಿಷ್ ಮಾಧ್ಯಮದ ಶೈಕ್ಷಣಿಕ ಪರಿಸರದ ಅನುಭವಗಳನ್ನಾದರೂ ಪೂರ್ಣ ಮನಸ್ಸಿನಿಂದ ದಾಖಲಿಸುತ್ತಾರಾ ಎಂದು ನಿರೀಕ್ಷಿಸುವಂತೆಯೂ ಇಲ್ಲ. ಏಕೆಂದರೆ, ನಮ್ಮ ಶಿಕ್ಷಣ ಕ್ರಮದಲ್ಲಿ ರಂಗಭೂಮಿಯನ್ನು ಗಂಭೀರವಾದ ‘ಮಾನವ ವಿಜ್ಞಾನ’ ಎಂದು ಪರಿಗಣಿಸದೆ, ‘ರಂಜನೆ’ ಎಂದಷ್ಟೇ ನೋಡಲಾಗಿದೆ.

ರಂಗಭೂಮಿಯನ್ನು ಪ್ರಮುಖ ವಿಷಯವನ್ನಾಗಿಸಿ, ಅದರ ಸಂವಹನ ಸಾಧ್ಯತೆಗಳನ್ನು ಹಾಗೂ ಮಾನವೀಯ ಅಂಶಗಳನ್ನು ಮಕ್ಕಳಿಗೆ ತಲುಪಿಸುವ ಪ್ರಯತ್ನಗಳೇ ನಮ್ಮಲ್ಲಿ ಸರಿಯಾಗಿ ಆಗಿಲ್ಲ. ಅದು ಸಾಧ್ಯವಾದಾಗ, ಯುವಜನರಿಗೆ ವಿದ್ಯಾರ್ಥಿ ದಿಸೆಯಲ್ಲೇ ರಂಗಸಂಸ್ಕಾರ ದೊರೆತು, ಸರಳ ಬದುಕನ್ನು ಆಸ್ವಾದಿಸಲು ಅವರಿಗೆ ಸಿದ್ಧತೆ ದೊರೆತಂತಾಗುತ್ತದೆ. ಬರಿಯ ನಾಟಕ ಕಲಿತರೆ ಉಪಯೋಗವಿಲ್ಲ; ರಂಗ ಇತಿಹಾಸ, ನಟನೆಯ ಶಕ್ತಿ ಮತ್ತು ಸಾಧ್ಯತೆ, ಬೆಳಕಿನ ವಿನ್ಯಾಸ, ಪರಿಕರ ಪ್ರಯೋಜನ, ರಂಗ ಸಿದ್ಧಾಂತ, ಪೌರಾತ್ಯ ಮತ್ತು ಪಾಶ್ಚಾತ್ಯ ರಂಗಭೂಮಿಯ ತೌಲನಿಕ ಅಧ್ಯಯನ, ರಂಗ ಸಂಗೀತದ ವೈಶಿಷ್ಟ್ಯ, ಸಾಹಿತ್ಯ ಕೃತಿಗೂ ರಂಗಕೃತಿಗೂ ಇರುವ ವ್ಯತ್ಯಾಸಗಳು, ನಾಟಕ ಕಲಿಕಾ ವಿಧಾನಗಳು, ಪ್ರಚಾರದ ಬಗೆ... ಹೀಗೆ, ಎಲ್ಲವನ್ನೂ ವಿಜ್ಞಾನದ ರೀತಿಯಲ್ಲಿ, ವಾಣಿಜ್ಯ ದೃಷ್ಟಿಕೋನದಿಂದ ಹಾಗೂ ಸೃಜನಶೀಲವಾಗಿ ಗ್ರಹಿಸಲು ಸಾಧ್ಯವಾಗುವ ಕಲಿಕೆ ಮತ್ತು ಅದಕ್ಕೆ ಅಗತ್ಯವಾದ ಪಠ್ಯ ಸಿದ್ಧಗೊಳ್ಳಬೇಕು. ಯುವಕ, ಯುವತಿಯರ ಗುಂಪೊಂದು ಇಡೀ ತಿಂಗಳು ಕಷ್ಟಪಟ್ಟು ರಂಗ ಪ್ರಯೋಗವೊಂದನ್ನು ಕಲಿತು ಕಾಲೇಜಿನಲ್ಲೋ ಊರಿನಲ್ಲೋ ಪ್ರದರ್ಶಿಸಿದರೆ, ಅದಕ್ಕೆ ಬರುವ ಪ್ರತಿಕ್ರಿಯೆ ಇತ್ತೀಚಿನ ದಿನಗಳಲ್ಲಿ ತೀರಾ ನಿರಾಶಾದಾಯಕವಾಗಿದೆ. ನೀರಸ ಪ್ರತಿಕ್ರಿಯೆ ಯುವಜನರ ಉತ್ಸಾಹ ಕುಗ್ಗಿಸುತ್ತದೆ. ಪೋಷಕರಿಂದ, ಗುರುಗಳಿಂದ, ಗೆಳೆಯರಿಂದ, ಮಾಧ್ಯಮಗಳಿಂದ, ಎಲ್ಲಿಂದಲೂ ಸೂಕ್ತ ಬೆಂಬಲ ದೊರೆಯದೆ ಹೋದಾಗ ಉತ್ಸಾಹ ಉಳಿಯುವುದಾದರೂ ಹೇಗೆ?

> ರಂಗಭೂಮಿಯನ್ನು ಚಿಮ್ಮುಹಲಗೆಯಂತೆ ಭಾವಿಸಿರುವ ಯುವಜನರಿಗೆ, ಆ ಕ್ಷೇತ್ರದ ಜೀವಶಕ್ತಿಯ ಅರಿವು ಕಡಿಮೆ. ಸಿನಿಮಾ ಹಾಗೂ ಕಿರುತೆರೆಯಲ್ಲಿ ಗುರ್ತಿಸಿಕೊಳ್ಳುವ ಹಂಬಲ ಅವರಲ್ಲಿ ಹೆಚ್ಚಾಗಿದೆ. ರಂಗಭೂಮಿಯನ್ನು ವ್ಯಕ್ತಿತ್ವ ನಿರ್ಮಾಣದ ರೂಪದಲ್ಲಿ ನೋಡುವ ಮನೋಧರ್ಮ ಕಡಿಮೆಯಾಗುತ್ತಿದೆ.

ನಟನೆಯಿಂದ ಮಕ್ಕಳು ಹಾಳಾಗುತ್ತಾರೆ ಎಂದು ಕೆಲವರು ಭಾವಿಸಿದ್ದಾರೆ. ನಟನೆಯಿಂದ ಮಾತ್ರ ಹಾಳಾಗುತ್ತಾರೆಯೇ? ಜೀವಮಾನದಲ್ಲಿ ರಂಗಭೂಮಿಯ ಕಡೆಗೆ ಮುಖವನ್ನೇ ಮಾಡದ ಅದೆಷ್ಟು ಯುವಕ, ಯುವತಿಯರು ತಪ್ಪುದಾರಿಯಲ್ಲಿ ನಡೆದಿಲ್ಲವೇ? ಹಾಗೆ ನೋಡಿದರೆ, ಮನುಷ್ಯನೊಂದಿಗೆ ಮನುಷ್ಯ ನಡೆದುಕೊಳ್ಳುವ ಸೌಜನ್ಯವನ್ನು ರಂಗಭೂಮಿ ಅಚ್ಚುಕಟ್ಟಾಗಿ ಕಲಿಸಿಕೊಡುತ್ತದೆ. ಯುವಜನರಿಗೆ ವಿಶ್ವದಲ್ಲಿ ಅತ್ಯಂತ ಧರ್ಮ ನಿರಪೇಕ್ಷವಾದ ಸ್ಥಳವೆಂದರೆ, ಅದು ರಂಗಭೂಮಿ. ಮುಕ್ತ ಆಲೋಚನಾ ಕ್ರಮ, ಸರಳ ಜೀವನಶೈಲಿ ಹಾಗೂ ಕ್ರಿಯಾಶೀಲ ವ್ಯಕ್ತಿತ್ವವನ್ನು ರಂಗಭೂಮಿ ಕರುಣಿಸುತ್ತದೆ. ಕಲಿಯುವ ತಾಳ್ಮೆ ಬೇಕಷ್ಟೇ.

ಯುವಮನೋಧರ್ಮಕ್ಕೆ ತೀರಾ ಅಗತ್ಯವಾದುದು ತಾಳ್ಮೆ. ಎಲ್ಲವನ್ನೂ ‘ಧಾವಂತ’ ಆವರಿಸಿಕೊಂಡಿದೆ. ಅಜ್ಜಿಯರ ಕಥೆ ಕೇಳಲು ಟೈಮಿಲ್ಲ! ತಾತನನ್ನು ವಾಕಿಂಗ್‌ಗೆ ಕರೆದೊಯ್ಯಲು ಸಮಯವಿಲ್ಲ. ಅಪ್ಪ–ಅಮ್ಮನೊಂದಿಗೆ ಮಾತನಾಡಲು ವ್ಯವಧಾನವಿಲ್ಲ. ನಾಟಕದ ತಾಲೀಮಿಗೆ ಬಿಡುವಿಲ್ಲ.

ನಾಟಕದ ಕಲಿಕೆ ಎನ್ನುವುದು ಸಂಶೋಧನೆ ಹಾಗೂ ಜನಾಂಗೀಯ ಅಧ್ಯಯನವೂ ಹೌದು. ತಾನು ನಿರ್ವಹಿಸುವ ಪಾತ್ರದ ವ್ಯಕ್ತಿತ್ವ ಹಾಗೂ ಹಿನ್ನೆಲೆಯನ್ನೆಲ್ಲ ಪಾತ್ರಧಾರಿಯೊಬ್ಬ ಅರ್ಥ ಮಾಡಿಕೊಳ್ಳುವುದು ಅಗತ್ಯ. ಈ ಪೂರ್ವ ಸಿದ್ಧತೆಗೆ ಇಂದಿನ ಯುವ ಕಲಾವಿದರ ಮನೋಭೂಮಿಕೆ ಸಿದ್ಧವಾಗಿದೆಯೆ? ಇಲ್ಲ ಎನ್ನುವುದು ಬಹುತೇಕರ ಉತ್ತರ.

ಪುರಾಣ– ಇತಿಹಾಸ ಓದಿಕೊಳ್ಳದೆ, ಭಾಷೆಯ ಸೊಗಡನ್ನು ತಿಳಿಯದೆ, ಪರಂಪರೆಯ ಒಳತಿರುಳನ್ನು ಗ್ರಹಿಸದೆ, ಸಂಗೀತ– ನಾಟ್ಯಗಳಲ್ಲಿ ತೊಡಗಿಕೊಳ್ಳದೆ, ವರ್ತಮಾನಕ್ಕೆ ಸ್ಪಂದಿಸದೆ, ಬದುಕಿನ ತವಕ ತಲ್ಲಣಗಳಿಗೆ ಒಡ್ಡಿಕೊಳ್ಳದೆ, ಸಂಬಂಧಗಳ ಸೂಕ್ಷ್ಮಗಳನ್ನು ಗೌರವಿಸದೆ ಹೋದರೆ, ರಂಗಭೂಮಿಯ ಮೇಲೆ ಜೀವಗೊಳ್ಳುವ ಪಾತ್ರ ರಕ್ತಮಾಂಸವಿಲ್ಲದೆ ಸೊರಗುತ್ತದೆ. ಬದುಕಿನ ವಿವಿಧ ಸಂದರ್ಭಗಳ ಭಾವೋದ್ರೇಕದ ಮನಸ್ಥಿತಿ ತನ್ನದಾಗಿಸಿಕೊಂಡು, ಮೈಮನಗಳ ಮೇಲೆ ಸಂಪೂರ್ಣ ಹತೋಟಿ ಸಾಧಿಸಿ, ಪುನರ್‌ಸೃಷ್ಟಿಸುವ ಶಕ್ತಿ ರೂಪುಗೊಳ್ಳದಿದ್ದರೆ ‘ಗುಬ್ಬಿ’ ಮರುಕ್ಷಣವೇ ‘ಬೆಟ್ಟ’ವಾಗಿ ಬದಲಾಗುವುದಿಲ್ಲ; ಸಮರ್ಥ ನಟನ ಸೃಷ್ಟಿ ಸಾಧ್ಯವಿಲ್ಲ.

ಎಲ್ಲವನ್ನೂ ಆಲಿಸುವ, ನೋಡುವ, ಕಲ್ಪಿಸಿಕೊಳ್ಳುವ ಗುಣ ರಂಗಕರ್ಮಿಗೆ ಅಗತ್ಯ. ಈ ಗುಣ ಸಮಾಜದಲ್ಲೇ ಕಡಿಮೆ ಆಗಿದೆ. ರಂಗಾಸಕ್ತ ಯುವಜನರಲ್ಲಿ ಅನೇಕರಿಗೆ, ರಂಗಭೂಮಿ ಚಿಕಿತ್ಸಕ ಕೇಂದ್ರ ಎನ್ನುವುದೂ ತಿಳಿಯದು. ಹೌದು, ರಂಗಭೂಮಿ ಒಂದು ಮನೋವೈಜ್ಞಾನಿಕ ಅಧ್ಯಯನ ಶಿಬಿರ. ಈ ಕಲಿಕೆಯಲ್ಲಿ, ಸಹಮನುಷ್ಯನೊಂದಿಗೆ ಬೆರೆಯಲು ಹಿಂಜರಿಯುತ್ತಿದ್ದವರು ಶಿಬಿರ ಮುಗಿಯುವ ಹೊತ್ತಿಗೆ ಎಲ್ಲರೊಟ್ಟಿಗೆ ಬೆರೆತು ಮಾತನಾಡುವುದನ್ನು ಕಂಡಿದ್ದೇನೆ. ತೊದಲುತ್ತಿದ್ದವರು ಓತಪ್ರೋತವಾಗಿ ಕನ್ನಡ ನುಡಿಯುವುದನ್ನು ಕಂಡಿದ್ದೇನೆ. ಇಂಗ್ಲಿಷ್ ಮೋಹಿತೆ ಹುಡುಗಿಯೊಬ್ಬಳು, ಸಂಸ ಕೃತಿಗಳ ಭಾಷೆಯನ್ನು, ದೇವನೂರರ ‘ಕುಸುಮಬಾಲೆ’ಯ ಜೀವಶಕ್ತಿಯನ್ನು, ಕುಂದಾಪುರ ಕಡಲ್ಗನ್ನಡವನ್ನು ತನ್ನದಾಗಿಸಿಕೊಂಡಿದ್ದನ್ನು ನೋಡಿರುವೆ. ಜೀವನ ಪ್ರೀತಿ ಕಳೆದುಕೊಂಡ ವ್ಯಕ್ತಿ ಸಾಹಿತ್ಯ ಪ್ರೇಮಿಯಾಗಿ, ಸಮಾಜಮುಖಿಯಾಗಿ ಬದಲಾಗಿರುವುದಕ್ಕೂ ರಂಗಭೂಮಿ ಕಾರಣವಾಗಿದೆ. ವ್ಯಕ್ತಿತ್ವ ನಿರ್ಮಾಣದಲ್ಲಿ ರಂಗಭೂಮಿ ಮುಖ್ಯ ಪಾತ್ರವಹಿಸುತ್ತದೆ ಎನ್ನುವುದು ಅದರೊಂದಿಗೆ ಒಡನಾಡಿದವರೆಲ್ಲರ ಅನುಭವವೂ ಆಗಿರುತ್ತದೆ.

‘ರಂಗಭೂಮಿ’ ಎನ್ನುವುದು ಎಲ್ಲರನ್ನೂ ತಲುಪುವ ಸರಳ ಹಾಗೂ ಸಮರ್ಥ ಭಾಷೆ. ಆ ಭಾಷೆಯಲ್ಲಿ ಯುವಜನರು ಕೊಂಚ ಬದ್ಧತೆಯಿಂದ ತೊಡಗಿಕೊಂಡರೆ ಅವರ ಜೀವನದಲ್ಲಿ ಮಾತ್ರವಲ್ಲದೆ, ಸಮಾಜದಲ್ಲೂ ಬದಲಾವಣೆ ಆಗಬಲ್ಲದು. ಸಾಹಿತ್ಯ ವಾಚನ, ರಂಗಭೂಗೋಳ, ರಸಸಿದ್ಧಾಂತ, ರಂಗ ವ್ಯಾಕರಣ, ಭಾಷಾಜ್ಞಾನ, ಧ್ವನಿ ಮತ್ತು ಉಸಿರಾಟದ ನಿಯಂತ್ರಣ, ದೇಹ ಭಾಷೆಯ ವಿಸ್ತಾರ, ಇತ್ಯಾದಿ ಸಾಧ್ಯತೆಗಳನ್ನು ಸತತವಾಗಿ ಅಭ್ಯಾಸ ಮಾಡುತ್ತ ರಂಗಾಂದೋಲನದಲ್ಲಿ ನಿರಂತರತೆ ಕಾಯ್ದುಕೊಂಡರೆ ಪ್ರಬುದ್ಧ ಕಲಾವಿದರು ಹಾಗೂ ಪ್ರೌಢ ರಂಗಭೂಮಿ ರೂಪಗೊಳ್ಳುವುದರಲ್ಲಿ ಸಂದೇಹವಿಲ್ಲ. ಅಂಥದೊಂದು ಆದರ್ಶದ ಸ್ಥಿತಿ ರೂಪುಗೊಳ್ಳುವುದಕ್ಕೆ ಶಾಲಾ ಹಂತದಲ್ಲೇ ಬುನಾದಿ ಸಿದ್ಧಗೊಳ್ಳಬೇಕು.

ವಾಚಕರ ವಾಣಿ

ಬ್ಯಾಂಕ್‌ಗಳ ಮಾದರಿ ನಡೆ

ಗ್ರಾಹಕರು ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳದಿದ್ದರೆ ವಿಧಿಸುತ್ತಿದ್ದ ಹೆಚ್ಚುವರಿ ಶುಲ್ಕವನ್ನು ಕೆನರಾ ಬ್ಯಾಂಕ್ ಹಾಗೂ ಬ್ಯಾಂಕ್ ಆಫ್ ಬರೋಡಾ ಕೈಬಿಟ್ಟಿವೆ. ಈ ಗ್ರಾಹಕ ಸ್ನೇಹಿ ಕ್ರಮ ಸ್ವಾಗತಾರ್ಹ.

ಉಳಿದ ಬ್ಯಾಂಕ್‌ಗಳು ಇದೇ ಮಾದರಿ ಅನುಸರಿಸಬೇಕಿದೆ. ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಂಡಿಲ್ಲ ಎಂಬ ಕಾರಣಕ್ಕಾಗಿ ಹಲವು ಬ್ಯಾಂಕ್‌ಗಳು ಹೆಚ್ಚಿನ ದಂಡ ವಿಧಿಸುತ್ತವೆ. ಇದು ಗ್ರಾಹಕರಿಗೆ ಹೊರೆಯಾಗಲಿದೆ. ದಂಡ ವಿಧಿಸಬಾರದು ಎಂಬ ಬಗ್ಗೆ ಇತರ ಬ್ಯಾಂಕ್‌ಗಳಿಗೆ ಕೇಂದ್ರ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನ ನೀಡಬೇಕಿದೆ.

ಜಿ. ಚಂದ್ರಶೇಖರ್, ಅರಕಲಗೂಡು

ನುಡಿಜಾತ್ರೆ ಖರ್ಚಿನ ತನಿಖೆಯಾಗಲಿ

ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಖರ್ಚು ಕುರಿತ ಮಾಹಿತಿಯು ಸಾರ್ವಜನಿಕರನ್ನು ಬೆಚ್ಚಿಬೀಳಿಸುತ್ತದೆ (ಪ್ರ.ವಾ., ಜುಲೈ 10). ಶಾಮಿಯಾನ ಸೇರಿ ವಿವಿಧ ಸಾಮಗ್ರಿಗಳ ಖರೀದಿಗೆ ಮಾರುಕಟ್ಟೆ ದರಕ್ಕಿಂತಲೂ ದುಪ್ಪಟ್ಟು ಖರ್ಚು ಮಾಡಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡಲಿದೆ.

ಮಾತೃಭಾಷೆಯ ಬೆಳವಣಿಗೆಗೆ ನಡೆಯುವ ಸಭೆ, ಸಮಾರಂಭ, ಸಮ್ಮೇಳನಗಳಿಗೆ ನೀಡುವ ಹಣ ದುರುಪಯೋಗವಾದರೆ ಜನರಲ್ಲಿ ಮಾತೃಭಾಷೆ ಬಗ್ಗೆ ಪ್ರೀತಿ ಉಳಿಯಲು ಸಾಧ್ಯವೇ? ಸರ್ಕಾರವು ಈ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು.

ವಿ.ಜಿ. ಇನಾಮದಾರ, ಸಾರವಾಡ

ನೀರು–ವಿದ್ಯುತ್ ಕೊಡದಿರುವುದು ಸರಿಯೇ?

‘ಬಿ’ ಖಾತಾ ನಿವೇಶನಗಳಲ್ಲಿ ಮನೆ ಕಟ್ಟುತ್ತಿರುವವರಿಗೆ ತಾತ್ಕಾಲಿಕ ವಿದ್ಯುತ್ ಮತ್ತು ನೀರಿನ ಸಂಪರ್ಕ ನೀಡಲಾಗುತ್ತಿಲ್ಲ. ಸುಪ್ರೀಂ ಕೋರ್ಟ್ ಆದೇಶದಂತೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರ ಹೇಳುತ್ತಿದೆ. ಆದರೆ, ಅಧಿಕಾರಿಗಳು ಈ ಕುರಿತು ಹೆಚ್ಚು ಪ್ರಚಾರ ಮಾಡಿಲ್ಲ. ಇದರಿಂದ ಮಧ್ಯಮ ವರ್ಗದವರು ಆತಂಕದಲ್ಲಿ ಇದ್ದಾರೆ.

‘ಬಿ’ ಖಾತಾ ನಿವೇಶನದಲ್ಲಿ ಕಟ್ಟಡದ ಸ್ವಾಧೀನಾನುಭವ ಪತ್ರ (ಒಸಿ) ಇಲ್ಲದೆ ಮನೆ ನಿರ್ಮಿಸಿದ್ದರೆ ಅದು ಕ್ರಿಮಿನಲ್ ಅಪರಾಧ ಎಂದು ಕಂದಾಯ ಸಚಿವರೂ ಹೇಳಿದ್ದಾರೆ. ಹಾಗಿದ್ದರೆ ‘ಬಿ’ ಖಾತಾ ನಿವೇಶನಗಳ ನೋಂದಣಿಗೆ ಸರ್ಕಾರ ಅವಕಾಶ ಕಲ್ಪಿಸಿದ್ದು ಏಕೆ? ನಿಗದಿತ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಪಾವತಿಸಿ ನೋಂದಣಿ ಮಾಡಿಸಿಕೊಂಡವರು ಮನೆ ನಿರ್ಮಾಣ ಮಾಡದೇ ಇರಲು ಸಾಧ್ಯವೇ? ಜನಸಾಮಾನ್ಯರಿಗೆ ವಿದ್ಯುತ್ ಮತ್ತು ಕುಡಿಯುವ ನೀರಿನ ಸೌಲಭ್ಯ ಕೊಡದಿರುವುದು ಮೂಲಭೂತ ಹಕ್ಕಿನ ಉಲ್ಲಂಘನೆಯಲ್ಲವೇ?

ಗೀತಾ ಕೆಂಗೇರಿ, ಬೆಂಗಳೂರು

ತಾಯ್ತನದ ಬಗ್ಗೆ ಅನಾದರ ಏಕೆ?

ನಟಿ ಭಾವನಾ ರಾಮಣ್ಣ ‘ಐವಿಎಫ್’ ತಂತ್ರಜ್ಞಾನದ ಮೂಲಕ ತಾಯಿಯಾಗುತ್ತಿರುವ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪರ, ವಿರೋಧದ ಚರ್ಚೆ ನಡೆಯುತ್ತಿದೆ. ‘ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ (ರೆಗ್ಯುಲೇಷನ್) ಕಾಯ್ದೆ– 2021’ ಸಂತಾನೋತ್ಪತ್ತಿ ತಂತ್ರಜ್ಞಾನಗಳ ನೈತಿಕ ಮತ್ತು ಸುರಕ್ಷಿತ ಬಳಕೆಯನ್ನು ಎತ್ತಿ ಹಿಡಿದಿದೆ. ಒಂಟಿ ಅಥವಾ ಅವಿವಾಹಿತೆಯು ಕಾಯ್ದೆಯಡಿ ಸೂಚಿಸಿರುವ ನಿಯಮಾವಳಿ ಅನ್ವಯ ತಾಯ್ತನವನ್ನು ಸಂಭ್ರಮಿಸಬಹುದಾಗಿದೆ. ತಾಯ್ತನವು ಮಹಿಳೆಯ ಖಾಸಗೀತನವಾಗಿದೆ. ತನ್ನ ಮಗುವಿನೊಂದಿಗಿನ ವಾತ್ಸಲ್ಯವು ಪವಿತ್ರವೆಂದು ತಾಯಿ ಭಾವಿಸುತ್ತಾಳೆ. ಭಾವನಾ ಅವರು ಐವಿಎಫ್ ಮೂಲಕ ತಾಯಿಯಾಗಿ ಮಕ್ಕಳಿಗೆ ಜನ್ಮ ನೀಡಲು ಅಣಿಯಾಗುತ್ತಿರುವುದು ಅವರ ಖಾಸಗಿ ವಿಷಯ. ಹೀಗಿರುವಾಗ ಅವರ ತಾಯ್ತನವನ್ನು ಗೌರವಿಸಬೇಕೆ ಹೊರತು, ಹೃದಯ ಶೂನ್ಯರಾಗಿ ಮಾತನಾಡುವುದು ಸರಿಯಲ್ಲ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ತಾಯ್ನುಡಿ ಮಗುವಿನ ಕಲಿಕೆಗೆ ಬುನಾದಿ

‘ತಾಯ್ನುಡಿ ಮಾಧ್ಯಮವೇ ಗತಿ–ಮತಿ’ ಲೇಖನವು (ನಿರಂಜನಾರಾಧ್ಯ ವಿ.ಪಿ., ಪ್ರ.ವಾ., ಜುಲೈ 9) ವಾಸ್ತವದ ಮೇಲೆ ಬೆಳಕು ಚೆಲ್ಲಿದೆ. ತಾಯ್ನುಡಿಯಲ್ಲಿನ ಪ್ರಾಥಮಿಕ ಶಿಕ್ಷಣವು ಮಗುವಿನ ಕಲಿಕೆಗೆ ಭದ್ರ ಅಡಿಪಾಯ ಹಾಕಲಿದೆ. ಜೊತೆಗೆ, ಮಕ್ಕಳ ಕಲಿಕೆಯ ಗುಣಮಟ್ಟವನ್ನು ಸುಧಾರಿಸುತ್ತದೆ. ‘ತಾಯ್ನುಡಿಯನ್ನು ಸ್ಪಷ್ಟವಾಗಿ ಕಲಿತ ವಿದ್ಯಾರ್ಥಿಗಳು ಉಳಿದ ಭಾಷೆಗಳನ್ನು ಚೆನ್ನಾಗಿ ಕಲಿಯಬಲ್ಲರು’ ಎಂದು ಮಹಾತ್ಮ ಗಾಂಧೀಜಿ ಅವರೇ ಹೇಳಿದ್ದಾರೆ. ತಾಯ್ನುಡಿ ಮಾಧ್ಯಮದಲ್ಲಿ ಓದಿ ಯಶಸ್ಸು ಸಾಧಿಸಿದ ನೂರಾರು ಸಾಧಕರು ನಮ್ಮೊಡನಿದ್ದಾರೆ. ಇದಕ್ಕೆ ವಿಜ್ಞಾನಿ ಸಿ.ಎನ್.ಆರ್. ರಾವ್ ಅವರು ಉದಾಹರಣೆ.

ಜಯವಂತ ಕಾಡದೇವರ, ಬನಹಟ್ಟಿ

ಸರ್ಕಾರಿ ಶಾಲೆ ಉಳಿಸಿ

ರಾಜ್ಯ ಸರ್ಕಾರವು ಸರ್ಕಾರಿ ಶಾಲೆಗಳ ದುರಸ್ತಿಗೆ ಮುಂದಾಗುತ್ತಿಲ್ಲ. ಅಗತ್ಯ ಶಿಕ್ಷಕರ ನೇಮಕಕ್ಕೂ ನಿರಾಸಕ್ತಿ ತಳೆದಿದೆ. ಮತ್ತೊಂದೆಡೆ ವಿದ್ಯಾರ್ಥಿಗಳ ಕೊರತೆ ನೆಪದಲ್ಲಿ 6,500 ಶಾಲೆಗಳನ್ನು ಮುಚ್ಚಲು ಮುಂದಾಗಿದೆ. ಇದು ಅತ್ಯಂತ ಶೋಚನೀಯ ಸ್ಥಿತಿಯಾಗಿದೆ. ಈ ನಡುವೆಯೇ ಚನ್ನಪಟ್ಟಣ ತಾಲ್ಲೂಕು ಹೊಂಗನೂರಿನ ಶಾಲೆಗೆ ಕಣ್ವ ಫೌಂಡೇಷನ್ ಸ್ಥಾಪಕ ಡಾ. ಎಚ್.ಎಂ. ವೆಂಕಟಪ್ಪ ಅವರು, ಹೈಟೆಕ್ ಸ್ಪರ್ಶ ನೀಡಿರುವುದು ಹೆಮ್ಮೆಯ ಸಂಗತಿ. ಇತರರಿಗೆ ಮಾದರಿಯೂ ಆಗಿದೆ. ಸರ್ಕಾರಿ ಶಾಲೆಗಳು ಆಯಾ ಊರಿನ ಜ್ಞಾನದ ಸಂಪತ್ತು ಇದ್ದಂತೆ. ಈ ದಿಸೆಯಲ್ಲಿ ಶಾಲೆಗಳನ್ನು ಉಳಿಸಿ ಬೆಳೆಸಲು ಸರ್ಕಾರ ಮುಂದಾಗಬೇಕು. ಇದರಲ್ಲಿ ಸಾರ್ವಜನಿಕರ ಜವಾಬ್ದಾರಿಯೂ ಅಡಗಿದೆ.

ಲಲಿತಾ ರೆಡ್ಡಿ, ಕಲಬುರಗಿ

ಜಾಲಡಬ್ಬಿ

ವಲಸಿಗರು ಹೆಚ್ಚಳ

ಶಿವಮೊಗ್ಗದಿಂದ ಕೇರಳ, ಬಿಹಾರ, ಜಾರ್ಖಂಡ್, ಚಂಡೀಗಢ, ಗುವಾಹಟಿಗೂ ರೈಲು ಸೇವೆ ಆರಂಭವಾಗಲಿದೆ ಎಂದು ವರದಿಯಾಗಿದೆ. ಇದು ಬೇರೆ ರಾಜ್ಯದಿಂದ ಜನರನ್ನು ಕರ್ನಾಟಕದಲ್ಲಿ ತುಂಬುವ ಹುನ್ನಾರ ಎನಿಸುತ್ತದೆ. ಈಗಾಗಲೇ, ರಾಜ್ಯದಲ್ಲಿ ವಲಸಿಗರ ಪ್ರಮಾಣ ಮಿತಿ ಮೀರಿದೆ. ರಾಜ್ಯದ ಹಲವು ಭಾಗಗಳಿಗೆ ಇನ್ನೂ ರೈಲ್ವೆ ಸಂಪರ್ಕ ಇಲ್ಲ. ಆ ಸ್ಥಳಗಳಿಗೆ ರೈಲ್ವೆ ಸಂಪರ್ಕ ಕಲ್ಪಿಸಿ.

ವಿನಯ್ ಆರ್. ಗೌಡ, ಪದವೀಧರ, ‘ಎಕ್ಸ್’ನಿಂದ

ಕಿಡಿನುಡಿ

ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ರಾಜಕೀಯ ದುರುದ್ದೇಶದಿಂದ ನಿರಂತರವಾಗಿ ದಾಳಿ ನಡೆಸುತ್ತಿದ್ದಾರೆ. ಕಾಂಗ್ರೆಸ್ ಶಾಸಕರು, ಮುಖಂಡರನ್ನೇ ಗುರಿ ಮಾಡಿಕೊಂಡಿದ್ದಾರೆ. ಇದು ಬಿಜೆಪಿಗೆ ಶೋಭೆ ತರುವುದಿಲ್ಲ.

ಕೆ.ಎಚ್. ಮುನಿಯಪ್ಪ, ಆಹಾರ ಸಚಿವ

ಚುರುಮುರಿ



ಯಾಗ–ಯೋಗ!

• ಬಿ.ಎನ್. ಮಲ್ಲೇಶ್

‘ಮಂಜಮ್ಮ, ಈ ಚಂಡಿಕಾ ಯಾಗ ಅಂದ್ರೆ ಏನದು? ಮೊನ್ನೆ ನಮ್ ಹೋಂ ಮಿನಿಸ್ಟ್ರು ಸಾಹೇಬ್ರು ಮಾಡಿಸಿದ್ರಂತೆ...’ ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

‘ಅದಾ... ನಮ್ ಮನಸಲ್ಲಿ ಏನರೆ ಆಸೆ ಇದ್ರೆ, ಅದ್ನ ಈಡೇರಿಸ್ಕೊಳ್ಳೋಕೆ ಮಾಡ್ತೋ ಯಾಗ ಅನ್ನುತ್ತೆ...’ ಮಂಜಮ್ಮ ಎಲ್ಲರಿಗೂ ಚಾ ಕೊಡುತ್ತ ಹೇಳಿದಳು.

‘ಕುರ್ಚಿ ಆಸೆ ಇದ್ರೆ ಅದ್ಕೆ ಹೈಕಮಾಂಡ್ ಸಂತೃಪ್ತಿ ಯಾಗ, ಅಡ್ಡಿ ಮಾಡೋರಿಗೆ ಶತ್ರು ಸಂಹಾರ ಯಾಗ ಮಾಡಿಸ್ಬೇಕು. ನಮ್ ಹೊಳೆನರಸೀಪುರದ ನಿಂಬೆಹಣ್ಣು ತಂತ್ರವಾದಿಗಳಿಗೆ ಕೇಳಿದ್ರೆ ಹೇಳ್ತಿದ್ರಪ...’ ಗುಡ್ಡೆ ನಕ್ಕ.

‘ಈಗ ನಿಂಬೆಹಣ್ಣು ಪವರ್ ಕಳ್ಕಂಡಿದೆ ಕಣಲೆ, ಅದಿರ್ಲಿ, ಈ ಬಾಯಿಗೆ ಬಂದಂಗೆ ಮಾತಾಡೋರಿಗೆ ಶಾಶ್ವತ ಶ್ರವಣ ನಾಶ ಯಾಗ ಮಾಡ್ಸಿದ್ರೆ ಹೆಂಗೆ?’ ತೆಪರೇಸಿ ಕೇಳಿದ.

‘ಶ್ರವಣ ನಾಶ ಯಾಗನಾ? ಯಾಕೆ?’

‘ಕಿವಿ ಕೇಳಿದ್ರೆ ತಾನೆ ಅವರು ಮಾತಾಡೋದು?’

‘ಕರೆಕ್ಟ್, ಆಮೇಲೆ ಈ ಚಂಡಿಕಾ ಯಾಗದ ತರ ‘ಮಂಡಿ’ಕಾ ಯಾಗ ಅಂತಾನೂ ಇದ್ಯಾ?’ ಗುಡ್ಡೆ ಕೇಳಿದ.

‘ಇರಬೋದೇನಪ, ಮೋಸ್ಟ್ ಲೀ ಅದನ್ನ ಮಂಡಿ ನೋವು ಇರೋರು ಮಾಡಿಸ್ಬೋದು...’

‘ನಮ್ ಕುಮಾರಣ್ಣ ಯಾವ ಯಾಗ ಮಾಡಿಸ್ಬೋದು?’ ಕೊಟ್ರೇಶಿ ಕೊಕ್ಕೆ.

‘ಅವ್ರು ಮಗನಿಗಾಗಿ ‘ಮಂಡ್ಯ’ ಕಾ ಯಾಗ ಮಾಡಿಸ್ಬೋದು...’ ಗುಡ್ಡೆ ಕಿಸಕ್ಕೆಂದ.

‘ಅದಿರ್ಲಿ, ನಮ್ ಬಂಡೆ ಸಾಹೇಬ್ರು ಮೊನ್ನೆ ಈಡುಗಾಯಿ ಹಿಡ್ಕಂಡು ಆಕಾಶ ನೋಡ್ತಿದ್ರಲ್ಲ, ಅಲ್ಲಿ ಏನು ಕಂಡಿರಬೋದು?’ ಮಂಜಮ್ಮ ಕೇಳಿದಳು.

‘ಇನ್ನೇನು ಡೆಲ್ಲಿ ಕಂಡಿರುತ್ತೆ, ಸಿಂಹಾಸನ ನೆನೆಸ್ಕಂಡು ಈಡುಗಾಯಿ ಒಡೆದಿರ್ತಾರೆ...’

‘ಬರೀ ಈಡುಗಾಯಿ ಒಡೆದ್ರೆ ಆಗಲ್ಲ, ಅದ್ಕೆ ಸಿಂಹಾಸನ ಪ್ರಾಪ್ತಿ ಯಾಗ ಮಾಡಿಸ್ಬೇಕು..?’ ದುಬ್ಬೀರನ ಸಲಹೆ.

‘ಅದ್ಕೂ ಸಿಂಹಾಸನದ ಯೋಗ ಪ್ರಾಪ್ತಿ ಆಗದಿದ್ರೆ?’

‘ಕೊನಿಗೆ ಬಾಗಿಲು ಒದೆಯೋ ಯಾಗ ಇದ್ದೇ ಐತಲ್ಲ...’ ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

25 ವರ್ಷಗಳ ಹಿಂದೆ

ಮಂಗಳವಾರ, 11-7-2000

• **ಮದ್ದೂರು: ಪರಿಶಿಷ್ಟರಿಗೆ ಬಹಿಷ್ಕಾರ?**

ಮಂಡ್ಯ, ಜುಲೈ 10– ಮದ್ದೂರು ತಾಲ್ಲೂಕು ಕೊಪ್ಪ ಹೋಬಳಿಯ ಅಬಕಲವಾಡಿ ಗ್ರಾಮದ ಕೆಲವು ಸವರ್ಣೀಯ ಮುಖಂಡರು ಪರಿಶಿಷ್ಟ ಜಾತಿಗೆ ಸೇರಿದ ತಮ್ಮ ಮೇಲೆ ಕಳೆದ ಏಪ್ರಿಲ್ 19ರಿಂದ ಸಾಮಾಜಿಕ ಬಹಿಷ್ಕಾರ ಹಾಕಿ ಮಾನಸಿಕ ದೌರ್ಜನ್ಯ ನಡೆಸುತ್ತಿರುವುದಾಗಿ ಸಿ. ಜಯರಾಮು, ಎ.ಸಿ. ಕುಮಾರ್, ಎಂ. ಕೃಷ್ಣ ಮತ್ತಿತರರು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

• **5 ಕುಟುಂಬಗಳ ಜೀತ ಮುಕ್ತಿ**

ಮೈಸೂರು, ಜುಲೈ 10– ತಾಲ್ಲೂಕಿನ ಈರಪ್ಪನಕೊಪ್ಪಲು ಗ್ರಾಮದ ಬಳಿಯ ಕಲ್ಲು ಕ್ವಾರಿ ಮೇಲೆ ಭಾನುವಾರ ಹಠಾತ್ ದಾಳಿ ನಡೆಸಿದ ಪೊಲೀಸರು, ಅಲ್ಲಿ ಜೀತಕ್ಕೆ ಕೆಲಸ ಮಾಡುತ್ತಿದ್ದ 5 ಕುಟುಂಬಗಳ ಜನರನ್ನು ಬಿಡುಗಡೆ ಮಾಡಿದ್ದಾರೆ. ಈ ಕಲ್ಲು ಗಣಿ ಮಹದೇವಸ್ವಾಮಿ ಎಂಬುವರಿಗೆ ಸೇರಿದ್ದು, ಅಲ್ಲಿ ಸುಮಾರು ಒಂದೂವರೆ ವರ್ಷಗಳಿಂದ ಈ ಕುಟುಂಬದ ಜನರನ್ನು ಆತ ತೊಡಗಿಸಿದ್ದ ಎಂದು ತಿಳಿದುಬಂದಿದೆ.

75 ವರ್ಷಗಳ ಹಿಂದೆ

ಮಂಗಳವಾರ, 11-7-1950

• **ಮೈಸೂರು ಸರ್ಕಾರ ಸಾಲ ಎತ್ತುವ ಸಂಭವ ಕಡಿಮೆ**

ಬೆಂಗಳೂರು, ಜುಲೈ 10– ‘ಮೈಸೂರು ಸರ್ಕಾರ ಸಾಲ ಎತ್ತಬೇಕೇ..? ಎಂಬುದನ್ನು ಇನ್ನೂ ನಿರ್ಧರಿಸಿಲ್ಲ. ಅವಶ್ಯಬಿದ್ದಲ್ಲಿ ಸಾಲ ಎತ್ತಲಾಗುವುದು. ಆದರೆ, ಸಂಭವ ಕಡಿಮೆ’ ಎಂದು ಇನ್‌ಚಾರ್ಜ್ ಮುಖ್ಯಮಂತ್ರಿ ಹೆಚ್.ಸಿ.ದಾಸಪ್ಪನವರು ಇಂದು ಸಂಜೆ ಅವರ ಛೇಂಬರ್ಸ್‌ನಲ್ಲಿ ಪತ್ರಿಕಾ ಪ್ರತಿನಿಧಿಗಳು ಭೇಟಿ ಮಾಡಿದಾಗ ತಿಳಿಸಿದರು.

ಸಂಗತ

ಶಾಲೆ ಸುಧಾರಣೆ: ಯಾರ ಹೊಣೆ?

ಸರ್ಕಾರಿ ಶಾಲೆಗಳನ್ನು ಉಳಿಸುವುದರ ಬಗ್ಗೆ ಭಾವುಕವಾಗಿ ಮಾತನಾಡುತ್ತೇವೆ. ಆದರೆ, ಉಳಿಸುವವರು ಯಾರು? ಶಿಕ್ಷಕರೇ ಆ ಹೊಣೆ ಹೊರಬೇಕೇ?

• ಸಿದ್ದಯ್ಯ ಹಿರೇಮಠ

‘ಸರ್ಕಾರಿ ಶಾಲೆಗಳು ಉಳಿಯಬೇಕು. ಸರ್ಕಾರಿ ಶಾಲೆಗಳಿಗೆ ಸರ್ಕಾರ ಮೂಲ ಸೌಲಭ್ಯ ಒದಗಿಸಬೇಕು’ ಎಂಬ ಬೇಡಿಕೆಯಲ್ಲಿ, ಸರ್ಕಾರಿ ಶಾಲೆಗಳು ಮುಚ್ಚಿದರೆ ಖಾಸಗಿ ಶಾಲೆಗಳ ಏಕಸ್ವಾಮ್ಯಕ್ಕೆ ಮಿತಿಯೇ ಇಲ್ಲದಂತಾಗಲಿದೆ’ ಎಂಬ ಆತಂಕವೂ ಇರುವಂತಿದೆ. ಸರ್ಕಾರಿ ಶಾಲೆ ಎಂದರೆ ಮುಖ್ಯವಾಗಿ ಅದು ಕನ್ನಡ ಮಾಧ್ಯಮ ಶಾಲೆ. ಕನ್ನಡ ಶಾಲೆಗಳು ಮುಚ್ಚಿದರೆ ಭವಿಷ್ಯದಲ್ಲಿ ಕನ್ನಡ ಭಾಷೆಗೆ ಹೊಡೆತ ಬೀಳಲಿದೆ ಎಂಬುದು ಕನ್ನಡಪ್ರೇಮಿಗಳ ಆತಂಕ.

‘ಪಾಲಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸದಿದ್ದರೆ ಸರ್ಕಾರವಾದರೂ ಏನು ಮಾಡಬೇಕು? ವಿದ್ಯಾರ್ಥಿಗಳೇ ಇಲ್ಲದ ಶಾಲೆಗಳನ್ನು ಮುಂದುವರಿಸಿ ಏನು ಪ್ರಯೋಜನ?’ ಎನ್ನುವ ಪ್ರಶ್ನೆ ಕೆಲವರದು. ‘ಸರ್ಕಾರಿ ಶಾಲೆ ಮುಚ್ಚದೇ ಇರಬೇಕಾದರೆ ಜಾಗೃತಿ ಮೂಡಿಸಬೇಕಿರುವುದು ಯಾರಿಗೆ?’ ಹಾಗೂ ‘ಸರ್ಕಾರಿ ಶಾಲೆಗಳಲ್ಲಿ ಇಲ್ಲದ್ದು ಖಾಸಗಿ ಶಾಲೆಗಳಲ್ಲಿ ಏನಿದೆ?’ ಎನ್ನುವ ಪ್ರಶ್ನೆಗಳೂ ಇವೆ. ಈ ಜಿಜ್ಞಾಸೆಯ ಬಗ್ಗೆ ತಲೆಬಿಸಿ ಮಾಡಿಕೊಳ್ಳದ ಅನೇಕ ಪಾಲಕರು, ‘ಇಂಗ್ಲಿಷ್ ಮಾಧ್ಯಮ’ ಮುಖ್ಯ ಎಂದು ಭಾವಿಸಿದ್ದಾರೆ ಹಾಗೂ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಆರಂಭಿಸಲು ಒತ್ತಾಯಿಸುತ್ತಿದ್ದಾರೆ.

‘ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಲಭ್ಯಗಳಿಲ್ಲ. ಶಿಥಿಲಾವಸ್ಥೆಯ ಕಟ್ಟಡಗಳಲ್ಲಿಯೇ ಮಕ್ಕಳು ಕಲಿಯುತ್ತಿದ್ದಾರೆ. ಶಾಲೆ, ಶಿಕ್ಷಣ ಹಾಗೂ ವಿದ್ಯಾರ್ಥಿಗಳ ಬಗ್ಗೆ ಸರ್ಕಾರಕ್ಕೆ ಕಾಳಜಿಯೇ ಇಲ್ಲವಾಗಿದೆ’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಈಚೆಗೆ ಅಸಮಾಧಾನ ಹೊರಹಾಕಿದ್ದಾರೆ. ಪಾಲಕರು, ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಂದ ವಿಮುಖವಾಗಲು ಇದೇ ಪ್ರಮುಖ ಕಾರಣ ಎಂಬುದಾದರೆ, ದುಬಾರಿ ಶುಲ್ಕ ವಸೂಲಿ ಮಾಡುವ ಖಾಸಗಿ ಶಾಲೆಗಳಲ್ಲಿ ಎಲ್ಲ ಸೌಲಭ್ಯಗಳಿವೆಯೇ? ಎಂಬ ಪ್ರಶ್ನೆ ಏಳುತ್ತದೆ.

ಅನೇಕ ಖಾಸಗಿ ಶಾಲೆಗಳು ಮುಖ್ಯರಸ್ತೆಯ ಪಕ್ಕದಲ್ಲೇ ಇರುವ ಕಟ್ಟಡಗಳಲ್ಲಿ ನಡೆಯುತ್ತಿವೆ. ವಿದ್ಯಾರ್ಥಿಗಳಿಗೆ ಅಲ್ಲಿ ಪ್ರಾರ್ಥನೆ ಮಾಡಲೂ ಜಾಗವಿರುವುದಿಲ್ಲ. ಆಟದ ಬಯಲೂ ಇರುವುದಿಲ್ಲ. ಆ ಶಾಲೆಗಳಲ್ಲಿ ಮಕ್ಕಳನ್ನು ಕುರಿಮಂದೆಯಂತೆ ತುಂಬಿಸಿಕೊಳ್ಳಲಾಗುತ್ತದೆ.

ಸರ್ಕಾರ ವಿದ್ಯಾರ್ಥಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳಲ್ಲಿ, ‘ಶುಲ್ಕರಹಿತ ಶಿಕ್ಷಣ ಸೌಲಭ್ಯ’ ಮುಖ್ಯವಾದುದು. ಬಿಸಿಯೂಟ, ಪಠ್ಯಪುಸ್ತಕ, ಸಮವಸ್ತ್ರ, ಬಾಳೆಹಣ್ಣು, ಮೊಟ್ಟೆ, ಹಾಲು, ಆರೋಗ್ಯ ತಪಾಸಣೆಯಂಥ ಸೌಲಭ್ಯಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಕಟ್ಟಡ, ಆಟದ ಮೈದಾನ, ಪ್ರಾರ್ಥನೆಗೆ ಜಾಗ ಸೇರಿದಂತೆ ಅನೇಕ ಸೌಲಭ್ಯಗಳು ಸರ್ಕಾರಿ ಶಾಲೆಗಳಲ್ಲಿರುವುದು ಸರ್ವವಿದಿತ. ಹಾಗಾದರೆ, ರಾಜ್ಯದಾದ್ಯಂತ ಸರ್ಕಾರಿ ಶಾಲೆಗಳ ಅಸ್ತಿತ್ವಕ್ಕೆ ಏಕೆ ಹೊಡೆತ ಬೀಳುತ್ತಿದೆ?

ಡಿ.ಇಡಿ ಅಥವಾ ಬಿ.ಇಡಿಯಲ್ಲಿ ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾದ ಪ್ರಶಿಕ್ಷಣಾರ್ಥಿಗಳು ಸರ್ಕಾರಿ ಶಾಲೆಯ ಶಿಕ್ಷಕರಾಗಲು, ಅತ್ಯಂತ ಕಠಿಣವಾದ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (ಟಿಇಟಿ–ಟೀಚರ್ಸ್ ಎಲಿಜಿಬಲಿಟಿ ಟೆಸ್ಟ್) ಉತ್ತೀರ್ಣರಾಗುವುದು ಕಡ್ಡಾಯ. ನಂತರ, ಶಿಕ್ಷಕ ಹುದ್ದೆಯ ನೇಮಕಾತಿಗೆ ನಡೆಯುವ ‘ಸಿಇಟಿ’ಯಲ್ಲಿ (ಸಾಮಾನ್ಯ ಪ್ರವೇಶ ಪರೀಕ್ಷೆ) ಹೆಚ್ಚು ಅಂಕ ಗಳಿಸಿದವರೇ ಸರ್ಕಾರಿ ಶಾಲೆಗಳ ಶಿಕ್ಷಕರಾಗುತ್ತಾರೆ. ಟಿಇಟಿ ಪಾಸಾಗಲೂ ಆಗದವರು ಅಥವಾ ಸಿಇಟಿಯಲ್ಲಿ ವಿಫಲರಾದವರು ಖಾಸಗಿ ಶಾಲೆಗಳಲ್ಲಿ ಪಾಠ ಮಾಡುತ್ತಿದ್ದಾರೆ.

ಪ್ರತಿಭಾವಂತರೇ ಶಿಕ್ಷಕರಾಗಿದ್ದರೂ, ಸರ್ಕಾರಿ ಶಾಲೆಗಳಲ್ಲಿನ ಶೈಕ್ಷಣಿಕ ಗುಣಮಟ್ಟ ಸರಿಯಿಲ್ಲ ಎನ್ನುವ ದೂರುಗಳಿವೆ. ಸರ್ಕಾರಿ ಶಾಲೆಯ ಶಿಕ್ಷಕರ ಸಂಬಳ ಆರಂಭದಲ್ಲೇ ಅರ್ಧ ಲಕ್ಷ ದಾಟಿದ್ದರೆ, ಖಾಸಗಿ ಶಿಕ್ಷಕರ ಸಂಬಳ ₹20 ಸಾವಿರವೂ ಇರುವುದಿಲ್ಲ. ಆದರೂ, ಸರ್ಕಾರಿ ಪ್ರಾಥಮಿಕ ಶಾಲೆಗಳ ಅದೆಷ್ಟೋ ವಿದ್ಯಾರ್ಥಿಗಳಿಗೆ ಇಂಗ್ಲಿಷಿನ ಎಬಿಸಿಡಿ ಒತ್ತಟ್ಟಿಗಿರಲಿ, ಕನ್ನಡದ ವರ್ಣಮಾಲೆಯನ್ನೂ ಬರೆಯಲು ಬರುವುದಿಲ್ಲ!

ಸಿಇಟಿ, ಜೆಇಇ ಮತ್ತು ಎನ್‌ಇಇಟಿ (ನೀಟ್) ಪರೀಕ್ಷೆ ಎದುರಿಸಲು ಸುಲಭವಾಗುತ್ತದೆ ಎನ್ನುವ ಉದ್ದೇಶದಿಂದ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮ ಆಯ್ದುಕೊಳ್ಳುವವರು ಹೆಚ್ಚುತ್ತಿದ್ದಾರೆ. ಗ್ರಾಮಗಳು, ಪಟ್ಟಣಗಳಿಂದ ಹಿಡಿದು ಮಹಾನಗರಗಳಲ್ಲಿ ತಲೆ ಎತ್ತಿರುವ ಖಾಸಗಿ ಶಾಲೆಗಳಲ್ಲಿ ಈ ಪಠ್ಯಕ್ರಮವೇ ಇದೆ. ಆ ಶಾಲೆಗಳಿಗೆ ಅಧಿಕ ಸಂಖ್ಯೆಯ ಪಾಲಕರು ಸ್ವಯಂ ಪ್ರೇರಣೆಯಿಂದಲೇ ತಮ್ಮ ಮಕ್ಕಳನ್ನು ಸೇರಿಸುತ್ತಿದ್ದಾರೆ. ಈ ಪಾಲಕರಲ್ಲಿ ಸರ್ಕಾರಿ ಶಾಲೆಗಳ ಶಿಕ್ಷಕರೂ ಇದ್ದಾರೆ.

ಬಹುತೇಕ ಸರ್ಕಾರಿ ಶಾಲೆಗಳ ಶಿಕ್ಷಕರು ತಾವು ಕೆಲಸ ಮಾಡುವ ಶಾಲೆ ಇರುವ (ಹಳ್ಳಿಯಾಗಿದ್ದರೆ) ಊರಲ್ಲಿ ತಂಗದೆ, ಸಮೀಪದ ಪಟ್ಟಣ ಅಥವಾ ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ತಮ್ಮ ಮಕ್ಕಳಿಗೆ ಖಾಸಗಿ ಶಾಲೆಯಲ್ಲಿ ದೊರೆಯುವ ಗುಣಮಟ್ಟದ ಶಿಕ್ಷಣ ಕೊಡಿಸುವುದಕ್ಕೆ ಅವರು ಆ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿದ್ದಾಗಿ ಹೇಳುತ್ತಾರೆ.

ಸರ್ಕಾರಿ ಶಾಲೆಗಳಲ್ಲಿನ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಆ ಶಾಲೆಗಳ ಶಿಕ್ಷಕರೇ ಮುಂದಾಗಬೇಕಿದೆ. ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಲ್ಲೇ ಓದಿಸಲು ಅವರು ಮುಂದಾದಲ್ಲಿ, ಸರ್ಕಾರಿ ಶಾಲೆಗಳ ಮೇಲೆ ಇತರರಿಗೂ ನಂಬಿಕೆ ಮೂಡುತ್ತದೆ. ತಾವು ಕರ್ತವ್ಯ ನಿರ್ವಹಿಸುವ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸದ ಸರ್ಕಾರಿ ಶಾಲೆಗಳ ಶಿಕ್ಷಕರ ವರ್ತನೆಯು, ಮನೆಯಲ್ಲಿ ತಯಾರಾದ ಅಡುಗೆ ಸರಿಯಿಲ್ಲ ಎಂದು ಭಾವಿಸಿ ಹೋಟೆಲ್‌ನಿಂದಲೋ ಪಕ್ಕದ ಮನೆಯಿಂದಲೋ ತರಿಸಿ ತಿಂದಷ್ಟೇ ಅಸಹಜ ಎನಿಸುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯೆಮನ್‌ನಲ್ಲಿ ಸ್ಥಳೀಯ ಪ್ರಜೆ ಕೊಲೆ: ಮರಣ ದಂಡನೆಗೆ ಗುರಿಯಾಗಿರುವ ಕೇರಳದ ನರ್ಸ್; 16ರಂದು ಶಿಕ್ಷೆ ಜಾರಿ?

ಸಾವಿನ ಕುಣಿಕೆಯಿಂದ ಪಾರಾಗುವರೇ 'ನಿಮಿಷ'?

ಪ್ರಕರಣ ಸಾಗಿದ ಹಾದಿ

2008 ನರ್ಸಿಂಗ್ ಕೆಲಸ ಅರಸಿ ಯೆಮನ್‌ಗೆ ಪತಿ ಟೋಮಿ ಥಾಮಸ್ ಅವರೊಂದಿಗೆ ತೆರಳಿದ ನಿಮಿಷ ಪ್ರಿಯಾ. ಏಳು ವರ್ಷಗಳ ಕಾಲ ಅಲ್ಲಿನ ವಿವಿಧ ಆಸ್ಪತ್ರೆಗಳಲ್ಲಿ ಕೆಲಸ

2014 ಹಣಕಾಸಿನ ಬಿಕ್ಕಟ್ಟಿನ ಕಾರಣಕ್ಕೆ ನಿಮಿಷ ಪತಿ ಥಾಮಸ್ ಮತ್ತು ಎರಡು ವರ್ಷದ ಮಗಳು ಕೇರಳಕ್ಕೆ ವಾಪಸ್

2015 ಯೆಮನ್ ಪ್ರಜೆ ತಲಾಲ್ ಅಬ್ಡೊ ಮೆಹ್ದಿ ಜೊತೆ ಸೇರಿ ಕ್ಲಿನಿಕ್ ಆರಂಭ

2017 ಜುಲೈ ಮೆಹ್ದಿಗೆ ಮತ್ತು ಬರಿಸುವ ಚುಚ್ಚುಮದ್ದು ನೀಡಿ ಪಾಸ್‌ಪೋರ್ಟ್ ವಾಪಸ್ ಪಡೆಯಲು ಯತ್ನ. ಚುಚ್ಚುಮದ್ದಿನ ಡೋಸ್ ಜಾಸ್ತಿಯಾಗಿ ಮೆಹ್ದಿ ಸಾವು. ಪೊಲೀಸರಿಂದ ನಿಮಿಷ ಬಂಧನ. ಕ್ಲಿನಿಕ್ ಸ್ಥಗಿತ

2020 ನಿಮಿಷಗೆ ಮರಣ ದಂಡನೆ ವಿಧಿಸಿದ ಕೆಳಹಂತದ ನ್ಯಾಯಾಲಯ

2023, ನವೆಂಬರ್ ನಿಮಿಷ ಮೇಲ್ಮನವಿಯನ್ನು ವಜಾಗೊಳಿಸಿದ ಯೆಮನ್ ಸುಪ್ರೀಂ ಕೋರ್ಟ್

2024, ಡಿಸೆಂಬರ್ 30 ಶಿಕ್ಷೆ ಜಾರಿಗೆ ಯೆಮನ್ ಅಧ್ಯಕ್ಷರ ಸಹಿ

2024, ಏಪ್ರಿಲ್ 23 ಮಗಳ ಭೇಟಿಗಾಗಿ ಯೆಮನ್‌ಗೆ ತೆರಳಿದ ತಾಯಿ ಪ್ರೇಮಾಕುಮಾರಿ. ಆಕೆಯ ಬಿಡುಗಡೆಗೆ ಪ್ರಯತ್ನ

2025, ಜುಲೈ 16 ಗಲ್ಲು ಶಿಕ್ಷೆ ವಿಧಿಸಲು ನಿಗದಿ ಪಡಿಸಲಾಗಿರುವ ದಿನ



ಪ್ರಜಾವಾಣಿ ವಾರ್ತೆ

ಕೇರಳದ ಪಾಲಕ್ಕಾಡ್ ಬಳಿಯ ಕೊಲ್ಲಂಗೋಡು ಪಟ್ಟಣದವರಾದ ನಿಮಿಷ ಪ್ರಿಯಾ ಅವರು ಯೆಮನ್‌ಗೆ ಹೋಗಿದ್ದು (2008) ಉತ್ತಮವಾದ ಬದುಕು ಅರಸಿ. ಹೋಗುವಾಗ ಜತೆಯಲ್ಲಿ ಅವರ ಗಂಡನೂ ಇದ್ದರು. ಒಂದಷ್ಟು ವರ್ಷ ಯೆಮನ್ ರಾಜಧಾನಿ ಸನಾ ನಗರದ ವಿವಿಧ ಆಸ್ಪತ್ರೆಗಳಲ್ಲಿ ನರ್ಸ್ ಆಗಿ ಕೆಲಸ ಮಾಡಿದರು. ಅಲ್ಲಿ ಅವರಿಗೆ ಒಂದು ಹೆಣ್ಣುಮಗುವೂ ಜನಿಸಿತು. ಆದರೆ, ನಿರೀಕ್ಷಿಸಿದಂತೆ ವೃತ್ತಿಜೀವನದಲ್ಲಿ ಪ್ರಗತಿ ಸಾಧಿಸಲಿಲ್ಲ ಎಂದು ಗಂಡ ಮತ್ತು ಮಗಳು ಕೇರಳಕ್ಕೆ ವಾಪಸ್ಸಾದರು. ಏಕಾಂಗಿಯಾಗಿ ಸನಾ ನಗರದಲ್ಲಿ ವಾಸ ಮಾಡುತ್ತಾ ನರ್ಸ್ ಆಗಿ ಕೆಲಸ ಮಾಡುತ್ತಿದ್ದ ಅವರಿಗೆ ತಾವೇ ಏಕೆ ಒಂದು ಕ್ಲಿನಿಕ್ ನಡೆಸಬಾರದು ಎನ್ನುವ ಯೋಚನೆ ಬಂತು. ಆ ದೇಶದ ನಿಯಮದ ಪ್ರಕಾರ, ಅಲ್ಲಿನ ಪ್ರಜೆಯೊಬ್ಬರನ್ನು ಪಾಲುದಾರರನ್ನಾಗಿ ಮಾಡಿಕೊಂಡರೆ ಮಾತ್ರ ಅದು ಸಾಧ್ಯವಿತ್ತು. ಆ ರೀತಿ ನಿಮಿಷ ಅವರಿಗೆ ಜತೆಯಾದವರು ಯೆಮನ್ ಪ್ರಜೆ ತಲಾಲ್ ಅಬ್ಡೊ ಮೆಹ್ದಿ.

ಕ್ಲಿನಿಕ್ ಆರಂಭಿಸಿದ ನಂತರ ನಿಮಿಷ ಮತ್ತು ಮೆಹ್ದಿ ನಡುವೆ ಮನಸ್ತಾಪ ಹುಟ್ಟಿಕೊಂಡಿತು. ಒಂದು ಮೂಲದ ಪ್ರಕಾರ, 'ನಿಮಿಷ ನನ್ನ ಹೆಂಡತಿ' ಎಂದು ಮೆಹ್ದಿ ಹೇಳಿಕೊಂಡು ತಿರುಗುತ್ತಿದ್ದುದೇ ಅದಕ್ಕೆ ಕಾರಣ. ಜತೆಗೆ, ನಿಮಿಷ ಅವರಿಗೆ ಮೆಹ್ದಿಯು ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡುತ್ತಿದ್ದರು ಎನ್ನಲಾಗಿದೆ. ಅದಕ್ಕಿಂತಲೂ ಮುಖ್ಯವಾಗಿ, ನಿಮಿಷ ಬಳಿ ಇದ್ದ ಹಣ ಮತ್ತು ಪಾಸ್‌ಪೋರ್ಟ್ ಅನ್ನೂ ಕಸಿದುಕೊಂಡಿದ್ದರು ಎನ್ನುವ ಆರೋಪಗಳಿವೆ. ಇದರಿಂದ ಕಂಗೆಟ್ಟಿದ್ದ ನಿಮಿಷ ಅವರು, ಹೇಗಾದರೂ ಮಾಡಿ ಅವುಗಳನ್ನು ಮರಳಿ ಪಡೆಯಬೇಕು ಎನ್ನುವ ತವಕದಲ್ಲಿ ಮೆಹ್ದಿಗೆ ಮತ್ತು ಬರಿಸುವ ಚುಚ್ಚುಮದ್ದು ನೀಡಿದ್ದರು. ಆದರೆ, ಅದರ ಡೋಸ್ ಹೆಚ್ಚಾಗಿ ಮೆಹ್ದಿ ಉಸಿರು ಚೆಲ್ಲಿದ್ದರು. ಪ್ರಕರಣವನ್ನು ಮುಚ್ಚಿಹಾಕಲು ನಿಮಿಷ ಅವರು ಮೆಹ್ದಿಯ ಮೃತದೇಹವನ್ನು ತುಂಡುತುಂಡಾಗಿ ಕತ್ತರಿಸಿ, ಟ್ಯಾಂಕ್‌ಗೆ ಎಸೆದಿದ್ದರು ಎಂದೂ ಹೇಳಲಾಗುತ್ತಿದೆ. ಈ ಪ್ರಕರಣದ ನಂತರ ನಿಮಿಷ ಅವರ ಬದುಕು ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ; ಸಾವನ್ನು ಎದುರುನೋಡುತ್ತಲೇ ಎಂಟು ವರ್ಷಗಳಿಂದ ಅವರು ಜೈಲುವಾಸ ಅನುಭವಿಸುತ್ತಿದ್ದಾರೆ.

ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ಜೈಲು ಸೇರಿದ ಪ್ರಿಯಾ ಅವರಿಗೆ ಅಲ್ಲಿನ ಸ್ಥಳೀಯ ನ್ಯಾಯಾಲಯವು ಮರಣ ದಂಡನೆ ವಿಧಿಸಿತು. ಅಲ್ಲಿನ ಸುಪ್ರೀಂ ಕೋರ್ಟ್ ಶಿಕ್ಷೆಯನ್ನು ಎತ್ತಿ ಹಿಡಿಯಿತು. ಯೆಮನ್‌ನ ಅಧ್ಯಕ್ಷ ರಷದ್ ಅಲ್–ಅಲಿಮಿ ಕೂಡ ಮರಣ ದಂಡನೆಯನ್ನು ಅನುಮೋದಿಸಿದರು. ಎಲ್ಲ ದಾರಿಗಳೂ ಮುಚ್ಚಿಹೋದವು ಎನ್ನುವಂಥ ಸ್ಥಿತಿಯಲ್ಲಿ ಅವರಿಗೆ ಬೆಳಕಿಂಡಿಯಾಗಿ ಕಂಡದ್ದು ಪರಿಹಾರ ನೀಡಿ ಕ್ಷಮಾದಾನ ಗಳಿಸುವ ದಾರಿ (ಬ್ಲಡ್ ಮನಿ). ಆದರೆ, ಅದಕ್ಕೆ ಕೊಲೆಗೀಡಾದ ಮೆಹ್ದಿ ಕುಟುಂಬಸ್ಥರ ಅನುಮತಿ ಬೇಕು. ಈ ದಿಸೆಯಲ್ಲಿ ನಿಮಿಷ ಅವರ ತಾಯಿ ಪ್ರೇಮಾಕುಮಾರಿ ಮತ್ತು ಪತಿ ಟೋಮಿ ಥಾಮಸ್ ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ನಿಮಿಷ ಅವರ ರಕ್ಷಣೆಗಾಗಿಯೇ ವಕೀಲರು ಮತ್ತು ಇತರರು ಇರುವ ಅಂತರರಾಷ್ಟ್ರೀಯ ಕಾರ್ಯಪಡೆಯೊಂದು ರಚನೆಯಾಗಿದ್ದು, ಭಾರತ ಸರ್ಕಾರದ ಮೇಲೆ ಒತ್ತಡ ಹೇರಲಾಗುತ್ತಿದೆ.

2024ರ ಏಪ್ರಿಲ್‌ನಿಂದಲೂ ನಿಮಿಷ ಅವರ ತಾಯಿ ಯೆಮನ್‌ನಲ್ಲಿದ್ದು, ಮಗಳ ಬಿಡುಗಡೆಗಾಗಿ ಶ್ರಮಿಸುತ್ತಿದ್ದಾರೆ. ಮಗಳನ್ನು ಕ್ಷಮಿಸುವುದಾದರೆ, ಅದಕ್ಕಾಗಿ ದುಬಾರಿ ಮೊತ್ತದ ಪರಿಹಾರ ನೀಡುವುದಾಗಿ ಅವರು ಪ್ರತಿಪಾದಿಸುತ್ತಿದ್ದಾರೆ. ವಕೀಲರ ಮೂಲಕ ಮೆಹ್ದಿ ಕುಟುಂಬದೊಂದಿಗೆ ಮಾತುಕತೆಗೆ ಪ್ರಯತ್ನ ನಡೆಸುತ್ತಿದ್ದಾರೆ.

ಯೆಮನ್‌ನಲ್ಲಿ ಯುದ್ಧರೀತಿಯ ಸ್ಥಿತಿಯಿದ್ದು, ರಾಜಧಾನಿ ಸನಾವು ಹುಥಿ ಬಂಡುಕೋರರ ಹಿಡಿತದಲ್ಲಿದೆ. ಅವರೊಂದಿಗೆ ಭಾರತವು ಯಾವುದೇ ರೀತಿಯ ರಾಜತಾಂತ್ರಿಕ ಸಂಬಂಧ ಹೊಂದಿಲ್ಲ. ಹೀಗಾಗಿ ಭಾರತ ಸರ್ಕಾರವು ಯೆಮನ್‌ನೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸುವ ಸಾಧ್ಯತೆ ಇಲ್ಲ. ಆದರೂ ರಾಜತಾಂತ್ರಿಕ ಅಧಿಕಾರಿಗಳು ನಿಮಿಷ ಅವರ ಕುಟುಂಬಸ್ಥರೊಂದಿಗೆ ಕೈಜೋಡಿಸಿದ್ದು, ನಿಮಿಷ ಅವರ ಬಿಡುಗಡೆಗೆ ಇರುವ ದಾರಿಗಳ ಹುಡುಕಾಟದಲ್ಲಿದ್ದಾರೆ.

ನಿಮಿಷ ಅವರ ಗಂಡ ಟೋಮಿ ಥಾಮಸ್ ಒಬ್ಬ ಕಾರು ಚಾಲಕನಾದರೆ, ತಾಯಿ ಪ್ರೇಮಾಕುಮಾರಿ ಮನೆಗೆಲಸ ಮಾಡಿಕೊಂಡು ಬದುಕು ನಡೆಸುವವರು. ವಕೀಲರ ವೆಚ್ಚ ಮತ್ತು ಇತರ ಖರ್ಚುಗಳಿಗಾಗಿ ಅವರ ಕೇರಳದಲ್ಲಿದ್ದ ತಮ್ಮ ಮನೆ, ಕಾರು ಸೇರಿದಂತೆ ಎಲ್ಲ ಆಸ್ತಿಯನ್ನೂ ಮಾರಿದ್ದಾರೆ. ಅವರ ಮಗಳು ವಸತಿ ಶಾಲೆಯಲ್ಲಿದ್ದು, 7ನೇ ತರಗತಿ ಓದುತ್ತಿದ್ದಾಳೆ. ಇದು ಸಾಲದು ಎನ್ನುವಂತೆ ಯೆಮನ್‌ನಲ್ಲಿ ಕ್ಲಿನಿಕ್ ಆರಂಭಿಸಲು ಅವರು ಮಾಡಿದ್ದ ₹60 ಲಕ್ಷದ ಸಾಲವೂ ಇದೆ. ಆದರೂ ಈ ಕುಟುಂಬ ಭರವಸೆ ಕಳೆದುಕೊಂಡಿಲ್ಲ. ನಿಮಿಷ ಅವರು ಬಿಡುಗಡೆಯಾಗುತ್ತಾರೆ ಎನ್ನುವ ವಿಶ್ವಾಸದಿಂದಿದೆ. ಅದಕ್ಕಾಗಿ ದಾನಿಗಳು ಮತ್ತಿತರರಿಂದ ಹಣ ಸಂಗ್ರಹ ಮಾಡಲಾಗುತ್ತಿದೆ. ನಿಮಿಷ ಅವರ ತಾಯಿಯು ಯೆಮನ್‌ನಿಂದ ವಿಡಿಯೊ ಮೂಲಕ ಕೇಂದ್ರ ಸರ್ಕಾರ ಮತ್ತು ಅಧಿಕಾರಿಗಳು ಮಧ್ಯಪ್ರವೇಶ ಮಾಡಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ. ಸ್ಯಾಮ್ಯುಯೆಲ್ ಜೆರೋಮ್ ರೀತಿಯ ಹಲವು ಸಮಾಜ ಸೇವಕರು, ವಕೀಲರು ನಿಮಿಷ ಅವರ ಕುಟುಂಬದ ನೆರವಿಗೆ ನಿಂತಿದ್ದು, ಪ್ರಯತ್ನಗಳನ್ನು ಮುಂದುವರಿಸಿದ್ದಾರೆ. ಇರಾನ್ ಕೂಡಾ ಪ್ರಯತ್ನ ಪಡುತ್ತಿರುವುದಾಗಿ ಹೇಳಿದೆ.

ಆಧಾರ: ಪಿಟಿಐ, ಬಿಬಿಸಿ, ಮಾಧ್ಯಮ ವರದಿಗಳು

ಕ್ಷಮೆ: ₹8.57 ಕೋಟಿ ಪರಿಹಾರದ ಪ್ರಸ್ತಾಪ

ನಿಮಿಷ ಪ್ರಿಯಾ ಪ್ರಕರಣದಲ್ಲಿ ಅವರ ಕುಟುಂಬದವರು ಮೆಹ್ದಿಯ ಕುಟುಂಬದವರಿಗೆ 10 ಲಕ್ಷ ಡಾಲರ್ (ಸುಮಾರು ₹8.57 ಕೋಟಿ) ಹಣವನ್ನು ಕ್ಷಮಾದಾನ ಪರಿಹಾರವನ್ನಾಗಿ ನೀಡಲು ಮುಂದೆ ಬಂದಿದ್ದಾರೆ. ಆದರೆ, ಇದನ್ನು ಮೆಹ್ದಿ ಕುಟುಂಬ ಇನ್ನೂ ಒಪ್ಪಿಲ್ಲ. ಯೆಮನ್‌ನಲ್ಲಿ ಅಶಾಂತಿ ನೆಲಸಿರುವುದರಿಂದ ರಾಜಿ ಸಂಧಾನ ಮಾತುಕತೆಯನ್ನು ಪರಿಣಾಮಕಾರಿಯಾಗಿ ನಡೆಸಲು ಸಾಧ್ಯವಾಗಿಲ್ಲ ಎಂದೂ ಹೇಳಲಾಗುತ್ತಿದೆ.

14ರಂದು 'ಸುಪ್ರೀಂ' ವಿಚಾರಣೆ

ನಿಮಿಷ ಅವರನ್ನು ಶಿಕ್ಷೆಯಿಂದ ಪಾರು ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಸಿಪಿಎಂ ಸೇರಿದಂತೆ ವಿರೋಧ ಪಕ್ಷಗಳು, ವಿವಿಧ ಸಂಘಟನೆಗಳು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಮೇಲೆ ಒತ್ತಡ ಹಾಕುತ್ತಿವೆ. ಬೆಳವಣಿಗೆಯನ್ನು ಗಮನಿಸುತ್ತಿರುವುದಾಗಿ ಸಚಿವಾಲಯ ಹೇಳಿದೆ.

ನರ್ಸ್ ಅನ್ನು ರಕ್ಷಿಸಲು ರಾಜತಾಂತ್ರಿಕ ಮಾರ್ಗಗಳನ್ನು ಬಳಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಸಲ್ಲಿಸಲಾಗಿರುವ ಅರ್ಜಿಯನ್ನು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಗುರುವಾರ ಸಮ್ಮತಿಸಿದ್ದು, 14ರಂದು ವಿಚಾರಣೆ ಕೈಗೆತ್ತಿಕೊಳ್ಳುವುದಾಗಿ ಹೇಳಿದೆ. 'ಸೇವ್ ನಿಮಿಷ ಪ್ರಿಯಾ–ಇಂಟರ್‌ನ್ಯಾಷನಲ್ ಆ್ಯಕ್ಷನ್ ಕೌನ್ಸಿಲ್' ಎಂಬ ಸಂಘಟನೆ ಈ ಅರ್ಜಿ ಸಲ್ಲಿಸಿದೆ.

ಅರ್ಜಿಯ ಪ್ರತಿಯೊಂದನ್ನು ಅಟಾರ್ನಿ ಜನರಲ್ ಅವರಿಗೂ ನೀಡುವಂತೆ ವಕೀಲರಿಗೆ ತಿಳಿಸಿದ ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಜೋಯ್‌ಮಲ್ಯ ಬಾಗ್ಚಿ ಅವರಿದ್ದ ನ್ಯಾಯಪೀಠ, ಈ ಪ್ರಕರಣದಲ್ಲಿ ಅಟಾರ್ನಿ ಜನರಲ್ ಅವರ ನೆರವನ್ನೂ ಬಯಸಿದೆ.

'ಕ್ಷಮೆಗಾಗಿ ಪರಿಹಾರ'

ಇಂಗ್ಲಿಷ್‌ನಲ್ಲಿ ಇದನ್ನು 'ಬ್ಲಡ್ ಮನಿ' ಎಂದು ಕರೆಯಲಾಗುತ್ತದೆ. ಅರಬ್ಬೀ ಭಾಷೆಯಲ್ಲಿ 'ದಿಯಾ' ಎನ್ನಲಾಗುತ್ತದೆ. ಮಾಡಿದ ತಪ್ಪನ್ನು ಕ್ಷಮಿಸುವುದಕ್ಕಾಗಿ ಸಂತ್ರಸ್ತರು ಅಥವಾ ಅವರ ಕುಟುಂಬದವರಿಗೆ ಪ್ರಕರಣದ ತಪ್ಪಿತಸ್ಥರು/ಆರೋಪಿಗಳು ಪರಿಹಾರದ ರೂಪದಲ್ಲಿ ನೀಡುವ ಮೊತ್ತವೇ ದಿಯಾ.

ಇಸ್ಲಾಂ ಷರಿಯಾ ಕಾನೂನು ಅನುಸರಿಸುವ ರಾಷ್ಟ್ರಗಳಲ್ಲಿ ಕ್ಷಮೆಗಾಗಿ ಪರಿಹಾರದ ಮೊತ್ತ ನೀಡುವ ಪದ್ಧತಿ ಅನುಸರಿಸಲಾಗುತ್ತದೆ. ಈ ನಿಯಮದ ಅಡಿಯಲ್ಲಿ ಅಪರಾಧ ಕೃತ್ಯ ಎಸಗಿದ ವ್ಯಕ್ತಿಯು ಪ್ರಕರಣದ ಸಂತ್ರಸ್ತ ಅಥವಾ ಅವರ ಕುಟುಂಬದವರಿಗೆ ನಿರ್ದಿಷ್ಟ ಪ್ರಮಾಣದ ಬೆಲೆಬಾಳುವ ವಸ್ತುವನ್ನು (ಬಹುತೇಕ ಸಂದರ್ಭಗಳಲ್ಲಿ ಹಣವೇ ಆಗಿರುತ್ತದೆ) ನೀಡಬೇಕಾಗುತ್ತದೆ. ಹತ್ಯೆ ಪ್ರಕರಣಗಳಲ್ಲಿ ಪ್ರಮುಖವಾಗಿ ಈ ಪದ್ಧತಿಯನ್ನು ಬಳಸಲಾಗುತ್ತದೆ.

ಸಂತ್ರಸ್ತನ ಜೀವಕ್ಕೆ ಬೆಲೆ ಕಟ್ಟುವ ಉದ್ದೇಶ ಇದರದ್ದಲ್ಲ; ಬದಲಿಗೆ ಅಪರಾಧಿಯ ಕುಟುಂಬದ ಕಷ್ಟ ಹಾಗೂ ಶಿಕ್ಷೆಯಾಗುವುದರಿಂದ ಅಪರಾಧಿಯ ಕುಟುಂಬದ ಮೇಲೆ ಬೀರುವ ಪರಿಣಾಮವನ್ನು ತಗ್ಗಿಸುವ ಸದಾಶಯವನ್ನು ಇದು ಹೊಂದಿದೆ ಎಂದು ವಿವರಿಸಲಾಗಿದೆ. ಕುಟುಂಬವು ಮರಣ ದಂಡನೆಯಿಂದ ಕ್ಷಮಾದಾನ ನೀಡಿದರೂ ನ್ಯಾಯಾಲಯ/ಸರ್ಕಾರಗಳು ತಪ್ಪಿತಸ್ಥರಿಗೆ ಬೇರೆ ಸ್ವರೂಪದ ಶಿಕ್ಷೆ ನೀಡಬಹುದು. ಹಲವು ಅರಬ್ ರಾಷ್ಟ್ರಗಳು ಈ ಕ್ಷಮಾದಾನ ಪದ್ಧತಿಯನ್ನು ಅಳವಡಿಸಿಕೊಂಡಿವೆ. ಆದರೆ, ಕೆಲವು ಕಡೆಗಳಲ್ಲಿ ನಿಯಮ ಅನುಸರಣೆಯಲ್ಲಿ ವ್ಯತ್ಯಾಸಗಳಿವೆ.

ರಾಷ್ಟ್ರೀಯ

ಆನ್‌ಲೈನ್ ಬೆಟ್ಟಿಂಗ್: 29 ನಟರ ವಿರುದ್ಧ ಪ್ರಕರಣ

ಮುಖ್ಯಾಂಶಗಳು
- ನಟರು, ಇನ್‌ಫ್ಲುಯೆನ್ಸರ್‌ಗಳು, ಯೂಟ್ಯೂಬರ್‌ಗಳ ಹೆಸರು ಉಲ್ಲೇಖ
- ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ಗಳ ಪರ ಪ್ರಚಾರ
- ಶೀಘ್ರವೇ ಖ್ಯಾತನಾಮರ ಹೇಳಿಕೆ ದಾಖಲಿಸಲಿರುವ ಜಾರಿ ನಿರ್ದೇಶನಾಲಯ

ಹೈದರಾಬಾದ್ (ಪಿಟಿಐ): ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ಗಳ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಟರಾದ ವಿಜಯ್ ದೇವರಕೊಂಡ, ರಾಣಾ ದಗ್ಗುಬಾಟಿ, ಪ್ರಕಾಶ್ ರಾಜ್ ಸೇರಿ 29 ಖ್ಯಾತನಾಮರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಪ್ರಕರಣ ದಾಖಲಿಸಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ನಟರಾದ ಮಂಚು ಲಕ್ಷ್ಮಿ, ನಿಧಿ ಅಗರ್ವಾಲ್, ಪ್ರಣೀತಾ ಸುಭಾಶ್, ಅನನ್ಯಾ ನಾಗಲ್ಲಾ, ಟಿ.ವಿ ನಿರೂಪಕಿ ಶ್ರೀಮುಖಿ ಹಾಗೂ ತೆಲಂಗಾಣದ ಸಾಮಾಜಿಕ ಜಾಲತಾಣಗಳ ಇನ್‌ಫ್ಲು-ಯೆನ್ಸರ್‌ಗಳು, ಯೂಟ್ಯೂಬರ್‌ಗಳ ಹೆಸರುಗಳೂ ಪ್ರಕರಣದಲ್ಲಿ ಇವೆ.

ಈ ಆ್ಯಪ್‌ಗಳು ಅಕ್ರಮ ಬೆಟ್ಟಿಂಗ್ ಮತ್ತು ಜೂಜಾಟದಿಂದ ಕಾನೂನು ಬಾಹಿರವಾಗಿ ಕೋಟ್ಯಂತರ ರೂಪಾಯಿ ಗಳಿಸಿವೆ ಎಂಬ ಆರೋಪವಿದೆ ಎಂದು ಮೂಲಗಳು ಹೇಳಿವೆ.

ಐದು ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳನ್ನು ಗಮನದಲ್ಲಿಟ್ಟುಕೊಂಡು ಜಾರಿ ನಿರ್ದೇಶನಾಲಯವು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣ ದಾಖಲು ಮಾಡಿದೆ.

ಯಾವ ಆ್ಯಪ್‌ಗಳು: ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ಗಳಾದ 'ಜಂಗ್ಲಿ ರಮ್ಮಿ', 'ಜೀತ್‌ವಿನ್', 'ಲೋಟಸ್365' ಇತ್ಯಾದಿ ಆನ್‌ಲೈನ್ ಬೆಟ್ಟಿಂಗ್ ಅಪ್ಲಿಕೇಷನ್‌ಗಳನ್ನು ಅನುಮೋದಿಸಿ, ಅವುಗಳ ಪರ ಈ ಖ್ಯಾತನಾಮರು ಪ್ರಚಾರ ನಡೆಸಿದ್ದಾರೆ. ಇದಕ್ಕಾಗಿ ಅವರು ಅಪಾರ ಹಣ ಪಡೆದಿದ್ದಾರೆ ಎಂಬ ಶಂಕೆಯಿದೆ ಎಂದು ಮೂಲಗಳು ತಿಳಿಸಿವೆ.

'ಈ ಆ್ಯಪ್‌ಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದು ಗೊತ್ತಿಲ್ಲ. ಅಲ್ಲದೆ ಅವುಗಳ ಕಾನೂನು ಬಾಹಿರ ಬೆಟ್ಟಿಂಗ್ ಚಟುವಟಿಕೆಗಳಲ್ಲಿ ನಾವು ಪಾಲ್ಗೊಂಡಿಲ್ಲ' ಎಂಬುದಾಗಿ ಪ್ರಕರಣದಲ್ಲಿ ಹೆಸರಿಸಲಾಗಿರುವ ಕೆಲ ನಟರು ಈ ಹಿಂದೆಯೇ ಹೇಳಿಕೆ ನೀಡಿದ್ದರು ಎಂದು ಮೂಲಗಳು ಹೇಳಿವೆ.

ಜಾರಿ ನಿರ್ದೇಶನಾಲಯವು ಮುಂದಿನ ದಿನಗಳಲ್ಲಿ ಈ ಖ್ಯಾತನಾಮರ ಹೇಳಿಕೆಗಳನ್ನು ದಾಖಲಿಸಿಕೊಂಡು ವಿಚಾರಣೆ ನಡೆಸಲಿದೆ.

'ಈ ಪ್ರಕರಣ ಸಂಬಂಧ ಸಮಗ್ರ ತನಿಖೆ ಆರಂಭವಾಗಿದ್ದು, ಈ ಆ್ಯಪ್‌ಗಳು ಅಕ್ರಮವಾಗಿ ಗಳಿಸಿರುವ ಹಣ ಎಷ್ಟು ಎಂಬುದರ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಖ್ಯಾತನಾಮರ ಹೇಳಿಕೆ ದಾಖಲಿಸಿದ ಬಳಿಕ ಪ್ರಕರಣದಲ್ಲಿ ಅವರ ಪಾತ್ರವನ್ನು ನಿರ್ಧರಿಸಲಾಗುತ್ತದೆ' ಎಂದು ಮೂಲಗಳು ಹೇಳಿವೆ.

ಮಹಾರಾಷ್ಟ್ರ: ಗಣೇಶ ಹಬ್ಬ ಇನ್ನು 'ರಾಜ್ಯದ ಉತ್ಸವ'

ಮುಂಬೈ (ಪಿಟಿಐ): ಶತಮಾನದಷ್ಟು ಹಳೆಯದಾದ 'ಸಾರ್ವಜನಿಕ ಗಣೇಶೋತ್ಸವ'ವನ್ನು 'ಮಹಾರಾಷ್ಟ್ರ ರಾಜ್ಯದ ಉತ್ಸವ' ಎಂದು ಮಹಾರಾಷ್ಟ್ರ ಸರ್ಕಾರ ಗುರುವಾರ ಘೋಷಣೆ ಮಾಡಿದೆ. ಈ ಉತ್ಸವದ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಲು ಮತ್ತು ಪ್ರೋತ್ಸಾಹಿಸಲೂ ಸರ್ಕಾರ ಬದ್ಧವಾಗಿದೆ ಎಂದು ಪ್ರತಿಪಾದಿಸಿದೆ.

ವಿಧಾನಸಭೆಯಲ್ಲಿ ಈ ಕುರಿತು ಘೋಷಣೆ ಮಾಡಿದ ರಾಜ್ಯದ ಸಂಸ್ಕೃತಿ ಸಚಿವ ಆಶಿಷ್ ಶೆಲಾರ್, 'ಗಣೇಶೋತ್ಸವವು ಕೇವಲ ಆಚರಣೆಯಷ್ಟೇ ಅಲ್ಲ, ಅದು ಮಹಾರಾಷ್ಟ್ರದ ಸಾಂಸ್ಕೃತಿಕ ಹೆಮ್ಮೆ ಮತ್ತು ಅಸ್ಮಿತೆಯಾಗಿದೆ' ಎಂದರು.

'ಲೋಕಮಾನ್ಯ ಬಾಲ ಗಂಗಾಧರ ತಿಲಕ್ ಅವರು 1893ರಲ್ಲಿ ಮಹಾರಾಷ್ಟ್ರದಲ್ಲಿ ಸಾರ್ವಜನಿಕ ಗಣೇಶೋತ್ಸವವನ್ನು ಆರಂಭಿಸಿದರು.

ಇದು ಸಾಮಾಜಿಕ ಏಕತೆ, ರಾಷ್ಟ್ರೀಯತೆ, ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ, ಆತ್ಮಗೌರವ ಮತ್ತು ನಮ್ಮ ಭಾಷೆಯ ಬಗೆಗಿನ ಹೆಮ್ಮೆಯನ್ನು ಪ್ರತಿಬಿಂಬಿಸುತ್ತದೆ' ಎಂದು ಅವರು ಹೇಳಿದರು.

ಗಣೇಶೋತ್ಸವಕ್ಕೆ ಅಗತ್ಯ ಮೂಲಸೌಕರ್ಯ ಮತ್ತು ಪೊಲೀಸ್ ಭದ್ರತೆ ಒದಗಿಸಲಾಗುವುದು. ಅಲ್ಲದೆ ಪುಣೆ, ಮುಂಬೈ ಸೇರಿದಂತೆ ರಾಜ್ಯದ ನಗರಗಳಲ್ಲಿ ಅದ್ದೂರಿ ಆಚರಣೆಗಳಿಗೆ ಆರ್ಥಿಕ ನೆರವನ್ನೂ ಸರ್ಕಾರ ನೀಡಲಿದೆ ಎಂದು ಸಚಿವರು ಘೋಷಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವ್ಯಕ್ತಿಯೊಬ್ಬರನ್ನು ನೇಣಿಗೆ ಹಾಕುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಇಸ್ರೇಲ್‌ನೊಂದಿಗಿನ ಯುದ್ಧ ನಿಂತ ನಂತರ ಇರಾನ್‌ನಲ್ಲಿ 700ಕ್ಕೂ ಹೆಚ್ಚು ಯಹೂದಿಗಳನ್ನು (ದೇಶದಲ್ಲಿರುವ ಯಹೂದಿಗಳ ಪೈಕಿ 10ನೇ ಒಂದರಷ್ಟು ಮಂದಿ) ಬಂಧಿಸಿದ್ದು, ಮೊಸಾದ್ ಏಜೆಂಟ್‌ಗಳು ಎಂದು ಆರೋಪಿಸಿ, ಅವರನ್ನು ಸಾರ್ವಜನಿಕವಾಗಿ ನೇಣಿಗೆ ಹಾಕಲಾಗುತ್ತಿದೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.

ವಿಡಿಯೊದ ಕೀಫ್ರೇಮ್ ಅನ್ನು ಗೂಗಲ್ ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅಲಿರೆಝಾ ದೊನ್ಯಾದಿದೆ ಎನ್ನುವ ಯೂಟ್ಯೂಬ್ ವಾಹಿನಿನಲ್ಲಿ 2024ರ ಏ.16ರಂದು (ಇರಾನ್–ಪ್ಯಾಲೆಸ್ಟೀನ್ ಸಂಘರ್ಷಕ್ಕೂ ಹಿಂದೆಯೇ) ಅಪ್‌ಲೋಡ್ ಮಾಡಲಾಗಿದ್ದ ಮೂಲ ವಿಡಿಯೊ ಕಂಡಿತು. 'ಬೀ ಬದನ್' ಎನ್ನುವ ಸಿನಿಮಾ ಚಿತ್ರೀಕರಣದ ದೃಶ್ಯವನ್ನು ಅಲಿರೆಝಾ ಎನ್ನುವ ಸ್ಟಂಟ್‌ಮ್ಯಾನ್ ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಿದ್ದರು. ಆನ್‌ಲೈನ್‌ನಲ್ಲಿ ಲಭ್ಯವಿರುವ ಚಿತ್ರದಲ್ಲಿಯೂ ಈ ದೃಶ್ಯವನ್ನು ಕಾಣಬಹುದಾಗಿದೆ. ಸಿನಿಮಾವೊಂದರ ತುಣುಕನ್ನು ಹಂಚಿಕೊಂಡು ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಯಾವುದು ಕಮ್ಮಿ, ಯಾವುದು ಹೆಚ್ಚು?

ದಯಾ ಗಂಗನಘಟ್ಟ

ತಿಲಕ್ ನಗರದ ಐದನೇ ಗಲ್ಲಿಯ ಕೊನೆಯ ಮನೆಯ ಮೂರನೇ ಮಹಡಿಯಲ್ಲಿ ವಾಸವಿದ್ದ ಶ್ರೀಮಂತ ವ್ಯಕ್ತಿಯೊಬ್ಬರಿಗೆ ಇದ್ದಕ್ಕಿದ್ದಂತೆ ಮೈ ಹುಷಾರಿಲ್ಲದಂತಾಯಿತು. ಬಳಲುತ್ತಾ, ನೋಯುತ್ತಾ ಹಾಸಿಗೆಯಲ್ಲಿ ಮಲಗಿದ ಅವರು ಹತ್ತಿರದ ಡಾಕ್ಟರ್ ಒಬ್ಬರನ್ನು ಮನೆಗೇ ಬಂದು ಪರೀಕ್ಷಿಸಲು ಕೇಳಿಕೊಂಡರು. ಮೂರನೇ ಮಹಡಿಯನ್ನು ಕಷ್ಟಪಟ್ಟು ಹತ್ತಿಕೊಂಡು ಬಂದ ಡಾಕ್ಟರ್ ಏದುಸಿರು ಬಿಡುತ್ತಾ 'ಉಶ್, ಮೇಲೆ ಬರುವಷ್ಟರಲ್ಲಿ ಸಾಕಾಗಿ ಹೋಯ್ತು' ಎಂದರು. ಇವರು ಹಾಸಿಗೆಯಿಂದ ಎದ್ದು ಡಾಕ್ಟರನ್ನು ಕುರ್ಚಿಯಲ್ಲಿ ಕೂರಿಸಿ, ಕುಡಿಯಲು ನೀರು ತಂದುಕೊಟ್ಟು ಅವರು ಸುಧಾರಿಸಿಕೊಂಡಾಗ 'ನಿಮಗೆ ಮೆಟ್ಟಿಲು ಹತ್ತಿದ್ದಕ್ಕೆ ಸುಸ್ತಾಗಿಲ್ಲ, ಸ್ವಲ್ಪ ಸತ್ವಯುತ ಆಹಾರ, ವ್ಯಾಯಾಮ ಮಾಡುವುದನ್ನು ರೂಢಿಸಿಕೊಳ್ಳಿ. ನೋಡಿ, ನಿಮಗಿಂತ ಎರಡರಷ್ಟು ವಯಸ್ಸಾದ ನಾನೇ ನಿಮಗಿಂತ ಆರೋಗ್ಯವಾಗಿದ್ದೇನೆ. ಇದಕ್ಕಾಗಿ ನನಗೆ ನೀವು ಫೀಸ್ ಕೊಡಬೇಕು ಡಾಕ್ಟರ್' ಎಂದು ತಮಾಷೆ ಮಾಡಿ ನಕ್ಕರು. ಆಗ ಡಾಕ್ಟರ್, 'ನೀವೇ ಡಬಲ್ ಫೀಸು ಕೊಡಿ' ಎಂದರು. ಯಾಕೆ ಅಂದಾಗ, 'ನಾನು ಚಿಕಿತ್ಸೆ ಮಾಡುವ ರೀತಿ ಇದು. ರೋಗಿಯ ಮನೆಗೆ ಹೋದ ತಕ್ಷಣ ನಾನೇ ರೋಗಿಯಾಗಿಬಿಡುತ್ತೇನೆ. ಆಗ ನನ್ನನ್ನು ತನಗೆ ಹೋಲಿಸಿಕೊಳ್ಳುವ ರೋಗಿ ಡಾಕ್ಟರಿಗಿಂತ ನಾನೇ ಎಷ್ಟೋ ವಾಸಿ ಎಂದುಕೊಂಡು ಅರ್ಧ ವಾಸಿಯೇ ಆಗಿಬಿಡುತ್ತಾನೆ. ನೀವೇ, ಮಲಗಿದ್ದವರು ಎದ್ದು ಅದೆಷ್ಟು ಲವಲವಿಕೆಯಿಂದ ಓಡಾಡಿದಿರಿ' ಎಂದರು ನಗುತ್ತಾ.

ಮನುಷ್ಯನ ನಡವಳಿಕೆಯೇ ಹೀಗೆ. ತಾನು ಬಹಳ ಕಷ್ಟದಲ್ಲಿರುವ ಸಮಯದಲ್ಲಿ ತನಗಿಂತ ಕಷ್ಟದಲ್ಲಿರುವವರನ್ನು ನೋಡಿ ತನ್ನ ಕಷ್ಟವನ್ನು ಕನಿಷ್ಠವಾಗಿ ಕಾಣುತ್ತಾನೆ. ಸಂಕಟದಲ್ಲಿರುವ ಹೆಣ್ಣು ತನಗಿಂತ ಸಂಕಟ ಪಡುವ ಹೆಣ್ಣಿಗೆ ಸಹಾಯ ಮಾಡಿ ತನ್ನ ನೋವನ್ನು ಮರೆಯುತ್ತಾಳೆ. ತಂದೆ ಚಪ್ಪಲಿ ಕೊಡಿಸದ ನೋವನ್ನು ಮಗುವೊಂದು ಕಾಲೇ ಇಲ್ಲದ ತನ್ನ ವಯಸ್ಸಿನ ಹುಡುಗನ ಸ್ಥಿತಿಯನ್ನು ಕಂಡಮೇಲೆ ಮರೆಯುವ ಕತೆ ಬಹಳ ಚೆನ್ನಾಗಿ ತಿಳಿಸಿಕೊಡುತ್ತದೆ. 'ಜಗತ್ತೇ ನನ್ನ ತಲೆಯ ಮೇಲಿದೆ, ಎಲ್ಲಾ ಕಷ್ಟಗಳೂ ನನಗೇ. ದೇವರು ನನಗೇ ಯಾಕೆ ಹೀಗೆ ಮಾಡುತ್ತಾನೆ' ಎಂದು ಹಳಹಳಿಸುವವರನ್ನು ನಾವು ನೋಡುತ್ತೇವೆ. ಜಗತ್ತಿನಲ್ಲಿ ನನ್ನಷ್ಟು ಕಷ್ಟ ಯಾರಿಗೂ ಇಲ್ಲ ಅಂದುಕೊಳ್ಳುವುದು ಸ್ವಮರುಕ ಅಷ್ಟೆ. ದಲಿತರು, ಹೆಣ್ಣುಮಕ್ಕಳು, ಬಡವರು, ಅಂಗವಿಕಲರು ಇವರೆಲ್ಲರ ಕಷ್ಟದ ಮುಂದೆ ಇತರರ ಕಷ್ಟ ದೊಡ್ಡದಲ್ಲ.

ಎರಡು ಕಡ್ಡಿಗಳಲ್ಲಿ ಯಾವುದನ್ನೂ ಮುರಿಯದೇ ಒಂದನ್ನು ಚಿಕ್ಕದು ಮಾಡಬೇಕೆಂದರೆ ಅದರ ಪಕ್ಕಕ್ಕೆ ಅದಕ್ಕಿಂತ ದೊಡ್ಡದಾದ ಕಡ್ಡಿಯನ್ನು ಇಟ್ಟ ಬುದ್ಧಿವಂತಿಕೆಯ ಕತೆ ನಿಮಗೆಲ್ಲಾ ಗೊತ್ತೇ ಇದೆ. ಮನಸ್ಸಿಗೆ ಹಚ್ಚಿಕೊಂಡು ಕುಳಿತರೆ ಸಣ್ಣ ಸಮಸ್ಯೆಯೂ ಬಿಡಿಸಲಾರದ ಕಗ್ಗಂಟು. ಹಗುರವಾಗಿ ತೆಗೆದುಕೊಂಡರೆ ಅರ್ಧ ಸಮಸ್ಯೆ ಬಗೆಹರಿದಂತೆ. ಯಾವುದೇ ಕೆಲಸ, ಸಂದರ್ಭ, ಘಟನೆ ಚಿಕ್ಕದೋ, ದೊಡ್ಡದೋ ಎಂಬುದನ್ನು ನಿರ್ಧರಿಸುವುದು ಅದರ ಸುತ್ತಮುತ್ತಲಿನ ಆಗುಹೋಗುಗಳು ಮತ್ತು ಅದಕ್ಕೆ ಸಂಬಂಧಿಸಿದ ಮನಸ್ಸು ಮಾತ್ರ. ಹಾಗಾಗಿ, ನಮ್ಮ ಯೋಚನೆಗಳನ್ನು ಸದಾ ಸಕಾರಾತ್ಮಕ ದಿಕ್ಕಿನಲ್ಲಿ ಹರಿಬಿಡುವುದೇ ಉತ್ತಮ. ನಾವು ಮನಸ್ಸಿಗೆ ಏನನ್ನು ತುಂಬುತ್ತೇವೆಯೊ ಬಹುತೇಕ ದೇಹವೂ ಅದೇ ಚೈತನ್ಯವನ್ನು ತುಂಬಿಕೊಳ್ಳುತ್ತದೆ. ಕುಶಾಲಿನ ಮನಸ್ಸಿದ್ರೆ ದೇಹವೂ ಕುಶಲ.

ಗುಂಡಣ್ಣ

ಪದಬಂಧ 6100

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಶರಗಳನ್ನಿಡುವ ಕೋಶ (4)
3.ಮರದ ನಡುವಿರುವ ತುಂಬಿ (4)
5.ಜೂಜಿನಲ್ಲಿ ಒಡ್ಡುವ ಪಣ (3)
7.ಮಾಗಧರೊಡನೆ ಸೇರಿಕೊಳ್ಳುವ ಜನ (2)
8.ಗರತಿಗೆ ಒದಗಿರುವ ಸ್ಥಿತಿ (2)
11.ಬೆಸವಲ್ಲದ ಸಂಖ್ಯೆ (2)
13.ಪಕ್ಷದ ನಾಲ್ಕನೆಯ ತಿಥಿ (2)
14.ಬಿಡುಗಡೆ ಹೊಂದಿದವನಿಂದಾದ ಬಿಡಿ ಪದ್ಯ (3)
16.ರಾಜ್ಯವನ್ನಾಳುವ ವ್ಯವಸ್ಥೆ (4)
17.ಕೊಳ್ಳೆ ಹೊಡೆಯುವಾತ ಇಲ್ಲಿದ್ದಾನೆ (4)

ಮೇಲಿಂದ ಕೆಳಕ್ಕೆ
1.ಏನೂ ಮುಚ್ಚಿಟ್ಟುಕೊಳ್ಳದೆ ಪ್ರಕಟಿಸುವುದು (4)
2.ಕೆರಳಿದಾತ ತೋರಿಸುತ್ತಿರುವ ಮೆಟ್ಟು (2)
3.ತೂಕದ ಒಂದು ಪ್ರಮಾಣ (2)
4.ಸಲಿಕೆಯ ಚೀಟಿ (3)
6.ಆಶ್ಚರ್ಯಕರ ಘಟನೆ (3)
7.ನಿಧಾನವಾಗಿ ಮೂಡಿರುವ ಮೆಲುನಗೆ (4)
9.ತಿಮ್ಮಪ್ಪನ ನೆಲೆನಾಡು (4)
10.ಯುಕ್ತವಾಗಿ ಸೇರಿದುದು! (3)
12.ಸಂಪ್ರದಾಯವನ್ನು ಆಚರಿಸುವವನು (4)
13.ರಸವಿರುವ ಚಚ್ಚೌಕ (3)
14.ಮುಜುಗರದಿಂದ ನೀಡಿದ ಕಿವಿ ಆಭರಣ (2)
15.ಕರುನಾಡಲ್ಲಿ ದೊರೆತಿರುವ ಸಾಲ (2)



6099ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಿರಾಕಿ 2.ಕಣಜ
4.ಅವರೋಹ 7.ಪ್ರತಿಫಲ
9.ನವಯೌವನ 12.ಸ್ವಾಭಿಮಾನ
13.ರುಜುವಾತು 15.ನಕ್ಷತ್ರ
16.ಸುಯೋಗ

ಮೇಲಿಂದ ಕೆಳಕ್ಕೆ:
1.ಅರ್ಧಾಂಗಿ 3.ಜಟಿಲ
5.ವರ್ಣ 6.ಹಯವದನ
7.ಪ್ರಭಾವಬೀರು 8.ಫಲ
10.ನಾಭಿ 11.ಕೃವಾ
12.ಸ್ವಾಧೀನ 14.ತುರಗ

ಸುಡೊಕು 6484

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9				5		6	
2	7		4			8		5
	4				9		3	
4	6				7			
				4		1	7	6
8		7	5				4	
		4			2			7
7			1	5		6	8	
	8		7			2		4

6483 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

11 ಜುಲೈ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಪ್ರತಿಪದ್ ಗಂ. 26-09 **ನಕ್ಷತ್ರ:** ಪೂರ್ವಾಷಾಢ ಗಂ.5-56 ಯೋಗ: ವೈಧೃತಿ ಗಂ. 20-44 ಕರಣ: ಬಾಲವ ಗಂ. 14-11, ಮಿಥುನ ಮಾಸದ 27 ನೇ ದಿನ. ಮಳೆ ನಕ್ಷತ್ರ : ಪುನರ್ವಸು 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30 – 12-00 , **ಸೂರ್ಯೋದಯ :** 06-13 **ಸೂರ್ಯಾಸ್ತ :** 06-58, ಮುಸ್ಲಿಂ ದಿನಾಂಕ : 15 ಮೊಹರಮ್, ಅದೃಷ್ಟ ಸಂಖ್ಯೆ : 4, 9

ಮೇಷ: ಯೋಜನೆಗಳ ವೇಗ ಚುರುಕುಗತಿ ಹೊಂದಲಿದೆ. ಉದ್ಯೋಗದಲ್ಲಿದ್ದಂಥ ಅಭದ್ರತೆಯು ನಿವಾರಣೆಯಾಗಿ ಶಾಶ್ವತ ನೆಲೆ ಸಿಕ್ಕಿದಂತೆ ಆಗುವುದು. ಬಂಡವಾಳ ಹೂಡಿಕೆಯಲ್ಲಿ ಯೋಚನೆ ಅಗತ್ಯವೆನಿಸಲಿದೆ.

ವೃಷಭ: ಚಿನ್ನಾಭರಣ ಖರೀದಿಯ ಆಸೆಗೆ ಕಾಲಕೂಡಿಬಂದಂತೆ ಆಗಲಿದೆ. ಉನ್ನತ ಮಟ್ಟದ ಸ್ಥಾನ ಹೊಂದಲು ಮತ್ತು ಜವಾಬ್ದಾರಿಯುತ ವ್ಯಕ್ತಿಯಾಗಿ ರೂಪುಗೊಳ್ಳಲು ದೈನಂದಿನ ಬದುಕಿನಲ್ಲಿ ಲೆಕ್ಕಾಚಾರವಿರಲಿ.

ಮಿಥುನ: ಕಳೆದುಹೋದ ವಸ್ತುವನ್ನು ಆಸೆ ಪಡುವುದು, ಸಮಯದ ಬಗ್ಗೆ ಪುನಃ ಯೋಚಿಸುವುದು ಪ್ರಯೋಜನಕಾರಿ ಅಲ್ಲ. ಪುತ್ರನಿಗೆ ಎದುರಾದ ಸಮಸ್ಯೆಗೆ ಸಾಂತ್ವನ ಹೇಳುವುದು, ಸಹಾಯ ಮಾಡುವುದು ಉತ್ತಮ.

ಕರ್ಕಾಟಕ: ಸಮಸ್ಯೆಯನ್ನು ಬಗೆಹರಿಸಿಕೊಂಡು ಮುಂದಿನ ಹೆಜ್ಜೆ ಹಾಕಿ. ಕಾರ್ಯನಿಮಿತ್ತ ಅತ್ತೆ-ಸೊಸೆಯಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ, ಸಮಾಧಾನ ಇರಲಿ. ಮಕ್ಕಳ ವರ್ತನೆಯು ಮನಸ್ಸಿಗೆ ಸಂತೋಷ ತರಲಿದೆ.

ಸಿಂಹ: ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವಿಕೆಯಿಂದ ಮಾನಸಿಕ ಶಾಂತಿ ಹೆಚ್ಚಲಿದೆ. ವಿದ್ಯಾರ್ಥಿಸಮೂಹಕ್ಕೆ ಅವಕಾಶಗಳು ಲಭಿಸಲಿವೆ. ಸಂಗೀತಗಾರರಿಗೆ, ಕ್ರೀಡಾಪಟುಗಳಿಗೆ ಅಭ್ಯಾಸದ ಕೊರತೆ ಕಾಡುವುದು.

ಕನ್ಯಾ: ಪರಿಶ್ರಮದ ಜತೆ ಅಧಿಕ ಸಮಯ ವೃತ್ತಿಯ ಕೆಲಸಕ್ಕೆ ಮೀಸಲಿಡಿ. ಹೊಸ ಕಾರ್ಯಗಳ ಬಗ್ಗೆ ಮನೆಯವರೊಂದಿಗೆ ಸುದೀರ್ಘ ಮಾತುಕತೆ ನಡೆಸಿ ನಂತರದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಿರಿ. ಶತ್ರು ಬಾಧೆ ನಿವಾರಣೆ ಆಗಲಿದೆ.

ತುಲಾ: ಅಲಂಕಾರಿಕ ವಸ್ತುಗಳ ಮಾರಾಟದ ಉದ್ಯೋಗದವರು ನೆಮ್ಮದಿ ಕಾಣಬಹುದು. ಆಸೆ-ಆಕಾಂಕ್ಷೆಯನ್ನು ಸಾಧ್ಯವಾದಷ್ಟು ನಿಯಂತ್ರಿಸಿಕೊಂಡಲ್ಲಿ, ಋಣ ಮುಕ್ತರಾಗುವಂಥ ಅವಕಾಶ ಒದಗಲಿದೆ.

ವೃಶ್ಚಿಕ: ಎಂಜಿನಿಯರ್ ಉದ್ಯೋಗ ರಂಗದವರ ತ್ವರಿತ ಬೆಳವಣಿಗೆಯಿಂದ ಉನ್ನತಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗುವ ಸಮಯ ಇದಾಗಲಿದೆ. ಉದ್ಯೋಗ ದೊರೆತು ಸಂತೋಷ. ಶ್ರೀರಾಮನನ್ನು ಭಜಿಸಿ, ಶುಭವಾಗುತ್ತದೆ.

ಧನು: ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅನಿವಾರ್ಯ. ಸಂಗೀತ ಸಾಹಿತ್ಯದಂಥ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗಳಿಗೆ ಹಿರಿಯ ಕಲಾವಿದರ ಭೇಟಿ ಮಾಡುವ ಅವಕಾಶವಿದೆ.

ಮಕರ: ಉದ್ವೇಗವನ್ನು ಶಾಂತಗೊಳಿಸಲು ಮನಸ್ಸಿಗೆ ಸಮಾಧಾನವಾಗುವಂಥ ಸಂಗೀತವನ್ನು ಕೇಳಿ. ಗಣಕಯಂತ್ರದ ಮುಂದೆ ಕೂತು ಕೆಲಸ ನಡೆಸುವವರು ನಿಮ್ಮ ಕಣ್ಣಿನ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ.

ಕುಂಭ: ಸಂಗಾತಿಯೊಂದಿಗಿನ ಭಿನ್ನಾಭಿಪ್ರಾಯ ದೂರಮಾಡಿಕೊಳ್ಳಲು ಬಿಡುವಿಲ್ಲದ ಸಮಯದಲ್ಲಿ ಸಮಯ ನೀಡುವ ಪ್ರಯತ್ನ ಮಾಡಿ. ಬಂಧುಗಳಿಂದ ಉಡುಗೊರೆಯ ರೂಪದಲ್ಲಿ ದ್ರವ್ಯಲಾಭ.

ಮೀನ: ಇಂದಿನ ದಿನದಲ್ಲಿ ವೃತ್ತಿಯ ವಿಷಯವಾಗಿ ವಿಶೇಷ ವ್ಯಕ್ತಿಯೊಬ್ಬರು ಮುಖ್ಯಪಾತ್ರ ವಹಿಸಲಿದ್ದಾರೆ. ಆಫೀಸಿನ ಕೆಲಸದ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲೇ ಬೇಕಾಗುವ ಸಂದರ್ಭ ಎದುರಾಗುವುದು.

ವಿನಿಮಯ ದರ | ಡಾಲರ್ 85.70 | ಪೌಂಡ್ 116.54 | ಯುರೊ 100.46 | ಯೆನ್ (100ಕ್ಕೆ) 58

ಅಡಿಕೆ ಧಾರಣೆ

ಚಿತ್ರದುರ್ಗ		ಸಾಗರ		ಶಿರಸಿ	
ಬೆಟ್ಟೆ	29639-30089	ಬಿಳಿಗೋಟು	9369-26799	ಬೆಟ್ಟೆ	29099-38989
ಕೆಂಪುಗೋಟು	20749-21099	ಚಾಲಿ	18999-36699	ಬಿಳಿಗೋಟು	23099-32512
ರಾಶಿ	35219-35629	ಕೋಕ	8999-25099	ಚಾಲಿ	35899-42399
ಕಾರ್ಕಳ		ಕೆಂಪುಗೋಟು	17199-25299	ಕೆಂಪುಗೋಟು	18599-21099
ಹೊಸತು	25000-47500	ರಾಶಿ	24900-56599	ರಾಶಿ	45189-47369
ಹಳತು	30000-52500	ಸಿಪ್ಪೆಗೋಟು	6599-19199	**ಯಲ್ಲಾಪುರ**	
ಕುಮಟಾ		**ಶಿವಮೊಗ್ಗ**		ಬಿಳಿಗೋಟು	16899-30109
ಚಾಲಿ	35633-42398	ಬೆಟ್ಟೆ	53209-59699	ಚಾಲಿ	32099-41289
ಚಿಪ್ಪು	17089-31699	ಗೊರಬಲು	16418-30699	ಕೋಕ	8700-17499
ಕೋಕ	9099-27099	ರಾಶಿ	44366-57399	ಕೆಂಪುಗೋಟು	16099-24099
ಹೊಸಚಾಲಿ	33010-41899	ಸರಕು	58669-89100	ರಾಶಿ	40610-54999
				ತಟ್ಟಿಬೆಟ್ಟೆ	31306-36289

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,476
ಇಂದಿನ ಅಂತ್ಯ: 25,355
ದಿನದ ಗರಿಷ್ಠ: 25,340
120

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹600; 12 ಕ್ಕೆ ₹80
ಮೈಸೂರು: 100 ಕ್ಕೆ ₹610

ಮುದ್ರೆಮನೆ ಕಾಫಿ (50 ಕೆಜಿಗೆ)
ಎಪಿ ₹25,500
ಎಸಿ ₹13,860
ಆರ್‌ಪಿ ₹16,800
ಆರ್‌ಸಿ ₹9,585

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹366-552
ದ್ವಿತಳಿ (ಬಿ.ವಿ) ₹438-705

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹201.50
ಆರ್‌ಎಸ್‌ಎಸ್-5 ₹195.50
ಗುಡ್ ಲಾಟ್ ₹183

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1425 (1405)
ಸೋಯಾ (ರಿಫೈನ್ಡ್) ₹1200 (1205)
ಸೂರ್ಯಕಾಂತಿ (ರಿಫೈನ್ಡ್) ₹1350 (1350)
ಪಾಮೋಲಿನ್ ₹1180 (1180)

ಮುಂಬೈ ಧಾರಣೆ (ಶೇಂಗಾ)

10-07-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1435 (1415)
ಒಂದು ವಾರದ ಡೆಲಿವರಿ	1430 (1410)
ಪಾಮ್ ವಾರದ ಡೆಲಿವರಿ	1178 (1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1260 (1265)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	96,550 (95,600)
ಬೆಳ್ಳಿ ಕೆ.ಜಿಗೆ	1,08,000 (1,07,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಟಿಸಿಎಸ್ ವರಮಾನ ನಿರೀಕ್ಷೆಗಿಂತ ಕಡಿಮೆ

ಬೇಡಿಕೆ ತಗ್ಗಿದೆ ಎಂದು ಹೇಳಿದ ಸಿಇಒ ಕೃತಿವಾಸನ್, ನಾಲ್ಕು ವಿಭಾಗಗಳಲ್ಲಿ ವರಮಾನ ಇಳಿಕೆ

ಬೆಂಗಳೂರು (ರಾಯಿಟರ್ಸ್): ದೇಶದ ಐ.ಟಿ. ಸೇವಾ ವಲಯದ ಅತಿದೊಡ್ಡ ಕಂಪನಿಯಾದ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) ಜೂನ್ ತ್ರೈಮಾಸಿಕದ ವರಮಾನವು ನಿರೀಕ್ಷೆಗಿಂತ ಕಡಿಮೆ ಆಗಿದೆ. ತೆರಿಗೆ ಸಂಬಂಧಿತ ಅನಿಶ್ಚಿತತೆಗಳ ಕಾರಣದಿಂದಾಗಿ ಐ.ಟಿ ಸೇವೆಗಳ ಗ್ರಾಹಕರು ಎಚ್ಚರಿಕೆಯ ಹೆಜ್ಜೆ ಇರಿಸಿದ್ದುದು ಇದಕ್ಕೆ ಒಂದು ಕಾರಣ.

ಟಿಸಿಎಸ್‌ನ ವರಮಾನವು ಜೂನ್ ತ್ರೈಮಾಸಿಕದಲ್ಲಿ ₹63,437 ಕೋಟಿ ಆಗಿದೆ. ಇದು ಹಿಂದಿನ ವರ್ಷದ ಇದೇ ತ್ರೈಮಾಸಿಕದ ವರಮಾನಕ್ಕೆ ಹೋಲಿಸಿದರೆ ಶೇ 1.3ರಷ್ಟು ಹೆಚ್ಚು. ಆದರೆ, ಕಂಪನಿಯ ವರಮಾನವು ₹64,666 ಕೋಟಿ ಆಗಬಹುದು ಎಂಬುದು ಮಾರುಕಟ್ಟೆ ತಜ್ಞರ ಸರಾಸರಿ ಅಂದಾಜು ಆಗಿತ್ತು.

ಟಿಸಿಎಸ್‌ನ ನಿವ್ವಳ ಲಾಭವು ಶೇ 6ರಷ್ಟು ಹೆಚ್ಚಾಗಿ ₹12,760 ಕೋಟಿಗೆ ತಲುಪಿದೆ. ಇದು ತಜ್ಞರ ನಿರೀಕ್ಷೆಗಿಂತ ಹೆಚ್ಚಾಗಿದೆ. ವೇತನ ಹೆಚ್ಚಳವನ್ನು ಮುಂದೂಡಿದ್ದು ಹಾಗೂ ಇತರ ವರಮಾನದಲ್ಲಿ ಏರಿಕೆ ಆಗಿರುವುದು ಲಾಭವು ನಿರೀಕ್ಷೆಗಿಂತ ಹೆಚ್ಚಾಗುವುದಕ್ಕೆ ಮುಖ್ಯ ಕಾರಣ.

ಕೆ. ಕೃತಿವಾಸನ್

ಅಮೆರಿಕದ ಮಾರುಕಟ್ಟೆಯಿಂದ ಐ.ಟಿ. ಸೇವೆಗಳಿಗೆ ಬರುವ ಬೇಡಿಕೆ ಹೆಚ್ಚಳ ಆಗಬಹುದು ಎಂದು ಐ.ಟಿ. ಕಂಪನಿಗಳು ನಿರೀಕ್ಷೆ ಹೊಂದಿದ್ದವು. ಆದರೆ, ಅಮೆರಿಕವು ಬೇರೆ ಬೇರೆ ದೇಶಗಳ ಮೇಲೆ ವಿಧಿಸಬಹುದಾದ ಸುಂಕದ ವಿಚಾರವಾಗಿ ಅನಿಶ್ಚಿತತೆಗಳು ಇರುವ ಕಾರಣದಿಂದಾಗಿ ಈ ನಿರೀಕ್ಷೆಗೆ ಪೆಟ್ಟು ಬಿದ್ದಿದೆ.

‘ಜಾಗತಿಕ ಅರ್ಥ ವ್ಯವಸ್ಥೆಯಲ್ಲಿ ಇರುವ ಅನಿಶ್ಚಿತತೆಗಳು ಹಾಗೂ ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟುಗಳ ಕಾರಣದಿಂದಾಗಿ ಬೇಡಿಕೆ ತಗ್ಗಿದೆ’ ಎಂದು ಟಿಸಿಎಸ್ ಕಂಪನಿಯ ಸಿಇಒ ಕೆ. ಕೃತಿವಾಸನ್ ಹೇಳಿದ್ದಾರೆ. ಜೂನ್ ತ್ರೈಮಾಸಿಕದ ಹಣಕಾಸಿನ ಫಲಿತಾಂಶವನ್ನು ಪ್ರಕಟಿಸಿದ ಮೊದಲ ಪ್ರಮುಖ ಐ.ಟಿ. ಸೇವಾ ಕಂಪನಿ ಟಿಸಿಎಸ್. ಎಚ್‌ಸಿಎಲ್ ಟೆಕ್ನಾಲಜೀಸ್ ಮುಂದಿನ ವಾರ ಫಲಿತಾಂಶ ಪ್ರಕಟಿಸಲಿದೆ, ಇನ್ಫೊಸಿಸ್ ಈ ತಿಂಗಳ ದ್ವಿತೀಯಾರ್ಧದಲ್ಲಿ ಫಲಿತಾಂಶ ಪ್ರಕಟಿಸಲಿದೆ.

ಕಳೆದ ವರ್ಷದ ಜೂನ್ ತ್ರೈಮಾಸಿಕದ ವರಮಾನಕ್ಕೆ ಹೋಲಿಸಿದರೆ ಈ ಬಾರಿ, ಆರು ವಿಭಾಗಗಳ ಪೈಕಿ ನಾಲ್ಕರಲ್ಲಿ ಟಿಸಿಎಸ್‌ನ ವರಮಾನವು ಕಡಿಮೆ ಆಗಿದೆ. ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆ, ತಂತ್ರಜ್ಞಾನ ಸೇವೆಗಳ ವಿಭಾಗದಲ್ಲಿ ವರಮಾನ ಏರಿಕೆ ಆಗಿದೆ.

‘ಬ್ಯಾಂಕಿಂಗ್ ಮತ್ತು ತಂತ್ರಜ್ಞಾನ ವಲಯಗಳಲ್ಲಿ ಬೇಡಿಕೆ ಹೆಚ್ಚಳ ಕಂಡಿರುವುದು ಒಂದಿಷ್ಟು ಸಮಾಧಾನ ಮೂಡಿಸುತ್ತಿದೆ. ಆದರೆ ಅಮೆರಿಕ ಮತ್ತು ಯುರೋಪಿನ ಮಾರುಕಟ್ಟೆಗಳಲ್ಲಿ ಬೇಡಿಕೆ ಹೆಚ್ಚಾಗದಿರುವುದು ಬೇಡಿಕೆಯ ಸುತ್ತ ಕಳವಳಗಳನ್ನು ಮೂಡಿಸಿದೆ’ ಎಂದು ಸ್ಟಾಕ್ಸ್‌ಬಾಕ್ಸ್ ಸಂಸ್ಥೆಯ ವಿಶ್ಲೇಷಕ ಸಾಗರ್ ಶೆಟ್ಟಿ ಹೇಳಿದ್ದಾರೆ.

ಎಸ್‌ಬಿಐನಿಂದ ಷೇರು ಮಾರಾಟ?

ಬೆಂಗಳೂರು (ರಾಯಿಟರ್ಸ್): ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತನ್ನ ₹25 ಸಾವಿರ ಕೋಟಿ ಮೌಲ್ಯದ ಷೇರುಗಳನ್ನು ಸಾಂಸ್ಥಿಕ ಹೂಡಿಕೆದಾರರಿಗೆ ಮಾರಾಟ ಮಾಡಲು ಸಿದ್ಧತೆ ನಡೆಸಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ‘ಬ್ಲೂಮ್‌ಬರ್ಗ್ ನ್ಯೂಸ್’ ವರದಿ ಮಾಡಿದೆ.

ಎಸ್‌ಬಿಐ ಮುಂದಿನ ವಾರವೇ ಷೇರು ಮಾರಾಟ ಮಾಡಬಹುದು ಎಂದು ವರದಿಯು ಹೇಳಿದೆ. ಆದರೆ ಷೇರು ಮಾರಾಟ ಯೋಜನೆಯು ಅಂತಿಮಗೊಂಡಿಲ್ಲ, ಬದಲಾವಣೆಗಳು ಆಗಬಹುದು ಎಂದು ಕೂಡ ಅದರಲ್ಲಿ ಉಲ್ಲೇಖಿಸಲಾಗಿದೆ.

ಈ ವಿಚಾರವಾಗಿ ರಾಯಿಟರ್ಸ್‌ಗೆ ಎಸ್‌ಬಿಐ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಷೇರು ಮಾರಾಟಕ್ಕೆ ಬ್ಯಾಂಕಿನ ಆಡಳಿತ ಮಂಡಳಿಯು ಮೇ ತಿಂಗಳಲ್ಲಿ ಒಪ್ಪಿಗೆ ನೀಡಿದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹17500-27500
ಬೆಂಗಳೂರು ₹20000-25000
ದಾವಣಗೆರೆ ₹21000-22150
ತಿಪಟೂರು ₹27555-30400
ತುಮಕೂರು ₹25500-28100

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

5ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಮತ್ತೋಡಿ ರಂಗನಾಯಕಮ್ಮ
ಶ್ರೀ ಮತ್ತೋಡಿ ಲಕ್ಷ್ಮೀನಾರಾಯಣರವರ ಧರ್ಮ ಪತ್ನಿ
ಜನನ: 02-10-1962 – ನಿಧನ: 11-07-2020
ನಿಮ್ಮ ಸವಿನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.
ದು:ಖತಪ್ತರು: ಮತ್ತೋಡಿ ಲಕ್ಷ್ಮೀನಾರಾಯಣ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು.

ಶಿವಾನಂದ ಪಾಟೀಲ ಅವರಿಗೆ ಕ್ಯಾಂಪ್ಕೊ ಅಧ್ಯಕ್ಷ ಎ. ಕಿಶೋರ್‌ಕುಮಾರ್ ಕೊಡ್ಗಿ ಮನವಿ ಸಲ್ಲಿಸಿದರು. ಶಾಸಕ ಎ. ಕಿರಣಕುಮಾರ್ ಕೊಡ್ಗಿ, ಕೃಷಿ ಮಾರುಕಟ್ಟೆ ನಿರ್ದೇಶಕ ಶಿವಾನಂದ ಕಾಪಸಿ, ಸತ್ಯನಾರಾಯಣ ಇದ್ದರು

‘ಶುಲ್ಕ ಇಳಿಕೆಗೆ ಕ್ಯಾಂಪ್ಕೊ ಮನವಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾರುಕಟ್ಟೆ ಶುಲ್ಕವನ್ನು ಈ ಮೊದಲಿನಂತೆ ಶೇಕಡಾ 0.48 ರಷ್ಟು ಆಕರಣೆ ಮಾಡಬೇಕೆಂಬ ಕೇಂದ್ರ ಅಡಿಕೆ ಮತ್ತು ಕೊಕ್ಕೊ ಮಾರಾಟ ಮತ್ತು ಸಂಸ್ಕರಣಾ ಸಹಕಾರಿ ನಿಯಮಿತದ (ಕ್ಯಾಂಪ್ಕೊ) ಬೇಡಿಕೆಯನ್ನು ಪರಿಗಣಿಸಲಾಗುವುದು’ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಭರವಸೆ ನೀಡಿದರು.

ಕೃಷಿ ಮಾರಾಟ ಇಲಾಖೆ ಕಚೇರಿಯಲ್ಲಿ ಗುರುವಾರ ತಮ್ಮನ್ನು ಭೇಟಿ ಮಾಡಿದ ಕ್ಯಾಂಪ್ಕೊ ಅಧ್ಯಕ್ಷ ಎ. ಕಿಶೋರ್‌ಕುಮಾರ್ ನೇತೃತ್ವದ ನಿಯೋಗದ ಮನವಿ ಸ್ವೀಕರಿಸಿ ಮಾತನಾಡಿದ ಸಚಿವರು, ‘ಅಧಿಕಾರಿಗಳ ಜೊತೆ ಚರ್ಚಿಸಿ ಶುಲ್ಕವನ್ನು ಈ ಮೊದಲಿನಂತೆ ಆಕರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

ಕ್ಯಾಂಪ್ಕೊದ ಚಟುವಟಿಕೆ, ವಾರ್ಷಿಕ ವಹಿವಾಟು ಹಾಗೂ ಯಾವೆಲ್ಲ ರಾಜ್ಯಗಳ ಕಾರ್ಯವ್ಯಾಪ್ತಿ ಹೊಂದಿದೆ ಎಂಬ ವಿವರ ಪಡೆದ ಸಚಿವರು, ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆಯಡಿ ಬದಲಾವಣೆ ಆಗಿರುವುದರ ಕುರಿತು ಮಾಹಿತಿ ಪಡೆದರು. ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆಯಡಿ ಬರುವ ಕಾರಣ ಮೇ ತಿಂಗಳಲ್ಲಿ ಮಾರುಕಟ್ಟೆ ಶುಲ್ಕವನ್ನು ಶೇಕಡಾ 0.48 ರಿಂದ 0.60ಕ್ಕೆ ಹೆಚ್ಚಿಸಲಾಗಿತ್ತು.

‘ರಾಜ್ಯ ಸಹಕಾರ ಸಂಘಗಳ ಕಾಯ್ದೆಯಡಿ ಕ್ಯಾಂಪ್ಕೊ ಆರಂಭವಾಗಿದ್ದು, ಕ್ರಮೇಣ ಕೇರಳ ಸೇರಿದಂತೆ ಇತರ ರಾಜ್ಯಗಳಿಗೂ ವಾಣಿಜ್ಯ ಚಟುವಟಿಕೆ ವಿಸ್ತರಿಸಿದೆ. ಬಹುರಾಜ್ಯಗಳಲ್ಲಿ ಮಾರಾಟ ಘಟಕ ತೆರೆದು ರಾಷ್ಟ್ರವ್ಯಾಪಿ ವಾಣಿಜ್ಯ ಚಟುವಟಿಕೆ ಹೊಂದಿದ್ದರೂ ಮಂಗಳೂರಿನಲ್ಲಿಯೇ ನೋಂದಾಯಿತ ಕೇಂದ್ರ ಕಚೇರಿಯಿದೆ. ಎಪಿಎಂಸಿಗೆ ವಾರ್ಷಿಕ ಸುಮಾರು ₹9 ಕೋಟಿ ಮಾರುಕಟ್ಟೆ ಶುಲ್ಕ ಪಾವತಿ ಮಾಡುತ್ತಿದೆ’ ಎಂದು ಕಿಶೋರ್‌ಕುಮಾರ್ ವಿವರಿಸಿದರು.

‘ಸಣ್ಣ ಮಾಲ್’ಗಳಾಗಿ ಅಂಚೆ ಕಚೇರಿ

ಒಂದನೇ ಪುಟದಿಂದ...

‘ಡಾಕ್ ಸೇವಕರು ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಸಲ್ಲಿಸುತ್ತಿರುವ ಪ್ರಾಮಾಣಿಕ ಸೇವೆಯಿಂದಾಗಿ ‘ಡಾಕ್ ಸೇವಾ, ಜನ ಸೇವಾ’ ಎಂಬ ನಂಬಿಕೆ ಇದೆ. ಅಂಚೆ ಸೇವಕರು ಕಾಗದಗಳನ್ನು ಮಾತ್ರ ಚೀಲದಲ್ಲಿ ಕೊಂಡೊಯ್ಯುವುದಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಭಾವನಾತ್ಮಕ ಸಂದೇಶ ಹಾಗೂ ವಿಶ್ವಾಸವನ್ನು ಕೊಂಡೊಯ್ಯುತ್ತಾರೆ. ಪರಿವರ್ತನೆಗೆ ಇಲಾಖೆಯ ಎಲ್ಲ ಸ್ತರದ ಸಿಬ್ಬಂದಿಯೂ ಸಲಹೆ ನೀಡಬಹುದು. ನಾವು ನಿಮ್ಮೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುತ್ತೇವೆ. ಭಾರತೀಯ ಅಂಚೆ ಇಲಾಖೆ ವಿಶ್ವದಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲಬೇಕು’ ಎಂದು ಹೇಳಿದರು.

ಕರ್ನಾಟಕದ ಅಂಚೆ ವೃತ್ತ ವಾರ್ಷಿಕವಾಗಿ ಸುಮಾರು 200 ಕೋಟಿಗೂ ಹೆಚ್ಚು ಪಾರ್ಸೆಲ್ ಹಾಗೂ ಅಂಚೆ ಸೇವೆಯನ್ನು ನೀಡಿ ದೇಶದಲ್ಲಿ ಮುಂಚೂಣಿ ಸ್ಥಾನದಲ್ಲಿದೆ ಎಂದು ಜೋತಿರಾದಿತ್ಯ ಶ್ಲಾಘಿಸಿದರು.

ಕರ್ನಾಟಕ ಅಂಚೆ ವೃತ್ತದ ಅತ್ಯುತ್ತಮ ಸೇವಾ ಪ್ರದರ್ಶನ ನೀಡಿರುವ 15 ಗ್ರಾಮೀಣ ಡಾಕ್ ಸೇವಕರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಅಂಚೆ ಇಲಾಖೆಯ ಕಾರ್ಯದರ್ಶಿ ವಂದಿತಾ ಕೌಲ್, ಅಂಚೆ ಸೇವೆಗಳ ಮಂಡಳಿಯ ಸದಸ್ಯೆ ಮಂಜುಕುಮಾರ್ ಉಪಸ್ಥಿತರಿದ್ದರು.

ಉದ್ಯಮಿ ಅನಿಲ್ ಅಂಬಾನಿ ಕಂಪನಿಗೆ ನೀಡಿದ್ದ ಸಾಲ

‘ವಂಚನೆ’ ವರ್ಗೀಕರಣ ಹಿಂಪಡೆದ ಕೆನರಾ ಬ್ಯಾಂಕ್

ಮುಂಬೈ (ಪಿಟಿಐ): ಉದ್ಯಮಿ ಅನಿಲ್ ಅಂಬಾನಿ ಅವರಿಗೆ ಸಂಬಂಧಿಸಿದ ರಿಲಯನ್ಸ್ ಕಮ್ಯುನಿಕೇಷನ್ಸ್ ಕಂಪನಿಯ ಸಾಲದ ಖಾತೆಯನ್ನು ‘ವಂಚನೆ’ ಎಂದು ವರ್ಗೀಕರಿಸಿದ್ದ ಆದೇಶವನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ಕೆನರಾ ಬ್ಯಾಂಕ್, ಬಾಂಬೆ ಹೈಕೋರ್ಟ್‌ಗೆ ಗುರುವಾರ ತಿಳಿಸಿದೆ.

ಬ್ಯಾಂಕ್‌ನ ಆದೇಶವನ್ನು ಪ್ರಶ್ನಿಸಿ ಅನಿಲ್ ಅಂಬಾನಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ ಡೇರೆ ಮತ್ತು ನೀಲಾ ಗೋಖಲೆ ಅವರು ಇದ್ದ ವಿಭಾಗೀಯ ಪೀಠವು ನಡೆಸುತ್ತಿತ್ತು. ಕೆನರಾ ಬ್ಯಾಂಕ್ ನೀಡಿದ ಮಾಹಿತಿಯನ್ನು ಪರಿಗಣಿಸಿದ ಪೀಠವು, ಅರ್ಜಿಯನ್ನು ಇತ್ಯರ್ಥಪಡಿಸಿತು.

‘ವಂಚನೆ’ ಎಂದು ವರ್ಗೀಕರಿಸಿದ್ದ ಆದೇಶ ಹಿಂಪಡೆದಿರುವುದನ್ನು ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ತಿಳಿಸಬೇಕು ಎಂದು ಪೀಠವು ಹೇಳಿದೆ.

ಅನಿಲ್ ಅಂಬಾನಿ ಅವರ ರಿಲಯನ್ಸ್ ಕಮ್ಯುನಿಕೇಷನ್ಸ್ ಪಡೆದ ಸಾಲದ ಖಾತೆಗೆ ಸಂಬಂಧಿಸಿದ ವಿಷಯ ಇದಾಗಿದೆ. ಕಂಪನಿಯು ದಿವಾಳಿ ಸಂಹಿತೆಯ ಅಡಿಯಲ್ಲಿ ಕಾರ್ಪೊರೇಟ್ ದಿವಾಳಿ ಪರಿಹಾರ ಪ್ರಕ್ರಿಯೆ ಎದುರಿಸುತ್ತಿದೆ.

ಸಾಲದ ಖಾತೆಯನ್ನು ‘ವಂಚನೆ’ ಎಂದು ಕೆನರಾ ಬ್ಯಾಂಕ್ 2024ರ ನವೆಂಬರ್ 8ರಂದು ವರ್ಗೀಕರಿಸಿತ್ತು. 2017ರಲ್ಲಿ ನೀಡಿದ್ದ ₹1,050 ಕೋಟಿ ಸಾಲವನ್ನು ಕಂಪನಿಯು ಸಮೂಹದ ಇನ್ನೊಂದು ಕಂಪನಿಗೆ ವರ್ಗಾಯಿಸಿ, ಬೇರೆ ಪಾವತಿಗಳಿಗೆ ಬಳಕೆ ಮಾಡಿಕೊಂಡಿತ್ತು ಎಂದು ಬ್ಯಾಂಕ್ ಹೇಳಿತ್ತು.

ಆದರೆ ಈ ಆದೇಶಕ್ಕೆ ಈ ವರ್ಷದ ಫೆಬ್ರುವರಿಯಲ್ಲಿ ಹೈಕೋರ್ಟ್ ತಡೆ ನೀಡಿತ್ತು. ಸಾಲದ ಖಾತೆಯನ್ನು ‘ವಂಚನೆ’ ಎಂದು ವರ್ಗೀಕರಿಸುವ ಮೊದಲು ತಮ್ಮ ವಾದವನ್ನು ಆಲಿಸಿಲ್ಲ ಎಂದು ಅನಿಲ್ ಅಂಬಾನಿ ಅವರು ಹೈಕೋರ್ಟ್‌ನಲ್ಲಿ ವಾದಿಸಿದ್ದರು.

ಸಾಲದ ಖಾತೆಯನ್ನು ‘ವಂಚನೆ’ ಎಂದು ವರ್ಗೀಕರಿಸುವ ಮೊದಲು ಸಾಲ ಪಡೆದವರ ವಾದ ಆಲಿಸಬೇಕು ಎಂದು ಸುಪ್ರೀಂ ಕೋರ್ಟ್ ನೀಡಿದ್ದ ಸೂಚನೆಯನ್ನು ಮತ್ತೆ ಮತ್ತೆ ಉಲ್ಲಂಘಿಸಿದ ಬ್ಯಾಂಕ್‌ಗಳ ವಿರುದ್ಧ ಆರ್‌ಬಿಐ ಕ್ರಮ ಕೈಗೊಳ್ಳಲಿದೆಯೇ ಎಂದು ಹೈಕೋರ್ಟ್ ಪ್ರಶ್ನಿಸಿತ್ತು.

ಎಲ್‌ಐಸಿಯ ಇನ್ನಷ್ಟು ಷೇರು ಮಾರಾಟ?

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಇನ್ನಷ್ಟು ಷೇರುಗಳನ್ನು ಮಾರಾಟ ಮಾಡಲು ಕೇಂದ್ರ ಸರ್ಕಾರ ಮುಂದಡಿ ಇರಿಸಿದೆ, ಷೇರು ವಿಕ್ರಯ ಇಲಾಖೆಯು ಇದರ ವಿವರಗಳನ್ನು ಅಂತಿಮಗೊಳಿಸಲಿದೆ ಎಂದು ಮೂಲಗಳು ತಿಳಿಸಿವೆ.

ಎಲ್‌ಐಸಿಯಲ್ಲಿ ಕೇಂದ್ರ ಸರ್ಕಾರವು ಈಗ ಶೇ 96.5ರಷ್ಟು ಷೇರು ಹೊಂದಿದೆ. ಐಪಿಒ ಪ್ರಕ್ರಿಯೆಯ ಮೂಲಕ ಕೇಂದ್ರವು ಶೇ 3.5ರಷ್ಟು ಷೇರುಗಳನ್ನು 2022ರಲ್ಲಿ ಮಾರಾಟ ಮಾಡಿತ್ತು. ಈ ಷೇರು ಮಾರಾಟದ ಮೂಲಕ ಸರ್ಕಾರವು ₹21 ಸಾವಿರ ಕೋಟಿ ಸಂಗ್ರಹಿಸಿತ್ತು.

ಎಲ್‌ಐಸಿಯ ಇನ್ನಷ್ಟು ಷೇರುಗಳನ್ನು ಒಎಫ್‌ಎಸ್ ವಿಧಾನದ ಮೂಲಕ ಮಾರಾಟ ಮಾಡುವ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ, ಚರ್ಚೆಗಳು ಇನ್ನೂ ಆರಂಭಿಕ ಹಂತದಲ್ಲಿ ಇವೆ ಎಂದು ಗೊತ್ತಾಗಿದೆ. ‘ಮಾರುಕಟ್ಟೆಯ ಪರಿಸ್ಥಿತಿಯನ್ನು ಪರಿಶೀಲಿಸಿ, ಷೇರು ಮಾರಾಟವನ್ನು ಪೂರ್ಣಗೊಳಿಸುವುದು ಷೇರು ವಿಕ್ರಯ ಇಲಾಖೆಯ ಹೊಣೆ’ ಎಂದು ಮೂಲವೊಂದು ತಿಳಿಸಿದೆ.

2027ರ ಮೇ 16ಕ್ಕೆ ಮೊದಲು ಎಲ್‌ಐಸಿಯಲ್ಲಿ ಸಾರ್ವಜನಿಕರ ಷೇರು ಮಾಲೀಕತ್ವ ಪ್ರಮಾಣವು ಶೇ 10ಕ್ಕೆ ಹೆಚ್ಚಬೇಕಿದೆ. ಇದು ಸಾಧ್ಯವಾಗಬೇಕು ಎಂದಾದರೆ ಕೇಂದ್ರವು ಇನ್ನೂ ಶೇ 6.5ರಷ್ಟು ಷೇರುಗಳನ್ನು ಮಾರಾಟ ಮಾಡಬೇಕಿದೆ.

ಎಷ್ಟು ಪ್ರಮಾಣದಲ್ಲಿ ಷೇರು ಮಾರಾಟ ಮಾಡಲಾಗುತ್ತದೆ, ಯಾವಾಗ ಮಾಡಲಾಗುತ್ತದೆ ಎಂಬುದನ್ನು ಮುಂದೆ ಸೂಕ್ತ ಸಂದರ್ಭದಲ್ಲಿ ತೀರ್ಮಾನಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಕ್ವಿಕ್–ಕಾಮರ್ಸ್ ಖರೀದಿ ಮೌಲ್ಯ ₹64 ಸಾವಿರ ಕೋಟಿ

ಮುಂಬೈ (ಪಿಟಿಐ): ಮನೆಬಳಕೆ ಉತ್ಪನ್ನಗಳನ್ನು ಗ್ರಾಹಕರು ಇದ್ದಲ್ಲಿಗೆ ತ್ವರಿತವಾಗಿ ತಲುಪಿಸುವ ಬ್ಲಿಂಕಿಟ್, ಇನ್‌ಸ್ಟಾಮಾರ್ಟ್‌ನಂತಹ ಕ್ವಿಕ್–ಕಾಮರ್ಸ್ ವೇದಿಕೆಗಳ ಮೂಲಕ 2024–25ನೇ ಹಣಕಾಸು ವರ್ಷದಲ್ಲಿ ಭಾರತೀಯರು ಒಟ್ಟು ₹64 ಸಾವಿರ ಕೋಟಿ ಮೌಲ್ಯದ ಉತ್ಪನ್ನಗಳನ್ನು ಖರೀದಿಸಿದ್ದಾರೆ.

ಇದು ಹಿಂದಿನ ಹಣಕಾಸು ವರ್ಷದಲ್ಲಿ ಇಂತಹ ವೇದಿಕೆಗಳ ಮೂಲಕ ಆಗಿದ್ದ ಖರೀದಿಯ ಮೊತ್ತಕ್ಕೆ ಹೋಲಿಸಿದರೆ ದುಪ್ಪಟ್ಟು. 2023–24ರಲ್ಲಿ ಇಂತಹ ವೇದಿಕೆಗಳ ಮೂಲಕ ₹30 ಸಾವಿರ ಕೋಟಿ ಮೌಲ್ಯದ ಉತ್ಪನ್ನಗಳನ್ನು ಗ್ರಾಹಕರು ಖರೀದಿಸಿದ್ದರು ಎಂದು ವರದಿಯೊಂದು ಹೇಳಿದೆ.

ಇಂತಹ ವೇದಿಕೆಗಳ ಮೂಲಕ ಆಗುವ ಖರೀದಿಯ ಮೊತ್ತವು 2027–28ನೇ ಹಣಕಾಸು ವರ್ಷದ ಹೊತ್ತಿಗೆ ₹2 ಲಕ್ಷ ಕೋಟಿಗೆ ತಲುಪುವ ನಿರೀಕ್ಷೆ ಇದೆ ಎಂದು ಕೇರ್‌ಎಜ್ ರೇಟಿಂಗ್ಸ್ ಸಂಸ್ಥೆಯ ಅಂಗಸಂಸ್ಥೆ ಕೇರ್‌ಎಜ್ ಅಡ್ವೈಸರಿ ಸಿದ್ಧಪಡಿಸಿರುವ ವರದಿಯು ಹೇಳಿದೆ.

‘ಆಟೊ–ಪಿಎಲ್‌ಐ ಶೀಘ್ರ ಪಾವತಿ’

ನವದೆಹಲಿ (ಪಿಟಿಐ): ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಅಡಿ ಅರ್ಹ ಆಟೊಮೊಬೈಲ್ ಕಂಪನಿಗಳಿಗೆ ನೀಡಬೇಕಿರುವ ಮೊತ್ತವನ್ನು ತ್ವರಿತವಾಗಿ ನೀಡಲಾಗುವುದು ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

2025ರ ಮಾರ್ಚ್‌ವರೆಗೆ ಪಿಎಲ್‌ಐ ಆಟೊ ಯೋಜನೆಯು ₹29,576 ಕೋಟಿ ಹೂಡಿಕೆ ಆಕರ್ಷಿಸಿದ್ದು, 44,987ಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಸಿದೆ ಎಂದು ‘ಎಕ್ಸ್’ನಲ್ಲಿ ಗುರುವಾರ ಹೇಳಿದ್ದಾರೆ.

ನಷ್ಟ ಭರ್ತಿಗೆ ತೈಲ ಕಂಪನಿಗಳಿಗೆ ₹35 ಸಾವಿರ ಕೋಟಿ?

ನವದೆಹಲಿ (ಪಿಟಿಐ): ಅಡುಗೆ ಅನಿಲ ಸಿಲಿಂಡರ್‌ಗಳನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದರಿಂದ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಆಗಿರುವ ನಷ್ಟ ಸರಿದೂಗಿಸಲು ಕೇಂದ್ರ ಸರ್ಕಾರವು ಶೀಘ್ರ ₹35 ಸಾವಿರ ಕೋಟಿ ನೀಡುವ ಸಾಧ್ಯತೆ ಇದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಕಳೆದ 15 ತಿಂಗಳಿನಿಂದ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆಗೆ ಮಾರಾಟ ಮಾಡುತ್ತಿವೆ.

ಕೇಂದ್ರ ಹಣಕಾಸು ಸಚಿವಾಲಯವು ನಿಖರವಾದ ನಷ್ಟದ ಮಾಹಿತಿ ಮತ್ತು ಅದನ್ನು ಹೇಗೆ ಸರಿದೂಗಿಸುವುದು ಎಂಬುದರ ಕಾರ್ಯವಿಧಾನವನ್ನು ರೂಪಿಸುತ್ತಿದೆ ಎಂದು ಹೇಳಿದ್ದಾರೆ.

ಫೆಬ್ರುವರಿ 1ರಂದು ಮಂಡಿಸಿದ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಈ ನಷ್ಟವನ್ನು ಸರಿದೂಗಿಸಲು ಹಣ ಮೀಸಲಿಟ್ಟಿಲ್ಲ. ಏಪ್ರಿಲ್‌ನಲ್ಲಿ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಎಕ್ಸೈಸ್ ಸುಂಕವನ್ನು ಹೆಚ್ಚಿಸಿದೆ. ಇದರಿಂದಾಗಿ ಕೇಂದ್ರಕ್ಕೆ ಹೆಚ್ಚುವರಿಯಾಗಿ ₹32 ಸಾವಿರ ಕೋಟಿ ಸಿಗಲಿದೆ. ಈ ಹಣವನ್ನೇ ನಷ್ಟ ಸರಿದೂಗಿಸಿಕೊಳ್ಳಲು ನೀಡುವ ಸಾಧ್ಯತೆ ಇದೆ ಎಂದು ಅಧಿಕಾರಿ ಹೇಳಿದ್ದಾರೆ.

ವ್ಯಾಪಾರ ಒಪ್ಪಂದ ಅಮೆರಿಕಕ್ಕೆ ತೆರಳಲಿದೆ ಭಾರತದ ತಂಡ

ನವದೆಹಲಿ (ಪಿಟಿಐ): ಅಮೆರಿಕ ಮತ್ತು ಭಾರತದ ಮಧ್ಯದ ವ್ಯಾಪಾರ ಒಪ್ಪಂದದ ಕುರಿತು ಮತ್ತೊಂದು ಸುತ್ತಿನ ಚರ್ಚೆ ನಡೆಸಲು ಭಾರತದ ವಾಣಿಜ್ಯ ಸಚಿವಾಲಯದ ತಂಡವು ಮುಂದಿನ ವಾರ ವಾಷಿಂಗ್ಟನ್‌ಗೆ ತೆರಳಲಿದೆ ಎನ್ನಲಾಗುತ್ತಿದೆ.

ಕೃಷಿ ಮತ್ತು ಆಟೊಮೊಬೈಲ್ ಕ್ಷೇತ್ರಗಳಿಗೆ ಸಂಬಂಧಿಸಿ ಎರಡು ದೇಶಗಳ ಮಧ್ಯೆ ಕೆಲವು ಭಿನ್ನಾಭಿಪ್ರಾಯ ಮೂಡಿವೆ. ಈ ಬಗ್ಗೆ ಚರ್ಚೆ ನಡೆಸಲು ತಂಡ ತೆರಳಲಿದೆ. ಜೂನ್ 26ರಿಂದ ಜುಲೈ 2ರ ಮಧ್ಯೆ ಒಂದು ಸುತ್ತಿನ ಮಾತುಕತೆ ನಡೆದಿತ್ತು.

ಕೃಷಿ ಮತ್ತು ಹೈನುಗಾರಿಕೆ ಉತ್ಪನ್ನಗಳ ಆಮದಿನ ಮೇಲೆ ಅಮೆರಿಕವು ವಿಧಿಸಲು ಇಚ್ಛಿಸಿರುವ ಸುಂಕದ ಪ್ರಮಾಣದ ವಿರುದ್ಧ ಭಾರತವು ಗಟ್ಟಿ ನಿಲುವು ತಳೆದಿದೆ. ಭಾರತವು ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡ ಯಾವ ದೇಶಕ್ಕೂ ಹೈನುಗಾರಿಕೆ ಉತ್ಪನ್ನಗಳ ಮೇಲೆ ಇಲ್ಲಿಯವರೆಗೆ ಸುಂಕ ವಿನಾಯಿತಿ ನೀಡಿಲ್ಲ.

ಹೆಚ್ಚುವರಿ ಶಿಕ್ಷಕರ ಪತ್ತೆಗೆ ಪಿಟಿಆರ್ ಪರಿಷ್ಕರಣೆ

ಒಂದನೇ ಪುಟದಿಂದ...

ಕಿರಿಯ ಪ್ರಾಥಮಿಕ ಶಾಲೆ (1ರಿಂದ 5ನೇ ತರಗತಿ) ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ (6ರಿಂದ 8ನೇ ತಗರತಿ) ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆಯ ಕೋಷ್ಟಕ ಸಿದ್ಧಪಡಿಸಿ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ ಈಚೆಗೆ ಸುತ್ತೋಲೆಯನ್ನು ಹೊರಡಿಸಿದೆ.

‘ಸುಮಾರು 10 ಸಾವಿರ ಹೆಚ್ಚುವರಿ ಶಿಕ್ಷಕರ ಪಟ್ಟಿ ರಚಿಸಲಾಗಿದೆ. ವಿದ್ಯಾರ್ಥಿಗಳು ಹೆಚ್ಚಿರುವ ಶಾಲೆಗಳಿಗೆ ಇವರನ್ನು ವರ್ಗಾವಣೆ ಮಾಡಲಾಗುವುದು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೈಗೊಂಡ ನಿರ್ಧಾರ ಇದಾಗಿದೆ’ ಎಂದು ಶಿಕ್ಷಣ ಇಲಾಖೆ ಆಯುಕ್ತ ತ್ರಿಲೋಕ್‌ಚಂದ್ರ ಪ್ರತಿಕ್ರಿಯಿಸಿದ್ದಾರೆ.

1ರಿಂದ 11 ವಿದ್ಯಾರ್ಥಿ ಗಳಿಗೆ ಒಬ್ಬ ಶಿಕ್ಷಕ ಎಂಬ ಪಿಟಿಆರ್ ಹಾಗೇ ಉಳಿಸಲಾಗಿದೆ. 1ರಿಂದ 7ನೇ ತರಗತಿ ವರೆಗಿನ ಶಾಲೆಗಳಲ್ಲಿ ಹಿಂದೆ ಮುಖ್ಯೋಪಾಧ್ಯಾಯರು ಸೇರಿ ಐದು ಹುದ್ದೆಗಳನ್ನು ನಿಗದಿಪಡಿಸಲಾಗಿತ್ತು. ಈ ವರ್ಷ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 60 ಮೀರಿದರೆ ಮುಖ್ಯ ಶಿಕ್ಷಕರು ಸೇರಿದಂತೆ 4 ಹುದ್ದೆಗಳಿಗೆ ಸೀಮಿತಗೊಳಿಸಲಾಗಿದೆ.

ದಾಖಲಾತಿ ಕಡಿಮೆಯುಳ್ಳ ಶಾಲೆಗಳಲ್ಲಿ ಇದರಿಂದ ಶಿಕ್ಷಕರ ಸಂಖ್ಯೆ ಕಡಿತವಾಗಲಿವೆ. ಒಬ್ಬರೇ ಶಿಕ್ಷಕ ಎರಡು ತರಗತಿ ನಿರ್ವಹಿಸಬೇಕಾಗುತ್ತದೆ. ಇಬ್ಬರು ಶಿಕ್ಷಕರಿದ್ದಲ್ಲಿ ಆರು ವಿಷಯಗಳನ್ನು ಹಂಚಿಕೊಂಡು ಬೋಧಿಸಬೇಕಿದೆ ಎನ್ನುತ್ತಾರೆ ಕೊಡಗು ಜಿಲ್ಲೆ ಸರ್ಕಾರಿ ಶಾಲೆಯೊಂದರ ಇಂಗ್ಲಿಷ್ ವಿಷಯ ಶಿಕ್ಷಕ.

ಅಧಿಕಾರಿಗಳು ಹೇಳುವುದೇನು?: ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ, ಶಿಕ್ಷಕರಿಲ್ಲ ಎಂಬ ಕೊರತೆಯನ್ನು ಮರು ಹೊಂದಾಣಿಕೆ ವ್ಯವಸ್ಥೆ ನೀಗಿಸಲಿದೆ ಎನ್ನುತ್ತಾರೆ ಇಲಾಖೆಯ ಹಿರಿಯ ಅಧಿಕಾರಿಗಳು.

‘ಶಿಕ್ಷಕರ ಮರು ಹೊಂದಾಣಿಕೆ ಅವೈಜ್ಞಾನಿಕ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ, 60 ಮಕ್ಕಳಿದ್ದಲ್ಲಿ ಮುಖ್ಯ ಶಿಕ್ಷಕರು ಸೇರಿ ಐವರು ಶಿಕ್ಷಕರು ಇರಬೇಕು. ಮಕ್ಕಳ ದಾಖಲಾತಿಯು 90 ದಾಟಿದರೆ ಕನಿಷ್ಠ ಆರು ಶಿಕ್ಷಕರಿರಬೇಕು’ ಎಂಬುದು ಡಿಎಸ್‌ಇಆರ್‌ಟಿಯ ಹಿರಿಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿಯಲ್ಲಿ ವಿಚಾರಣೆ

ಢಾಕಾ: ಹಸೀನಾ ವಿರುದ್ಧ ಆರೋಪ ನಿಗದಿ

ಢಾಕಾ (ಪಿಟಿಐ/ಎಎಫ್‌ಪಿ): ಪದಚ್ಯುತ ಪ್ರಧಾನಿ ಶೇಖ್ ಹಸೀನಾ ವಿರುದ್ಧ ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿ(ಐಸಿಟಿ–ಬಿಡಿ) ಅಧಿಕೃತವಾಗಿ ಗುರುವಾರ ಆರೋಪ ನಿಗದಿ ಮಾಡಿದೆ.

ಮಾನವೀಯತೆ ವಿರುದ್ಧದ ಅಪರಾಧಗಳಿಗಾಗಿ, ಅವರ ಅನುಪಸ್ಥಿತಿಯಲ್ಲಿ ಹಸೀನಾ ವಿರುದ್ಧ ಆರೋಪ ನಿಗದಿ ಮಾಡಿರುವ ನ್ಯಾಯಮಂಡಳಿ, ಆಗಸ್ಟ್ 3ರಿಂದ ವಿಚಾರಣೆ ಆರಂಭಿಸಲಾಗುವುದು ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಮೊಹಮ್ಮದ್ ಗುಲಾಮ್ ಮುರ್ತುಜಾ ಮಜುಂದಾರ, ಮೊಹಮ್ಮದ್ ಶಫೀವುಲ್ ಆಲಂ ಮಹಮೂದ್ ಹಾಗೂ ಮೊಹಮ್ಮದ್ ಮಹಿತ್ ಉಲ್ ಹಕ್ ಎನಮ್ ಚೌಧರಿ ಅವರು ಇದ್ದ ನ್ಯಾಯಪೀಠ, ಈ ಕುರಿತ ಆದೇಶ ಹೊರಡಿಸಿತು. ಅಪರಾಧ ಸಾಬೀತಾದಲ್ಲಿ, ಅವರಿಗೆ ಗಲ್ಲು ಶಿಕ್ಷೆ ವಿಧಿಸಬಹುದಾಗಿದೆ.

ಶೇಖ್ ಹಸೀನಾ

ಹಸೀನಾ ಅವರು ಪ್ರಧಾನಿಯಾಗಿದ್ದ ವೇಳೆ ಗೃಹ ಸಚಿವರಾಗಿದ್ದ ಅಸಾದುಜ್ಜಮಾನ್ ಖಾನ್ ಕಮಲ್, ಐಜಿಪಿಯಾಗಿದ್ದ ಚೌಧರಿ ಅಬ್ದುಲ್ಲಾ ಅಲ್ ಮಮೂನ್ ವಿರುದ್ಧವೂ ನ್ಯಾಯಮಂಡಳಿಯು ಆರೋಪ ನಿಗದಿ ಮಾಡಿದೆ ಎಂದು ನ್ಯಾಯಮಂಡಳಿಯಲ್ಲಿ ಮುಖ್ಯ ಪ್ರಾಸಿಕ್ಯೂಟರ್ ಆಗಿರುವ ಮುಹಮ್ಮದ್ ತಜುಲ್ ಇಸ್ಲಾಂ ಮಾಧ್ಯಮಗಳಿಗೆ ತಿಳಿಸಿದ್ದಾರೆ.

‘ಕಳೆದ ವರ್ಷ ಜುಲೈ ಮತ್ತು ಆಗಸ್ಟ್‌ನಲ್ಲಿ, ವಿದ್ಯಾರ್ಥಿಗಳ ನೇತೃತ್ವದಲ್ಲಿ ನಡೆದಿದ್ದ ಪ್ರತಿಭಟನೆಗಳನ್ನು ಹತ್ತಿಕ್ಕಲು ಯತ್ನಿಸಿದ್ದಕ್ಕಾಗಿ ಈ ಮೂವರ ವಿರುದ್ಧ ಆರೋಪ ಹೊರಿಸಲಾಗಿದೆ. ತಮ್ಮ ವಿರುದ್ಧ ಭುಗಿಲೆದ್ದಿದ್ದ ಪ್ರತಿಭಟನೆಗಳನ್ನು ಹತ್ತಿಕ್ಕುವುದಕ್ಕಾಗಿ ಸಾಮೂಹಿಕ ಹತ್ಯೆ ಮಾಡಿರುವುದು ಹಾಗೂ ಚಿತ್ರಹಿಂಸೆ ನೀಡಿರುವುದಕ್ಕೆ ಸಂಬಂಧಿಸಿಯೂ ಹಸೀನಾ ವಿರುದ್ಧ ಆರೋಪ ಹೊರಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಮನವಿ ತಿರಸ್ಕಾರ: ವಿಚಾರಣೆ ವೇಳೆ, ಶೇಖ್ ಹಸೀನಾ ಮತ್ತು ಕಮಲ್ ವಿರುದ್ಧದ ಆರೋಪಗಳನ್ನು ಕೈಬಿಡುವಂತೆ ಈ ಇಬ್ಬರ ಪರ ವಕೀಲ ಅಮೀರ್ ಹುಸೇನ್ ಮಾಡಿದ ಮನವಿಯನ್ನು ನ್ಯಾಯಮಂಡಳಿ ತಿರಸ್ಕರಿಸಿತು.

ನಾನು ತಪ್ಪಿತಸ್ಥ: ಮಾಜಿ ಐಜಿಪಿ ಮಮೂನ್

‘ನ್ಯಾಯಮಂಡಳಿ ಮುಂದೆ ಹಾಜರಾಗಿದ್ದ ಮಾಜಿ ಐಜಿಪಿ ಚೌಧರಿ ಅಬ್ದುಲ್ಲಾ, ತಾನು ತಪ್ಪಿತಸ್ಥ ಎಂಬುದಾಗಿ ಒಪ್ಪಿಕೊಂಡಿದ್ದಾರೆ’ ಎಂದು ಮುಹಮ್ಮದ್ ತಜುಲ್ ಇಸ್ಲಾಂ ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ಕಳೆದ ವರ್ಷ ಶೇಖ್ ಹಸೀನಾ ನೇತೃತ್ವದ ಸರ್ಕಾರದ ವಿರುದ್ಧ ಭುಗಿಲೆದಿದ್ದ ಪ್ರತಿಭಟನೆ ವೇಳೆ ನಡೆದ ಅಪರಾಧ ಕೃತ್ಯಗಳ ಕುರಿತು ತನಗೆ ಸಂಪೂರ್ಣ ಅರಿವಿದೆ. ಮಾಫಿ ಸಾಕ್ಷಿಯಾಗುವ ಮೂಲಕ ವಿಚಾರಣೆಗೆ ನೆರವು ನೀಡುವುದಾಗಿ ಮಮೂನ್ ನ್ಯಾಯಮಂಡಳಿಗೆ ತಿಳಿಸಿದರು’ ಎಂದು ಇಸ್ಲಾಂ ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ACCOUNTANT. FEMALE. Min 2 yrs exp. Tally & GST. Peenya. Call 9243110602

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ14,000-18,000. 8951315839, 7022770052

ಕ್ಲಾಸಿಫೈಡ್ಸ್
ADMISSION CORNER

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY ®
Recognised by GOK, Affiliated to VTU, Approved by AICTE
KCET CODE: E087
A NAAC
ACCREDITED COLLEGES ENG | LAW | DEGREE

Admissions Open 2025-26
B.E: ENGINEERING
CSE | ISE | AI&ML
ECE | MECH | CIVIL
VIVEKANANDA COLLEGES
PHARMA: D.Pharm, B.Pharm, M.Pharm
MANAGEMENT: BCA, BBA, MBA
DEGREE: B.Com | B.A, B.Sc | B.Ed
LAW: 3 Year LL.B, 5 Yr B.A LL.B, 5 Yr B.Com LL.B
95139 53482 | 76250 13637
R & D Centers | Excellent Placement | 4.4 Lac Avg. P.A CTC | Skill Lab | Campus Hostel
VKIT Campus: Gudimavu, Kumbalagodu, Off Mysore Road, Bengaluru - 560 074. Email ID: principal@vitb.ac.in Web: https://vitb.ac.in
JES Main Campus: Dr.Rajkumar Road, Next to Orion Mall, Rajajinagar II Stage, Bengaluru - 560 055. Email ID : admission@jes-edu.in Web : https://jes-edu.in

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

1.9.2025 ಜೈಪುರ್, ಪುಷ್ಕರ್, ಜೈಸಲ್‌ಮೇರ್, ಜೋಧ್‌ಪುರ್, ಉದಯ್‌ಪುರ್, ಮೌಂಟ್‌ಅಬು 6.9.2025 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್8.9.2025 ಗುಜರಾತ್, ಮದ್ಯಪ್ರದೇಶ್ ಕರ್ನಾಟಕ ಹೆರಿಟೇಜ್ ಟೂರ್ಸ್.(ಹನುಮಂತನಗರ) 9845035349, 9482435755

ಅಷ್ಟಜ್ಯೋತಿರ್ಲಿಂಗ ಯಾತ್ರೆ, 12 ದಿನಗಳು ಚಾರ್‌ಧಾಮ್ ಯಾತ್ರೆ 14 ದಿನಗಳು. ಕಾಶಿ,ಕಲ್ಕತ್ತಾ ಭುವನೇಶ್ವರ್ ಯಾತ್ರ 10ದಿನಗಳು. ಸಂಪರ್ಕಿಸಿ ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.03 9448294477 9845311899

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Kengeri

BDA 60X40 site with building 3300sqft. Sir M V layout 2nd Block. Contact 92495 13187

ಪ್ರಜಾವಾಣಿ ಕ್ಲಾಸಿಫೈಡ್ಸ್ ಸಾರ್ವಜನಿಕ ಪ್ರಕಟಣೆ
www.dhclassifieds.com BOOK NOW
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS @500/-* PER SQCM
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 9886213331 9845114560
*Conditions apply

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9845114560

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಿದ್ಯಾರ್ಥಿನಿಯರ ಬಟ್ಟೆ ಕಳಚಿಸಿದ ಆರೋಪ

ಮುಟ್ಟು ಪರಿಶೀಲನೆ: ಖಾಸಗಿ ಶಾಲೆ ಪ್ರಾಂಶುಪಾಲೆ, ಮಹಿಳಾ ಸಿಬ್ಬಂದಿ ಬಂಧನ

ಠಾಣೆ (ಮಹಾರಾಷ್ಟ್ರ) (ಪಿಟಿಐ): ವಿದ್ಯಾರ್ಥಿನಿಯರು ಮುಟ್ಟಾಗಿದ್ದಾರೆಯೇ ಎಂಬುದನ್ನು ಪರಿಶೀಲಿಸುವುದಕ್ಕಾಗಿ ಅವರ ಬಟ್ಟೆಗಳನ್ನು ತೆಗೆಸಿದ ಆರೋಪಕ್ಕೆ ಸಂಬಂಧಿಸಿ ಜಿಲ್ಲೆಯ ಖಾಸಗಿ ಶಾಲೆಯೊಂದರ ಪ್ರಾಂಶುಪಾಲೆ ಹಾಗೂ ಸಿಬ್ಬಂದಿಯೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಜಿಲ್ಲೆಯ ಶಹಾಪುರದಲ್ಲಿನ ಶಾಲೆಯೊಂದರಲ್ಲಿ ಮಂಗಳವಾರ ಈ ಘಟನೆ ನಡೆದಿದೆ. 'ಶಾಲೆಯ ವಿದ್ಯಾರ್ಥಿನಿಯರ ಬಟ್ಟೆಗಳನ್ನು ತೆಗೆದು, ಮುಟ್ಟಾಗಿರುವುದನ್ನು ಖಚಿತಪಡಿಸಿಕೊಳ್ಳಲು ಅವರ ಗುಪ್ತಾಂಗ ಪರಿಶೀಲಿಸಿದ್ದರು ಎನ್ನಲಾದ ಮಹಿಳಾ ಸಿಬ್ಬಂದಿ ಹಾಗೂ ಪ್ರಾಂಶುಪಾಲೆ ಅವರನ್ನು ಪೊಲೀಸರು ಬುಧವಾರ ರಾತ್ರಿ ಬಂಧಿಸಿದ್ದಾರೆ' ಎಂದು ಶಹಾಪುರ ಠಾಣೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಖ್ಯಾಂಶಗಳು

- ಠಾಣೆ ಜಿಲ್ಲೆ ಶಹಾಪುರ ಪಟ್ಟಣದ ಖಾಸಗಿ ಶಾಲೆಯಲ್ಲಿ ಜರುಗಿದ ಘಟನೆ
- ಆರು ಆರೋಪಿಗಳ ವಿರುದ್ಧ ಪ್ರಕರಣ
- ಮಹಾರಾಷ್ಟ್ರ ವಿಧಾನಸಭೆಯಲ್ಲಿ ಘಟನೆ ಪ್ರಸ್ತಾಪ

'ಈ ಘಟನೆಯಲ್ಲಿ ಪಾತ್ರ ಇದೆ ಎನ್ನಲಾದ ನಾಲ್ವರು ಶಿಕ್ಷಕರು ಸೇರಿ ಆರು ಜನ ಆರೋಪಿಗಳ ಬಂಧನಕ್ಕೆ ಪೊಲೀಸರು ಜಾಲ ಬೀಸಿದ್ದಾರೆ' ಎಂದೂ ಹೇಳಿದ್ದಾರೆ.

'ಘಟನೆ ಕುರಿತಂತೆ ತನಿಖೆ ನಡೆಸಿ, ಸಮಗ್ರ ವರದಿ ಸಲ್ಲಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗೆ (ಬಿಇಒ) ಸೂಚಿಸಲಾಗಿದೆ. ಈ ವರದಿ ಆಧಾರದಲ್ಲಿ ಜಿಲ್ಲಾಡಳಿತ ಕ್ರಮ ಕೈಗೊಳ್ಳಲಿದೆ' ಎಂದು ಜಿಲ್ಲಾ ಶಿಕ್ಷಣ ಅಧಿಕಾರಿ ಬಾಳಾಸಾಹೇಬ ರಕ್ಷೆ ತಿಳಿಸಿದ್ದಾರೆ.

'ಈ ಘಟನೆ ಬೆನ್ನಲ್ಲೇ, ಪ್ರಾಂಶುಪಾಲರನ್ನು ಸೇವೆಯಿಂದ ವಜಾ ಮಾಡಲಾಗಿದೆ' ಎಂದು ರಕ್ಷೆ ತಿಳಿಸಿದ್ದಾರೆ.

ಘಟನೆ: 'ಶಾಲೆಯ ಶೌಚಾಲಯದಲ್ಲಿ ಮಂಗಳವಾರ ರಕ್ತದ ಕಲೆಗಳು ಕಂಡುಬಂದಿವೆ. ಆಗ, ಶಾಲೆಯ ಪ್ರಾಂಶುಪಾಲರು, 5ರಿಂದ 10ನೇ ತರಗತಿವರೆಗೆ ಕಲಿಯುತ್ತಿರುವ ವಿದ್ಯಾರ್ಥಿನಿಯರನ್ನು ಶಾಲೆಯ ಸಭಾಂಗಣಕ್ಕೆ ಕರೆದಿದ್ದಾರೆ' ಎಂದು ಪಾಲಕರೊಬ್ಬರು ನೀಡಿರುವ ದೂರಿನಲ್ಲಿ ವಿವರಿಸಲಾಗಿದೆ.

'ಶೌಚಾಲಯ ಹಾಗೂ ನೆಲಹಾಸಿನ ಮೇಲೆ ಬಿದ್ದಿದ್ದ ರಕ್ತದ ಕಲೆಗಳ ಚಿತ್ರಗಳನ್ನು ಪ್ರೊಜೆಕ್ಟರ್ ಮೂಲಕ ವಿದ್ಯಾರ್ಥಿನಿಯರಿಗೆ ತೋರಿಸಿ, ಯಾರಾದರೂ ಮುಟ್ಟಾಗಿದ್ದೀರಾ ಎಂದು ಕೇಳಿದ್ದಾರೆ. ನಂತರ, ಮುಟ್ಟಾಗಿರುವುದಾಗಿ ಹೇಳಿದವರ ಹೆಬ್ಬೆರಳು ಗುರುತು ಪಡೆಯಲಾಗಿದೆ. ಉಳಿದ ವಿದ್ಯಾರ್ಥಿನಿಯರ ಪೈಕಿ ಒಬ್ಬೊಬ್ಬರನ್ನಾಗಿ ಶೌಚಾಲಯಕ್ಕೆ ಕರೆದುಕೊಂಡು ಹೋಗಿರುವ ಮಹಿಳಾ ಸಿಬ್ಬಂದಿಯೊಬ್ಬರು, ಅವರ ಬಟ್ಟೆಗಳನ್ನು ತೆಗೆದು, ಗುಪ್ತಾಂಗ ಪರಿಶೀಲಿಸಿದ್ದಾರೆ' ಎಂದು ದೂರಿನಲ್ಲಿ ವಿವರಿಸಲಾಗಿದೆ.

ಈ ವಿಚಾರ ಗೊತ್ತಾದ ನಂತರ, ಪಾಲಕರು ಶಾಲೆ ಬಳಿ ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದರು. ಶಾಲೆಯ ಆಡಳಿತ ಮಂಡಳಿ ಹಾಗೂ ಸಂಬಂಧಪಟ್ಟ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳುವಂತೆಯೂ ಆಗ್ರಹಿಸಿದರು' ಎಂದು ಹೆಚ್ಚುವರಿ ಎಸ್‌ಪಿ (ಗ್ರಾಮೀಣ) ರಾಹುಲ್ ಝಲ್ತೆ ತಿಳಿಸಿದ್ದಾರೆ.

ಪ್ರಸ್ತಾಪ: ಮಹಾರಾಷ್ಟ್ರ ವಿಧಾನಸಭೆಯಲ್ಲಿ ಈ ಘಟನೆ ಗುರುವಾರ ಪ್ರಸ್ತಾಪಗೊಂಡಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಶಾಸಕರು ಆಗ್ರಹಿಸಿದರು.

'ವಿದ್ಯಾರ್ಥಿನಿಯರ ಬಟ್ಟೆಗಳನ್ನು ತೆಗೆಯುವಂತೆ ಸೂಚಿಸಿದ್ದ ಪ್ರಾಂಶುಪಾಲರೂ ಒಬ್ಬ ಮಹಿಳೆಯೇ ಆಗಿದ್ದಾರೆ' ಎಂದು ಎನ್‌ಸಿಪಿ (ಶರದ್ ಪವಾರ್) ಶಾಸಕ ಜಿತೇಂದ್ರ ಅವ್ಹಾದ್ ಆರೋಪಿಸಿದ್ದಾರೆ.

'ಎಲ್ಲ ಶಾಲೆಗಳಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ವೆಂಡಿಂಗ್ ಯಂತ್ರಗಳನ್ನು ಅಳವಡಿಸಬೇಕು ಹಾಗೂ ನೀರಿನ ಸೌಲಭ್ಯ ಕಲ್ಪಿಸಬೇಕು' ಎಂದು ಕಾಂಗ್ರೆಸ್ ಶಾಸಕಿ ಜ್ಯೋತಿ ಗಾಯಕ್ವಾಡ್ ಆಗ್ರಹಿಸಿದರು.

ಟಿ20 ಮಹಿಳಾ ಕ್ರಿಕೆಟ್: ಇಂಗ್ಲೆಂಡ್ ಎದುರು ಸರಣಿ ಕೈವಶ

ಭಾರತದ ಚಾರಿತ್ರಿಕ ಸಾಧನೆ

ಮ್ಯಾಂಚೆಸ್ಟರ್ (ಪಿಟಿಐ): ಭಾರತ ಮಹಿಳೆಯರ ಕ್ರಿಕೆಟ್ ತಂಡವು ಇದೇ ಮೊದಲ ಬಾರಿಗೆ ಇಂಗ್ಲೆಂಡ್ ಎದುರು ಟಿ20 ಸರಣಿಯನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿತು.

ಬುಧವಾರ ತಡರಾತ್ರಿ ಇಲ್ಲಿ ನಡೆದ ನಾಲ್ಕನೇ ಟಿ20 ಪಂದ್ಯದಲ್ಲಿ ಭಾರತ ತಂಡವು 6 ವಿಕೆಟ್‌ಗಳಿಂದ ಜಯಿಸಿತು. ಐದು ಪಂದ್ಯಗಳ ಸರಣಿಯಲ್ಲಿ 3–1ರಿಂದ ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಎಡಗೈ ಸ್ಪಿನ್ನರ್ ರಾಧಾ ಯಾದವ್ (15ಕ್ಕೆ2) ಮತ್ತು ಶ್ರೀ ಚರಣಿ (30ಕ್ಕೆ2) ಅವರ ಪರಿಣಾಮಕಾರಿ ದಾಳಿಯ ಮುಂದೆ ಇಂಗ್ಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 126 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಗುರಿ ಬೆನ್ನಟ್ಟಿದ ಭಾರತ ತಂಡವು ಸ್ಮೃತಿ ಮಂದಾನ (32; 31ಎ, 4X5) ಮತ್ತು ಶಫಾಲಿ ವರ್ಮಾ (31; 19ಎ, 4X6) ಅವರ ಉತ್ತಮ ಆರಂಭ ನೀಡಿದ್ದರಿಂದ ಸುಲಭ ಜಯ ಸಾಧಿಸಿತು. 17 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 127 ರನ್ ಹೊಡೆದು ಗೆದ್ದಿತು. ಜೆಮಿಮಾ ರಾಡ್ರಿಗಸ್ (ಅಜೇಯ 24; 22ಎ, 4X1) ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ (26; 25ಎ, 4X3) ಅವರು ಉತ್ತಮ ಕಾಣಿಕೆ ನೀಡಿದರು. ಸರಣಿಯಲ್ಲಿ ಇನ್ನೊಂದು ಪಂದ್ಯ ಬಾಕಿ ಇದೆ.

ರಾಧಾ

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರ್‌ಗಳಲ್ಲಿ 7ಕ್ಕೆ126 (ಸೋಫಿಯಾ ಡಂಕ್ಲಿ 22, ಟಾಮಿ ಬೇಮೌಂಟ್ 20, ಪೇಜ್ ಸ್ಕಾಲ್‌ಫೀಲ್ಡ್ 16, ಸೋಫಿ ಎಕ್ಲೆಸ್ಟೋನ್ ಔಟಾಗದೇ 16, ಶ್ರೀ ಚರಣಿ 30ಕ್ಕೆ2, ರಾಧಾ ಯಾದವ್ 15ಕ್ಕೆ2) ಭಾರತ: 17 ಓವರ್‌ಗಳಲ್ಲಿ 4ಕ್ಕೆ127 (ಸ್ಮೃತಿ ಮಂದಾನ 32, ಶಫಾಲಿ ವರ್ಮಾ 31, ಜೆಮಿಮಾ ರಾಡ್ರಿಗಸ್ ಔಟಾಗದೇ 24, ಹರ್ಮನ್‌ಪ್ರೀತ್ ಕೌರ್ 26, ಶಾರ್ಲೆಟ್ ಡೀನ್ 29ಕ್ಕೆ1, ಐಸಿ ವಾಂಗ್ 18ಕ್ಕೆ1) ಫಲಿತಾಂಶ: ಭಾರತ ತಂಡಕ್ಕೆ 6 ವಿಕೆಟ್‌ಗಳ ಜಯ. ಸರಣಿಯಲ್ಲಿ ಭಾರತಕ್ಕೆ 3–1ರ ಮುನ್ನಡೆ.

13ರಂದು 'ಬೆಂಗಳೂರು ಬೇಸಿಗೆ ಡರ್ಬಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲಿಕಾನ್ ಸಿಟಿಯ ರೇಸ್‌ಪ್ರಿಯರು ಕಾತರದಿಂದ ಎದುರು ನೋಡುತ್ತಿರುವ 'ಬೆಂಗಳೂರು ಬೇಸಿಗೆ ಡರ್ಬಿ' ಭಾನುವಾರ (ಜುಲೈ 13) ರಂದು ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ (ಬಿಟಿಸಿ) ನಡೆಯಲಿದೆ. ಈ ಬಾರಿಯ ಬಹುಮಾನ ಮೊತ್ತವು ಸುಮಾರು ₹ 2.50 ಕೋಟಿ ಆಗಿದೆ ಎಂದು ಬಿಟಿಸಿ ಅಧ್ಯಕ್ಷ, ಹಿರಿಯ ಸ್ಟೀವರ್ಡ್ ಆರ್.ಮಂಜುನಾಥ ರಮೇಶ್ ಹೇಳಿದರು.

ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಟ್ರೋಫಿ ಅನಾವರಣಗೊಳಿಸಿ ಅವರು ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಡರ್ಬಿಯಲ್ಲಿ ಸ್ಪರ್ಧಿಸುವ ಕುದುರೆಗಳ ಕ್ರಮ ಸಂಖ್ಯೆಗಳ ಡ್ರಾ ಕೂಡ ನಡೆಯಿತು. ಈ ಬಾರಿಯ ಡರ್ಬಿಯನ್ನು ಜವರಿಯಾ ಎಸ್. ಪೂನಾವಾಲಾ ಅವರ ಪ್ರಾಯೋಜಕತ್ವದೊಂದಿಗೆ ಆಯೋಜಿಸಲಾಗಿದೆ.

'ಭಾನುವಾರ ಸಂಜೆ 4 ಗಂಟೆಗೆ ನಡೆಯುವ ರೇಸ್‌ನಲ್ಲಿ ಗೆಲ್ಲುವ ಕುದುರೆ ಮಾಲೀಕರಿಗೆ ಸುಮಾರು ₹ 1.22 ಕೋಟಿ ಬಹುಮಾನ ಮತ್ತು ₹ 1.5 ಲಕ್ಷ ಮೌಲ್ಯದ ಟ್ರೋಫಿ ಸಿಗಲಿದೆ. ಟ್ರೈನರ್, ಜಾಕಿ ಮತ್ತು ಬ್ರೀಡರ್‌ಗೆ ತಲಾ ₹ 50 ಸಾವಿರ ಬಹುಮಾನ ದೊರೆಯಲಿದೆ. 6 ಹೆಣ್ಣು ಕುದುರೆಗಳು ಸೇರಿದಂತೆ ಒಟ್ಟು 16 ಕುದುರೆಗಳು ಸ್ಪರ್ಧೆಯಲ್ಲಿವೆ' ಎಂದು ಮಂಜುನಾಥ್ ತಿಳಿಸಿದರು.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಇದೇ 13ರಂದು ನಡೆಯಲಿರುವ 'ಜವರಿಯಾ ಎಸ್‌ಪೂನಾವಾಲಾ ಬೆಂಗಳೂರು ಬೇಸಿಗೆ ಡರ್ಬಿ' ರೇಸ್‌ನ ಟ್ರೋಫಿಯನ್ನು ಬಿಟಿಸಿ ಅಧ್ಯಕ್ಷ ಹಾಗೂ ಹಿರಿಯ ಸ್ಟೀವರ್ಡ್ ಆರ್‌ಮಂಜುನಾಥ ರಮೇಶ್ (ಮಧ್ಯ) ಗುರುವಾರ ಅನಾವರಣ ಮಾಡಿದರು. (ಎಡದಿಂದ) ವ್ಯವಸ್ಥಾಪಕ ಸಮಿತಿ ಸದಸ್ಯ ಸಿ.ಎ.ಪ್ರಶಾಂತ್, ಸ್ಟೀವರ್ಡ್ ಸಿ.ಮಹೇಶ್ ಮೇದಪ್ಪ, ವ್ಯವಸ್ಥಾಪಕ ಸಮಿತಿ ಸದಸ್ಯ ಹರೀಶ್ ನಾಯಕ್, ಸ್ಟೀವರ್ಡ್ ಕೆ.ನಾಗರಾಜು ಪಾಲ್ಗೊಂಡಿದ್ದರು

'ರೇಸ್‌ಪ್ರಿಯರಿಗಾಗಿ ಬುದ್ಧಿಕೌಶಲ ಸ್ಪರ್ಧೆ ಏರ್ಪಡಿಸಲಾಗಿದೆ. ಸ್ಪರ್ಧೆಗೆ ಪ್ರವೇಶ ಉಚಿತವಾಗಿದ್ದು, 'ದಿ ಜವರಿಯಾ ಎಸ್ ಪೂನಾವಾಲಾ ಬೆಂಗಳೂರು ಬೇಸಿಗೆ ಡರ್ಬಿ' ರೇಸ್‌ನಲ್ಲಿ ಕ್ರಮವಾಗಿ ಮೊದಲ ನಾಲ್ಕು ಸ್ಥಾನ ಪಡೆಯುವ ಕುದುರೆಗಳನ್ನು ನಾಮನಿರ್ದೇಶನ ಮಾಡಬೇಕಾಗಿದೆ. ವಿಜೇತರಿಗೆ ಟೊಯೊಟಾ ಗ್ಲಾಂಝಾ ಕಾರು (ಪ್ರಥಮ), ಟಿವಿಎಸ್ ರೇಡಿಯನ್ ಬೈಕ್ (ದ್ವಿತೀಯ), ಟಿವಿಎಸ್ ಜೂಪಿಟರ್ ಸ್ಕೂಟರ್ (ತೃತೀಯ) ಮತ್ತು ಎಲ್.ಇ.ಡಿ ಟಿವಿ (ಚತುರ್ಥ) ಬಹುಮಾನಗಳನ್ನು ನೀಡಲಾಗುತ್ತದೆ' ಎಂದು ಅವರು ಮಾಹಿತಿ ನೀಡಿದರು.

ಎಸ್. ಗಣಪತಿ ನಿವೃತ್ತಿ: ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ 2000ರಿಂದ ತರಬೇತುದಾರರಾಗಿ ಸೇವೆ ಸಲ್ಲಿಸಿರುವ ಎಸ್.ಗಣಪತಿ ಅವರು ನಿವೃತ್ತಿ ಘೋಷಿಸಿದ್ದಾರೆ. ಹಲವು ಬಾರಿ ಡರ್ಬಿ, ಇಂಡಿಯನ್ ಟರ್ಫ್ ಇನ್ವಿಟೇಶನ್ ಕಪ್, ಗಿನ್ನಿಸ್ ಹಾಗೂ ಇತರೆ ಕ್ಲಾಸಿಕ್ ರೇಸ್‌ಗಳನ್ನು ಗೆದ್ದಿರುವ ಅವರನ್ನು ಗುರುವಾರ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಮಹಿಳೆಯ ಗುರುತಿನ ಚೀಟಿಯಲ್ಲಿ ನಿತೀಶ್ ಭಾವಚಿತ್ರ

ಪಟ್ನಾ: ಬಿಹಾರದ ಮಹಿಳೆಯೊಬ್ಬರ ಮತದಾರರ ಗುರುತಿನ ಚೀಟಿಯಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಭಾವಚಿತ್ರವನ್ನು ಮುದ್ರಿಸಲಾಗಿದೆ.

ಮಾಧೇಪುರ ನಗರಪಾಲಿಕೆ ವ್ಯಾಪ್ತಿಯ ನಿವಾಸಿ ಅಭಿಲಾಷಾ ಕುಮಾರಿ ಈಚೆಗೆ ಪರಿಷ್ಕೃತ ಮತದಾರರ ಗುರುತಿನ ಚೀಟಿ ಪಡೆದಿದ್ದುX ಹೆಸರು, ಇತರ ಮಾಹಿತಿ ಸರಿಯಾಗಿ ಮುದ್ರಿತವಾಗಿವೆ. ಆದರೆ ಭಾವಚಿತ್ರದ ಜಾಗದಲ್ಲಿ ಅಭಿಲಾಷಾ ಬದಲು, ಬಿಹಾರ ಮುಖ್ಯಮಂತ್ರಿಯ ಫೋಟೊ ಇದೆ.

'ಗುರುತಿನ ಚೀಟಿಯಲ್ಲಿನ ವಿಳಾಸದ ತಿದ್ದುಪಡಿಗಾಗಿ ನಾನು ಅರ್ಜಿ ಸಲ್ಲಿಸಿದ್ದೆ. ಹೊಸ ಗುರುತಿನ ಚೀಟಿಯನ್ನು ಅಂಚೆ ಮೂಲಕ ಪಡೆದಿದ್ದು, ಅದರಲ್ಲಿ ಈ ಲೋಪ ಉಂಟಾಗಿದೆ' ಎಂದು ಅಭಿಲಾಷಾ ಹೇಳಿದ್ದಾಗಿ 'ಎನ್‌ಡಿಟಿವಿ' ವರದಿ ಮಾಡಿದೆ. ಮತದಾರರ ಗುರುತಿನ ಚೀಟಿ ಮುದ್ರಿಸುವ ಏಜೆನ್ಸಿಯೇ ಈ ಲೋಪಕ್ಕೆ ಕಾರಣ ಎಂದು ಮಹಿಳೆಯ ಪತಿ ಚಂದನ್‌ಕುಮಾರ್ ಆರೋಪಿಸಿದ್ದು, 'ಮಹಿಳೆಯೊಬ್ಬರ ಗುರುತಿನ ಚೀಟಿಯಲ್ಲಿ ರಾಜ್ಯದ ಮುಖ್ಯಮಂತ್ರಿಯ ಭಾವಚಿತ್ರ ಕಾಣಿಸಿಕೊಂಡಿರುವುದು ಬಲುದೊಡ್ಡ ಲೋಪ' ಎಂದಿದ್ದಾರೆ.

'ಗುರುತಿನ ಚೀಟಿಯಲ್ಲಿ ಎಲ್ಲ ಮಾಹಿತಿ ಸರಿಯಾಗಿದೆ. ಆದರೆ, ಫೋಟೋ ನಿತೀಶ್ ಕುಮಾರ್ ಅವರದ್ದು. ಇದು ಸರ್ಕಾರದ ನಿರ್ಲಕ್ಷ್ಯವನ್ನು ತೋರಿಸುತ್ತದೆ' ಎಂದು ದೂರಿದ್ದಾರೆ.

'ಆಧಾರ್: ಕ್ರಮಬದ್ಧ ದಾಖಲೆಯಾಗಿ ಪರಿಗಣಿಸಿ'

ಒಂದನೇ ಪುಟದಿಂದ...

ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಹಾಗೂ ಜಾಯ್‌ಮಾಲ್ಯಾ ಬಾಗ್ಚಿ ಅವರು ಇದ್ದ ನ್ಯಾಯಪೀಠ, ಈ ವಿಚಾರಕ್ಕೆ ಸಂಬಂಧಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿತು. ಈ ವಿಚಾರ ಕುರಿತು ಜುಲೈ 21ರ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆ ಚುನಾವಣಾ ಆಯೋಗಕ್ಕೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಜುಲೈ 28ಕ್ಕೆ ಮುಂದೂಡಿತು.

ವಿವಿಧ ಸ್ವಯಂ ಸೇವಾ ಸಂಸ್ಥೆಗಳು, ರಾಜಕೀಯ ಪಕ್ಷಗಳ ಮುಖಂಡರು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿದಾರರ ಪರ ಹಿರಿಯ ವಕೀಲರಾದ ಕಪಿಲ್ ಸಿಬಲ್, ಅಭಿಷೇಕ್ ಮನು ಸಿಂಘ್ವಿ ಹಾಗೂ ಗೋಪಾಲ್ ಶಂಕರನಾರಾಯಣನ್ ವಾದ ಮಂಡಿಸಿದರು. ಚುನಾವಣಾ ಆಯೋಗದ ಪರ ಹಿರಿಯ ವಕೀಲ ರಾಕೇಶ್ ದ್ವಿವೇದಿ ಹಾಜರಿದ್ದರು.

ವಾದ ಆಲಿಸಿದ ನ್ಯಾಯಪೀಠ, 'ಈ ವಿಚಾರವಾಗಿ ಅರ್ಜಿದಾರರು ಯಾವುದೇ ಮಧ್ಯಂತರ ಪರಿಹಾರ ಕೋರಿಲ್ಲ' ಎಂದು ಅಭಿಪ್ರಾಯಪಟ್ಟಿತಲ್ಲದೆ, ಮತದಾರರ ಪಟ್ಟಿ ಪರಿಷ್ಕರಣೆ ಮುಂದುವರಿಸಲು ಅನುಮತಿ ನೀಡಿತು.

ಮತದಾರರ ಪಟ್ಟಿ ಪರಿಷ್ಕರಣೆ ನಡೆಸುವುದಕ್ಕೆ ಇರುವ ಅಧಿಕಾರ ಏನು?, ಇದಕ್ಕೆ ಅನುಸರಿಸುವ ವಿಧಾನ ಯಾವುದು? ಹಾಗೂ ಮತದಾರರ ಪಟ್ಟಿಯ ಕರಡು ಸಿದ್ಧಪಡಿಸಿರುವ ಸಮಯ ಕುರಿತಂತೆ ಈಗ ಪ್ರಶ್ನೆಗಳು ಉದ್ಭವಿಸಿವೆ. ಇವುಗಳ ಕುರಿತು ಪರಿಶೀಲನೆ ನಡೆಸಲು ನಿರ್ಧರಿಸಿದ್ದಾಗಿಯೂ ನ್ಯಾಯಪೀಠ ಹೇಳಿತು.

> **ಮತದಾರರ ಪಟ್ಟಿ ಪರಿಷ್ಕರಣೆ 'ಕೃತಕ' ಅಥವಾ 'ಕಾಲ್ಪನಿಕ' ಎಂದು ಹೇಳುವುದನ್ನು ನಿಲ್ಲಿಸಿ. ಈ ಪರಿಷ್ಕರಣೆ ಹಿಂದೆ ಒಂದು ತರ್ಕ ಇದೆ. ಆ ತರ್ಕದ ವಿರುದ್ಧ ನೀವು (ಅರ್ಜಿದಾರರು) ವಾದ ಮಾಡಬಹುದು**
> **ಸುಪ್ರೀಂ ಕೋರ್ಟ್**

> **ಸುಪ್ರೀಂ ಕೋರ್ಟ್ ನೀಡಿರುವ ಸೂಚನೆಯು ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಿಕ್ಕ ಪರಿಹಾರವಾಗಿದೆ. ಆಯೋಗವು ಸುಪ್ರೀಂ ಕೋರ್ಟ್ ಸಲಹೆಯನ್ನು ಪಾಲಿಸುತ್ತದೆ ಎಂಬ ವಿಶ್ವಾಸ ಇದೆ**
> **ಕೆ.ಸಿ.ವೇಣುಗೋಪಾಲ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ವಿಚಾರಣೆ ವೇಳೆ, 'ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಜಾತಿ ಪ್ರಮಾಣಪತ್ರ ಸೇರಿ ಹಲವು ದಾಖಲೆಗಳು ಅಗತ್ಯ. ಆದರೆ, ಈ ಪ್ರಮಾಣಪತ್ರ/ದಾಖಲೆಗಳನ್ನು ಪಡೆಯಲು ಆಧಾರ್ ಕಾರ್ಡ್ ಆಧಾರವಾಗಿದೆಯಲ್ಲ' ಎಂದು ಆಯೋಗದ ಪರ ವಕೀಲ ರಾಕೇಶ್ ದ್ವಿವೇದಿ ಅವರನ್ನು ನ್ಯಾಯಪೀಠ ಪ್ರಶ್ನಿಸಿತು. 'ಇತರ ಕಾಯ್ದೆಗಳನ್ನು ನಿರ್ಲಕ್ಷಿಸಿ, ಕೇವಲ ಆಧಾರ್ ಕಾಯ್ದೆಯನ್ನು ಮಾತ್ರ ಉಲ್ಲೇಖಿಸಲು ಆಗದು' ಎಂದೂ ಹೇಳಿತು.

'ಅರ್ಹತೆ ಹೊಂದಿರದ ವ್ಯಕ್ತಿ ಮತ ಚಲಾಯಿಸುವಂತಿಲ್ಲ. ಅರ್ಹತೆ ಹೊಂದಿದ ವ್ಯಕ್ತಿಯ ಹೆಸರು ಮತದಾರರ ಪಟ್ಟಿಯಲ್ಲಿ ಇರಲೇಬೇಕು ಎಂಬುದು ಚುನಾವಣಾ ಆಯೋಗದ ಹೊಣೆಗಾರಿಕೆ ಅಲ್ಲವೇ' ಎಂದು ಅರ್ಜಿದಾರರನ್ನು ಉದ್ದೇಶಿಸಿ ನ್ಯಾಯಪೀಠ ಹೇಳಿತು.

ಚುನಾವಣಾ ಆಯೋಗದ ವಾದ

- ಕಾಯ್ದೆ ಪ್ರಕಾರ ಆಧಾರ್ ಕಾರ್ಡ್‌ಅನ್ನು ಪೌರತ್ವ ಅಥವಾ ವಾಸಸ್ಥಳದ ಪುರಾವೆಯಾಗಿ ಪರಿಗಣಿಸಲು ಸಾಧ್ಯ ಇಲ್ಲ
- ಪ್ರತಿಯೊಂದು ದಾಖಲೆಯೂ ಒಂದು ನಿರ್ದಿಷ್ಟ ಉದ್ದೇಶ ಹೊಂದಿದೆ. ಹೆಸರು ಸೇರ್ಪಡೆಗೆ ಸಂಬಂಧಿಸಿ ಅಂದಾಜು 5.5 ಕೋಟಿಯಿಂದ 6 ಕೋಟಿಯಷ್ಟು (ಶೇ 60ರಷ್ಟು) ಅರ್ಜಿ ನಮೂನೆಗಳನ್ನು ಭರ್ತಿ ಮಾಡಲಾಗಿದ್ದು, ಈ ಪೈಕಿ ಅರ್ಧದಷ್ಟು ಅರ್ಜಿಗಳಲ್ಲಿನ ಮಾಹಿತಿಗಳನ್ನು ಅಪ್‌ಲೋಡ್ ಮಾಡಲಾಗಿದೆ
- ಕಳೆದ ಬಾರಿ 2003ರಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ನಡೆದಿತ್ತು. ಈಗ ನಡೆಯುತ್ತಿರುವುದು ವಿಶೇಷ ಸಮಗ್ರ ಪರಿಷ್ಕರಣೆ. ಇಂಥ ಪರಿಷ್ಕರಣೆ ಅಗತ್ಯವಿತ್ತು
- ಅಂದಾಜು 1.1 ಕೋಟಿ ಮಂದಿ ಮೃತಪಟ್ಟಿದ್ದಾರೆ ಹಾಗೂ ಅಂದಾಜು 70 ಲಕ್ಷ ಜನರು ವಲಸೆ ಹೋಗಿದ್ದಾರೆ ಎಂಬುದು ಅರ್ಜಿದಾರರ ವಾದವಾಗಿದೆ. ಹೀಗಾಗಿ, ಅರ್ಜಿದಾರರ ಈ ವಾದವೇ ಮತದಾರರ ಪಟ್ಟಿ ಪರಿಷ್ಕರಣೆಗೆ ಆಧಾರವಾಗಲಿದೆ

ಅರ್ಜಿದಾರರ ವಾದ

- ಮತದಾರರ ಪಟ್ಟಿ ಪರಿಷ್ಕರಣೆಯು ಸಂವಿಧಾನದ 14, 19, 21, 325 ಹಾಗೂ 326ನೇ ವಿಧಿಗಳ ಉಲ್ಲಂಘನೆಯಾಗಿದೆ
- ಪ್ರಜಾ ಪ್ರಾತಿನಿಧ್ಯ ಕಾಯ್ದೆ–1950ರ ವಿವಿಧ ಅವಕಾಶಗಳು ಹಾಗೂ ಮತದಾರರ ನೋಂದಣಿ ನಿಯಮಗಳು–1960ರ ಉಲ್ಲಂಘನೆಯಾಗಿದೆ
- 'ವಿಶೇಷ ಸಮಗ್ರ ಪರಿಷ್ಕರಣೆ' ಕುರಿತ ಆದೇಶವನ್ನು ರದ್ದುಪಡಿಸಬೇಕು. ಇಲ್ಲದೇ ಹೋದಲ್ಲಿ ಲಕ್ಷಾಂತರ ಮತದಾರರು ತಮ್ಮ ಹಕ್ಕು ಚಲಾಯಿಸುವ ಅವಕಾಶದಿಂದ ವಂಚಿತಗೊಳ್ಳುತ್ತಾರೆ.
- ಸದ್ಯ, ಬಿಹಾರದಲ್ಲಿ ನಡೆಸುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆಗೆ ಕಾಲಾವಕಾಶ ಕಡಿಮೆ ಇದೆ. ಹೆಸರು ಸೇರ್ಪಡೆಗಾಗಿ ನಿಗದಿತ ಅವಧಿಯೊಳಗೆ ದಾಖಲೆಗಳನ್ನು ಒದಗಿಸಲು/ಸಿದ್ಧಪಡಿಸಲು ಸಮರ್ಪಕ ಪ್ರಕ್ರಿಯೆ ಇಲ್ಲ. ಇದರಿಂದ ಲಕ್ಷಾಂತರ ಜನರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡುವ ಸಾಧ್ಯತೆಯೂ ಇದೆ

ತಂದೆಯ ಗುಂಡೇಟಿಗೆ ಟೆನಿಸ್ ಆಟಗಾರ್ತಿ ಬಲಿ

ಗುರುಗ್ರಾಮ (ಪಿಟಿಐ): ಹರಿಯಾಣದ ರಾಜ್ಯಮಟ್ಟದ ಟೆನಿಸ್ ಆಟಗಾರ್ತಿ ರಾಧಿಕಾ ಯಾದವ್ ಅವರನ್ನು ಗುರುವಾರ ತಂದೆಯೇ ಗುಂಡಿಕ್ಕಿ ಕೊಂದಿದ್ದಾರೆ.

25 ವರ್ಷದ ರಾಧಿಕಾ ಅವರು ಇಲ್ಲಿನ ಸುಶಾಂತ್ ಲೋಕ್‌ನಲ್ಲಿರುವ ಮನೆಯಲ್ಲಿ ಅಡುಗೆ ಮಾಡುತ್ತಿದ್ದಾಗ ಈ ಕೃತ್ಯ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಧಿಕಾ

ಘಟನೆಗೆ ಸಂಬಂಧಿಸಿದಂತೆ ಆಕೆಯ ತಂದೆ 49 ವರ್ಷದ ದೀಪಕ್ ಯಾದವ್ ಅವರನ್ನು ಪೊಲೀಸರು ಬಂಧಿಸಿದ್ದು, ಕೃತ್ಯಕ್ಕೆ ಬಳಸಿದ ಪರವಾನಗಿ ಹೊಂದಿರುವ ಪಿಸ್ತೂಲ್ ವಶಪಡಿಸಿಕೊಂಡಿದ್ದಾರೆ. ಕೊಲೆಗೆ ಕಾರಣ ಏನೆಂಬುದು ಸ್ಪಷ್ಟವಾಗಿಲ್ಲ. ರಾಧಿಕಾ ಅವರ ಬೆನ್ನಿಗೆ ಐದಕ್ಕೂ ಹೆಚ್ಚು ಗುಂಡುಗಳನ್ನು ಹಾರಿಸಲಾಗಿದೆ ಎಂದು ಆರೋಪಿಸಲಾಗಿದೆ.

Associate Sponsors
Prestige | Freedom Healthy Cooking Oils | HONDA | Vi 5G | ಸದ್ಗುರು ಆಯುರ್ವೇದ GRAM FLOUR | THE BANGALORE CITY CO-OPERATIVE BANK LIMITED | The Janatha Co-operative Bank Ltd., Malleswaram, Bangalore | NBCC A Navratna CPSE
Mobility Partner: Akshaya Motors | Banking Partner: ಕೆನರಾ ಬ್ಯಾಂಕ್ Canara Bank Together We Can | Style Partner: BSC | Travel Partner: travelmart | Wardrobe Partner: neumen | Insurance Partner: National Insurance | Knowledge Partners: INSIGHTSIAS, GITAM BENGALURU | Audit Partner: EY

ಆತಿಥೇಯರಿಗೆ ಜೋ ರೂಟ್ ಆಸರೆ

ಒಂದೇ ಓವರ್‌ನಲ್ಲಿ ಎರಡು ವಿಕೆಟ್ ಗಳಿಸಿದ ನಿತೀಶ್ ಕುಮಾರ್
• ಮೂರನೇ ಟೆಸ್ಟ್‌ನಲ್ಲಿ ಬದಲಾದ ಇಂಗ್ಲೆಂಡ್ ತಂತ್ರಗಾರಿಕೆ

• ಸಿಡ್ನಿ ಕಿರಣ್

ಲಂಡನ್: ಇಂಗ್ಲೆಂಡ್ ತಂಡವು 'ಎಂಟೆದೆ ಬಂಟರ ಆಟ'ವೆಂದೇ ಬಿಂಬಿಸಿಕೊಂಡು ಬಂದಿದ್ದ 'ಬಾಝ್‌ಬಾಲ್' ಶೈಲಿಯನ್ನು ಲಾರ್ಡ್ಸ್‌ನಲ್ಲಿ ಬದಿಗಿಟ್ಟು, ಸಾಂಪ್ರದಾಯಿಕ ಟೆಸ್ಟ್ ಮಾದರಿಗೆ ಹೊರಳಿತು. ಆ ಮೂಲಕ ಪ್ರವಾಸಿ ಭಾರತ ತಂಡವು ಪ್ರಯಾಸ ಪಡುವಂತೆ ಮಾಡಿತು.

ಗುರುವಾರ 'ಹೋಮ್ ಆಫ್ ಕ್ರಿಕೆಟ್' ಖ್ಯಾತಿಯ ಲಾರ್ಡ್ಸ್‌ನಲ್ಲಿ ಆರಂಭವಾದ ಮೂರನೇ ಟೆಸ್ಟ್ ಪಂದ್ಯದಲ್ಲಿ ಸಿದ್ಧಪಡಿಸಿರುವ ಪಿಚ್ ಮೇಲೆ ಹಸಿರು ಗರಿಕೆಗಳಿದ್ದವು. ವೇಗ ಮತ್ತು ಬೌನ್ಸ್ ಎಸೆತಗಳಿಗೆ ನೆರವಾಗುವಂತೆ ಮೇಲ್ನೋಟಕ್ಕೆ ಕಂಡಿತ್ತು.

ಸದಾ ಬ್ಯಾಟಿಂಗ್ ಟ್ರ್ಯಾಕ್ ಬಯಸುವ ಇಂಗ್ಲೆಂಡ್ ತಂಡದ ಮುಖ್ಯ ಕೋಚ್ ಬ್ರೆಂಡನ್ ಮೆಕ್ಕಲಂ ಅವರು ಇಲ್ಲಿ ಮಾತ್ರ 'ಉಪಖಂಡ'ದಲ್ಲಿರುವಂತಹ ಪಿಚ್‌ಗಳನ್ನು ಸಿದ್ಧಪಡಿಸುವಂತೆ ಮುಖ್ಯ ಪಿಚ್ ಕ್ಯುರೇಟರ್ ಕಾರ್ಲ್ ಮೆಕ್‌ಡರ್ಮಾಟ್ ಅವರಿಗೆ ಹೇಳಿದ್ದರಂತೆ. ಮೆಕ್ಕಲಂ, ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್, ಎಂಸಿಸಿ ಕ್ರಿಕೆಟ್ ಚಟುವಟಿಕೆಗಳ ನಿರ್ದೇಶಕ ರಾಬ್ ಲಿಂಚ್ ಮತ್ತು ಇಂಗ್ಲೆಂಡ್ ತಂಡದ ಆಯ್ಕೆಗಾರ ಲೂಕ್ ರೈಟ್ ಅವರು ಈ ಕುರಿತು ಚರ್ಚೆ ನಡೆಸಿದ್ದರೆಂದು ಇಲ್ಲಿಯ ಪ್ರಮುಖ ಸುದ್ದಿ ಪತ್ರಿಕೆ 'ಡೇಲಿ ಮೇಲ್' ವರದಿ ಮಾಡಿದೆ.

ಶತಕದ ಅಂಚಿನಲ್ಲಿರುವ ಜೋ ರೂಟ್

ಪಿಚ್‌ನಲ್ಲಿ ಪೇಸ್, ಬೌನ್ಸ್ ಮತ್ತು ವಿಕೆಟ್ ಎರಡೂ ಬದಿಗಳಲ್ಲಿ ಚೆಂಡು ಪರಿಣಾಮಕಾರಿ ಚಲನೆಯಾಗುವಂತೆ ಇರಬೇಕು ಎಂದೂ ಮೆಕ್ಕಲಂ ಹೇಳಿದ್ದರಂತೆ.

ಪಿಚ್ ಮೇಲೆ ಗರಿಕೆಗಳನ್ನು ನೋಡಿದವರು ರೋಚಕ ಹಣಾಹಣಿಯ ನಿರೀಕ್ಷೆಯಲ್ಲಿದ್ದರು. ಈಚೆಗೆ ಇಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ನಡುವಣ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಮಾದರಿಯ ಪಂದ್ಯ ನಡೆಯುವ ನಿರೀಕ್ಷೆ ಮೂಡಿಸಿತ್ತು. ಆ ಪಂದ್ಯದ ಮೊದಲ ಹಾಗೂ ಎರಡನೇ ದಿನಗಳಲ್ಲಿ 14 ವಿಕೆಟ್‌ಗಳು ಪತನವಾಗಿದ್ದವು.

ಆದರೆ ಮೆಕ್ಕಲಂ ಮತ್ತು ಅಭಿಮಾನಿಗಳ ನಿರೀಕ್ಷೆಯನ್ನು ಸಂಪೂರ್ಣ ಈಡೇರಿಸುವಂತಹ ಪಿಚ್ ಸಿಗಲಿಲ್ಲ. ಆದರೆ ಚೆಂಡು ನಿಧಾನಗತಿ ಮತ್ತು ಕೆಳಮಟ್ಟದ ಪುಟಿತ ಕಾಣುವಂತೆ ಪಿಚ್ ಇದಾಗಿದೆ. ಸ್ಟೋಕ್ಸ್ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಬಾಝ್‌ಬಾಲ್ ಯುಗದಲ್ಲಿ ಇಂಗ್ಲೆಂಡ್ ನಾಯಕ ಟಾಸ್ ಗೆದ್ದು ಬ್ಯಾಟಿಂಗ್ ತೆಗೆದುಕೊಳ್ಳುತ್ತಿರುವುದು ಇದು ಎರಡನೇ ಬಾರಿಯಷ್ಟೇ!

ದೊಡ್ಡ ಸ್ಕೋರ್ ಮಾಡಿ ಭಾರತ ತಂಡವನ್ನು ಒತ್ತಡಕ್ಕೆ ತಳ್ಳುವುದು ಅವರ ಯೋಜನೆಯಾಗಿತ್ತು. ಜೋ ರೂಟ್ (ಬ್ಯಾಟಿಂಗ್ 99; 191ಎ, 4X9) ಅವರ ಬ್ಯಾಟಿಂಗ್ ಬಲದಿಂದ ಆತಿಥೇಯ ತಂಡವು ಮೊದಲ ದಿನದಾಟದ ಅಂತ್ಯಕ್ಕೆ 4 ವಿಕೆಟ್‌ಗೆ 251 ರನ್ ಗಳಿಸಿದೆ.

ತಂಡಕ್ಕೆ ಮರಳಿದ ಜಸ್‌ಪ್ರೀತ್ ಬೂಮ್ರಾ ಅವರು ತಮ್ಮ ಆರಂಭಿಕ ಸ್ಪೆಲ್‌ನಲ್ಲಿ ಅಷ್ಟೇನೂ ಪರಿಣಾಮಕಾರಿಯಾಗಿರಲಿಲ್ಲ. ಹೆಚ್ಚು ರನ್ ಕೊಡಲಿಲ್ಲ. ಆದರೆ ವಿಕೆಟ್ ಪಡೆಯುವಲ್ಲಿಯೂ ಸಫಲರಾಗಲಿಲ್ಲ. ಎಜ್‌ಬಾಸ್ಟನ್ ಟೆಸ್ಟ್‌ನಲ್ಲಿ ಮಿಂಚಿದ್ದ ಆಕಾಶ್ ದೀಪ್ ಅವರೂ ಹೊಸಚೆಂಡಿನಲ್ಲಿ ನಿರೀಕ್ಷಿತ ಲೈನ್ ಮತ್ತು ಲೆಂಗ್ತ್ ನಲ್ಲಿ ಬೌಲಿಂಗ್ ಮಾಡಲಿಲ್ಲ. ಇದರಿಂದಾಗಿ ಆರಂಭಿಕ ಜೋಡಿ ಬೆನ್ ಡಕೆಟ್ ಮತ್ತು ಜಾಕ್ ಕ್ರಾಲಿ ಅವರ ಆಟ ಸರಾಗವಾಗಿ ಸಾಗಿತು. ಇನಿಂಗ್ಸ್‌ನ ಮೊದಲ ಒಂದು ಗಂಟೆಯು ಇಂಗ್ಲೆಂಡ್ ಪಾಲಿಗೆ ಯಾವುದೇ ತೊಂದರೆಯಿಲ್ಲದೇ ಸರಿದುಹೋಯಿತು.

ಲಾರ್ಡ್ಸ್‌ನಲ್ಲಿ ಗುರುವಾರ ಆರಂಭವಾದ ಮೂರನೇ ಟೆಸ್ಟ್‌ನ ಒಂದೇ ಓವರ್‌ನಲ್ಲಿ ಎರಡು ವಿಕೆಟ್ ಪಡೆದು ಸಂಭ್ರಮಿಸಿದ ನಿತೀಶ್ ಕುಮಾರ್ ರೆಡ್ಡಿ ಪಿಟಿಐ ಚಿತ್ರ

14ನೇ ಓವರ್ ಬೌಲಿಂಗ್ ಮಾಡಿದ ಆಲ್‌ರೌಂಡರ್ ನಿತೀಶ್ ಕುಮಾರ್ (35ಕ್ಕೆ2) ಅವರು ಮೂರು ಎಸೆತಗಳ ಅಂತರದಲ್ಲಿ ಡಕೆಟ್ ಮತ್ತು ಕ್ರಾಲಿ ಅವರಿಗೆ ಪೆವಿಲಿಯನ್ ದಾರಿ ತೋರಿಸಿದರು. ಇದೇ ಓವರ್‌ನಲ್ಲಿ ಗಲ್ಲಿ ಫೀಲ್ಡರ್ ಶುಭಮನ್ ಗಿಲ್ ಅವರು ಓಲಿ ಪೋಪ್ ಅವರ ಕ್ಯಾಚ್ ಪಡೆಯುವಲ್ಲಿ ಯಶಸ್ವಿಯಾಗಲಿಲ್ಲ. ಇದು ತುಸು ಕಠಿಣವಾಗಿತ್ತು. ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

ಪೋಪ್ ಜೊತೆಗೂಡಿದ 'ಸಾಂಪ್ರದಾಯಿಕ ಶೈಲಿ'ಯ ಬ್ಯಾಟರ್ ರೂಟ್ ಅವರು ತಂಡಕ್ಕೆ ಬಲ ತುಂಬಿದರು. ನಿಧಾನಗತಿ ಮತ್ತು ಕೆಳಹಂತದಲ್ಲಿ ಪುಟಿದು ಬರುತ್ತಿದ್ದ ಚೆಂಡನ್ನು ಟೈಮಿಂಗ್ ಮಾಡುವುದು ಬ್ಯಾಟರ್‌ಗಳಿಗೆ ಸುಲಭವಾಗಿಲ್ಲ. ಭಾರತದ ಬೌಲರ್‌ಗಳಿಗೆ ತಮ್ಮ ತವರಿನಂಗಳಗಳಲ್ಲಿ ಇಂತಹದೇ ಪಿಚ್ ಮೇಲೆ ಆಡಿರುವ ರೂಢಿಯಿದೆ. ಅದರಿಂದಾಗಿ ವಿಕೆಟ್ ಟು ವಿಕೆಟ್ ಎಸೆತಗಳನ್ನು ಪ್ರಯೋಗಿಸಿದರು. ಬ್ಯಾಟರ್‌ಗಳು ರಕ್ಷಣಾತ್ಮಕ ಆಟಕ್ಕೆ ಹೆಚ್ಚು ಒತ್ತು ನೀಡಿದರು.

ರೂಟ್ ಮತ್ತು ಓಲಿ ಪೋಪ್ (44;104ಎ) ಮೂರನೇ ವಿಕೆಟ್‌ಗೆ 109 ರನ್ ಸೇರಿಸಿ ತಂಡಕ್ಕೆ ಚೇತರಿಕೆ ನೀಡಿದರು. ಅಪಾಯಕಾರಿಯಾಗಿದ್ದ ಈ ಜೊತೆಯಾಟವನ್ನು ರವೀಂದ್ರ ಜಡೇಜ ಮುರಿದರು. ನಂತರ ಬಂದ ಹ್ಯಾರಿ ಬ್ರೂಕ್ (11) ಅವರನ್ನು ಕ್ರೀಸ್‌ನಲ್ಲಿ ಬೇರೂರಲು ಬೂಮ್ರಾ ಅವಕಾಶ ನೀಡಲಿಲ್ಲ. ಬಳಿಕ ರೂಟ್ ಅವರನ್ನು ಸೇರಿಕೊಂಡ ನಾಯಕ ಬೆನ್ ಸ್ಟೋಕ್ಸ್ (ಔಟಾಗದೇ 39;102ಎ) ನಿಧಾನಗತಿಯಲ್ಲಿ ರನ್ ಕಲೆಹಾಕಿದರು. ಅವರಿಬ್ಬರೂ ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 79 ರನ್ ಗಳಿಸಿ, ಎರಡನೇ ದಿನಕ್ಕೆ ಆಟವನ್ನು ಕಾಯ್ದುಕೊಂಡಿದ್ದಾರೆ.

ರೂಟ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತದ ವಿರುದ್ಧ 3,000 ರನ್ (60 ಇನಿಂಗ್ಸ್) ಗಡಿ ದಾಟಿದರು. ಈ ಸಾಧನೆ ಮಾಡಿದ ವಿಶ್ವದ ಮೊದಲ ಆಟಗಾರ ಎಂಬ ಹಿರಿಮೆಗೆ ಪಾತ್ರವಾದರು.

ಪಂತ್‌ಗೆ ಗಾಯ

ಲಂಡನ್ (ಪಿಟಿಐ): ಭಾರತ ತಂಡದ ರಿಷಭ್ ಪಂತ್ ಅವರು ಊಟದ ನಂತರದ ಅವಧಿಯಲ್ಲಿ ಕೀಪಿಂಗ್ ಮಾಡುವಾಗ ಗಾಯಗೊಂಡರು. ಅವರ ಎಡಗೈ ತೋರುಬೆರಳಿಗೆ ಚೆಂಡು ಬಡಿದು ಗಾಯವಾಯಿತು.

ಅವರಿಗೆ ಚಿಕಿತ್ಸೆ ನೀಡಲು ಪೆವಿಲಿಯನ್‌ಗೆ ಕರೆದೊಯ್ಯಲಾಯಿತು. ಅದರಿಂದಾಗಿ ಅವರ ಬದಲಿಗೆ ಧ್ರುವ ಜುರೇಲ್ ಅವರು ಕೀಪಿಂಗ್ ನಿರ್ವಹಿಸಿದರು.

34ನೇ ಓವರ್‌ನಲ್ಲಿ ತಮ್ಮ ಎಡಬದಿಗೆ ಜಿಗಿದು ಚೆಂಡನ್ನು ಹಿಡಿತಕ್ಕೆ ಪಡೆಯುವ ಪ್ರಯತ್ನದಲ್ಲಿ ಪಂತ್ ಗಾಯಗೊಂಡಿದ್ದರು.

ಪ್ರತಿಬಿಂಬ

ಬಿಸಿಸಿಐ ಎಕ್ಸ್ ಚಿತ್ರ

ಬ್ಯಾಟಿಂಗ್ ದಂತಕಥೆ ಸಚಿನ್ ತೆಂಡೂಲ್ಕರ್ ಅವರ ವರ್ಣಚಿತ್ರವನ್ನು ಲಾರ್ಡ್ಸ್ ಕ್ರೀಡಾಂಗಣದ ಎಂಸಿಸಿ ವಸ್ತುಸಂಗ್ರಹಾಲಯದಲ್ಲಿ ಗುರುವಾರ ಅನಾವರಣಗೊಳಿಸಲಾಯಿತು. ಕಲಾವಿದ ಸ್ಟುವರ್ಟ್ ಪಿಯರ್‌ಸನ್ ರೈಟ್ ರಚಿಸಿದ ಚಿತ್ರವನ್ನು ಸ್ವತಃ ತೆಂಡೂಲ್ಕರ್ ಅವರೇ ಅನಾವರಣ ಮಾಡಿದರು

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್

ಇಂಗ್ಲೆಂಡ್ 4ಕ್ಕೆ 251 (83 ಓವರ್)

ಕ್ರಾಲಿ ಸಿ ಪಂತ್ ಬಿ ನಿತೀಶ್ 18 (43ಎ, 4x4)
ಡಕೆಟ್ ಸಿ ಪಂತ್ ಬಿ ರೆಡ್ಡಿ 23 (40ಎ, 4x3)
ಪೋಪ್ ಸಿ (ಸಬ್) ಧ್ರುವ್ ಜುರೇಲ್ ಬಿ ಜಡೇಜ 44 (104, 4x4)
ಜೋ ರೂಟ್ ಔಟಾಗದೇ 99 (191ಎ, 4X9)
ಬ್ರೂಕ್ ಬಿ ಬೂಮ್ರಾ 11 (20ಎ, 4x2)
ಬೆನ್ ಸ್ಟೋಕ್ಸ್ ಔಟಾಗದೇ 39 (102ಎ, 4X3)

ಇತರೆ: 17 (ಬೈ 4, ಲೆಗ್‌ಬೈ 11, ನೋಬಾಲ್ 2)

ವಿಕೆಟ್ ಪತನ: 1-43 (ಬೆನ್ ಡಕೆಟ್, 13.3), 2-44, (ಜಾಕ್ ಕ್ರಾಲಿ, 13.6), 3-153 (ಓಲಿ ಪೋಪ್, 49.1), 4-172 (ಹ್ಯಾರಿ ಬ್ರೂಕ್, 54.5)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 18–3–35–1, ಆಕಾಶ್‌ದೀಪ್ 17–2–75–0, ಮೊಹಮ್ಮದ್ ಸಿರಾಜ್ 14–5–33–0, ನಿತೀಶ್ ಕುಮಾರ್ ರೆಡ್ಡಿ 14–0–46–2, ರವೀಂದ್ರ ಜಡೇಜ 10–1–26–1, ವಾಷಿಂಗ್ಟನ್ ಸುಂದರ್ 10–1–21–0

ಶ್ವಾಂಟೆಕ್‌ಗೆ ಮಣಿದ ಬೆನ್ಸಿಕ್: ವಿಂಬಲ್ಡನ್‌ನಲ್ಲಿ ಇಬ್ಬರಿಗೂ ಮೊದಲ ಫೈನಲ್

ಅರಿನಾಗೆ ಆಘಾತ ನೀಡಿದ ಅಮಂಡಾ

ಲಂಡನ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅವರಿಗೆ ಮೂರು ಸೆಟ್‌ಗಳ ಪಂದ್ಯದಲ್ಲಿ ಆಘಾತ ನೀಡಿದ ಅಮಂಡಾ ಅನಿಸಿಮೋವಾ ವಿಂಬಲ್ಡನ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿ ಪ್ರಶಸ್ತಿ ಸುತ್ತಿಗೆಲಗ್ಗೆಯಿಟ್ಟರು.

ಗುರುವಾರ ನಡೆದ 'ಪವರ್ ಹಿಟ್ಟರ್'ಗಳ ಮೊದಲ ಸೆಮಿಫೈನಲ್‌ನಲ್ಲಿ ಅಮೆರಿಕದ ಆಟಗಾರ್ತಿ 6-4, 4-6, 6-4 ರಿಂದ ಜಯಗಳಿಸಿದರು. ಆ ಮೂಲಕ ಮೊದಲ ಬಾರಿ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಕಿರೀಟ ಧರಿಸುವ ಸಬಲೆಂಕಾ ಕನಸನ್ನು ಭಗ್ನಗೊಳಿಸಿದರು. 13ನೇ ಶ್ರೇಯಾಂಕದ ಅಮಂಡಾ, ಪ್ರಶಸ್ತಿ ಸುತ್ತಿನಲ್ಲಿ ಎಂಟನೇ ಶ್ರೇಯಾಂಕದ ಇಗಾ ಶ್ವಾಂಟೆಕ್ ಅವರನ್ನು ಎದುರಿಸಲಿದ್ದಾರೆ. ವಿಂಬಲ್ಡನ್‌ನಲ್ಲಿ ಇಬ್ಬರಿಗೂ ಇದು ಮೊದಲ ಫೈನಲ್ ಆಗಿದೆ.

'ಇದನ್ನು ವಾಸ್ತವವೆಂದು ನಂಬಲಾಗುತ್ತಿಲ್ಲ. ಅರಿನಾ ಪ್ರಬಲ ಹೋರಾಟಗಾರ್ತಿ. ನಾನು ದಣಿದೇ ಹೋಗಿದ್ದೆ. ಹೇಗೆ ಚೇತರಿಸಿಕೊಂಡೆ ಎಂದೇ ತಿಳಿಯಲಿಲ್ಲ' ಎಂದು 23 ವರ್ಷ ವಯಸ್ಸಿನ ಅನಿಸಿಮೋವಾ 2 ಗಂಟೆ 36 ನಿಮಿಷಗಳ ಪಂದ್ಯದ ನಂತರ ಪ್ರತಿಕ್ರಿಯಿಸಿದರು.

ಮೂರನೇ ಬಾರಿ ಇಲ್ಲಿ ಸೆಮಿಫೈನಲ್ ತಲುಪಿದ್ದ ಬೆಲರೂಸ್‌ನ ಸಬಲೆಂಕಾ ಮತ್ತೊಮ್ಮೆ ನಿರಾಶೆ ಅನುಭವಿಸಿದರು. ಈ ವರ್ಷ ಅವರು ಒಂದೂ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲಲಾಗಿಲ್ಲ. ಕಳೆದ ತಿಂಗಳು ಫ್ರೆಂಚ್ ಓಪನ್ ಫೈನಲ್‌ನಲ್ಲಿ ಅಮೆರಿಕದ ಕೊಕೊ ಗಾಫ್‌ಗೆ ಮಣಿದಿದ್ದರು.

ಮೊದಲ ಸೆಟ್‌ನ ಏಳನೇ ಗೇಮ್ ಬ್ರೇಕ್ ಮಾಡುವ ಮೂಲಕ ಅನಿಸಿಮೋವಾ ನಿರ್ಣಾಯಕ ಮುನ್ನಡೆ ಪಡೆದರು. ಆ ಗೇಮ್ ನಲ್ಲಿ ಸಬಲೆಂಕಾ ಡಬಲ್‌ಫಾಲ್ಟ್ ಮಾಡಿದ್ದು ದುಬಾರಿ ಆಯಿತು. ಎರಡನೇ ಸೆಟ್‌ನ ಏಳನೇ ಗೇಮ್‌ನಲ್ಲಿ ಅನಿಸಿಮೋವಾ ಕೂಡ ಇಂಥದ್ದೇ ತಪ್ಪು ಮಾಡಿದ್ದರಿಂದ ಸಬಲೆಂಕಾ 4-3 ಮುನ್ನಡೆ ಪಡೆದರಲ್ಲದೇ ಸೆಟ್ ಗೆದ್ದು 1-1 ಸಮ ಮಾಡಿಕೊಂಡರು.

ಅಮಂಡಾ

ಶ್ವಾಂಟೆಕ್

ಮೂರನೇ ಸೆಟ್‌ನ ಮೊದಲ ಗೇಮ್‌ನಲ್ಲೇ ಎದುರಾಳಿ ಸರ್ವ್ ಬ್ರೇಕ್ ಮಾಡಿದ ಸಬಲೆಂಕಾ ಗೆಲುವಿನ ಹಾದಿಯಲ್ಲಿ ನಡೆಯುವಂತೆ ಕಂಡಿತ್ತು. ಆದರೆ ಮರು ಗೇಮ್‌ನಲ್ಲಿ ಬ್ರೇಕ್ ಮಾಡಿದ ಅನಿಸಿನೋವಾ ಸ್ಕೋರ್ ಸಮಾಡಿಕೊಂಡರು. ನಾಲ್ಕನೇ ಗೇಮ್‌ನಲ್ಲಿ ಮತ್ತೆ ಎದುರಾಳಿಯ ಸರ್ವ್ ಬ್ರೇಕ್ ಮಾಡಿ ಮೇಲುಗೈ ಸಾಧಿಸಿದರು.

ಶ್ವಾಂಟೆಕ್‌ಗೆ ಗೆಲುವು: ಮತ್ತೊಂದು ಸೆಮಿಫೈನಲ್ ಹಣಾಹಣಿಯಲ್ಲಿ ಪೋಲೆಂಡ್‌ನ ಶ್ವಾಂಟೆಕ್ 6-2, 6-0ರ ನೇರ ಸೆಟ್‌ಗಳಿಂದ ಒಲಿಂಪಿಕ್ ಮಾಜಿ ಚಾಂಪಿಯನ್ ಬೆಲಿಂಡಾ ಬೆನ್ಸಿಕ್ ಅವರನ್ನು ಸುಲಭವಾಗಿ ಸೋಲಿಸಿದರು.

ಐದು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡತಿಯಾಗಿರುವ 24 ವರ್ಷದ ಶ್ವಾಂಟೆಕ್ ಇಲ್ಲಿ ಮೊದಲ ಬಾರಿ ಫೈನಲ್ ತಲುಪಿದರು. ಫ್ರೆಂಚ್ ಓಪನ್‌ನಲ್ಲಿ ನಾಲ್ಕು ಬಾರಿ ಮತ್ತು 2022ರಲ್ಲಿ ಅಮೆರಿಕ ಓಪನ್‌ನಲ್ಲಿ ಶ್ವಾಂಟೆಕ್ ಪ್ರಶಸ್ತಿ ಗೆದ್ದಿದ್ದರು. 2023ರಲ್ಲಿ ಇಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದು ಈ ಹಿಂದಿನ ಉತ್ತಮ ಸಾಧನೆಯಾಗಿತ್ತು.

ಇಲ್ಲಿ ಚೊಚ್ಚಲ ಬಾರಿ ನಾಲ್ಕರ ಘಟ್ಟ ತಲುಪಿದ್ದ ಸ್ವಿಜರ್ಲೆಂಡ್‌ನ ಬೆನ್ಸಿಕ್ ಒಂದು ಗಂಟೆಯಲ್ಲೇ ಸೋಲೊಪ್ಪಿಕೊಂಡರು.

ಗೆಲುವಿನ ಸಂಭ್ರಮದಲ್ಲಿ ನೊವಾಕ್ ಜೊಕೊವಿಚ್ —ಎಎಫ್‌ಪಿ ಚಿತ್ರ

ದಾಖಲೆಯ 14ನೇ ಬಾರಿ ಸೆಮಿಗೆ ಜೊಕೊ

ಲಂಡನ್ (ಎಪಿ): ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ದಾಖಲೆಯ 14ನೇ ಬಾರಿ ಸೆಮಿಫೈನಲ್ ಪ್ರವೇಶಿಸಿದರು. ಆರನೇ ಶ್ರೇಯಾಂಕದ ಜೊಕೊವಿಚ್ ಆರಂಭಿಕ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡು ನಾಲ್ಕು ಸೆಟ್‌ಗಳ ಹೋರಾಟದಲ್ಲಿ ಇಟಲಿಯ ಫ್ಲಾವಿಯೊ ಕೊಬೊಲ್ಲಿ ಅವರನ್ನು ಸೋಲಿಸಿದರು.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ 38 ವರ್ಷ ವಯಸ್ಸಿನ ಜೊಕೊವಿಚ್ ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ 6-7 (6/8), 6-2, 7-5, 6-4ರಿಂದ 22ನೇ ಶ್ರೇಯಾಂಕದ ಕೊಬೊಲ್ಲಿ ವಿರುದ್ಧ ಗೆಲುವು ಸಾಧಿಸಿದರು. ಏಳು ಬಾರಿಯ ಚಾಂಪಿಯನ್‌ಗೆ ಮುಂದಿನ ಸುತ್ತಿನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ, ಇಟಲಿಯ ಯಾನಿಕ್ ಸಿನ್ನರ್ ಎದುರಾಳಿಯಾಗಿದ್ದಾರೆ.

ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದ ಕೊಬೊಲ್ಲಿ ಮೊದಲ ಸೆಟ್ ಅನ್ನು ಗೆದ್ದು ಜೊಕೊವಿಚ್ ಅವರನ್ನು ಆತಂಕಕ್ಕೆ ತಳ್ಳಿದ್ದರು. ನಂತರದಲ್ಲಿ ಅನುಭವಿ ಆಟಗಾರ ಪುಟಿದೆದ್ದರು.

14ನೇ ಬಾರಿ ನಾಲ್ಕರ ಘಟ್ಟ ಪ್ರವೇಶಿಸುವ ಮೂಲಕ ಜೊಕೊವಿಚ್ ಅವರು ಎಂಟು ಬಾರಿಯ ಚಾಂಪಿಯನ್ ರೋಜರ್ ಫೆಡರರ್ ಅವರ ದಾಖಲೆಯನ್ನು ಮುರಿದರು. ಫೆಡರರ್ ಅವರು ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ 13 ಬಾರಿ ಈ ಸಾಧನೆ ಮಾಡಿದ್ದರು. ಇದಲ್ಲದೆ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ದಾಖಲೆಯ 52ನೇ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿ, ತಮ್ಮದೇ ದಾಖಲೆಯನ್ನು ಉತ್ತಮ ಪಡಿಸಿದರು.

2018ರಿಂದ ಸತತವಾಗಿ ಫೈನಲ್ ತಲುಪಿರುವ ಜೊಕೊವಿಕ್, ಕಳೆದ ಎರಡು ಆವೃತ್ತಿಗಳಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರಿಗೆ ಸೋತಿದ್ದಾರೆ.

ಟಿಟಿ: ತೃಪ್ತಿಗೆ ಮಹಿಳಾ ಸಿಂಗಲ್ಸ್ ಪ್ರಶಸ್ತಿ

ಮಂಗಳೂರು: ಬೆಂಗಳೂರಿನ ತೃಪ್ತಿ ಪುರೋಹಿತ್ ನೇರ ಸೆಟ್‌ಗಳಿಂದ ಖುಷಿ ವಿ. ಅವರನ್ನು ಸೋಲಿಸಿ ಮೂರನೇ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ನಗರದ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಫೈನಲ್‌ನಲ್ಲಿ ತೃಪ್ತಿ 11–2, 11–3, 11–4, 11–6 ರಿಂದ ಖುಷಿ ವಿರುದ್ಧ ಜಯ ಗಳಿಸಿದರು.

ಅಭಿನವ್ ಚಾಂಪಿಯನ್: ಅಭಿನವ್ ಕೆ.ಮೂರ್ತಿ ಮತ್ತು ತನಿಷ್ಕಾ ಕಪಿಲ್ ಕಾಲಭೈರವ್ ಅವರು 19 ವರ್ಷದೊಳಗಿನವರ ವಿಭಾಗದ ಸಿಂಗಲ್ಸ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಕಿರೀಟ ಮುಡಿಗೇರಿಸಿಕೊಂಡರು.

ಅಭಿನವ್ ಫೈನಲ್‌ನಲ್ಲಿ ಅಥರ್ವ ನವರಂಗೆ ವಿರುದ್ಧ 4–11, 11–9, 12–10, 8–11, 12–10, 11–4 ರಲ್ಲಿ ಜಯಗಳಿಸಿದರು. ತನಿಷ್ಕಾ ಫೈನಲ್‌ನಲ್ಲಿ 4–11, 13–11, 11–8, 19–17, 10–12, 11–6ರಿಂದ ಹಿಮಾಂಶಿ ಚೌಧರಿ ಅವರನ್ನು ಮಣಿಸಿದರು

ವಿಜೇತರು: 19 ವರ್ಷದೊಳಗಿನವರ ವಿಭಾಗದ ಬಾಲಕರ ಸಿಂಗಲ್ಸ್ ಪ್ರಶಸ್ತಿ ವಿಜೇತ ಅಭಿನವ್ ಮೂರ್ತಿ, ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದ ತೃಪ್ತಿ ಪುರೋಹಿತ್; 19 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಜೇತೆ ತನಿಷ್ಕಾ ಕಪಿಲ್ ಕಾಲಭೈರವ್

ಫಿಫಾ ಕ್ರಮಾಂಕ 133ನೇ ಸ್ಥಾನಕ್ಕೆ ಭಾರತ

ನವದೆಹಲಿ (ಪಿಟಿಐ): ಭಾರತ ಪುರುಷರ ಫುಟ್‌ಬಾಲ್ ತಂಡ ಫಿಫಾ ಗುರುವಾರ ಪ್ರಕಟಿಸಿದ ವಿಶ್ವ ಕ್ರಮಾಂಕ ಪಟ್ಟಿಯಲ್ಲಿ ಆರು ಸ್ಥಾನ ಕುಸಿದು 133ನೇ ಸ್ಥಾನದಲ್ಲಿದೆ. ಇದು ಒಂಬತ್ತು ವರ್ಷಗಳಲ್ಲಿ ಭಾರತ ತಂಡದ ಕನಿಷ್ಠ ಕ್ರಮಾಂಕವಾಗಿದೆ.

ಭಾರತದ ಈ ಹಿಂದಿನ ಕನಿಷ್ಠ ರ್‍ಯಾಂಕಿಂಗ್ 135 (2016ರ ಡಿಸೆಂಬರ್) ಆಗಿತ್ತು. ಶ್ರೇಷ್ಠ ರ್‍ಯಾಂಕಿಂಗ್ 94 ಆಗಿದ್ದು, ಇದನ್ನು 1996ರ ಫೆಬ್ರುವರಿಯಲ್ಲಿ ದಾಖಲಿಸಿತ್ತು.

ಏಷ್ಯಾದ 46 ರಾಷ್ಟ್ರಗಳಲ್ಲಿ ಭಾರತ 24ನೇ ಸ್ಥಾನದಲ್ಲಿದೆ. ಜಪಾನ್ ಅಗ್ರಸ್ಥಾನದಲ್ಲಿದೆ.

ಸಂಕ್ಷಿಪ್ತ ಸುದ್ದಿ

ಭಾರತ ಎ ತಂಡಕ್ಕೆ ಶ್ರೇಯಾಂಕಾ

ನವದೆಹಲಿ (ಪಿಟಿಐ): ಕರ್ನಾಟಕದ ಆಫ್‌ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಅವರು ಭಾರತ ಮಹಿಳಾ ಎ ತಂಡಕ್ಕೆ ಮರಳಿದ್ದಾರೆ. ಗಾಯದಿಂದಾಗಿ ದೀರ್ಘ ಸಮಯದಿಂದ ಆರೈಕೆಯಲ್ಲಿದ್ದ ಅವರು ಈಗ ಚೇತರಿಸಿಕೊಂಡಿದ್ದಾರೆ. ಆಗಸ್ಟ್ 7 ರಿಂದ 24ರವರೆಗೆ ಆಸ್ಟ್ರೇಲಿಯಾ ಎದುರು ನಡೆಯಲಿರುವ ಟಿ20 ಸರಣಿಯಲ್ಲಿ ಅವರು ಆಡಲಿದ್ದಾರೆ.

ಹೋದ ವರ್ಷ ಯುಎಇಯಲ್ಲಿ ನಡೆದಿದ್ದ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ಸಂದರ್ಭದಲ್ಲಿ ಗಾಯಗೊಂಡಿದ್ದರು. ಮಧ್ಯಮವೇಗಿ ತಿತಾಸ್ ಸಾಧು ಕೂಡ ತಂಡಕ್ಕೆ ಮರಳಿಬಂದಿದ್ದಾರೆ. ಸದ್ಯ ನಡೆಯುತ್ತಿರುವ ಇಂಗ್ಲೆಂಡ್ ಎದುರಿನ ಸರಣಿಯಲ್ಲಿಯೂ ಅವರು ಆಡುತ್ತಿಲ್ಲ. ಎ ತಂಡವನ್ನು ರಾಧಾ ಯಾದವ್ ಮುನ್ನಡೆಸುವರು.

ಡುರಾಂಡ್ ಕಪ್‌ನಲ್ಲಿ ಎಸ್‌ಯುಎಫ್‌ಸಿ

ಬೆಂಗಳೂರು: ಏಷ್ಯಾದ ಅತ್ಯಂತ ಹಳೆಯ ಫುಟ್‌ಬಾಲ್ ಟೂರ್ನಿಯಾಗಿರುವ ಡುರಾಂಡ್ ಕಪ್‌ನ 134ನೇ ಆವೃತ್ತಿಯಲ್ಲಿ ಕಣಕ್ಕೆ ಇಳಿಯಲು ಸೌತ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ (ಎಸ್‌ಯುಎಫ್‌ಸಿ) ಸಜ್ಜಾಗಿದೆ.

ಇದೇ 23ರಿಂದ ಆರಂಭವಾಗಲಿರುವ ಈ ಟೂರ್ನಿಯ ಪಂದ್ಯಗಳು ಐದು ರಾಜ್ಯಗಳಲ್ಲಿ ನಡೆಯಲಿವೆ. ಈ ಆವೃತ್ತಿಯ ಸ್ಪರ್ಧೆಯಲ್ಲಿ ಎಸ್‌ಯುಎಫ್‌ಸಿ ಕರ್ನಾಟಕದಿಂದ ಸ್ಪರ್ಧಿಸುವ ಏಕೈಕ ಕ್ಲಬ್ ಆಗಿದೆ.

'ಡುರಾಂಡ್ ಒಂದು ಟೂರ್ನಿ ಮಾತ್ರವಲ್ಲ, ಅದು ಒಂದು ಪರಂಪರೆ. ಕರ್ನಾಟಕವನ್ನು ಪ್ರತಿನಿಧಿಸುವ ಏಕೈಕ ಕ್ಲಬ್ ಆಗಿ ಸ್ಪರ್ಧಿಸುತ್ತಿರುವುದು ನಮಗೆ ದೊಡ್ಡ ಗೌರವ' ಎಂದು ತಂಡದ ಮಾಲೀಕ ಮತ್ತು ನಿರ್ದೇಶಕ ಶರಣ್ ಪಾರಿಖ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಇಂದು ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್

ಬೆಂಗಳೂರು: ನಗರದ ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರದಿಂದ ಎರಡು ದಿನ 7ನೇ ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ನಡೆಯಲಿದೆ.

ಎರಡು ಬಾರಿಯ ಪ್ಯಾರಾಲಿಂಪಿಕ್ಸ್ ಪದಕವಿಜೇತ ಅಥ್ಲೀಟ್ ಸುಮಿತ್ ಅಂಟಿಲ್ ಸೇರಿದಂತೆ ಹಲವು ಪ್ರಮುಖ ಪ್ಯಾರಾ ಅಥ್ಲೀಟ್‌ಗಳು ಈ ಕೂಟದಲ್ಲಿ ಕಣಕ್ಕಿಳಿಯಲಿದ್ದಾರೆ. ಒಟ್ಟು 262 ಅಥ್ಲೀಟ್‌ಗಳು ಸ್ಪರ್ಧಿಸಲಿದ್ದಾರೆ.

ಅಂಟಿಲ್, ಪ್ರವೀಣಕುಮಾರ್ (ಹೈಜಂಪ್, ಟಿ44), ಯೋಗೇಶ್ ಕಥುನಿಯಾ (ಡಿಸ್ಕಸ್ ಥ್ರೋ ಎಫ್56), ಧರ್ಮಬೀರ್ ನೈನ್ (ಕ್ಲಬ್ ಥ್ರೋ; ಎಫ್51) ಮತ್ತು ಸಿಮ್ರನ್ (100 ಮೀ ಮತ್ತು 200 ಮೀ ಟಿ12) ಕಣದಲ್ಲಿದ್ದಾರೆ.

ಸ್ಪರ್ಧೆಗಳ ಸಮಯ: ಬೆಳಿಗ್ಗೆ 10ರಿಂದ ಸಂಜೆ 4.30